ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ

(ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರನ್ನು ಪರಿಗಣಿಸಿ)

ಸಮಾಜಶಾಸ್ತ್ರ ವಿಷಯದಲ್ಲಿ ಪಿ.ಹೆಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಮಹಾಪ್ರಬಂಧ

ಸಂಶೋಧಕರು
ಶಾರದ ಬಡಿಗೇರ

ಮಾರ್ಗದರ್ಶಕರು
ಡಾ. ಚಲುವರಾಜು
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಎಸ್. ಚಂದ್ರಶೇಖರ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ

(ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರನ್ನು ಪರಿಗಣಿಸಿ)

ಸಮಾಜಶಾಸ್ತ್ರ ವಿಷಯದಲ್ಲಿ ಪಿ.ಹೆಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಮಹಾಪ್ರಬಂಧ

ಸಂಶೋಧಕರು
ಶಾರದ ಬಡಿಗೇರ

ಮಾರ್ಗದರ್ಶಕರು
ಡಾ. ಚಲುವರಾಜು
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಎಸ್. ಚಂದ್ರಶೇಖರ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಶಾರದ ಬಡಿಗೇರ ಅವರು **ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ** (ಬಳ್ಳಾರಿ ಜಿಲ್ಲೆಯ ಬೇಡ(ನಾಯಕ) ಮಹಿಳೆಯರನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ೧.೮. ೨೦೧೮
ಸ್ಥಳ : ವಿದ್ಯಾರಣ್ಯ

(ಡಾ. ಚಲುವರಾಜು)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ಶಾರದ ಬಡಿಗೇರ ಅವರು **ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ** (ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 28.7.2018
ಸ್ಥಳ : ವಿದ್ಯಾರಣ್ಯ

(ಡಾ. ಎಸ್. ಚಂದ್ರಶೇಖರ)
ಪ್ರಾಧ್ಯಾಪಕರು ಮತ್ತು ಸಹ ಮಾರ್ಗದರ್ಶಕರು
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾವಿ

ಪ್ರಮಾಣ ಪತ್ರ

ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ (ಬಳ್ಳಾರಿ ಜಿಲ್ಲೆಯ ಬೇಡ(ನಾಯಕ) ಮಹಿಳೆಯರನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Sharada.B

ದಿನಾಂಕ : 01-08-2018
ಸ್ಥಳ : ವಿದ್ಯಾರಣ್ಯ

(ಶಾರದ ಬಡಿಗೇರ)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಬುಡಕಟ್ಟುಗಳು

ಅಧ್ಯಯನದ ಉದ್ದೇಶಗಳು

ಅಧ್ಯಯನದ ವ್ಯಾಪ್ತಿ

ಅಧ್ಯಯನದ ಮಹತ್ವ

ಅಧ್ಯಯನದ ವಿಧಾನ

ಅಧ್ಯಯನದ ವಿನ್ಯಾಸ

ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಶಿಕ್ಷಣವು ಒಂದು ಪ್ರಮುಖ ಅಂಶವಾಗಿದೆ. ದೇಶದ ಜನಸಂಖ್ಯೆಯ ಅರ್ಧದಷ್ಟು ಜನರು ಮಹಿಳೆಯರಿದ್ದಾರೆ. ಆದರೆ ಭಾರತೀಯ ಸಂದರ್ಭದಲ್ಲಿ ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ ಪರಿಗಣಿಸುವುದೇ ಹೆಚ್ಚು. ಮಹಿಳೆಯನ್ನು ಕೇವಲ ತನ್ನ ಅಡಿಯಾಳಾಗಿ ನೋಡುವ ಪರಿಪಾಠವನ್ನು ಪುರುಷ ವರ್ಗ ಅನುಸರಿಸುತ್ತ ಬಂದಿರುವುದನ್ನು ಚರಿತ್ರೆಯ ಕಾಲದಿಂದ ಪ್ರಸ್ತುತ ಕಾಲದವರೆಗಿನ ಸಮಾಜದ ಮೂಲಕ ತಿಳಿದುಬರುತ್ತದೆ. ಹೆಣ್ಣು ಕೇವಲ ಪುರುಷನ ಉಪಭೋಗಕ್ಕೆ ಸೀಮಿತವಾದವಳು, ಆಕೆಗೆ ಯಾವುದೇ ಪವಿತ್ರ ಕಾರ್ಯಗಳಲ್ಲಿ ಸ್ಥಾನವಿಲ್ಲ ಎಂದು ತಿಳಿಸಿರುವುದು ಮನು ಸ್ಮೃತಿ ಮೂಲಕ ತಿಳಿದುಬರುತ್ತದೆ. ತತ್ವಜ್ಞಾನಿ ಪ್ಲೇಟೋನು ತನ್ನ ಕೃತಿಗಳಲ್ಲಿ (ರೂಲ್ ಆಫ್ ಫಿಲಾಸಫರ್ ಕಿಂಗ್) ಪುರುಷನಿಗಿರುವಷ್ಟೇ ಸ್ವಾತಂತ್ರ್ಯ ಹಾಗೂ ಶಿಕ್ಷಣದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿವೆ ಎಂದು ತಿಳಿಸುತ್ತಾನೆ[೧] ಅರಿಸ್ಟಾಟಲನು ಪೊಲಿಟಿಕ್ಸ್ ಕೃತಿಯಲ್ಲಿ ನಾಗರೀಕತ್ವದ ಸಿದ್ಧಾಂತಗಳನ್ನು ತಿಳಿಸುತ್ತ ಮಹಿಳೆಯರಿಗೆ ಆಲೋಚಿಸುವ ಶಕ್ತಿ ಇರದೇ ಇರುವುದರಿಂದ ಅವರಿಗೆ ನಾಗರೀಕತ್ವದ ಅವಕಾಶ ನೀಡಬಾರದು ಎಂದು ತಿಳಿಸುತ್ತಾನೆ.[೨] ಹೆಣ್ಣು ಕೇವಲ ರಾಜಕೀಯ ದಾಳವಾಗಿ ಉಪಯೋಗಕ್ಕೆ ಬರುತ್ತಾಳೆ ಎಂದು ಕೌಟಿಲ್ಯ ತಿಳಿಸುತ್ತಾನೆ. ಗಾಂಧಿಯವರು ಹೆಣ್ಣು ತನ್ನ ಕೌಟಂಬಿಕ ವ್ಯವಸ್ಥೆಗೆ ದಕ್ಕೆ ಬಾರದಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುತ್ತಾರೆ[೩] ಚರಿತ್ರೆ ಕಾಲದಿಂದ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದರೂ ಸಹ ಲಿಂಗ ತಾರತಮ್ಯವೆಂಬುದು ಸಮಾಜದಲ್ಲಿ ಅಗಾಧವಾದ ಬಿರುಕನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಕೇವಲ ಹಣವೇ ಮುಖ್ಯ ಪಾತ್ರವಹಿಸುತ್ತದೆಂಬ ವಾದವಿದ್ದರೂ ಸಹ ಅದರಾಚೆಗೆ

ಪುರುಷಶಾಹಿ ವ್ಯವಸ್ಥೆ ತನ್ನ ಕಬಂಧಬಾಹುವಿನಲ್ಲಿ ಇಡೀ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿ ಹಿಡಿದಿಟ್ಟುಕೊಂಡಿದೆ ಎಂಬುದನ್ನು ಗಮನಿಸಬೇಕಾಗಿದೆ. ಅದರಲ್ಲೂ ಮೇಲ್ವರ್ಗದ ಪುರುಷರು, ಬಂಡವಾಳಶಾಹಿಗಳು ಇಡೀ ವ್ಯವಸ್ಥೆಯ ಹಕ್ಕುದಾರರಂತೆ ಮೆರೆದಾಡುತ್ತಿರುವುದನ್ನು ಗಮನಿಸ ಬಹುದು. ಶೈಕ್ಷಣಿಕ ಕ್ಷೇತ್ರದಿಂದ ಹಿಡಿದು ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷನ ಕೈ ಮೇಲಾಗಿರುವುದನ್ನು ಗಮನಿಸಬಹುದು.

ಸಂವಿಧಾನದ ಬಹುಮುಖ್ಯ ಆಶಯವು ಮೂಲಭೂತ ಹಕ್ಕುಗಳು ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಪ್ರತಿಯೊಬ್ಬ ಭಾರತೀಯನಿಗೆ ತಲುಪಬೇಕೇಂಬುದೇ ಆಗಿದೆ. ಆದರೆ ಈ ಆಶಯವು ಈಡೇರುವಲ್ಲಿ ಸೋತಿದೆಯಂದೇ ಹೇಳಬಹುದು. ಆದರೆ ಸಮಾಧಾನಕರ ವಿಚಾರವೆಂದರೆ ಸಂವಿಧಾನದ ಶಾಸನಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಾದ ಅನಿವಾರ್ಯತೆಯಿರುವುದ ರಿಂದ ಭಾರತೀಯ ವ್ಯವಸ್ಥೆಯು ಅಲ್ಪಮಟ್ಟಿಗಾದರೂ ಬದಲಾವಣೆಗೊಂಡಿರುವುದಂತೂ ಸತ್ಯ. ಅದರಲ್ಲೂ ತಳ ಸಮುದಾಯಗಳು, ಮಹಿಳೆಯರಿಗೆ ಈ ಸಂವಿಧಾನವು ವರದಾನವಾಗಿ ಪರಿಣಮಿಸಿದೆ ಎಂದೇ ಹೇಳಬಹುದು. ಅವರಿಗಾಗಿಯೇ ಹಲವಾರು ವಿಧಿ, ಅನುಚ್ಛೇಧಗಳು ಸಂವಿಧಾನದಲ್ಲಿ ಬರೆಯಲ್ಪಟ್ಟಿವೆ.

ಸಂವಿಧಾನದಲ್ಲಿ ೩-೬, ೧೦, ೨೦-೨೫, ೨೯ (೧)(೨), ೩೮(೨) ೩೯(ಎ), ೪೨, ೪೪, ೪೫, ೫೧ ಮುಂತಾದ ಅನುಚ್ಛೇಧಗಳು ಬಹುಮುಖ್ಯವಾಗಿ ಸಂವಿಧಾನದಲ್ಲಿ ಮೊದಲ ಹಂತದಲ್ಲಿ ಲಭ್ಯವಿರದಿದ್ದ ಮಹಿಳೆಯರ ಅನೇಕ ನಾಗರೀಕ ಹಕ್ಕುಗಳನ್ನು ಅವರಿಗೆ ದಕ್ಕಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಪುರುಷ ಹಾಗೂ ಮಹಿಳೆಯರ ಮಧ್ಯದ ಸಾಮಾಜಿಕ ಸಮಾನತೆಯ ನೆಲೆಗಳನ್ನು ಅಂತರ್ಗತ ಗೊಳಿಸುವ ಮೂಲಕ ಮಹಿಳೆಯರಿಗೆ ಒಂದು ಹೊಸ ದಿಗಂತವನ್ನು ತೆರೆದಿಡ ಲಾಯಿತು. ಜೊತೆಗೆ ಸಂವಿಧಾನವು ಮೂರು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿತು. ಮೊದಲನೇದಾಗಿ ಲಿಂಗಾಧಾರಿತವಾದ ತಾರತಮ್ಯಗಳ ನಿಷೇಧ, ಎರಡನೇದಾಗಿ ಮಹಿಳೆಯರ ಜೈವಿಕ, ಮಾನಸಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿ ವಹಿಸುವಂತಹ ಉಪಬಂಧಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುದು. ಹೀಗೆ ಮಹಿಳೆ ಮತ್ತು ಪುರುಷರನ್ನು ಸಮಾನವಾಗಿ ಪರಿಗಣಿಸುವುದು ಸಂವಿಧಾನದ ಮುಖ್ಯ ಉದ್ದೇಶಗಳಲ್ಲೊಂದು.

ಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ೧೪ ರಿಂದ ೧೮ರವರೆಗಿನ ವಿಧಿಗಳ ಪ್ರಕಾರ ನೀಡಿದ ಸಮಾನತೆಯ ಹಕ್ಕು, ೨೩, ೨೪ರ ವಿಧಿಗಳ ಪ್ರಕಾರ ನೀಡಿದ ಶೋಷಣೆಯ ವಿರುದ್ಧದ ಹಕ್ಕು, ಅನುಚ್ಛೇಧ ೩೯ (ಎ) (ಡಿ) (ಇ), ೪೨ರ ವಿಧಿಯ ಪ್ರಕಾರ ನಿರ್ದೇಶನ ತತ್ವಗಳು, ಅನುಚ್ಛೇಧ ೫೧ (ಎ) (ಇ) ಯ ಪ್ರಕಾರ ಮೂಲಭೂತ ಕರ್ತವ್ಯಗಳು, ಅನುಚ್ಛೇಧ ೩೨೫, ೩೨೬ ರ ವಿಧಿಯನ್ವಯ ನೀಡಿದ ಮತದಾನದ ಹಕ್ಕು ಮುಂತಾದವುಗಳನ್ನು ಗಮನಿಸಿದರೆ ಮಹಿಳಾ ಪ್ರಗತಿಗೆ ಸಂಬಂಧಿಸಿದಂತೆ ಬಹುಮುಖ್ಯ ನಿಲುವುಗಳನ್ನು ಸಂವಿಧಾನವು ತಳೆದಿರುವುದು

ಸೂಚಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಹಿಳಾ ಹಕ್ಕುಗಳೊಂದಿಗೆ ಅವುಗಳು ದುರುಪಯೋಗವಾಗದಂತೆ ರಕ್ಷಣೆಗಳನ್ನೂ ನೀಡಲಾಗಿದೆ. ಮಹಿಳೆಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವುದು, ದುರುಪಯೋಗಪಡಿಸಿಕೊಳ್ಳುವುದು, ಕೀಳಾಗಿ ಕಾಣುವುದು ಮಾಡಿದಲ್ಲಿ ಆ ರೀತಿ ಮಾಡಿದವರಿಗೆ ಶಿಕ್ಷೆ ವಿಧಿಸುವ ಕುರಿತು ಸಂವಿಧಾನದಲ್ಲಿ ತಿಳಿಸಲಾಗಿದೆ. ಅದೇ ರೀತಿ ಜಾತಿ, ವಂಶ, ಲಿಂಗ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ನಡೆಯುವ ಅಸಮಾನತೆಯನ್ನು ನಿಷೇಧಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಕುರಿತು ನಿರ್ಧಿಷ್ಟವಾದ ಉಪಬಂಧಗಳನ್ನು ಜಾರಿ ಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಇದರಲ್ಲಿ ಮಹಿಳೆ ಮತ್ತು ಪುರುಷರಿಗೆ ಸಮಾನ ಜೀವನಾವಶ್ಯಕ ಅನುಕೂಲಗಳು, ಸಮಾನ ವೇತನ, ಶೇ ೩೦ ರಷ್ಟು ಉದ್ಯೋಗವಕಾಶದ ಮೀಸಲಾತಿ, ರಾಜಕೀಯ ಸ್ಥಾನಗಳಲ್ಲಿಯೂ ಮೀಸಲಾತಿಯನ್ವಯ ಸ್ಥಾನಗಳನ್ನು ಕಲ್ಪಿಸುವುದು, ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡುವುದು ಮುಂತಾದವುಗಳು ಸೇರಿವೆ.

ಮಹಿಳಾ ಪರವಾಗಿ ಸಂವಿಧಾನದಲ್ಲಿ ೧೫ (೩)ರ ಅನುಚ್ಛೇಧದ ಪ್ರಕಾರ ಅನೇಕ ಉಪಯುಕ್ತ ಶಾಸನಬದ್ಧ ಅಧಿಕಾರಗಳನ್ನು ಕಲ್ಪಿಸಲಾಗಿದೆ. ಸರ್ಕಾರಿ ನೇಮಕಾತಿ, ಶಾಸನ ಸಭೆ ಮತ್ತು ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿ ಈ ಅನುಚ್ಛೇಧದ ಅಡಿಯಲ್ಲಿ ನೀಡಲಾದ ವಿಶೇಷ ಸವಲತ್ತಾಗಿದೆ. ಯಾವ ಸಂದರ್ಭದಲ್ಲಿ ಪುರುಷನನ್ನು ಜಾಮೀನಿನ ಮೇಲೆ ಕಾರಗೃಹದಿಂದ ಬಿಡುಗಡೆಗೊಳಿಸುದಿಲ್ಲವೋ ಅದೇ ಸಂದರ್ಭದಲ್ಲಿ ಮಹಿಳೆಯರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವುದನ್ನು ಕಾನೂನಿನಲ್ಲಿ ಕಲ್ಪಿಸಲಾಗಿದೆ.

ಸಮಾನತೆಯ ನಿಟ್ಟಿನಲ್ಲಿ ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿರುವ ಪರಿಕಲ್ಪನೆಯೆಂದರೆ ಅಭಿವೃದ್ಧಿ. ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಅಭಿವೃದ್ಧಿ ಎಂಬ ಪರಿಕಲ್ಪನೆ ಇಂದು ಬದಲಾಗಿದೆ. ಮಾನವನ ಅಭಿವೃದ್ಧಿಗೆ ಪೂರಕವಾಗಿರುವ ಶಿಕ್ಷಣವೂ ಅಭಿವೃದ್ಧಿಯ ಇನ್ನೊಂದು ಮುಖವೇ ಆಗಿದೆ ಎಂಬ ವಾದವೂ ಕೇಳಿಬರುತ್ತಿದೆ. ಶಿಕ್ಷಣವು ಮಾನವನ ಶಕ್ತಿಯ ಪರ್ಯಾಯ ಪದವಾಗಿ ಮಾರ್ಪಟ್ಟಿದೆ. ಶಕ್ತಿ ಹೀನರಿಗೆ ಮಾನಸಿಕ ಸ್ಥೈರ್ಯವನ್ನು ನೀಡುವ ಶಕ್ತಿಯು ಶಿಕ್ಷಣಕ್ಕಿದೆ ಎಂದು ಹೇಳಬಹುದು. ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ದೊರಕಬೇಕೆಂಬುದು ರಾಷ್ಟ್ರದ ಗುರಿಯಾಗಿದೆ. ಯಾವ ದೇಶ ಶಿಕ್ಷಣದಲ್ಲಿ ಪರಿಪೂರ್ಣತೆಯನ್ನು ಹೊಂದಿರುತ್ತದೆಯೋ ಅಂತಹ ದೇಶವೂ ಸರ್ವಾಂಗೀಣವಾಗಿಯೂ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು. ಈ ನಿಟ್ಟಿನಲ್ಲಿ ಸರ್ಕಾರವು ಹತ್ತು ಹಲವು ಯೋಜನೆಗಳನ್ನೂ ರೂಪಿಸಿ ಚಾಲನೆಗೆ ತಂದಿದೆ. ಇಷ್ಟಾಗಿಯೂ ಭಾರತವು ಶೇಕಡ ೧೦೦ರಷ್ಟು ಸಾಕ್ಷರತೆಯ ಪ್ರಮಾಣವು ತಲುಪಲಾಗುತ್ತಿಲ್ಲ. ಆದರೆ ಸಂತೋಷದ ವಿಚಾರವೆಂದರೆ ಸರ್ಕಾರದ ಯೋಜನೆಗಳಿಗೆ ಪೂರಕವಾಗಿ ವರ್ಷದಿಂದ ವರ್ಷಕ್ಕೆ ಸಾಕ್ಷರತೆಯ ಪ್ರಮಾಣ ಅಧಿಕವಾಗುತ್ತಿದೆ ಎಂಬುದೊಂದು ಸಂತೋಷದ ವಿಚಾರವೇ ಸರಿ. ಆದರೆ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷಣ ವ್ಯವಸ್ಥೆ ಹಿಂದೆ ಬೀಳುತ್ತಿದೆ

ಎನ್ನುವ ಧ್ವನಿಯೂ ಕೇಳಿಬರುತ್ತಿದೆ. ಪ್ರಾಯಶಃ ಇದಕ್ಕೆ ಭಾರತದ ಸಾಮಾಜಿಕ ಹಿನ್ನೆಲೆಯೂ ಕಾರಣವಿರಬೇಕು. ಭಾರತವು ಶ್ರೇಣೀಕೃತ ವರ್ಗ ವ್ಯವಸ್ಥೆಯಿಂದ ಕೂಡಿದೆ. ಇಲ್ಲಿ ಮೇಲು ಕೀಳೆಂಬ ಶ್ರೇಣೀಕೃತ ಜಾತಿ ಸ್ಥರಗಳಿವೆ. ಸ್ತ್ರೀ ಪುರುಷ ರೆಂಬ ತಾರತಮ್ಯಗಳಿವೆ. ಶ್ರೀಮಂತರು, ಮಧ್ಯಮ ವರ್ಗದವರು, ಬಡವರು ಮತ್ತು ಕಡುಬಡವರೆಂಬ ವರ್ಗಗಳಿವೆ. ಶಿಕ್ಷಣ ಕ್ಷೇತ್ರವು ಇಂದಿಗೂ ಪೂರ್ಣವಾಗಿ ರಾಷ್ಟ್ರೀಕರಣಗೊಳ್ಳಲು ಸಾಧ್ಯವಾಗಿಲ್ಲ. ಅಭಿವೃದ್ಧಿಗೆ ಪೂರಕವಾಗಿರುವ ಶಿಕ್ಷಣದಂತಹ ಮಹತ್ವದ ಕ್ಷೇತ್ರವು ಖಾಸಗಿ ವ್ಯವಸ್ಥೆಯಲ್ಲಿ ನಲುಗುವಂತಾಗಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಖಾಸಗಿಯಾದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಕೊಡಿಸಿದರೆ ಮಾತ್ರ ತಮ್ಮ ಮಕ್ಕಳು ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತದೆ ಎನ್ನುವ ಭ್ರಮೆಯನ್ನು ಖಾಸಗಿ ಶಿಕ್ಷಣ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿರಿಸಿಕೊಂಡ ಬಂಡವಾಳಶಾಹಿಗಳು ಹುಟ್ಟುಹಾಕಿದ್ದಾರೆ. ಈ ತಾರತಮ್ಯದ ಅರಿವಿರದ ಮಧ್ಯಮ ವರ್ಗದವರು ಖಾಸಗಿ ಶಿಕ್ಷಣ ಸಂಸ್ಥೆಗಳ ಹಿಕಮತ್ತಿಗೆ ಬಲಿಯಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಪ್ರಸ್ತುತ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ಕೇವಲ ಬಡಕುಟುಂಬಗಳ ಮಕ್ಕಳು ಎನ್ನುವಂತಹ ಸ್ಥಿತಿಯು ನಿರ್ಮಾಣಗೊಂಡಿದೆ. ಜಾತಿಯ ಏಣಿಶ್ರೇಣಿ, ಲಿಂಗ ತಾರತಮ್ಯಗಳನ್ನೂ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಮೇಲೆ ಪರಿಣಾಮ ಉಂಟುಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವು ಏಕಪ್ರಕಾರವಾಗಿಲ್ಲ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮಹಿಳೆಯರು ಆಯಾ ಜಾತಿಯ ಸ್ಥರಗಳಿಗನುಸಾರವಾಗಿ ಸ್ಥಾನಮಾನ ಹೊಂದಿದ್ದಾರೆ. ಮೇಲ್ಜಾತಿ/ಮೇಲ್ವರ್ಗದ ಮಹಿಳೆಯರಿಗೆ ಕೆಳಜಾತಿ ಮಹಿಳೆಯರಿಂದ ಶೋಷಣೆ ಇಲ್ಲ. ಆದರೆ ಕೆಳಜಾತಿ ಮಹಿಳೆಯರಿಗೆ ಮೇಲ್ಜಾತಿ ಮಹಿಳೆಯರಿಂದ ಹಾಗೂ ಸ್ವಜಾತಿ, ವಿಜಾತಿ ಪುರುಷರಿಂದ ಶೋಷಣೆ ಉಂಟು. ಅಭಿವೃದ್ಧಿಯ ಫಲವನ್ನು ಮೇಲ್ಜಾತಿ ಮೇಲ್ವರ್ಗದ ಮಹಿಳೆಯರು ಮೊದಲು ಕಬಳಿಸಿಬಿಡುತ್ತಾರೆ. ಏನಾದರೂ ಉಳಿದರೆ ಬಡವರಲ್ಲಿ ಕೆಲವರಿಗೆ ಮಾತ್ರ ತಲುಪ ಬಹುದೇನೊ. ಬಹುಪಾಲು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ, ಅದರಲ್ಲೂ ಮಹಿಳೆಯರು ಅಭಿವೃದ್ಧಿ ಫಲವನ್ನು ಪಡೆಯುವಲ್ಲಿ ವಂಚಿತರಾಗುತ್ತಾರೆ. ಈ ಮಾತು ಶಿಕ್ಷಣಕ್ಕೂ ಅನ್ವಯಿಸುತ್ತದೆ.

೧.೧. ಬುಡಕಟ್ಟುಗಳು

ಬೆಟ್ಟ ಗುಡ್ಡ, ಕಣಿವೆ, ಅರಣ್ಯ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ನೆಲೆಸಿರುವ ತಮ್ಮದೇ ವಿಶಿಷ್ಟ ಭಾಷೆಯನ್ನು ಹೊಂದಿರುವ ಅರಣ್ಯ ಮೂಲದ ಉತ್ಪನ್ನಗಳನ್ನೇ ಜೀವನಾಧಾರಕ್ಕೆ ಬಳಕೆ ಮಾಡಿಕೊಳ್ಳುವ, ಪ್ರತ್ಯೇಕ ನೆಲೆಗಳಲ್ಲಿ ಒಟ್ಟಾಗಿ ವಾಸಿಸುವ ಸಮುದಾಯಗಳೇ ಬುಡಕಟ್ಟುಗಳು. ಇವರನ್ನು ವನವಾಸಿ, ಗಿರಿಜನ, ಅರಣ್ಯವಾಸಿ ಮುಂತಾದ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರ ಸಾಮಾಜಿಕ ಬದುಕು ರಕ್ತಸಂಬಂಧದ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಎಲ್ಲರನ್ನೂ ತಿಳಿದಿರುತ್ತಾನೆ. ಸಚೇತನವಾದಿಗಳಾದ ಇವರು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಸಂವಿಧಾನದಲ್ಲಿ ೩೪೨ನೇ ಅನುಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳ

ಕುರಿತು ವಿವರಣೆ ನೀಡಲಾಗಿದೆ. ಇದರ ಪ್ರಕಾರ ಬುಡಕಟ್ಟು ಸಮುದಾಯಗಳು ಅಥವಾ ಗುಂಪುಗಳನ್ನು ರಾಷ್ಟ್ರಪತಿಗಳು ಪರಿಶಿಷ್ಟ ಪಂಗಡಗಳ ಅನುಚ್ಛೇದದಲ್ಲಿ ಸೇರಿಸಲು ಅವಕಾಶವಿದೆ. ಜಗತ್ತಿನಾದ್ಯಂತ ಇಂತಹ ಸಹಸ್ರಾರು ಬುಡಕಟ್ಟುಗಳನ್ನು ಕಾಣಬಹು ದಾಗಿದೆ. ಪೆಸಿಫಿಕ್ ಸಾಗರದ ಮಲೇಷಿಯಾ, ಮೈಕ್ರೋನೇಷಿಯ, ಪಾಲಿನೇಷಿಯ ಮುಂತಾದ ಬುಡಕಟ್ಟುಗಳನ್ನು ನಿದರ್ಶನವಾಗಿ ಕೊಡಬಹುದಾಗಿದೆ.

ಭಾರತವು ಬುಡಕಟ್ಟುಗಳ ತವರುಮನೆಯಾಗಿದೆ. ಆಫ್ರಿಕಾ ಖಂಡ ಬಿಟ್ಟರೆ ಭಾರತದಲ್ಲಿ ಹೆಚ್ಚು ಬುಡಕಟ್ಟು ಜನರಿದ್ದಾರೆ. ನಾಗ, ಭಿಲ್, ಬೇಡ ಮುಂತಾದ ಸುಮಾರು ೭.೫ ಕೋಟಿ ಬುಡಕಟ್ಟು ಸಮುದಾಯಗಳು ಭಾರತದಲ್ಲಿ ಕಂಡುಬರುವರು.. ಕರ್ನಾಟಕದಲ್ಲಿಯೇ ಸುಮಾರು ೫೦ ಅಧಿಕೃತ ಬುಡಕಟ್ಟು ಸಮುದಾಯಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಆದಿವಾಸಿ ಕುಟುಂಬಗಳಿಗೆ ಸೇರಿದ ಎರಡು ಲಕ್ಷಕ್ಕೂ ಅಧಿಕ ಸಂಖ್ಯೆಯ ಆದಿವಾಸಿ ಜನರಿದ್ದಾರೆ. ಒಂದು ಸಾವಿರಕ್ಕೂ ಹೆಚ್ಚು ಆದಿವಾಸಿ ಹಳ್ಳಿಗಳಿವೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೬.೫ ರಷ್ಟು ಬುಡಕಟ್ಟು ಸಮುದಾಯದ ಜನರಿದ್ದಾರೆ. ಬಳ್ಳಾರಿ ಜಿಲ್ಲೆವೊಂದರಲ್ಲಿಯೇ ೧,೧೭,೨೭೫ ಜನ ಪರಿಶಿಷ್ಟ ಪಂಗಡದವರಿರವರೆಂದು ೨೦೧೧ರ ಜನಗಣತಿ ವರದಿ ತಿಳಿಸುತ್ತದೆ. ಕರ್ನಾಟಕದಲ್ಲಿ ಕಂಡುಬರುವ ಬುಡಕಟ್ಟುಗಳಲ್ಲಿ ಆಡಿಯಾನ್, ಬರಡಾ, ಡುಂಗ್ರಿ ಗರಾಸಿಯಾ, ಚೆಂಚು, ಗಾವಿಟ್, ಗೊಂಡ, ಗೌಡಲು, ರಾಜಗೊಂಡ, ಹಕ್ಕಿಪಿಕ್ಕಿ, ಹಸಲರು, ಇರುಳಿಗ, ಜೇನುಕುರುಬ, ಕಾಡುಕುರುಬ, ಕಾತಕಾರಿ, ಕಟ್ಟುನಾಯಕ, ಟೋಕ್ರಿಕೋಳಿ, ಕೊರಗ, ಕೋಯ, ಕುರುಮನ್, ಮಳೆಕುಡಿಯ ಇತ್ಯಾದಿ ಸಮುದಾಯಗಳಿರುವುದನ್ನು ನೋಡಬಹುದು. ಈ ಸಮುದಾಯಗಳಲ್ಲೆಲ್ಲಾ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಸಮುದಾಯಗಳಲ್ಲಿ ಬೇಡ ನಾಯಕ ಸಮುದಾಯವಾಗಿದೆ. ಕರ್ನಾಟಕದಲ್ಲಿ ಇವರನ್ನು ಬೇಡ, ಬೇಡರ್, ವಾಲ್ಮೀಕಿ, ನಾಯಕ, ನಾಯಕರ್, ಪರಿವಾರ ಮುಂತಾದ ಹಲವಾರು ಹೆಸರುಗಳಿಂದ ಕರೆಯಲಾಗುತ್ತಿದೆ. ಬಹುತೇಕ ಈ ಪರಿಶಿಷ್ಟ ವರ್ಗದ ಮಹಿಳೆಯರು ಶಿಕ್ಷಣದಲ್ಲಿ ಹಿಂದೆ ಬಿದ್ದಿರುವುದು ಮಾತ್ರವಲ್ಲದೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನವಿಲ್ಲದೆ ಪುರುಷ ಅವಲಂಬಿ ಯಾಗಿರುವರು. ಇಂತಹ ಅತಂತ್ರ ಸ್ಥಿತಿಯ ಮಹಿಳೆಯರನ್ನು ಸಶಕ್ತೀಕರಿಸಿ ಅವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದಾಗಿ ಮಹಿಳಾ ಮೀಸಲಾತಿ, ಜಾತಿಯಾಧಾರಿತ ಮೀಸಲಾತಿ, ಶಿಕ್ಷಣ ಸೌಲಭ್ಯವನ್ನು ಸಂವಿಧಾನ ಬದ್ಧವಾಗಿ ಜಾರಿಗೆ ತರಲಾಗಿದೆ.

ಮಹಿಳೆಯರನ್ನು ಸಶಕ್ತೀಕರಣಗೊಳಿಸುವುದರ ನಿಜವಾದ ಅರ್ಥ ಶಿಕ್ಷಣವನ್ನು ದೊರಕಿಸಿ ಕೊಡುವುದು ಮಹಿಳೆಯರನ್ನು ಸಬಲೀಕರಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ.

ಸಂವಿಧಾನದ ನಿರ್ದೇಶಕತತ್ವದಲ್ಲಿ ರಾಜ್ಯವು ಮಹಿಳೆ ಮತ್ತು ಪುರುಷರ ನಡುವೆ ಲಿಂಗ, ಜಾತಿ, ಧರ್ಮ. ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯ ತೋರಬಾರದೆಂದು ಅನುಚ್ಛೇದ ೧೫ರಲ್ಲಿ ನಿರೂಪಿಸಲಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯದ ನೀತಿ ನಿರ್ದೇಶನಗಳ ತತ್ವಗಳು ಎಂಬ ವಿಭಾಗದಲ್ಲಿ ಸಮಾನತೆಗಾಗಿ ಅನುಸರಿಸಬೇಕಾದ ತತ್ವಗಳನ್ನು

ಅಳವಡಿಸಲಾಗಿದೆ. ಸಂವಿಧಾನ ಶಿಲ್ಪಿಗಳು ರಾಜಕೀಯ ಕ್ಷೇತ್ರ ಒಳಗೊಂಡಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀ ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ.

ಗ್ರಾಮೀಣ ಪರಿಸರದಲ್ಲಿ ಮಹಿಳೆಯ ಸ್ಥಿತಿ ತುಂಬಾ ಚಿಂತಾಜನಿಕವಾಗಿದೆ. ಭಾರತದ ಬಹುತೇಕ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಲ್ಲು ಬಹುಪಾಲು ಮಹಿಳೆಯರು ಕೃಷಿ ಕೂಲಿ, ಅಸಂಘಟಿತ ವಲಯದ ಕೂಲಿಯನ್ನೇ ಅವಲಂಬಿಸಿದ್ದಾರೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಗೃಹಕೃತ್ಯಗಳಲ್ಲಿಯೇ ತೊಡಗುವ ಮತ್ತು ಅವರ ಕಾರ್ಯವನ್ನು ಯಾವುದೇ ವೃತ್ತಿಯೆಂದು ಪರಿಗಣಿಸದ ಸ್ಥಿತಿಯಲ್ಲಿದ್ದಾರೆ ಹಾಗೂ ಇಂತಹ ಮಹಿಳೆಯರು ಪ್ರಾಥಮಿಕ ಸೌಲಭ್ಯ ಗಳಿಂದಲೂ ವಂಚಿತರಾಗಿದ್ದಾರೆ. ಕೃಷಿ ಮತ್ತು ಇತರ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಪಾಲು ಶೇ. ೫೦ಕ್ಕಿಂತ ಹೆಚ್ಚಿದ್ದರೂ ಸಹಿತ ಆರ್ಥಿಕ ಸ್ವಾವಲಂಬನೆಯಿಂದ ಅವಳು ವಂಚಿತಳಾಗಿದ್ದಾಳೆ. ಅಷ್ಟೇ ಅಲ್ಲ ಮಹಿಳೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳಿಂದಲೂ ದೂರವುಳಿಯಬೇಕಾದ ಅನಿವಾರ್ಯ ಸ್ಥಿತಿಗೆ ನೂಕಲ್ಪಟ್ಟಿದ್ದಾಳೆ.

ಭಾರತದ ಅನಿಷ್ಟವೆಂದೇ ಪರಿಗಣಿಸಿರುವ ಜಾತಿ ವ್ಯವಸ್ಥೆಯಲ್ಲಿ ಹಂಚಿ ಹೋಗಿರುವ ಮಹಿಳೆ ವರ್ಗ, ಜಾತಿ ಸಮೂಹಗಳ ಹಿನ್ನೆಲೆಯಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳು ಭಿನ್ನವಾಗಿರುವಂಥವುಗಳಾಗಿವೆ. ಇಡೀ ಪುರುಷ ವರ್ಗದ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆ ಒಂದು ರೀತಿಯಾಗಿದ್ದರೆ ಅವರವರ ಜಾತಿ ಪಂಗಡದ ಹಂತದಲ್ಲಿ ಶೋಷಣೆ ಹೊಸ ರೂಪವನ್ನೇ ತಾಳುತ್ತದೆ. ಹೀಗಾಗಿ ನಿರ್ಧಿಷ್ಟ ಮಾನದಂಡಗಳಿಂದ ರೂಪಿಸಿದ ಸುಧಾರಣಾ ಕ್ರಮಗಳು, ಕಾನೂನು, ನೀತಿ ನಯಮಗಳು ಸಹ ಮಹಿಳಾ ವರ್ಗದ ಸಮಸ್ಯೆಗಳಿಗೆ ಪರಿಹಾರವಾಗಲಾರದೆನಿಸುತ್ತದೆ.

ದೇವರು, ಧರ್ಮ, ಜಾತಿಗಳ ಹೆಸರಿನಲ್ಲಿ ಇಂದಿಗೂ ತಳಸಮುದಾಯದ ಮಹಿಳೆಯರು ಪುರುಷ ವ್ಯವಸ್ಥೆಯಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ಶೈಕ್ಷಣಿಕವಾಗಿ ಪುರುಷ ಹಾಗೂ ಸ್ತ್ರೀಯರು ಸಮಾನತೆ ಗಳಿಸಬೇಕೆಂಬ ಆಶಯವಿದ್ದರೂ ಅದು ಇಂದಿಗೂ ಸಾಧ್ಯವಾಗುತ್ತಿಲ್ಲ.

ಒಂದು ರಾಷ್ಟ್ರವು ಸುಖೀರಾಜ್ಯವಾಗಬೇಕಾದರೆ ಪ್ರತಿಯೊಬ್ಬ ನಾಗರಿಕರ ಹೊಣೆಗಾರಿಕೆ ಹಕ್ಕು ಮತ್ತು ಕರ್ತವ್ಯಗಳನ್ನು ಹಾಗೂ ಸಮಾಜದಲ್ಲಿ ವ್ಯಕ್ತಿಯು ವೈಯಕ್ತಿಕ ಪ್ರಜ್ಞೆಯುಳ್ಳವನಾಗಿರುವುದರ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನು ಹೊಂದಿರಬೇಕು. ಸಮುದಾಯದ ಸಮಾಜದಲ್ಲಿ ಇರುವ ಸ್ಥಿತಿಗತಿಗಳು, ಬದಲಾಗುತ್ತಿರುವ ರೀತಿ ನೀತಿಗಳು, ಸಾಗಬೇಕಾಗಿರುವ ಮಾರ್ಗ, ತಲುಪಬೇಕಾಗಿರುವ ಗುರಿ ಮೊದಲಾದವುಗಳ ಬಗ್ಗೆ ಅರಿವಿರಬೇಕು. ಸಾಕ್ಷರತೆಯಿಂದ, ಶಿಕ್ಷಣ ಪಡೆಯುವುದರಿಂದ ಸಾಧ್ಯವಾಗುತ್ತದೆ.

ಶಿಕ್ಷಣವು ಮಾನವರಿಗೆ ಅತ್ಯಗತ್ಯವಾದದ್ದು. ಆಧುನಿಕ ಜಗತ್ತಿನಲ್ಲಿ ಶಿಕ್ಷಣ ಇರದ ವ್ಯಕ್ತಿಗೆ ಯಾವುದೇ ರೀತಿಯ ಗೌರವವೂ ದೊರೆಯಲಾರದೆಂಬ ಸ್ಥಿತಿ ನಿರ್ಮಾಣವಾಗಿದೆ. ಶಿಕ್ಷಣ ಮಾತ್ರವೇ

ಮಾನವನ ಬದುಕಿಗೆ ಹೊಸ ಹೊಳಪನ್ನು ನೀಡುತ್ತದೆ. ಅವರನ್ನು ಪ್ರಾಣಿಗಳಗಿಂತ ಶ್ರೇಷ್ಠ ಎನಿಸಿಕೊಳ್ಳಲು ಅರ್ಹರನ್ನಾಗಿ ಮಾಡುವುದೇ ಶಿಕ್ಷಣ.

ಇಂದು ನಮ್ಮ ರಾಜ್ಯದಲ್ಲಿ ಸುಮಾರು ೧೨೩೭೭ ಪ್ರಾಥಮಿಕ ಸರ್ಕಾರಿ ಶಾಲೆಗಳಿವೆ. ೨೬೯೦ ಅನುದಾನ ಶಾಲೆಗಳಿವೆ. ೯೬೮೭ಕ್ಕೂ ಅಧಿಕ ಅನುದಾನರಹಿತ ಪ್ರಾಥಮಿಕ ಶಾಲೆಗಳಿವೆ. ಈ ಶಾಲೆಗಳಲ್ಲಿ ಗ್ರಾಮೀಣ ಭಾಗದ ಶಾಲೆಗಳು ಹೆಚ್ಚಾಗಿ ಕಂಡುಬರುವುದು ವಿಶೇಷ. ೨೦೧೧ರ ಜನಗಣತಿಯ ಪ್ರಕಾರ ಒಟ್ಟಾರೆ ಮಹಿಳೆಯರ ಶಿಕ್ಷಣವು ಇಲ್ಲಿ ಶೇ. ೬೮.೧೩ರಷ್ಟು ಕಂಡುಬರುವುದು. ಪುರುಷರ ಶಿಕ್ಷಣವು ಶೇ. ೮೨.೮೪ರಷ್ಟು ಕಂಡುಬರುತ್ತದೆ. ಉದಾರಿಕರಣ, ಖಾಸಗೀಕರಣ, ಜಾಗತೀಕರಣದಿಂದಾಗಿ ಶಿಕ್ಷಣವು ದೇಶದೆಲ್ಲೆಡೆ ವ್ಯಾಪಿಸಿತ್ತು.

ಮುಜಾಮಿಲ್ ಜಾನ್ ಅವರು. 'ಇನ್‌ಫ್ಯಾಕ್ಟ್ ಆಫ್ ಎಜುಕೇಷನ್' ಶಿಕ್ಷಣ ವ್ಯಕ್ತಿಗೆ ಜ್ಞಾನ ಹಾಗೂ ತಿಳಿವಳಿಕೆಯನ್ನು ನೀಡುತ್ತದೆ. ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅತ್ಯಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.

ಹೆಚ್ಚು ಶಿಕ್ಷಣ ಪಡೆದ ತಾಯಂದಿರು ಉತ್ತಮ ಶುಚಿತ್ವ, ಉತ್ತಮಗೊಂಡ ಪೌಷ್ಟಿಕಾಂಶಗಳು, ಕುಟುಂಬದ ಆಚರಣೆಗಳು, ಕುಟುಂಬದ ಆರೋಗ್ಯ ಕುರಿತು ಹೆಚ್ಚು ಪರಿಣಾಮಕಾರಿ ಪಾತ್ರ ವಹಿಸುವಿಕೆ ಸಾಧಿಸುವರು. ಶಿಕ್ಷಣವು ಆರೋಗ್ಯ ಪರಿಕರಗಳನ್ನು ಹೆಚ್ಚಾಗಿ ಬಳಸಲು ಉತ್ತೇಜಿಸುತ್ತ ತಾಯಿ ಮತ್ತು ಮಗುವಿನ ಪರಿಸರವನ್ನು ಚೆನ್ನಾಗಿ ನಿರ್ವಹಿಸುವ ಸಾಮರ್ಥ್ಯ ನೀಡುವುದೇ ಇದಕ್ಕೆ ಉತ್ತರ. ನೈಜಿರಿಯಾದ ತಾಯಂದಿರಿಗೆ ಶಿಕ್ಷಣವು ಸ್ಥಳೀಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಚೆನ್ನಾಗಿ ಬಳಸುವುದನ್ನು ಕಲಿಸಿತು. ಕೊಳವೆ ನೀರು ಪೂರೈಕೆ ಮತ್ತು ನೀರು ಬಳಸುವ ವಿಧಾನವನ್ನು ಪಿಲಿಫೈನ್ಸ್‌ನ ತಾಯಂದಿರಿಗೆ ಹೆಚ್ಚು ಶಿಕ್ಷಣದಿಂದ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಕಲಿಸಿದೆ. ಸಾಮಾನ್ಯವಾಗಿ ಶಿಕ್ಷಣ ಮನೆಯಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ನಿರ್ವಹಿಸುವಂತೆ ಅವಶ್ಯಕವಿರುವ ಜ್ಞಾನ ನೀಡುವುದು. ವಿವಿಧ ದೇಶಗಳಲ್ಲಿ ಮೂಡಿ ಬಂದಿರುವ ಶಿಕ್ಷಣದ ಅರಿವಿನ ಮಹತ್ವವನ್ನು ತಿಳಿಯುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

೧.೨ ಅಧ್ಯಯನದ ಉದ್ದೇಶಗಳು

ಕರ್ನಾಟಕದಲ್ಲಿ ಕಡ್ಡಾಯ ಶಿಕ್ಷಣ ನೀತಿ ಜಾರಿಗೆ ಬಂದಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳಾ ಶಿಕ್ಷಣದ ವಿಷಯದಲ್ಲಿ ಹೆಚ್ಚು ಕಾಳಜಿ ವಹಿಸಲಾಗಿದೆ. ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದೆ ಎಂಬುದನ್ನು ಮನಗಾಣಿಸಬೇಕಾಗಿದೆ. ಮೂಲಭೂತ ಸೌಕರ್ಯಗಳಲ್ಲಿ ಒಂದೆಂದು ಭಾವಿಸಲಾಗುವ ಶಿಕ್ಷಣವನ್ನು ಭಾರತೀಯರಿಗೆಲ್ಲಾ ಒದಗಿಸುವುದು ಇಂದು ಸಾಂವಿಧಾನಕ ಹೊಣೆಯಾಗಿದೆ. ಸಂವಿಧಾನದ ೪೫ನೇ ವಿಧಿಯನ್ವಯ

೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಸೂಚಿಸಲಾಗಿದೆ. ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಅನುಷ್ಠಾನ ಗೊಳಿಸುವುದರೊಂದಿಗೆ ಹೆಣ್ಣುಮಕ್ಕಳಿಗೆ ಸಮರ್ಥ ಅಕ್ಷರ ಕಲಿಕೆಯನ್ನು ಮೂಡಿಸುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

೧೯೯೧ರಲ್ಲಿ ಎಚ್. ನರಸಿಂಹಯ್ಯನವರ ನಾಯಕತ್ವದಲ್ಲಿ ಶಿಕ್ಷಣದ ಸ್ವರೂಪ ಹೇಗಿರ ಬೇಕೆಂಬುದನ್ನು ಅರಿಯಲೆಂದು ಅಧ್ಯಯನ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯು ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷವಾಗಿ ಒಂದರಿಂದ ನಾಲ್ಕನೇ ತರಗತಿವರೆಗೆ ಸರ್ಕಾರಿ ಹಾಗೂ ಖಾಸಗಿ ಎನ್ನುವ ಭೇದವಿಲ್ಲದೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಮಾತೃಭಾಷೆಯೇ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿತು. ಸರ್ಕಾರವೂ ಈ ನಿಟ್ಟಿನಲ್ಲಿ ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತಾದರೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಅಧಿಕಾರಿ ವರ್ಗ, ರಾಜಕಾರಣಿಗಳು ಈ ನೀತಿಯನ್ನು ನಿರ್ಲಕ್ಷಿಸಿ ಮುನ್ನಡೆದರು. ಸರ್ಕಾರದ ವಿವಿಧ ಯೋಜನೆ, ಕಾರ್ಯಕ್ರಮದ ಅನುಷ್ಠಾನದ ಮಧ್ಯದಲ್ಲಿಯೂ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ. ಸಮಾನ ಶಿಕ್ಷಣನೀತಿ ಇದ್ದರೂ ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ಹೆಣ್ಣು ಹಾಗೂ ಗಂಡುಮಕ್ಕಳ ಶಿಕ್ಷಣದಲ್ಲಿ ಅಂತರಗಳಿವೆ. ಪರಿಶಿಷ್ಟ ಪಂಗಡದ ಶಿಕ್ಷಣ ಪ್ರಮಾಣ ಸಾಮಾನ್ಯ ಮಹಿಳೆಯರ ಶಿಕ್ಷಣದ ನಡುವೆ ಅಗಾಧವಾದ ಅಂತರವೇಕೆ ಉಂಟಾಗುತ್ತಿದೆ? ಏಕ ರೀತಿಯ ಶಿಕ್ಷಣ ಮಾಧ್ಯಮವಿದ್ದರೂ ಆಂಗ್ಲ ಮತ್ತು ಕನ್ನಡ ಮಾಧ್ಯಮವೆಂಬ ಭಿನ್ನ ರೀತಿಯ ಶಿಕ್ಷಣ ಮಾಧ್ಯಮಗಳೇಕೆ? ವಿಶೇಷವಾಗಿ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಶಿಕ್ಷಣದ ಕುರಿತಾಗಿ ಅರಿಯುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶಗಳು

೧. ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣದ ಪ್ರಗತಿಯನ್ನು ಹಾಗೂ ಶಿಕ್ಷಣದ ಅಂತರಕ್ಕೆ ಲಿಂಗವಾರು ಕಾರಣವನ್ನು ಅರಿಯಲಾಗಿದೆ.

೨. ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳ ಶಿಕ್ಷಣ ಹಿಂದುಳಿದಿರುವಿಕೆಗೆ ಅವಳ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸಾಂಸ್ಕೃತಿಕ ಕಾರಣಗಳನ್ನು ತಿಳಿಯಲಾಗಿದೆ.

೩. ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಹೆಣ್ಣುಮಕ್ಕಳ ಶಿಕ್ಷಣದ ಅಂತರಕ್ಕೆ ಕಾರಣವನ್ನು ನೋಡಲಾಗಿದೆ.

೪. ಹೆಣ್ಣುಮಕ್ಕಳ ಶಿಕ್ಷಣ ಪ್ರೋತ್ಸಾಹಕ್ಕಾಗಿ ವಿವಿಧ ಯೋಜನೆಗಳ ಅನುಷ್ಠಾನ ಹಾಗೂ ಅದರ ಪ್ರಭಾವಗಳನ್ನು ತಿಳಿಯಲಾಗಿದೆ.

೫. ಪರಿಶಿಷ್ಟ ವರ್ಗದ ನಾಯಕ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿಯನ್ನು

ಅರಿಯುವುದರೊಂದಿಗೆ ಶಿಕ್ಷಣದ ಯಾವ ಹಂತದಲ್ಲಿ ನಾಯಕ ಸಮುದಾಯದ ಮಹಿಳೆ ಹಿಂದುಳಿದಿದ್ದಾಳೆ ಮತ್ತು ಹಿಂದುಳಿದಿದ್ದರೆ ಅದಕ್ಕಿರುವ ಕಾರಣಗಳನ್ನು ಚರ್ಚಿಸಲಾಗಿದೆ. ಮೇಲಿನ ಈ ಎಲ್ಲಾ ಉದ್ದೇಶವನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಶಿಕ್ಷಣ ವ್ಯವಸ್ಥೆ ಎಂಬುದು ಒಂದು ಬೃಹದಾಕಾರದ ಆಲದ ಮರವಿದ್ದಂತೆ. ಇಂದು ಭಾರತದ ಪ್ರತಿಯೊಂದು ರಾಜ್ಯವೂ ಕಡ್ಡಾಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿವೆ. ಮುಖ್ಯವಾಗಿ ಪ್ರಾಥಮಿಕ,ಮಾಧ್ಯಮಿಕ, ಪ್ರೌಢ, ಉನ್ನತ ಹೀಗೆ ನಾಲ್ಕು ಹಂತಗಳಲ್ಲಿ ಹರಡಿ ಕೊಂಡಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖವಾದುದು ಪ್ರಾರಂಬಿಕ ಹಂತದ ಪ್ರಾಥಮಿಕ ಶಿಕ್ಷಣ. ಪ್ರಾಥಮಿಕ ಶಿಕ್ಷಣವು ಓದುವ ವಿದ್ಯಾರ್ಥಿಗೆ ಬುನಾದಿ ಇದ್ದಂತೆ. ಪ್ರಾಥಮಿಕ ಶಿಕ್ಷಣ ಸರಿಯಾಗಿ ದೊರೆತರೆ ವಿದ್ಯಾರ್ಥಿಯ ಮುಂದಿನ ಶೈಕ್ಷಣಕ ಭವಿಷ್ಯ ಪ್ರಗತಿಪರವಾಗಿ ಸಾಗಬಲ್ಲದು. ಆದರೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಈ ಮಾತು ಅನ್ವಯಿಸುವುದಿಲ್ಲ. ಹರಯ, ಮದುವೆ, ಹೆಣ್ಣುಮಗು ಎನ್ನುವ ನಿರ್ಲಕ್ಷ್ಯ ಇತ್ಯಾದಿ ಕಾರಣಗಳಿಗಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸವು ಪ್ರಾಥಮಿಕ ಹಂತವನ್ನು ದಾಟುವುದು ಕಷ್ಟಸಾಧ್ಯದ ವಿಚಾರ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಇಡೀ ರಾಜ್ಯ ಅಥವಾ ರಾಷ್ಟ್ರವೊಂದನ್ನು ಅಧ್ಯಯನಕ್ಕೆ ಅಳವಡಿಸುವುದು ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸವೆಂದು ಭಾವಿಸಿ ಕೇವಲ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಏಳು ತಾಲೂಕುಗಳಿವೆ. ಈ ಏಳು ತಾಲೂಕುಗಳಲ್ಲಿ ಪ್ರತಿ ತಾಲೂಕಿಗೆ ಐದು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಲವತ್ತು ಕುಟುಂಬಗಳನ್ನು ಅಂದರೆ ಪ್ರತಿ ತಾಲೂಕಿಗೆ ೨೦೦ ನಾಯಕ ಸಮುದಾಯದ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅಂದರೆ ಏಳು ತಾಲೂಕುಗಳ ಮಧ್ಯ ಒಟ್ಟು ೧೪೦೦ ನಾಯಕ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೧.೪ ಅಧ್ಯಯನದ ಮಹತ್ವ

ಶಿಕ್ಷಣ ವ್ಯವಸ್ಥೆಯ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣವನ್ನು ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳ ಶಿಕ್ಷಣದ ಕುರಿತು ನಡೆದಿರುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಹೀಗಾಗಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ನಾಯಕ

ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿ ಗತಿಗಳನ್ನು ಈ ಅಧ್ಯಯನದಲ್ಲಿ ಅರಿಯಲು ಪ್ರಯತ್ನಿಸಲಾಗಿದೆ. ಈ ಎಲ್ಲಾ ದೃಷ್ಟಿಯಿಂದ ಈ ಅಧ್ಯಯನವು ಒಂದು ಮಹತ್ವದ ಹೆಜ್ಜೆ ಎಂದು ತಿಳಿಯಲಾಗಿದೆ.

೧.೫ ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು ರ್‍ಯಾಂಡಮ್ ಆಗಿ ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸ ಲಾಗಿದೆ. ಹಾಗೆ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಶಿಕ್ಷಣ ವ್ಯವಸ್ಥೆಯ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟೆಯರಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಶಿಕ್ಷಣದ ಕುರಿತಾದ ಸಾಮಾನ್ಯ ಮಾಹಿತಿಗಳು, ಹಾಗೂ ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ಏಳು ತಾಲೂಕಿನಲ್ಲಿ ಪ್ರತಿ ತಾಲೂಕಿಗೆ ಐದು ಗ್ರಾಮ ಪಂಚಾಯತಿಗಳಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಕುಟುಂಬಗಳನ್ನು ನೇರವಾಗಿ ಸಮೀಕ್ಷಿಸಿ ಸಂದರ್ಶನ ನಡೆಸಲಾಯಿತು.

ಬಳ್ಳಾರಿ ಜಿಲ್ಲೆಯ ಏಳು ತಾಲೂಕು ಪ್ರತಿ ತಾಲೂಕಿಗೆ ಐದು ಗ್ರಾಮಪಂಚಾಯತಿಗಳಂತೆ ಆಯ್ಕೆಮಾಡಿಕೊಂಡು ಆ ಗ್ರಾಮಪಂಚಾಯತಿಯೊಳಗೆ ಪ್ರತಿ ಪಂಚಾಯಿತಿಗೆ ೪೦ ಕುಟುಂಬಗಳಂತೆ ತಾಲೂಕಿಗೆ ಒಟ್ಟು ೨೦೦ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಅಂದರೆ ಏಳು ತಾಲೂಕುಗಳ ಮಧ್ಯದಲ್ಲಿ ೩೫ ಗ್ರಾಮಪಂಚಾಯತಿಗಳಲ್ಲಿ ಕ್ಷೇತ್ರಾಧ್ಯಯನ ನಡೆಸಲಾಗಿದೆ. ಒಟ್ಟು ೧೪೦೦ ಕುಟುಂಬಗಳನ್ನು ಸಮೀಕ್ಷೆಗೆ ಆಯ್ಕೆ ಮಾಡಲಾಗಿದೆ. ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳ ಒಟ್ಟು ಜನಸಂಖ್ಯೆಯು ೭೧೯೯ ಇದೆ. ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕೈಗೊಂಡ ಗ್ರಾಮಪಂಚಾಯಿತಿಗಳು ಈ ಕೆಳಗಿನಂತಿವೆ.

೧) **ಬಳ್ಳಾರಿ** ತಾಲೂಕಿನ ಎತ್ತಿನಬೂದಿಹಾಳು, ಏಳುಬೆಂಚಿ, ಓರ್‍ವಾಯಿ, ಶಂಕರಬಂಡೆ ಮತ್ತು ಬೆಳಗಾಲ್ ಗ್ರಾಮಪಂಚಾಯತಿ ಗಳಾಗಿವೆ. ೨) **ಕೂಡ್ಲಿಗಿ** ತಾಲೂಕಿನ ಕಂದಗಲ್ಲು, ಜುಮ್ಮೋಬನಹಳ್ಳಿ, ಪೂಜಾರಹಳ್ಳಿ, ಮೊರಬ ಮತ್ತು ಜರ್ಮಲಿ ಗ್ರಾಮಪಂಚಾಯತಿಗಳಾಗಿವೆ. ೩) **ಹಗರಿಬೊಮ್ಮನಹಳ್ಳಿ** ತಾಲೂಕಿನ ಅಲಬೂರು, ಕೋಗಳಿ, ದಾಸಾಪುರ, ಬನ್ನಿಗೋಳ ಮತ್ತು ಸೊನ್ನ ಗ್ರಾಮಪಂಚಾಯತಿ ಗಳಾಗಿವೆ. ೪) **ಹಡಗಲಿ** ತಾಲೂಕಿನ ದಾಸನಹಳ್ಳಿ, ತುಂಬಿನಕೆರೆ, ಮಹಾಜನದಹಳ್ಳಿ, ನೌಲಿ ಮತ್ತು ಮುದೇನೂರು ಗ್ರಾಮಪಂಚಾಯತಿಗಳಾಗಿವೆ. ೫) **ಹೊಸಪೇಟೆ** ತಾಲೂಕಿನ ಚಿಲಕನಹಟ್ಟಿ,

ಡಣಾಯಕನಕೆರೆ, ಗಾದಿಗನೂರು, ಮುದ್ದಾಪುರ ಮತ್ತು ನಾಗಲಾಪುರ ಗ್ರಾಮಪಂಚಾಯತಿಗಳಾಗಿವೆ. **೬) ಸಿರುಗುಪ್ಪ** ತಾಲೂಕಿನ ಹಚ್ಚೊಳ್ಳಿ, ಶ್ಯಾನವಾಸಪುರ, ಉತ್ತನೂರು, ಮುದ್ದಟನೂರು ಮತ್ತು ಮಣ್ಣೂರು, ಗ್ರಾಮಪಂಚಾಯತಿಗಳಾಗಿವೆ. **೭) ಸಂಡೂರು** ತಾಲೂಕಿನ ಯಶವಂತನಗರ, ಮೆಟ್ರಿಕಿ, ತಾರಾನಗರ, ದರೋಜಿ, ವಿಠ್ಠಲಾಪುರ, ಗ್ರಾಮಪಂಚಾಯತಿಗಳಾಗಿದ್ದು, ಅವರೊಂದಿಗೆ ಆಯಾ ತಾಲೂಕಿನಲ್ಲಿಯ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ನಾಯಕ ಸಮುದಾಯದ ಹೆಣ್ಣುಮಕ್ಕಳನ್ನು ಸಹ ಸಮೀಕ್ಷಿಸಿ ಸಂದರ್ಶನ ನಡೆಸಲಾಗಿದೆ.

ಮಾಹಿತಿಯನ್ನು ಪಡೆಯಲು ಮುಖ್ಯವಾಗಿ ಎರಡು ವಿಧಗಳನ್ನು ಅನುಸರಿಸಲಾಗಿದೆ. ಮೊದಲನೇದಾಗಿ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯತಿಯ ನಾಯಕ ಸಮುದಾಯದ ಕುಟುಂಬಗಳನ್ನು ಸಂದರ್ಶನ ನಡೆಸಿ ಮಾಹಿತಿ ಪಡೆಯಲಾಯಿತು. ಎರಡನೇದಾಗಿ ಆಯಾ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ನಾಯಕ ಸಮುದಾಯದ ಹೆಣ್ಣುಮಕ್ಕಳನ್ನು ಸಂದರ್ಶಿಸಿ ಸಹ ಅಧ್ಯಯನಕ್ಕೆ ಪೂರಕವಾದ ಮಾಹಿತಿ ಪಡೆಯಲಾಯಿತು. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಚಾರಿತ್ರಿಕ ವಿಧಾನ, ಸಂಖ್ಯಾ ಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೋಢಿಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೧.೬ ಅಧ್ಯಯನದ ವಿನ್ಯಾಸ

ಈ ಅಧ್ಯಯನವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು ಪ್ರಸ್ತಾವನೆಯಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳ ಕುರಿತು ತಿಳಿಸಲಾಗಿದೆ. ಹಾಗೆಯೇ ಇಲ್ಲಿಯವರೆಗೆ ನಡೆದ ಅಧ್ಯಯನಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಎರಡು ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ ಎಂದಿದ್ದು ಇದರಲ್ಲಿ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯು ಹಿಂದೆ ಚಾರಿತ್ರಿಕವಾಗಿ ಎಷ್ಟು ಮಹತ್ವದ್ದಾಗಿತ್ತು, ಅದರ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಈ ಜಿಲ್ಲೆಯ ಭೌಗೋಳಿಕ ಸ್ವರೂಪ ಹೇಗಿದೆ, ಆ ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು, ಕೃಷಿ ವಿಧಾನ, ನೀರಾವರಿಯ ಸ್ವರೂಪ, ಜನಸಂಖ್ಯೆ, ಗುಡ್ಡಗಾಡು ಪ್ರದೇಶ, ಗಣಿಗಾರಿಕೆ ಮತ್ತು ಔದ್ಯೋಗಿಕತೆ, ನೈಸರ್ಗಿಕ ಪರಿಸರ ಮುಂತಾದವುಗಳ ಕುರಿತು ನೋಡಲಾಗಿದೆ.

ಅಧ್ಯಾಯ ಮೂರು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣ ನಡೆದುಬಂದ ದಾರಿ ಎಂದಿದ್ದು ಇದರಲ್ಲಿ ನಾಯಕ ಸಮುದಾಯದ ಮಹಿಳೆ ಮತ್ತು ಸಾಕ್ಷರತೆಯ ಕುರಿತು ಗಮನಿಸಲಾಗಿದೆ.

ಅಧ್ಯಾಯ ನಾಲ್ಕು ನಾಯಕ ಸಮುದಾಯದ ಮಹಿಳೆಯ ಶೈಕ್ಷಣಿಕ ಸಮಸ್ಯೆಗಳು ಎಂದಿದ್ದು ಆ ಸಮುದಾಯದ ಮಹಿಳೆ ಶಿಕ್ಷಣ ಪಡೆಯಲು ಸಾಧ್ಯವಾಗದೆ ಹಿಂದುಳಿಯಲು ಇರಬಹುದಾದ ಕಾರಣಗಳನ್ನು ಅರಿಯುವುದಾಗಿದೆ.

ಅಧ್ಯಾಯ ಐದು ಪರಿಶಿಷ್ಟ ವರ್ಗದ ನಾಯಕ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ ಎಂದಿದ್ದು ಇದರಲ್ಲಿ ನಾಯಕ ಸಮುದಾಯದ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ನಾಯಕ ಸಮುದಾಯದ ಹೆಣ್ಣುಮಕ್ಕಳು ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರು ಶೈಕ್ಷಣಿಕ ಸುಧಾರಣೆ ಎಂದಿದ್ದು ಇದರಲ್ಲಿ ಪರಿಶಿಷ್ಟ ಮಹಿಳೆಯರಿಗಾಗಿ ಯಾವ ರೀತಿಯ ಶೈಕ್ಷಣಿಕ ಸುಧಾರಣಾ ನೀತಿಗಳನ್ನು ಅನುಸರಿಸಲಾಗುತ್ತದೆ ಮತ್ತು ಅವು ಈ ಸದಸ್ಯರಿಗೆ ಎಷ್ಟರಮಟ್ಟಿಗೆ ಪೂರಕವಾಗಿವೆ, ಅದರ ಪರಿಣಾಮಗಳ ಕುರಿತು ನೋಡಲಾಗಿದೆ.

ಕೊನೆಯಲ್ಲಿ ಸಮಾರೋಪ ಇದ್ದು ಇದರಲ್ಲಿ ಒಟ್ಟಾರೆ ಅಧ್ಯಯನದಿಂದ ದೊರೆತ ಫಲಿತಗಳ ಕುರಿತು ವಿಶ್ಲೇಷಿಸುವುದರೊಂದಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಅನುಬಂಧಗಳಿದ್ದು ಅನುಬಂಧ ಒಂದರಲ್ಲಿ ಹೆಚ್ಚುವರಿ ಕೋಷ್ಟಕಗಳನ್ನು ನೀಡಲಾಗಿದೆ. ಅನುಬಂಧ ಎರಡರಲ್ಲಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಹೆಸರು, ವಿವರಗಳನ್ನು ನೀಡಲಾಗಿದೆ. ಅನುಬಂಧ ಮೂರರಲ್ಲಿ ಅಧ್ಯಯನಕ್ಕೆ ಪೂರಕ ಮಾಹಿತಿಯೊದಗಿಸಿದ ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ. ಅನುಬಂಧ ನಾಲ್ಕರಲ್ಲಿ ನಕ್ಷೆಗಳಿವೆ.

೧.೭ ಇದುವರೆಗೂ ನಡೆದ ಅಧ್ಯಯನಗಳು

ಎನ್.ಎಸ್.ಎಸ್.ಓ. ಮತ್ತು ಜನಗಣತಿಯ ಅಂಕಿ ಅಂಶಗಳ[೪] ಪ್ರಕಾರ ಭೂ ಒಡೆತನ ಕುಟುಂಬದ ಗಾತ್ರ ಜಾತಿ, ಲಿಂಗ, ಶಿಕ್ಷಣ, ಸಾಕ್ಷರತೆ, ವೃತ್ತಿ ಇತ್ಯಾದಿಗಳು ಬಡತನದ ಮೇಲೆ ಪರಿಣಾಮ ಬೀರುತ್ತವೆ. ಯಾವುದೇ ರೀತಿಯ ಆಸ್ತಿ ಮತ್ತು ಶಿಕ್ಷಣವಿಲ್ಲದೆ ಕೂಲಿ ಆಧಾರಿತ ಉದ್ಯೋಗಗಳಲ್ಲಿ ತೊಡಗಿರುವುದರಿಂದ ಭಾರತದಲ್ಲಿ ಬಡತನ ಹೆಚ್ಚಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಸಂಪನ್ಮೂಲ ಅಥವಾ ಆಸ್ತಿಯಲ್ಲಿನ ಅಸಮಾನತೆ ಮತ್ತು ಆದಾಯ ಹಂಚಿಕೆಯ ಅಸಮಾನತೆ ಬಡತನಕ್ಕೆ ಮುಖ್ಯ ಕಾರಣವಾಗಿದೆ. ಮಹಿಳಾ ಮುಖ್ಯಸ್ಥರಿರುವ ಮಾತೃಪ್ರಧಾನ ವ್ಯವಸ್ಥೆ ಇರುವ ಕುಟುಂಬಗಳಲ್ಲಿ ಬಡತನದ ಪ್ರಮಾಣ ಹೆಚ್ಚಾಗಿದ್ದು ಇದು ಮಹಿಳೆಯರ ಮತ್ತು ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಧನಂಜಯಕುಮಾರ ಅವರ ಕೃತಿ 'ರೂರಲ್ ಕ್ರೆಡಿಟ್'[೫]ನಲ್ಲಿ, ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ ಎಂದಿದ್ದಾರೆ. ಮಹಿಳೆಯರು ೨/೩ರಷ್ಟು ಗಂಟೆಗಳ ಕಾಲ ಕೆಲಸ ನಿರ್ವಹಿಸುತ್ತಾರೆ. ಆದರೆ ಜಗತ್ತಿನ ಆದಾಯದಲ್ಲಿ ೧/೧೦ ಭಾಗದಷ್ಟು ಮಾತ್ರ ಆದಾಯ ಪಡೆಯುತ್ತಾರೆ.

ಇದು ಮಹಿಳೆಯರ ಕೆಲಸ ಮೌಲ್ಯವನ್ನು ಪರಿಗಣಿಸುವುದನ್ನು ಕಾಣಬಹುದು. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಪುರುಷ ದುಡಿಮೆಯು ಮುಖ್ಯವಾಗಿದ್ದು, ಮಹಿಳೆಯು ಕೇವಲ ಗೃಹಕಾರ್ಯಕ್ಕೆ ಸೀಮಿತವಾಗಿದ್ದಳು. ಆದರೆ ಕಾಲ ಮತ್ತು ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಜಗತ್ತಿನಾದ್ಯಂತ ಮಹಿಳೆಯರ ಸಬಲೀಕರಣಕ್ಕೆ ಪ್ರಾಶಸ್ತ್ಯ ದೊರಕುತ್ತಿದ್ದು ಈ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು, ಪ್ರಯತ್ನಗಳನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲೂ ಸಹ ಸ್ವಾತಂತ್ರ್ಯಾ ನಂತರ ಸರ್ಕಾರ ಕೆಲವು ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳಲ್ಲಿ ಸಾಲ ಮತ್ತು ಸಹಾಯಧನದ ಯೋಜನೆಯಾದ ಐಆರ್‌ಡಿಪಿ ಸಹ ಒಂದು. ಮುಂದೆ ಇದನ್ನು ಎಸ್.ಜಿ.ಎಸ್.ಆರ್.ವೈ.ನ ಯೋಜನೆಯೊಂದಿಗೆ ಸಂಯೋಜನೆಗೊಳಿಸಲಾಯಿತು. ಎಸ್.ಜಿ.ಎಸ್. ಆರ್.ವೈ. ಯೋಜನೆಯ ಮೂಲಕ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಉತ್ಪಾದಕ ಚಟುವಟಿಕೆಗಳಿಗೆ ಸಹಾಯಧನ ಆಧಾರಿತ ಸಾಲ ಸೌಲಭ್ಯ ನೀಡಲಾಗುತ್ತದೆ. ಅಲ್ಲದೇ, ಇಂತಹ ಯೋಜನೆಗಳಿಂದ ಉತ್ತಮ ರೀತಿಯ ಪ್ರತಿಕ್ರಿಯೆಗಳು ಬಂದರೂ ಇನ್ನೂ ಈ ತರಹದ ಕಾರ್ಯಕ್ರಮಗಳು ಪ್ರಗತಿಯಲ್ಲಿ ನಡೆದುಕೊಂಡು ಹೋಗಬೇಕಾದ ಅಗತ್ಯವಿದೆ ಎಂದು ತಿಳಿದುಬಂದಿದೆ. ಬೀನ ಅಗರ್‌ವಾಲ್ ಅವರ 'ರಿ ಥಿಂಕಿಂಗ್ ಅಗ್ರಿಕಲ್ಚರ್ ಪ್ರೊಡಕ್ಷನ್ ಕಲೆಕ್ಟಿವಿಟೀಸ್'[೩] ಎಂಬ ಲೇಖನದಲ್ಲಿ ಬಡತನದಲ್ಲಿ ವಾಸಿಸುತ್ತಿರುವ ಮಹಿಳೆಯರ ಸಂಖ್ಯೆ ಕಳೆದ ಎರಡು ದಶಕಗಳಲ್ಲಿ ಶೇ. ೩೦ರಿಂದ ೫೦ಕ್ಕೆ ಹೆಚ್ಚಾಗಿದೆ ಎಂಬ ಅಭಿಪ್ರಾಯವಿದೆ. ಭಾರತದ ಕೃಷಿಕ್ಷೇತ್ರದಲ್ಲಿ ಪುರುಷ ದುಡಿಮೆಗಾರರ ಸಂಖ್ಯೆ ಕಡಿಮೆಯಾಗುತ್ತಿದ್ದು ಪುರುಷರು ಕೃಷಿಯಿಂದ ಕೃಷಿಯೇತರ ಉದ್ಯೋಗಗಳ ಕಡೆ ಚಲಿಸುತ್ತಿದ್ದಾರೆ. ಭಾರತದಲ್ಲಿ ಶೇ. ೬೦ರಷ್ಟು ಜನ ಕೃಷಿಯಲ್ಲಿ ಉದ್ಯೋಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿ ಮಹಿಳಾ ದುಡಿಮೆಗಾರರ ಸಂಖ್ಯೆ ಹೆಚ್ಚುತ್ತಿದೆ. ಎನ್.ಎಸ್.ಎಸ್.ಓ. ೨೦೦೪-೦೫ರ ಶೇ. ೪೬ರಷ್ಟು ಪುರುಷ ದುಡಿಮೆಗಾರರಿದ್ದು ಶೇ.೬೫ರಷ್ಟು ಮಹಿಳಾ ದುಡಿಮೆಗಾರರಿದ್ದಾರೆ. ಒಟ್ಟಾರೆ ೮೩ರಷ್ಟು ಗ್ರಾಮೀಣ ಮಹಿಳಾ ದುಡಿಮೆಗಾರರು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಇವರಲ್ಲಿ ಭೂರಹಿತ ಮಹಿಳಾ ಕೃಷಿಕಾರ್ಮಿಕರ ಸಂಖ್ಯೆ ಹೆಚ್ಚು. ಅಂದರೆ ಮಹಿಳಾ ದುಡಿಮೆಗಾರರ ಕೃಷಿ ಚಟುವಟಿಕೆಯಲ್ಲಿ ಹೆಚ್ಚಾಗಿ ಕೆಲಸ ಮಾಡುವುದರಿಂದ ಕನಿಷ್ಠ ಜೀವನ ನಡೆಸುವುದನ್ನು ಕಾಣಬಹುದು. ಅಂದರೆ ಮಹಿಳೆಯರು ಹೆಚ್ಚಿನ ವಿದ್ಯಾಭ್ಯಾಸ ಮಾಡದೇ ಇರುವುದರಿಂದ ಜೀವನ ನಿರ್ವಹಿಸುವುದು ಸಾಧ್ಯವಿಲ್ಲ. ಹೆಣ್ಣುಮಕ್ಕಳಿಗೆ ಹೆಚ್ಚಿನ ಶಿಕ್ಷಣವನ್ನು ನೀಡುವ ಅವಶ್ಯಕತೆಯಿದೆ ಎಂದು ತಿಳಿದುಬಂದಿದೆ.

ಬೇವೂರ ಅವರ 'ಕನ್‌ಸ್ಟ್ರಕ್ಷನ್ ಆಫ್ ಟ್ರೈಬಲ್ ಎಜುಕೇಶನ್'[೭] ಎಂಬ ಸಂಶೋಧನಾ ಪ್ರಬಂಧದಲ್ಲಿ ಬುಡಕಟ್ಟು ಶಿಕ್ಷಣವನ್ನು ಆಂತರಿಕ ಮತ್ತು ಬಾಹ್ಯ ಎಂಬ ಎರಡು ದೃಷ್ಟಿಕೋನದಲ್ಲಿ ವಿವರಿಸಿದ್ದಾರೆ. ಆಂತರಿಕ ದೃಷ್ಟಿಕೋನದಲ್ಲಿ ತರಗತಿಯ ಕೊಠಡಿಯ ಒಳಗೆ ಪಠ್ಯಪುಸ್ತಕದಲ್ಲಿನ ಭಾಷಾ ಮಾಧ್ಯಮ, ಬೋಧನಾ ವಿಧಾನಗಳು ಪ್ರಮುಖ ಪಾತ್ರ ವಹಿಸುತ್ತವೆ. ಬಾಹ್ಯ ದೃಷ್ಟಿಕೋನದಲ್ಲಿ

ಪರಿಸರದ ಅಂಶಗಳು ಪೋಷಕರ ಸಾಮಾಜಿಕ ಸ್ಥಿತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ.

ಹಾಗೆಯೇ ರೌಟ್ಸ್ ಅವರು ನಡೆಸಿರುವ 'ಡೈಮೆನ್‌ಷನ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ'[೮] ಎಂಬ ಅಧ್ಯಯನ ಪ್ರಬಂಧದಲ್ಲಿ ಬುಡಕಟ್ಟು ಮಕ್ಕಳಲ್ಲಿ ಶೈಕ್ಷಣಿಕ ಸಾಧನೆ ಕಡಿಮೆ ಮಟ್ಟದ್ದಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಅನುವಂಶೀಯ ಶಕ್ಯತೆಯ ಕೊರತೆ, ಸಾಂಸ್ಕೃತಿಕ ಬಿಕ್ಕಟ್ಟು, ಭಾಷಾ ಸಮಸ್ಯೆ, ಅತಿ ಹಿಂದುಳಿದ ಶೈಕ್ಷಣಿಕ ಹಿನ್ನೆಲೆ ಮತ್ತು ಅವರ ಸಾಮಾಜಿಕ ಬದುಕಿನ ಅಶೋತ್ತರಗಳು ಕೆಳಮಟ್ಟದಲ್ಲಿರುವುದೇ ಆಗಿದೆ ಎಂದಿದ್ದಾರೆ. ಅಂದರೆ ಶಿಕ್ಷಣಕ್ಷೇತ್ರದಲ್ಲಿ ಮಕ್ಕಳ ಅಕ್ಷರ ಕಲಿಕೆಗೆ ಹಲವು ಅಡ್ಡಿ ಆತಂಕಗಳು ಬರುತ್ತವೆ. ಅದಕ್ಕೆ ಪರಿಹಾರಾರ್ಥ ವಾಗಿ ಹಲವು ಸಂಘ-ಸಂಸ್ಥೆಗಳು ಉನ್ನತಮಟ್ಟದ ಕೆಲಸ ಕಾರ್ಯಗಳನ್ನು ಮಾಡಬೇಕಾದ ಅಗತ್ಯವಿದೆ ಎಂದು ತಿಳಿದುಬಂದಿದೆ

ಆಚಾರ ವನಮಾಲ ಅವರ 'ಸ್ತ್ರೀ ಮತ್ತು ಶಿಕ್ಷಣ'[೯] ಎಂಬ ಪುಸ್ತಕದಲ್ಲಿ ಗುರುಕುಲಗಳಲ್ಲಿಯೂ ಹೆಣ್ಣು ಮಕ್ಕಳ ಶಿಕ್ಷಣವನ್ನು ಕಲಿಯಲು ಪ್ರವೇಶವಿರಲಿಲ್ಲ ಎಂಬ ಅಂಶವನ್ನು ವಿವರಿಸಿದ್ದಾರೆ. ಅವರುಗಳಿಗೆ ಈ ವಿಷಯಗಳಲ್ಲಿ ಕಟ್ಟುನಿಟ್ಟಾದ ನಿರ್ಬಂಧವನ್ನು ಸಹ ವಿಧಿಸಿತ್ತಲ್ಲದೆ ಕೇವಲ ರಾಜ ಮಹಾರಾಜರ, ಮಂತ್ರಿಗಳ ಮಕ್ಕಳಿಗೆ ಇನ್ನಿತರ ಪ್ರಮುಖ ಊರಿನ ಮುಖಂಡರ ಮಕ್ಕಳಿಗೆ ಮಾತ್ರ ಶಿಕ್ಷಣವು ಸೀಮಿತವಾಗಿತ್ತು. ಹೆಣ್ಣುಮಕ್ಕಳಿಗೆ ಆ ಕಾಲದಲ್ಲಿ ಶಿಕ್ಷಣ ಪಡೆಯುವುದಕ್ಕೆ ಪ್ರಬಲವಾದ ವಿರೋಧವು ಇತ್ತೆಂದು ವೇದಗಳ ಕಾಲದ ಐತಿಹಾಸಿಕ ಪುಸ್ತಕಗಳಲ್ಲಿ ತಿಳಿಯಬರುತ್ತದೆ. ಅದರಲ್ಲಿಯೂ ಮುಖ್ಯವಾಗಿ ಅಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಮನೆಬಿಟ್ಟು ಹೊರಗೆ ಹೋಗುವಂತಿರಲಿಲ್ಲ ಹಾಗೂ ವಾಕ್ ಸ್ವಾತಂತ್ರ್ಯವೂ ಇರಲಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ ಹೆಣ್ಣುಮಕ್ಕಳಿಗೆ ಪ್ರಸ್ತುತ ಸಂದರ್ಭದಲ್ಲಿ ಸ್ವಾತಂತ್ರ್ಯ ಇದ್ದರೂ ಅದರ ನಿಯಮಿತ ಉಪಯೋಗವಾಗದೇ ಅದರಿಂದ ತುಂಬ ವಿರೋಧಗಳನ್ನು ಎದುರಿಸುತ್ತಿದ್ದಾರೆ. ಅಂದರೆ ಹೆಣ್ಣುಮಕ್ಕಳಿಗೆ ಎಲ್ಲಾ ರಂಗದಲ್ಲಿಯೂ ಸಮರ್ಪಕ ಸ್ವಾತಂತ್ರ್ಯ ಸಿಗಬೇಕಾದ ತುರ್ತು ಅಗತ್ಯವಿದೆ ಎಂದು ತಿಳಿದುಬಂದಿದೆ

ರೇಖಾ ಕೌಲ್ ಅವರು(೨೦೦೧) 'ಪ್ರೈಮರಿ ಎಜುಕೇಶನ್ ಗೋಯಿಂಗ್ ಬಿಯಾಂಡ್ ದ ಕ್ಲಾಸ್ ರೂಂ' ಎಂಬ ಲೇಖನದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿನ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೊನೆಯ ಅದ್ಯತೆ ಕೊಡುವುದನ್ನು ಗುರುತಿಸಿದ್ದಾರೆ. ಅಲ್ಲದೆ ಕೆಳಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಸೂಕ್ತ ಅವಕಾಶಗಳಿಲ್ಲ ಎಂಬುದನ್ನು ಗುರುತಿಸಿದ್ದಾರೆ. ಅಂದರೆ ಬಡತನವೆನ್ನುವುದು ಒಂದು ಅನಿಷ್ಟ ಪದ್ಧತಿಯಾಗಿ ನಿರ್ಮಾಣಗೊಂಡಿದೆ. ಬಡವರು ಸಮರ್ಥ ಸೌಲಭ್ಯಗಳನ್ನು ಪಡೆಯುವಂತಹ ವಾತಾವರಣವನ್ನು ನಿರ್ಮಿಸುವ ಅಗತ್ಯವಿದೆ ಎಂದು ತಿಳಿದುಬಂದಿದೆ.

ವಿಲ್‌ಫ್ರೆಡ್ ಡಿಸೋಜ ಅವರ 'ರೈತರಿಗೆ ಆಸೆ ಕಂಪನಿಗಳಿಗೆ ಲಾಭ'[೧೦] ಎಂಬ ಲೇಖನದಲ್ಲಿ ರೈತ ಕುಟುಂಬಗಳು ತಮ್ಮ ಮಕ್ಕಳ ಬದುಕನ್ನು ಬಲಿ ಕೊಡುವ ಸತ್ಯಾಂಶವನ್ನು ವಿವರಿಸುತ್ತ ಸಾಲ

ಸಂಕೋಲೆಯಿಂದ ಹೊರಬರಲು ಲಾಭ ತರುವ ಹೊಸ ಅವಕಾಶಗಳನ್ನು ಉಪಯೋಗಿಸಿ ಕೊಳ್ಳುವುದು ಸಹಜವೆಂದು, ಆದರೆ ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಶಾಲೆಗೆ ಕರೆತರಲು ಪ್ರಯತ್ನಿಸಬೇಕಾದ ತುರ್ತು ಅಗತ್ಯವಿದೆ ಎಂದು ತಿಳಿಯಲಾಗಿದೆ

ಮಧು ಎಸ್. ಅವರು 'ಶತಮಾನದ ಅಂಚಿನ ಶಿಕ್ಷಣ'[೧೧] ಎಂಬ ಕೃತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದ ಸಾಕ್ಷರತ ಪ್ರಮಾಣ ಶೇ. ೫೬.೪ರಿಂದ ಶೇ. ೬೬.೬೪ಕ್ಕೆ ಹೆಚ್ಚಾಗಿರುವುದು ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕಕ್ಕೆ ಐದನೇ ಸ್ಥಾನ ಮತ್ತು ಇತರೆ ರಾಜ್ಯಗಳಿಗೆ ಹೋಲಿಸಿದರೆ ೨೨ನೇ ಸ್ಥಾನ ಲಭ್ಯ. ಕರ್ನಾಟಕದಲ್ಲಿ ಪುರುಷರ ಸಾಕ್ಷರತೆ ಶೇ. ೫೭.೮೬ರಷ್ಟಿದೆ. ನಗರ ಸಾಕ್ಷರತೆ ೮೧.೬೫ ಹಾಗೂ ಗ್ರಾಮೀಣ ಸಾಕ್ಷರತೆ ಶೇ. ೫೬. ಬಹುಮುಖ್ಯವಾಗಿ ಕರ್ನಾಟಕದ ಎಲ್ಲಾ ಜಿಲ್ಲಾ ಮಹಿಳಾ ಸಾಕ್ಷರತೆ ಕಡಿಮೆ. ಜೈಲುವಾಸಿಗಳಿಗೆ ಶಿಕ್ಷಣ ಸಾಕ್ಷರತೆಯ ಕಾರ್ಯಕ್ರಮ ಅನುಷ್ಠಾನ, ಕಂಪ್ಯೂಟರ್ ರೇಡಿಯೋ ಮೂಲಕ ಹಿಂದುಳಿದ ಜಿಲ್ಲೆಗಳಲ್ಲಿ ಕ್ರಮವಾಗಿ ೮೯೫ ಮತ್ತು ೮೮೫ ಉಪಗ್ರಹ ಆಧಾರಿತ ಶಿಕ್ಷಣ ಶಾಲೆಗಳನ್ನು ಆರಂಭಿಸಿದೆ. ಇಂತಹ ಸೌಲಭ್ಯಗಳು ಜಾರಿಯಲ್ಲಿದ್ದರೆ ಸಾಲದು ಅವುಗಳನ್ನು ಸಂಪೂರ್ಣ ಅನುಷ್ಠಾನಗೊಳಿಸುವ ಅವಶ್ಯಕತೆಯಿದೆ ಎಂದು ತಿಳಿದುಬಂದಿದೆ.

ಜಯಂತಿ ವೈ.ಕೆ. ಅವರ 'ಅಭಿವೃದ್ಧಿ ಮತ್ತು ಬದಲಾವಣೆ'[೧೨] ಒಂದೇ ನಾಣ್ಯದ ಎರಡು ಮುಖಗಳಂತೆ, ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಗೆ ಕೆಲವೊಂದು ನಿರ್ದಿಷ್ಟ ಜನಪರ ಕಾರ್ಯಕ್ರಮಗಳು ಅತ್ಯಗತ್ಯ ಎಂದು ಗುರುತಿಸಿದ್ದಾರೆ. ನಮ್ಮ ಸರ್ಕಾರಗಳು ರೂಪಿಸುವ ಜನಪರ ಅಭಿವೃದ್ಧಿ ಕಾರ್ಯಕ್ರಮಗಳು ತಲುಪಲು ಮಾಹಿತಿ ಶಿಕ್ಷಣ ಹಾಗೂ ಸಂವಹನ ಅಗತ್ಯ. ಅದರ ಜೊತೆಗೆ ಪ್ರಚಾರ ಸಾಮಗ್ರಿಗಳನ್ನು ರೂಪಿಸುವ ಅವಶ್ಯಕತೆಯನ್ನು ಒಳಗೊಂಡಿದೆ. ಅಲ್ಲದೆ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ಜನತೆ ಹಾಗೂ ಕಾರ್ಯಕ್ರಮ ನಡುವಿನ ಸೇತುವೆಯಂತೆ ಕಾರ್ಯ ನಿರ್ವಹಿಸುವ ದಿಟ್ಟ ಹೆಜ್ಜೆಯ ಅವಶ್ಯಕತೆಯಿದೆ ಎಂದು ಮನಗಾಣಲಾಗಿದೆ

ಓಂಕಾರ ಕಾಕಡೆ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರು[೧೩] ನಿಜವಾದ ಅರ್ಥದಲ್ಲಿ ಸಬಲೀಕರಣದ ಹಾದಿಯಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ರಾಜ್ಯದಲ್ಲಿ ಇತ್ತೀಚೆಗೆ ಬೆಳೆಯುತ್ತಿರುವ ಸ್ವಸಹಾಯ ಗುಂಪುಗಳು ಸಾಧನೆ ಒಂದು ವಿನೂತನ ಮಾದರಿಯ ಪ್ರಯೋಗವಾಗಿದ್ದು, ಗ್ರಾಮೀಣ ಬಡಜನರ ಅದರಲ್ಲಿಯೂ ಮಹಿಳೆಯರ ಜೀವನದಲ್ಲಿ ಶೈಕ್ಷಣಿಕ ಸಾಮಾಜಿಕ ಉನ್ನತಿಗೆ ಪ್ರೇರಕ ಶಕ್ತಿಯಾಗಿದೆ. ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿ ತಮ್ಮ ಹಕ್ಕುಗಳನ್ನು ತಿಳಿದುಕೊಂಡು ಅವುಗಳನ್ನು ಪಡೆದುಕೊಳ್ಳಲು ಮಾಧ್ಯಮಗಳು ನೆರವಾಗಿರುತ್ತವೆ ಎಂದಿದ್ದಾರೆ. ಅಲ್ಲದೇ ಗ್ರಾಮೀಣ ಹೆಣ್ಣುಮಕ್ಕಳಿಗೆ ಪ್ರಮುಖವಾಗಿ ಇರುವಂತಹ ಸೌಲಭ್ಯಗಳನ್ನು ನಿಯಮಿತವಾಗಿ ಬಳಸಿಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ತಿಳಿದುಬಂದಿದೆ.

ಪ್ರದೀಪ್‌ಕುಮಾರ್ ಬೋಸ್(೧೯೮೧) ಅವರು "ಸ್ಟ್ರಾಟಿಫಿಕೇಷನ್ ಅಮಾಂಗ್ ಇಂಡಿಯನ್ ಟ್ರೈಬ್ಸ್"[೧೪] ಎಂಬ ಕೃತಿಯಲ್ಲಿ ಭಾರತದ ಬುಡಕಟ್ಟುಗಳಲ್ಲಿ ಜಾತಿ ಏಣಿಶ್ರೇಣಿ ಅಥವಾ ಪವಿತ್ರ ಅಪವಿತ್ರತೆ ಎಂಬ ಏಣಿಶ್ರೇಣಿ ಅಥವಾ ವರ್ಗಗಳ ಸಾಮಾಜಿಕ ಸ್ತರ ವಿನ್ಯಾಸವನ್ನು ಅವಲೋಕಿಸಿ ಅದರ ಪ್ರಸ್ತುತತೆಯನ್ನು ಪ್ರಶ್ನಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಗುಜರಾತಿನ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಬುಡಕಟ್ಟು ಜನಸಂಖ್ಯೆಯು ಆಧುನಿಕ ಮಾರುಕಟ್ಟೆ ಮತ್ತು ಉತ್ಪಾದನಾ ವ್ಯವಸ್ಥೆಗಳು ಹಾಗೂ ಆಧುನಿಕ ರಾಜಕೀಯ ವ್ಯವಸ್ಥೆಯ ಒಳಗೆ ಅವರು ಹೊಂದಿಕೊಳ್ಳುತ್ತಿರುವುದು ಮತ್ತು ಉದ್ಯೋಗಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುವುದನ್ನು ತೋರಿಸಿದ್ದಾರೆ ಮತ್ತು ಶ್ರೀಮಂತ ರೈತರು, ಮಧ್ಯಮ ರೈತರು, ಬಡರೈತರು ಮತ್ತು ಭೂರಹಿತ ಕೃಷಿಕಾರ್ಮಿಕರು ಎಂಬ ನಾಲ್ಕು ವರ್ಗಗಳು ಅಸ್ತಿತ್ವವಿರುವುದನ್ನು ಸ್ಪಷ್ಟಪಡಿಸಿದ್ದಾರೆ.

ಅಲೋಕಕುಮಾರ (೧೯೮೬) ಅವರು "ಟ್ರೈಬಲ್ ಕಲ್ಚರ್ ಅಂಡ್ ಎಕಾನಮಿ"[೧೫] ಎಂಬ ಪುಸ್ತಕದಲ್ಲಿ ಪ್ರಾದೇಶಿಕ ಭೌಗೋಳಿಕ ಅಂಶಗಳ ಅಡಿಯಲ್ಲಿ ಬಿಹಾರದ ಮಲ ಪಹರಿಯಾ ಬುಡಕಟ್ಟಿನ ಸಾಮಾಜಿಕ ಸಾಂಸ್ಕೃತಿಕ ಸಂಘಟನೆ ಮತ್ತು ಆರ್ಥಿಕ ರಚನೆಗಳನ್ನು ವಿಶ್ಲೇಷಣೆ ಮಾಡಿ ಅವುಗಳಿಗೆ ವ್ಯಾಖ್ಯಾನ ನೀಡುವ ಪ್ರಯತ್ನವನ್ನು ಮಾಡಿದ್ದಾರೆ. ಆದಾಯ ಖರ್ಚುಗಳ ಕ್ರಮ, ಕುಟುಂಬದ ಗಾತ್ರ ಮುಂತಾದ ಅಂಶಗಳಿಂದ ಭೂಮಿಯ ಉಪಯೋಗದ ಬಗ್ಗೆ ಅವರು ಅಧ್ಯಯನ ಮಾಡಿದ್ದಾರೆ. ಈ ಸಂಶೋಧನಾ ಪ್ರಬಂಧವು ಮಲ ಪಹರಿಯಾ ಬುಡಕಟ್ಟಿನ ಉಡುಪು, ಧಾರ್ಮಿಕ ಕ್ರಿಯಾ ವಿಧಿಗಳು, ಪದ್ಧತಿಗಳು, ಬೇಟೆ, ಕೃಷಿ ಉಪಕರಣಗಳು ಮತ್ತು ಸಂಗೀತ ಸಲಕರಣೆಗಳಿಗೆ ಸಂಬಂಧಿಸಿದಂತೆ ಸ್ವಾಭಾವಿಕವಾದ ಸುಳಿವುಗಳನ್ನು ನೀಡುತ್ತದೆ. ಕೊನೆಯಲ್ಲಿ ಸಂಶೋಧಕರು ಬುಡಕಟ್ಟು ವಾಸದ ನೆಲೆಗಳಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಶೀಘ್ರವಾಗಿ ನಿರ್ಮಿಸಿಕೊಂಡುವ ಅವಶ್ಯಕತೆಗಳ ಬಗ್ಗೆ ಮನವರಿಕೆ ಮಾಡಿದ್ದಾರೆ.

ಗೀತಾ ಮೆನನ್ (೧೯೮೭) ಅವರು "ಟ್ರೈಬಲ್ ವುಮೆನ್: ವಿಕ್ಟಿಮ್ಸ್ ಆಫ್ ಡೆವಲಪ್‌ಮೆಂಟ್ ಪ್ರೋಸಸ್"[೧೬] ಎಂಬ ಕೃತಿಯಲ್ಲಿ ಸಾಮಾನ್ಯ ಆಸ್ತಿ, ಸಂಪನ್ಮೂಲಗಳ ನಷ್ಟ ಮತ್ತು ಪರಿಣಾಮಗಳು ಬುಡಕಟ್ಟು ಮಹಿಳಯರ ಮೇಲೆ ತೀವ್ರವಾಗಿ ಆಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬುಡಕಟ್ಟು ಮಹಿಳೆಯರ ಕಷ್ಟಗಳು ಹೆಚ್ಚಾಗುತ್ತಿವೆ ಹಾಗೂ ಸಾಮಾನ್ಯ ಆಸ್ತಿ ಮತ್ತು ಸಂಪನ್ಮೂಲ ಗಳಲ್ಲಿನ ಬುಡಕಟ್ಟುಗಳ ಸಾಂಪ್ರದಾಯಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವುದರಿಂದ ಬಹುಸಂಖ್ಯಾತ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯ ಬಲಿಪಶುಗಳಾಗುತ್ತಿದ್ದಾರೆ ಎನ್ನುವ ಸತ್ಯವನ್ನು ಹೊರಗಿಟ್ಟಿದ್ದಾರೆ. ಆದರೆ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರು ಕುಟುಂಬ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಎಂತಹ ಸ್ಥಾನಮಾನ ಹೊಂದಿದ್ದಾರೆ ಎನ್ನುವುದರ ಬಗ್ಗೆ ಗಮನಹರಿಸ ದಿರುವುದು ಕಂಡುಬಂದಿದೆ.

ಬುದ್ಧದೇವ್ ಚತುರ್ವೇಧಿ (೧೯೯೦) ಅವರು "ಟ್ರೈಬಲ್ ಟ್ರಾನ್ಸ್‌ಫಾರ್‌ಮೇಷನ್ ಇನ್ ಇಂಡಿಯಾ"[೧೭] ಎಂಬ ಸಂಶೋಧನಾ ಪ್ರಬಂಧದಲ್ಲಿ ಬುಡಕಟ್ಟುಗಳ ಬದಲಾಗುತ್ತಿರುವ ಚಿತ್ರಣ ಮತ್ತು ಬುಡಕಟ್ಟುಗಳ ಆರ್ಥಿಕತೆ, ಕೃಷಿ, ರಾಜಕೀಯ, ಕುಲಸಂಬಂಧಿ ವಿಷಯಗಳು, ಪರಿಸರ, ಶಿಕ್ಷಣ, ತಂತ್ರಜ್ಞಾನದ ರೂಪಾಂತರ, ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳು, ಧಾರ್ಮಿಕ ನಂಬಿಕೆಗಳು ಮತ್ತು ಕ್ರಿಯಾವಿಧಿಗಳಿಗೆ ಸಂಬಂಧಿಸಿದ ವಿಷಯಗಳ ವೈವಿಧ್ಯತೆಯ ಅಂಶಗಳನ್ನು, ಅವರ ಸಮಸ್ಯೆಗಳು ಮತ್ತು ಪರಿಹಾರ ಮಾದರಿಗಳೆರಡರೊಂದಿಗೆ ಸಮಗ್ರ ಮಾಹಿತಿ ನೀಡಿದ್ದಾರೆ. ಇದರಲ್ಲಿ ಸಂಶೋಧಕರು ಭಾರತದಲ್ಲಿನ ಬುಡಕಟ್ಟುಗಳ ಪರಿಸ್ಥಿತಿಯಲ್ಲಿನ ಸೂಕ್ಷ್ಮ ಮತ್ತು ಸಮಗ್ರ ಹಂತದ ಪರಿವರ್ತನೆಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಂದ ವಿವರಿಸಿದ್ದಾರೆ.

ಕರ್ಮಾಕರ್ ಕೆ.ಜಿ. (೨೦೦೨) ಅವರು "ದಿ ಸೈಲೆನ್ಸ್ ಡ್ರಮ್ಸ್"[೧೮] ಎಂಬ ಗ್ರಂಥದಲ್ಲಿ ವಿವಿಧ ಆರ್ಥಿಕ ವಲಯಗಳಲ್ಲಿ ಸರಕಾರದಿಂದ ಕಾರ್ಯಗತ ಮಾಡುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದ ಬುಡಕಟ್ಟು ಸಮಾಜದಲ್ಲಿ ಬದಲಾವಣೆಗಳಾಗಿವೆ ಮತ್ತು ಒಪ್ಪಿತ ಚೌಕಟ್ಟಿಗೆ ಮೂರ್ತರೂಪ ಕೊಡುವ ಹಾಗೆ ಬುಡಕಟ್ಟು ಸಮುದಾಯಗಳು ನಿಧಾನವಾಗಿ ಬದಲಾವಣೆಗೆ ಹೊಂದಿಕೊಳ್ಳುತ್ತಿವೆ. ಯಾವುದೇ ಬದಲಾವಣೆಯು ಬುಡಕಟ್ಟು ಜನರ ಸಾಮಾಜಿಕ ನೀತಿಗೆ ಅನುಗುಣವಾಗುವಂತಿರದಿದ್ದರೆ ಅಂತಹವುಗಳ ಸಮುದಾಯದಿಂದಲೇ ತಿರಸ್ಕರಿಸಲ್ಪಡುತ್ತದೆ.

ಗೋಪಾಲ್ ಭಾರಾದ್ವಾಜ್ (೧೯೭೭) ಅವರು "ಸೋಶಿಯಲ್ ಮೂವ್‌ಮೆಂಟ್ಸ್ ಅಮಾಂಗ್ ದಿ ಟ್ರೈಬ್ಸ್ ಆಫ್ ಇಂಡಿಯಾ"[೧೯] ಎಂಬ ಸಂಶೋಧನಾ ಪ್ರಬಂಧದಲ್ಲಿ ನಕ್ಸಲರ ಚಳುವಳಿಯಂತಹ ಇತ್ತೀಚಿನ ಬುಡಕಟ್ಟುಗಳ ಅಶಾಂತಿಗೆ ಪ್ರಮುಖ ಕಾರಣಗಳೆಂದರೆ, ಸಾಮಾಜಿಕ ಮೂಲಭೂತ ಸೌಕರ್ಯಗಳ ಕೊರತೆ, ಕೆಳಹಂತದಲ್ಲಿ ದಕ್ಷ ಆಡಳಿತದ ಕೊರತೆ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂವಿಧಾನಾತ್ಮಕವಾಗಿ ಬುಡಕಟ್ಟುಗಳ ಜನರ ಸಂರಕ್ಷಣಾ ಕಾರ್ಯಗಳನ್ನು ಅನುಷ್ಠಾನಗೊಳಿಸದೇ ಇರುವುದು. ಪೋಲಿಸರ ಉದಾಸೀನತೆ, ಅಧಿಕಾರಿಗಳ ಶೋಷಣಾತ್ಮಕ ನಡವಳಿಕೆ, ಅವರ ಭೂಮಿ ಮತ್ತು ಅರಣ್ಯಗಳ ಮೇಲಿನ ಹಕ್ಕಿಗೆ ರಕ್ಷಣೆ ಇಲ್ಲದಿರುವುದು, ಅವರ ಭೂಮಿಯ ಕಾನೂನು ಬಾಹಿರ ಅತಿಕ್ರಮಣ ಮತ್ತು ಬುಡಕಟ್ಟು ನಾಯಕರುಗಳೇ ಸ್ವಾರ್ಥಿಗಳಾಗಿ ಅವರ ಬಂಧುಗಳನ್ನೇ ಶೋಷಣೆ ಮಾಡುವ ಪ್ರವೃತ್ತಿ ಎಂಬ ಅಂಶಗಳನ್ನು ಗುರುತಿಸಿದ್ದಾರೆ.

ಗೀತಾ ಮೆನನ್ (೧೯೮೮) ಅವರು 'ಟ್ರೈಬಲ್ ವುಮೆನ್ ವಿಕ್ಟಿಮ್ಸ್ ಆಫ್ ಡೆವಲಪ್‌ಮೆಂಟ ಪ್ರೊಸ್ಸೆಸ್'[೨೦] ಎಂಬ ತಮ್ಮ ಸಂಶೋಧನಾ ಪದರಬಂಧದಲ್ಲಿ, ಸಾಮಾನ್ಯ ಆಸ್ತಿ, ಸಂಪನ್ಮೂಲಗಳ ನಷ್ಟ ಮತ್ತು ಪರಿಣಾಮಗಳು ಬುಡಕಟ್ಟು ಮಹಿಳೆಯರ ಮೇಲೆ ತೀವ್ರವಾಗಿ ಆಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬುಡಕಟ್ಟು ಮಹಿಳೆಯರ ಕಷ್ಟಗಳು ಹೆಚ್ಚಾಗುತ್ತಿವೆ ಹಾಗೂ ಸಾಮಾನ್ಯ ಆಸ್ತಿ ಮತ್ತು ಸಂಪನ್ಮೂಲಗಳಲ್ಲಿನ ಬುಡಕಟ್ಟುಗಳ ಸಾಂಪ್ರದಾಯಕ ಹಕ್ಕುಗಳನ್ನು ಕಸಿದು ಕೊಳ್ಳುತ್ತಿರುವುದರಿಂದ ಬಹುಸಂಖ್ಯಾತ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯ

ಬಲಿಪಶುಗಳಾಗುತ್ತಿದ್ದಾರೆ ಎನ್ನುವ ಸತ್ಯವನ್ನು ಹೊರಗೆಡವಿದ್ದಾರೆ. ಆದರೆ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರು ಕುಟುಂಬ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಎಂತಹ ಸ್ಥಾನಮಾನ ಹೊಂದಿದ್ದಾರೆ ಎನ್ನುವುದರ ಬಗ್ಗೆ ಗಮನ ಹರಿಸದಿರುವುದು ಕಂಡುಬಂದಿದೆ.

ಬಾಲಸುಬ್ರಮಣ್ಯಂ (೨೦೧೧) "ಬುಡಕಟ್ಟು ಸಮುದಾಯಗಳು"[೨೧] ಎನ್ನುವ ಕೃತಿಯಲ್ಲಿ ಬುಡಕಟ್ಟು ಸಮುದಾಯಗಳು ಎಷ್ಟೇ ಬಡವರಾಗಿರಲಿ ಬರೀ ಪಡೆದುಕೊಳ್ಳುವುದನ್ನು ಇಚ್ಛಿಸುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರಿಗೆ ಸಹಾಯ ಬೇಡವೆಂದಲ್ಲ. ಅಭಿವೃದ್ಧಿಯ ಹೆಸರಲ್ಲಿ ನಾವು ಅವರಿಗೆ ಕೊಡುವ ನೆರವು ಅವರ ಆತ್ಮಗೌರವವನ್ನು ತಗ್ಗಿಸುವಂತಿರ ಬಾರದು. ಪ್ರೀತಿ ಮತ್ತು ಸಹಭಾಗಿತ್ವದ ಮೂಲಕವಷ್ಟೇ ಅವರ ಜೀವನದಲ್ಲಿ ಸಕಾರಾತ್ಮಕವಾದ ಬದಲಾವಣೆ ತರಲು ಸಾಧ್ಯ. ಬಡವರೆಂದ ಮಾತ್ರಕ್ಕೆ ಕೇವಲ ಅಂಕಿ ಸಂಖ್ಯೆಯಿಂದ ಅವರನ್ನು ಅಳೆಯಬಾರದು. ದಾನಕ್ಕಿಂತ ಹೆಚ್ಚಾಗಿ ಅವರಿಗೆ ಬೇಕಾಗಿರುವುದು ಅವಕಾಶ, ಕರುಣೆ ತೋರುವುದಕ್ಕಿಂತ ಅವರನ್ನು ಅರ್ಥಮಾಡಿಕೊಳ್ಳಬೇಕಿದೆ. ದಾನ ಮಾಡುವುದು ದೊಡ್ಡಸ್ಥಿಕೆಯಲ್ಲ. ಅದು ಅವರ ಸೇವೆ ಮಾಡಲು ನಮಗೆ ಸಿಕ್ಕ ಅವಕಾಶ ಎಂದು ತಿಳಿದು ಕೆಲಸ ಮಾಡಬೇಕು ಎಂದು ಅಹಂ ಇಲ್ಲದ ಸೇವೆ ಜಡಿಯ ಕಲಿಸಿದ ಪಾಠ ಎಂಬ ಸಂಶೋಧನಾ ಲೇಖನದಲ್ಲಿ ತಿಳಿಸಿದ್ದಾರೆ. ಡಾ. ಬಾಲಸುಬ್ರಮಣ್ಯಂ ಅವರ ಅಭಿಪ್ರಾಯದಂತೆ ಸಿದ್ದಿ ಜನರೂ ಕೂಡ ಗುಲಾಮಿತನದಿಂದ ಮುಕ್ತರಾದ ಮೇಲೆ ಯಾರ ಮುಲಾಜಿಗೂ ಒಳಗಾಗದೇ ಸ್ವಾಭಿಮಾನದಿಂದ ಬದುಕುವುದನ್ನು ಕಲಿತುಕೊಳ್ಳುತ್ತಿದ್ದಾರೆ.

ಸಿ ಪಾರ್ವತಮ್ಮ (೨೦೦೭) "ಬುಡಕಟ್ಟು ಶಿಕ್ಷಣ"[೨೨] ಕೃತಿಯಲ್ಲಿ ಅವರು ಆಡಳಿತಶಾಹಿಯ ಮೂಲಕ ಬುಡಕಟ್ಟು ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಇರಾದೆ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಇರಲಿಲ್ಲ. ಆಡಳಿತ ನಡೆಸುವುದರ ಜೊತೆಗೆ, ಕಾನೂನು ಮತ್ತು ನಿಯಮಗಳನ್ನು ಪಾಲಿಸುತ್ತಾ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಕಾರಣವಾಗಬೇಕೆಂದು ಅಧಿಕಾರಶಾಹಿಯು ನಿರೀಕ್ಷಿಸಿದ್ದು ಸ್ವಾತಂತ್ರ್ಯ ಭಾರತದ ವೈಶಿಷ್ಟ್ಯವಾಗಿದೆ. ಆದರೆ ಅಧಿಕಾರಶಾಹಿಯು ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಿಂದ ಜನರ ನಂಬಿಕೆಗೆ ದ್ರೋಹ ಮಾಡಿದೆ. ಇದರಿಂದ ಬಡವರು ಮತ್ತು ಬುಡಕಟ್ಟು ಜನರ ಅಭಿವೃದ್ಧಿಗೆ ಕೈಗೊಳ್ಳಲಾದ ಪಂಚವಾರ್ಷಿಕ ಯೋಜನೆಗಳಲ್ಲಿನ ಕ್ರಮಗಳೂ ವಿಫಲವಾಗಿವೆ. ಅವ್ಯವಹಾರ ಆಲಸ್ಯದ ಜೊತೆಗೆ ಹೊಸ ಹೊಸ ಗುಂಪುಗಳು ಸರ್ಕಾರದ ಮೇಲೆ ಒತ್ತಡ ತಂದು ಬುಡಕಟ್ಟು ಗುಂಪಿಗೆ ತಮ್ಮ ಸಮೂಹವನ್ನು ಸೇರಿರಬೇಕೆಂದು ಮತ್ತು ಸಂವಿಧಾನಾತ್ಮಕ ಸವಲತ್ತುಗಳನ್ನು ಕೊಡಬೇಕೆಂದು ಹೋರಾಡುತ್ತಿವೆ. ಇದರಿಂದ ಮೀಸಲಾತಿ ನಿಯಮ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದೆ. ಸಂವಿಧಾನಾತ್ಮಕ ಸೌಲಭ್ಯಗಳನ್ನು ಬುಡಕಟ್ಟು ಜನರಿಗೆ ನೀಡಲಾಗುತ್ತಿದ್ದು, ಈ ಸೌಲಭ್ಯಗಳು ನಿಜವಾಗಿ ದುರ್ಬಲರಾದವರಿಗೆ ತಲುಪುತ್ತಲೇ ಇಲ್ಲ. ಆಯಾ ಸಮುದಾಯಗಳಲ್ಲಿ ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲರಾದವರು ಎಲ್ಲಾ ಸೌಲಭ್ಯಗಳನ್ನು ತಾವೇ ಲಪಟಾಯಿ ಸುತ್ತಿರುವುದು ನಿಜವಾಗಿರುವಾಗ, ಸರ್ಕಾರದ ಸವಲತ್ತುಗಳನ್ನು ನಿಜವಾಗಿ ತಲುಪಬೇಕಾದವರಿಗೆ ತಲುಪುವ ಹಾಗೆ ಮಾಡಲು

ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ? ಎಂಬ ಪ್ರಶ್ನೆ ಎದುರಾಗುತ್ತದೆ. ಅಂತೆಯೇ ಇಂತಹ ಪರಿಸ್ಥಿತಿಯಲ್ಲಿ ಬುಡಕಟ್ಟು ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರುವುದಾದರೂ ಹೇಗೆ? ಎಂಬುದಕ್ಕೆ ಉತ್ತರವೆಂಬಂತೆ.

ಮುಖ್ತೇಶ್ ಜೋಶಿ, ತಾರಕೇಶ ಜೋಶಿ (೨೦೧೦) 'ನ್ಯೂ ಆಸ್ಪೆಕ್ಟ್ ಫಾರ್ ಎಕನಾಮಿಕ್ ಸಸ್‌ಟೈನಬಿಲಿಟಿ ಅಮಾಂಗ್ ದಿ ಟ್ರೈಬ್'[೨೩] ಎಂಬ ಕೃತಿಯಲ್ಲಿ ಬುಡಕಟ್ಟು ಯುವಕ ಯುವತಿಯರು 'ಪ್ರವಾಸಿಗರಿಗೆ ಮಾರ್ಗದರ್ಶನ ನೀಡುವರು ಮತ್ತು ಅವರು ಪ್ರವಾಸೋದ್ಯಮ ಉದ್ದಿಮೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದಾರೆ. ಬುಡಕಟ್ಟು ಯುವಕ ಯುವತಿಯರು ಪರಿಸರ ಪ್ರವಾಸೋದ್ಯಮ ಮಾರ್ಗದರ್ಶಕರಾಗಿ ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸಲು ಅವರಿಗೆ ತರಬೇತಿಯ ಅವಶ್ಯಕತೆ ಇದೆ. ಪರಿಸರ ಪ್ರವಾಸೋದ್ಯಮಕ್ಕೆ ಮಾರ್ಗದರ್ಶಕರ ನೇಮಕ ಮತ್ತು ತರಬೇತಿಗೆ ವಿಶೇಷ ಕ್ರಮ ಅನುಸರಿಸಬೇಕು. ಪರಿಸರ ಪ್ರವಾಸೋದ್ಯಮವು ಪ್ರಾದೇಶಿಕ ಅಭಿವೃದ್ಧ್ಯಾತ್ಮಕ ಉದ್ಯೋಗ, ನಿಸರ್ಗ ಸಂಪತ್ತು, ಜನಾಂಗದ ಮತ್ತು ಪರಿಸರ ಸಂರಕ್ಷಣೆಗೂ ಸಹಾಯಕವಾಗುತ್ತದೆ. ಬುಡಕಟ್ಟು ಜನರು ಸ್ಥಳೀಯ ಪರಿಸರ ಮತ್ತು ಪ್ರವಾಸಿ ಕ್ರೀಡೆಗಳ ಬಗ್ಗೆ ತಿಳುವಳಿಕೆಯುಳ್ಳವರಾಗಿರುತ್ತಾರ. ಆದ್ದರಿಂದ ಈ ಅಧ್ಯಯನದ ಫಲಿತಗಳಿಂದ ರಾಷ್ಟ್ರೀಯ ಉದ್ಯಾನಗಳಲ್ಲಿ ಬುಡಕಟ್ಟು ಯುವಕರಿಗೆ ಪ್ರವಾಸೋದ್ಯಮದ ಮಾರ್ಗದರ್ಶಕರಾಗಿ ತರಬೇತಿಗೊಳಿಸಿದರೆ ಸಾಮಾಜಿಕ ಪರಿವರ್ತಗಳಿಗೆ ಅನುಕೂಲವಾಗುತ್ತದೆ.

ಎಂ. ಗುರುಲಿಂಗಯ್ಯ (೨೦೦೬) ಅವರು, 'ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ'[೨೪] ಎಂಬ ಕೃತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಮತ್ತು ಬಯಲು ಸೀಮೆಯ ಕಾಡುಗೊಲ್ಲ ಬುಡಕಟ್ಟು ಸಮುದಾಯಗಳ ಅಧ್ಯಯನದಲ್ಲಿ ಅವರ ಅನಕ್ಷರತೆ ಮತ್ತು ಬಡತನವೇ ಬುಡಕಟ್ಟು ಸಮುದಾಯಗಳ ಹಿಂದುಳಿದಿರು ವಿಕೆಗೆ ಮತ್ತು ಇತರ ಎಲ್ಲಾ ಸಮಸ್ಯೆಗಳಿಗೆ ಮೂಲ ಎಂದಿದ್ದಾರೆ. ಬುಡಕಟ್ಟುಗಳ ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸಲು ಅವರಿಗೆ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದು, ಭೂರಹಿತ ಬುಡಕಟ್ಟು ಜನರಿಗೆ ಭೂಮಿಯನ್ನು ಕೊಡುವುದು, ಅವರು ಪಾರಂಪರಿಕವಾಗಿ ಅನುಭವಿಸುತ್ತ ಬಂದಿರುವ ಭೂಮಿಯ ಹಕ್ಕನ್ನು ಗೌರವಿಸಿ ದಾಖಲೆ ಪತ್ರಗಳನ್ನು ಒದಗಿಸಿಕೊಡುವುದು ಅತ್ಯಾವಶ್ಯಕವಾಗಿ ಆಗಬೇಕಾದ ಕೆಲಸ ಎಂದಿದ್ದಾರೆ.

ಸಿ ಪಾರ್ವತಮ್ಮ (೨೦೦೭) ಅವರ "ಆದಿವಾಸಿಗಳ ಅಭಿವೃದ್ಧಿ"[೨೫] ಎಂಬ ಕೃತಿಯಲ್ಲಿ ಆದಿವಾಸಿಗಳ ಬದುಕಿನ ನೆಲೆ, ಇವರ ಆರ್ಥಿಕ ಮೂಲ ಹಾಗೂ ಆದಿವಾಸಿಗಳ ಭೂಮಿಗೆ ನೀಡಿರುವ ಸ್ಥಾನಮಾನಗಳ ಕುರಿತು ಈ ಒಂದು ಲೇಖನದಲ್ಲಿ ಚರ್ಚಿಸಿದ್ದಾರೆ. ಆದಿವಾಸಿಗಳ ಪರವಾಗಿಯೇ ಮೈಸೂರು ಜಿಲ್ಲೆಯಲ್ಲಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಎಂಬ ಸಂಸ್ಥೆಯೂ ಅನೇಕ ಮುಖ್ಯ ಕಾರ್ಯಗಳು ಸ್ವಾಮಿ ವಿವೇಕಾನಂದ ಯೂತ್ ಡೂವಮೆಂಟ ಡೀಡ ಮತ್ತಿತರ ಸಂಸ್ಥೆಗಳು ಸೋಲಿಗರು, ಕಾಡುಕುರುಬರು, ಜೇನುಕುರುಬ, ಬುಡಕಟ್ಟು ಸಮುದಾಯ ಅಭಿವೃದ್ಧಿಯಲ್ಲಿ

ಕೈಗಂಒಡಿರುವ ಕಾರ್ಯಗಳ ಬಗ್ಗೆ ತಿಳಿಯಲ್ಪಟ್ಟಿಸಿದ್ದಾರೆ. ಈ ಲೇಖಕರು ಹಾಗೂ ಇನ್ನೋರ್ವ ಲೇಖಕರಾದ ರಾಜೇಗೌಡ ಜಿ.ಎಸ್., ರಚಿಸಿದ ಕೃತಿ ಆದಿವಾಸಿ ಸಮುದಾಯಗಳ ಬದುಕು, ಬವಣೆ ಎಂಬ ಲೇಖನದಲ್ಲಿ ಆದಿವಾಸಿಗಳ ನಂಬಿಕೆಗಳೇನು? ಅವರು ಭೂಮಿಗೆ ನೀಡಿರುವ ಸ್ಥಾನಮಾನ ಏನು? ಜೀವನ ಮತ್ತು ಮಣ್ಣಿಗೆ ಇರುವ ಅನ್ಯೋನ್ಯ ಸಂಬಂಧವೇನು? ಈ ಒಂದು ಲೇಖನದಲ್ಲಿ ಆದಿವಾಸಿ ಬದುಕಿನ ಆರ್ಥಿಕ ಮೂಲ ಆದಿವಾಸಿಗಳ ಬದುಕು ಮತ್ತು ಘನತೆಯ ಮನೋಭಾವಗಳನ್ನು ಹಾಗೂ ಭೂಮಿಯನ್ನು ಏಕೆ ಒಂದು ವಸ್ತುವಾಗಿ ಪರಿಗಣಿಸಬೇಕು ಎನ್ನುತ್ತಾರೆ. ಈ ಒಂದು ಮುಖ್ಯ ಪರಿಕಲ್ಪನೆಯಿಂದ ಇಂದಿನ ಪರಿಸರ ಸಮಸ್ಯೆಗಳಿಗೆ ಉತ್ತರ ದೊರೆಯಬಹುದೆಂದು ಈ ಲೇಖನದ ಮೂಲಕ ತಿಳಿಸಿದ್ದಾರೆ.

ಗಾಯತ್ರಿ ಎನ್. (೨೦೦೫) "ಮಹಿಳೆ ಶೋಷಣೆ, ಸವಾಲುಗಳು"[೨೬] ಎಂಬ ಪುಸ್ತಕದಲ್ಲಿ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ಭ್ರೂಣದಲ್ಲಿರುವಾಗಿನಿಂದ ಹಿಡಿದು ಮುಪ್ಪಿನವರೆಗೆ ನಾನಾ ರೀತಿಯಲ್ಲಿ ಹಿಂಸಿಸಲಾಗುತ್ತಿದೆ. ಭಾರತದಲ್ಲಿ ಹಿಂಸೆ ಮತ್ತು ಮಹಿಳೆ ಇವೆರಡೂ ಸಮಾನಾಂತರ ಶಬ್ದಗಳೇನೋ ಎಂಬಂತೆ ಕಂಡುಬರುತ್ತಿದೆ. ಹೆಣ್ಣು ಶಿಶುಗಳು ಭೂಮಿಗೆ ಬರುವುದನ್ನು ಇಂದು ತಡೆಯಲಾಗುತ್ತಿದೆ. ಆ ಮೂಲಕ ೯೦ರ ದಶಕದಲ್ಲಿ ಸುಮಾರು ೨ ಕೋಟಿ ಹೆಣ್ಣುಮಕ್ಕಳು ಹುಟ್ಟುವ ಮುನ್ನವೇ ಕಾಣೆಯಾಗಿದೆ. ಅಂದರೆ ವೈದ್ಯರ ಸಹಾಯದಿಂದ ಮೊದಲೇ ಲಿಂಗಪತ್ತೆ ನಂತರ ಗರ್ಭಪಾತ ಇವರೆಡು ಪುರುಷರ ಸಮಾಜದ ಯೋಜಿತ ನಿಯಂತ್ರಿತ ಪ್ರಯತ್ನಗಳಾಗಿವೆ. ಶಿಷ್ಟ ಜನರ ಅನಾಗರಿಕ ಜೀವನಕ್ರಮವಾಗಿದೆ. ಹಾಗೆಯೇ ೮೦ರ ದಶಕದಲ್ಲಿ ನಡೆದ ತಮಿಳುನಾಡಿನ ಉಸಿಲಮ್ ಪಟ್ಟಿಯಲ್ಲಿ ಕಳ್ಳರ್ ಜಾತಿಯೊಂದರಲ್ಲಿ ಅಗಷ್ಟೇ ಹುಟ್ಟಿದ ೬೦೦೦ ಹೆಣ್ಣುಮಕ್ಕಳನ್ನು ತಾಯಂದಿರೇ ಕೊಂದಿದ್ದಾರೆ. ಹಾಗೂ ಹೆಣ್ಣು ಶಿಶುಗಳನ್ನು ಕೊಲ್ಲುವ ವ್ಯವಸ್ಥೆ ತಮಿಳುನಾಡಿನದಲ್ಲಿದೆ ಎಂಬುದನ್ನು ಗಮನಿಸಿದರೆ ಮಾತೃ ದೇವೋಭವ, ಪಿತೃದೇವೋಭವ ಎನ್ನುವ ನಮ್ಮ ನಾಡಿನಲ್ಲಿ ಈ ದೈವಗಳೇ ಹೆಣ್ಣು ಕೂಸಿಗೆ ಮೃತ್ಯುದೇವತೆಗಳಾಗಿರುವುದು ಮಹಿಳಾಹತ್ಯ/ಶಿಶುಹತ್ಯೆಗೆ ಕೈಗನ್ನಡಿಯಾಗಿದೆ ಎಂಬುದನ್ನು ಮನೋಜ್ಞವಾಗಿ ವಿವರಿಸಿದ್ದಾರೆ.

ಜೋತ್ಸ್ನ ಕಾಮತ್ (೨೦೦೦) ಅವರು "ಮಹಿಳೆಯರು ಒಂದು ಅಧ್ಯಯನ"[೨೭] ಎಂಬ ಕೃತಿಯಲ್ಲಿ ಈ ಶತಮಾನದ ಕೊನೆಯಲ್ಲಿ ಭಾರತೀಯ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರೆಯುತ್ತಿರುವುದನ್ನು ಅಖಂಡ ದೇಶದ ಪ್ರಗತಿಗೆ ಹೋಲಿಸಿದಾಗ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೆ ಹೇಳಬಹು ದಾಗಿದೆ. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಮರಣದಿಂದ ನಿರ್ಗತಿಕರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ವರ್ಷಕ್ಕೆ ಹತ್ತು ಲಕ್ಷದಷ್ಟಿದೆ. ಆಪತ್ಕಾಲಕ್ಕೆ ಮಾಡಿಕೊಳ್ಳುವಂತಹ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯು ವಂತಿಲ್ಲ. ಸರಕಾರವಾದರೂ ಎಲ್ಲರಿಗೂ ಎಲ್ಲ ಕಾಲಕ್ಕೆ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ, ಗೌರವದ ಕಲ್ಪನೆ ಸೇರ್ಪಡೆಯಾಗದೆ,

ದೈಹಿಕಶ್ರಮದಿಂದ ಜೀವಿಸುವ ವರ್ಗದಂತೆ ಸ್ತ್ರೀಯರು ಅಕ್ಷರಭ್ಯಾಸ ದೊರೆತೊಡನೆ ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರ್ಕಾರಿ ನೌಕರಿಯೊಂದೆ ಸಮಾಜದಲ್ಲಿ ಮನ್ನಣೆ ತರುತ್ತದೆಂದು ನಂಬುವವರೆ ಅಲ್ಲದೆ ನಗರ ಮತ್ತು ಗ್ರಾಮಗಳ ಜೀವನದಲ್ಲಿ ಅಪಾರ ತಾರತಮ್ಯವಿದ್ದು ಈಗಲೂ ಅದು ಹೆಚ್ಚುತ್ತಲೆ ಇದೆ. ಆದರೆ ನಗರ ಮಹಿಳೆಯರ ವೃತ್ತಿ ಪ್ರವೃತ್ತಿಗಳ ಅವಕಾಶ ಹೊಂದುತ್ತಿದ್ದರೆ, ಗ್ರಾಮಸ್ಥ ಮಹಿಳೆಯರಿಗೆ ಅಂತಹ ಅವಕಾಶ ಇಲ್ಲ. ದೇಶದ ಲಕ್ಷಗಟ್ಟಲೆ ಗ್ರಾಮೀಣ ಮಹಿಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕೆ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿದೆ. ಇಂತಹ ಶಿಕ್ಷಣದ ಹಿನ್ನಡೆಯನ್ನು ಸರಿದೂಗಿಸುವ ಪ್ರಯತ್ನ ವಿವಿಧ ವಲಯಗಳಿಂದ ಆಗಬೇಕಾದ ಅಗತ್ಯವಿದೆ.

ಎನ್.ಎಂ. ಕೃಷ್ಣ (೨೦೦೦) "ಮಹಿಳೆಯರು ಮೊದಲು ಅಕ್ಷರಸ್ಥರಾಗಬೇಕು"[೨೮] ಎಂಬ ಕೃತಿಯಲ್ಲಿ ಈ ರೀತಿಯಾಗಿ ಮಹಿಳೆಯರ ಶಿಕ್ಷಣ ಕಾರ್ಯಕ್ರಮದ ಬಗ್ಗೆ ಹೇಳಲಾಗಿದೆ. ಮಹಿಳೆಯರ ಅಭಿವೃದ್ಧಿ ಹಿತರಕ್ಷಣೆಗಾಗಿ ಹಲವಾರು ಕಾನೂನುಗಳು ಇದ್ದರೂ ಭ್ರಷ್ಟರಿಂದ ಎಲ್ಲ ನಿಸ್ಸತ್ವವಾಗಿವೆ. ಅಲ್ಲಲ್ಲಿ ತಲೆ ಎತ್ತಿರುವ ಮಹಿಳಾ ಸಂಘ ಸಂಸ್ಥೆಗಳು ಪ್ರಭಾವಿಗಳು ಕೈಗೆ ಸಿಲುಕಿ ತ್ರಿಶಂಕು ಪರಿಸ್ಥಿತಿಯಲ್ಲಿವೆ. ಮಹಿಳೆ ಮೊದಲು ಅಕ್ಷರಸ್ಥಳಾಗಬೇಕು. ತದನಂತರ ಸಂಘಟಿತಳಾಗಬೇಕು. ರಾಜ್ಯದೆಲ್ಲೆಡೆ ಮಹಿಳಾ ಸಂಘಟನೆಗಳು ಹೆಚ್ಚಾಗಿ ಸ್ಥಾಪನೆಯಾಗಬೇಕು. ಅಕ್ಷರಸ್ಥರು ಅನಕ್ಷರಸ್ಥರನ್ನೆಲ್ಲ ಒಂದುಗೂಡಿಸಿ ಬಲವಾದ ಸಂಘಟನೆಯ ಮುಖಾಂತರ ಅವರಿಗೆ ಮಾರ್ಗದರ್ಶನ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರವು ಸಹ ಹೆಚ್ಚು ಕಾಳಜಿ ವಹಿಸಬೇಕು. ನ್ಯಾಯಾಂಗ ಚುರುಕಾಗಿ ಕೆಲಸ ಮಾಡಬೇಕು. ಮಹಿಳೆಯರ ಮೇಲೆ ನಡೆಯಬಹುದಾದ ದೌರ್ಜನ್ಯ ಶೋಷಣೆ, ಅತ್ಯಾಚಾರ, ಆರೋಪಿಗಳಿಗೆ ಕಠಿಣ ಶಿಕ್ಷೆ, ದಂಡ ವಿಧಿಸಬೇಕು ಎಂದು ಮಹಿಳೆಯರ ಹಕ್ಕು ಮತ್ತು ರಕ್ಷಣೆಯ ಬಗೆಯಲ್ಲಿ ಸರ್ಕಾರ ಕ್ರಮ ರೂಪಿಸಬೇಕು ಎಂಬ ಅಂಶ ಇರುತ್ತದೆಂದು

ಚಂದ್ರಶೇಖರ್ ಸಿ.ಪಿ. (೨೦೦೨) ಅವರ "ವಿಫಲಗೊಂಡ ಮಾರುಕಟ್ಟೆ ಭಾರತದಲ್ಲಿ ನವ ಉದಾರೀಕರಣದ ಆರ್ಥಿಕ ಸುಧಾರಣೆಗಳು"[೨೯] ಎಂಬ ಪುಸ್ತಕದಲ್ಲಿ ಗ್ರಾಮೀಣ ಭಾಗದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭೂ ಒಡೆತನ, ಕುಟುಂಬ ಗಾತ್ರ ಜಾತಿ, ಲಿಂಗ, ವೃತ್ತಿ ಇತ್ಯಾದಿಗಳು ಬಡತನಕ್ಕೆ ಕಾರಣವಾಗುವುದರೊಂದಿಗೆ ಆ ಕುಟುಂಬಗಳ ಮಕ್ಕಳ ಶಿಕ್ಷಣದ ಮೇಲೂ ಪರಿಣಾಮ ಬೀರುತ್ತವೆ. ಯಾವುದೇ ರೀತಿಯ ಆಸ್ತಿ ಇಲ್ಲದೆ ಕೂಲಿ ಆಧಾರಿಸಿದ ಕುಟುಂಬಗಳನ್ನು ನೋಡಿದರೆ ಭಾರತದಲ್ಲಿ ಬಡತನ ಎಷ್ಟಿದೆ ಎಂಬುದು ತಿಳಿದುಬರುತ್ತದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳೇ ಈ ರೀತಿಯ ಬವಣೆಗಳಿಗೆ ಒಳಗಾಗುವುದು. ಮುಖ್ಯವಾಗಿ ಸಂಪನ್ಮೂಲ ಅಥವಾ ಆಸ್ತಿಯಲ್ಲಿನ ಅಸಮಾನತೆಯೇ ಮಹಿಳೆಯರ ಮತ್ತು ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ಎಂದು ತಿಳಿಸುತ್ತಾರೆ.

ಕೆ.ಎಚ್. ಓಬಳೇಶ್ (೨೦೧೧) 'ಅಕ್ಷರ ದೀಪ ಅರಸುತ್ತ'[೩೦] ಸೋಲಿಗ ಮಕ್ಕಳ ಕಲಿಕೆ ವ್ಯಥೆ ಕಥೆ ಕೃತಿಯಲ್ಲಿ ಬುಡಕಟ್ಟು ಜನರ ಸಾಂಪ್ರದಾಯಕ ಬದುಕಿನ ರೀತಿ ಹಾಗೂ ಬಾಹ್ಯ ಪ್ರಪಂಚದ ನಡುವೆ ಸಂಗಮ ಪ್ರಕ್ರಿಯೆ ನಡೆದಿರುವುದೇ ಕಡಿಮೆ. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳ ಮಕ್ಕಳಿಗೆ ನಾಡಿನ ಶಾಲೆಯ ಮೆಟ್ಟಿಲು ತುಳಿಯುವುದು ದುಸ್ತರವಾಗಿದೆ ಎಂಬು ಓಬಳೇಶ್ ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಬುಡಕಟ್ಟು ಮಕ್ಕಳಿಗೆ ಕಲಿಸಬೇಕಾಗಿರುವುದು ಅವರ ಸುತ್ತಲಿನ ಪರಿಸರ ಹಾಗೂ ಅದರೊಂದಿಗೆ ಒಡನಾಡುವ ವಿಧಾನ, ಆದರೆ ಇತ್ತೀಚಿನ ಸಂಶೋಧನೆಗಳೂ ತಿಳಿಸುತ್ತಿರುವ ಪ್ರಕಾರ ಅವರಲ್ಲಿನ ಪರಂಪರಾಗತ ಜ್ಞಾನ ಅಳಿಸಿ ಹೋಗುವ ಹಂತ ಮುಟ್ಟಿದೆ. ಆದ್ದರಿಂದ ಅರಣ್ಯವಾಸಿಗಳ ಮಕ್ಕಳಿಗೆ ಹೊರ ಪ್ರಪಂಚದ ಬಗೆಗೆ ಸಂವೇದನೆ ಹೆಚ್ಚಿಸಬೇಕು, ಅದರೊಂದಿಗೆ ಅವರ ಪಾರಂಪರಿಕ ಜ್ಞಾನವನ್ನು ಸಂರಕ್ಷಣೆ ಮಾಡಬೇಕು. ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಪ್ರಯತ್ನಗಳು ನಡೆಯಬೇಕಿದೆ. ಬುಡಕಟ್ಟು ಮಕ್ಕಳಿಗೆ ಮನಸ್ಸು, ಹೃದಯ ಹಾಗೂ ಕೈಗಳ ಮೂಲಕ ವಿದ್ಯೆ ಕಲಿಸುವ ವ್ಯವಸ್ಥೆ ಆಗಬೇಕು. ಸರ್ಕಾರ ಇಂತಹ ಶಿಕ್ಷಣ ನೀತಿ ರೂಪಿಸುವುದೇ? ಎನ್ನುವುದು ಈಗ ನಮ್ಮ ಮುಂದಿರುವ ಪ್ರಶ್ನೆ.

ಕೆ.ಕೆ. ವರ್ಮ (೨೦೦೭) "ಮಕ್ಕಳ ಹಕ್ಕುಗಳು–ಸರಿಯಾದ ದೃಷ್ಟಿಕೋನ"[೩೧] ಎಂಬ ಕೃತಿಯಲ್ಲಿ ವಿಶ್ವಸಂಸ್ಥೆಯು ಮಕ್ಕಳ ಮೂಲಭೂತ ಹಕ್ಕುಗಳನ್ನು ಅಂಗೀಕರಿಸಿ ಅದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ವಹಿಸಿರುವುದನ್ನು ತಿಳಿಸಿದೆ. ಅದರೂ ನಾನಾ ಕಾರಣಗಳಿಂದಾಗಿ ಅವುಗಳ ಅನುಷ್ಠಾನ ಕಷ್ಟವಾಗಿದೆ. ಅವರು ಬದುಕುವು, ಪೌಷ್ಠಿಕ ಆಹಾರ ಸೇವಿಸುವ, ಉತ್ತಮ ಶಿಕ್ಷಣ ಪಡೆಯುವ ಆ ಮೂಲಕ ತಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಕ್ಕುಗಳನ್ನು ಪಡೆದು ಈಡೇರಿಸಿಕೊಳ್ಳುವುದು ಕನಸಾಗಿಯೇ ಉಳಿದಿದೆ. ಇದಕ್ಕಾಗಿ ಇವುಗಳ ವಿರುದ್ಧ ಪ್ರಬಲ ಹೋರಾಟ ನಡೆದು ಮಕ್ಕಳ ರಕ್ಷಣೆ, ಬಾಲಕಾರ್ಮಿಕ ಪದ್ಧತಿ ನಿಷೇಧ, ಭಿಕ್ಷಾಟನೆ, ಕಳ್ಳಸಾಗಣೆಗಳು ನಿಲ್ಲಬೇಕಿದೆ. ಪ್ರತಿ ೧೦೦೦ ಶಿಶುಗಳಲ್ಲಿ ೬೩ ಶಿಶುಗಳು ೧ ವರ್ಷ ತುಂಬುವ ಮೊದಲೇ ಸಾವನ್ನಪ್ಪುತ್ತಿವೆ. ಬದುಕುಳಿಯುವ ಮಕ್ಕಳು ಬಾಲ್ಯಪೂರ್ವ ಕಾಯಿಲೆಗಳಿಗೆ ಗುರಿಯಾಗಿ ಪ್ರತಿವರ್ಷ ೨೦ ಲಕ್ಷಕ್ಕೂ ಹೆಚ್ಚು ಮಕ್ಕಳು ದಡಾರದಂತಹ ಸೋಂಕು ಕಾಯಿಲೆಗಳಿಂದ ಸಾವನ್ನಪಪುತ್ತಿವೆ. ಭಾರತದಲ್ಲಿ ಶೇ. ೫೦ರಷ್ಟು ಮಕ್ಕಳು ಅಪೌಷ್ಠಿಕತೆಯಿಂದ ಸಾವಿಗೀಡಾಗುತ್ತಿವೆ. ಇದಕ್ಕೆ ಕಾರಣ ಅಪೌಷ್ಠಿಕತೆಯ ಮೊದಲ ಹಾಗೂ ಎರಡನೇ ಹಂತ ತೀವ್ರ ಸಂಖ್ಯೆ ಅಲ್ಲ ಎಂಬ ಸರ್ಕಾರದ ತಪ್ಪುಗ್ರಹಿಕೆ ಸಮಸ್ಯೆ ಮತ್ತಷ್ಟು ಉಲ್ಬಣಿಸಲು ಕಾರಣವಾಗಿದೆ. ಅಲ್ಲದೆ ಮಕ್ಕಳ ಆರೋಗ್ಯ ಕ್ರಮೇಣ ಕಡಿಮೆಯಾಗುತ್ತಾ ಹೋಗುವುದಲ್ಲದೆ ಮಕ್ಕಳ ೩ ಮತ್ತು ೪ನೇ ಹಂತದ ಅಪೌಷ್ಠಿಕತೆಗೆ ಸಿಲುಕಿಸುವ ಮೂಲಕ ಬದುಕು ಇನ್ನಷ್ಟು ದುಸ್ತರವಾಗಿರುತ್ತದೆ. ಇತ್ತೀಚೆಗೆ ಅಪೌಷ್ಠಿಕತೆಯನ್ನು ಹಸಿವಿನಿಂದಾದ ಸಾವು ಎಂಬುದಾಗಿ ಪರಿಗಣಿಸಿದೆ. ಹಾಗಾಗಿ ಸಂವಿಧಾನದತ್ತವಾದ ಮೂಲಭೂತ ಹಕ್ಕನ್ನು ಪುನರ್ ವ್ಯಾಖ್ಯಾನಿಸಬೇಕಿದೆ. ೬ ವರ್ಷದ ಒಳಗಿನ ಶೇ. ೧೬ರಷ್ಟು ಜನರನ್ನು ಐಸಿಡಿಎಸ್ ಯೋಜನೆಗೆ

ಒಳಪಡಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಅಂಗನವಾಡಿ ಇದನ್ನು ಅನುಷ್ಠಾನಗೊಳಿಸುತ್ತಿದೆ. ವಾರ್ಷಿಕ ಆಯವ್ಯಯದಲ್ಲಿ ಶೇ. ೦.೮೮ರಷ್ಟು ಮಾತ್ರ ವೆಚ್ಚ ಮಾಡಲಾಗುತ್ತಿದೆ. ಇದು ಏನೇನು ಸಾಲದಾಗಿದೆ. ಎಂದು ವಿಶ್ಲೇಷಣೆ ಮಾಡಿದ್ದಾರೆ.

ಶಿವಕುಮಾರ್ ಎ.ಕೆ. (೨೦೦೮) "ಬಡತನ ನಿವಾರಣೆ: ಭಾರತದಿಂದ ಕಲಿಯಬೇಕಾದ ಪಾಠಗಳು"[೨] ಎಂಬ ಕೃತಿಯಲ್ಲಿ ಭಾರತ ೧೮ ವರ್ಷ ವಯಸ್ಸಿನ ಒಳಗಿನ ಅತಿ ಹೆಚ್ಚು ಮಕ್ಕಳ ಸಂಖ್ಯೆಯನ್ನು ಪಡೆದಿರುವ ರಾಷ್ಟ್ರಗಳಲ್ಲಿ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿ ಭಾರತವಿದೆ. (೪೫ ಕೋಟಿ ಮಕ್ಕಳು) ಎಂದು ತಿಳಿಸಿದ್ದಾರೆ. ದೇಶದ ಆರ್ಥಿಕ ಬೆಳವಣಿಗೆ ದರ ಇನ್ನೈದು ವರ್ಷಗಳಲ್ಲಿ ಶೇ. ೮ರಿಂದ ೧೦ಕ್ಕೆ ಸಾಧ್ಯತೆಯಿದೆ. ಮೂರು ವರ್ಷದ ಒಳಗಿನ ಶೇ. ೭೦ರಷ್ಟು ಮಕ್ಕಳಲ್ಲಿ ರಕ್ತಹೀನತೆ ಇದೆ. ಪ್ರಾಥಮಿಕ ಶಾಲೆಗಳಲ್ಲಿ ಕಡಿಮೆ ಹಾಜರಾತಿ ಪ್ರಮಾಣ ಸರ್ವೇ ಸಾಮಾನ್ಯವಾಗಿದೆ. ಭಾರತವನ್ನು ಆಫ್ರಿಕ ಎರಡು ರಾಷ್ಟ್ರಗಳಿಗೂ ಕೆಲವು ವಿಚಾರಗಳಲ್ಲಿ ಸಾಮ್ಯತೆ ಇದೆ. ಆದರೆ ಭಾರತದಲ್ಲಿ ಪೌಷ್ಠಿಕಾಂಶದ ಕೊರತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಿದೆ. ಹೆಣ್ಣುಮಕ್ಕಳ ಬಗೆಗಿನ ತಾರತಮ್ಯ, ಸಾರ್ವಜನಿಕ ಸೌಲಭ್ಯ, ದಡಾರದಂತಹ ಪಿಡುಗಿನ ವಿರುದ್ಧ ಚುಚ್ಚುಮದ್ದಿನ ರಕ್ಷಣೆ ಆಫ್ರಿಕಾಕ್ಕಿಂತ ಕಡಿಮೆ ಇದೆ. ಭಾರತದಲ್ಲಿ ಮಕ್ಕಳು ಬಡತನದಿಂದ ಪಾರಾಗಿ ಮುಂದುವರೆಯಬೇಕೆಂದರೆ ಮೂಲಭೂತ ಸೌಕರ್ಯಗಳು ಹೆಚ್ಚಬೇಕು. ಮಾನವ ಸಂಪನ್ಮೂಲ, ಆರ್ಥಿಕ ಸಂಪನ್ಮೂಲಗಳ ದುರ್ಬಳಕೆಯನ್ನು ತಡೆಯಬೇಕು. ಸಾರ್ವಜನಿಕ ಸಹಭಾಗಿತ್ವ, ಮಾಧ್ಯಮಗಳು, ಮಕ್ಕಳ ಸಮಸ್ಯೆಗಳ ಬಗ್ಗೆ ಬೆಳಕು ಬೀರಬೇಕು. ಆರ್ಥಿಕ ವಲಯದ ವಿಸ್ತರಣೆ, ಸರ್ಕಾರೇತರ ಸಂಸ್ಥೆಗಳ ಹೆಚ್ಚಳದಿಂದ ಮಾತ್ರ ಮಕ್ಕಳ ಅಭಿವೃದ್ಧಿ ಸಾಧಿಸಲು ಸಾಧ್ಯ. ಕಾರಣ ಭಾರತದಲ್ಲಿ ಒಟ್ಟು ದೇಸೀಯ ಉತ್ಪನ್ನದ ಶೇ. ೧ಕ್ಕಿಂತ ಕಡಿಮೆ ಹೂಟಿಕೆಯನ್ನು ಆರೋಗ್ಯದ ಮೇಲೆ ಮಾಡಲಾಗುತ್ತಿದೆ. ಹಾಗಾಗಿ ಸಾರ್ವಜನಿಕ ಹೂಡಿಕೆಯಲ್ಲಿ ಆರೋಗ್ಯ ಕ್ಷೇತ್ರದ ಹೂಡಿಕೆ ಹೆಚ್ಚಬೇಕು. ಮಕ್ಕಳ ಆರೋಗ್ಯದ ಬಗ್ಗೆ ರಾಜಕೀಯವಾಗಿ ಜಾಗೃತೆ ಮೂಡಿಸಬೇಕು ಎಂದಿದ್ದಾರೆ. ಮಕ್ಕಳ ಬಡತನ ನಿವಾರಣೆಯ ಸಮಗ್ರ ಅಧ್ಯಯನವಿದಲ್ಲ.

ಕಿರಣ್ ಬೇಡಿ (೨೦೦೮) "ನಾ ಕಂಡಂತೆ ಮಹಿಳಾ ಸಶಕ್ತೀಕರಣ"[೩೩] ಎಂಬ ಕೃತಿಯಲ್ಲಿ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದಿದ್ದಾರೆ. ವಿದ್ಯಾವಂತ ಮಹಿಳೆ ಬಲಿಷ್ಠ ರಾಷ್ಟ್ರ ನಿರ್ಮಾಣ ಮಾಡಲು ಬೇಕಾದ ಮಕ್ಕಳನ್ನು ಹೆರುತ್ತಾಳೆ. ಹಾಗಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದೆ ಅದಲ್ಲಿ ಬುದ್ಧಿವಂತರಾಗಿ ಧೈರ್ಯಸಾಹಸದಿಂದ ಮುನ್ನುಗ್ಗಿ ಸಾಧನೆಯ ಹಾದಿಯಲ್ಲಿ ಪುರುಷನಿಗೆ ಸಮಾನಳಾಗಿ ಬೆಳೆದು ದೇಶವನಲು ಮೌಲ್ಯಯುಕ್ತ ಮತ್ತು ಸಶಕ್ತ ರಾಷ್ಟ್ರವನ್ನಾಗಿ ನಿರ್ಮಿಸಲು ಸಹಕಾರಿಯಾಗುತ್ತಾಳೆ. ಒಳ್ಳೆಯದು, ಕೆಟ್ಟದ್ದು, ವಿವಾಹದ ಬಗ್ಗೆ ಯೋಚಿಸುವ ಮೂಲಕ ಸೂಕ್ತ ತೀರ್ಮಾನ ಕೈಗೊಳ್ಳುವ ಮೂಲಕ ನವಭಾರತ ನಿರ್ಮಾಣಕ್ಕೆ ಕೈಹಾಕುವಷ್ಟು ಬಲಿಷ್ಠಳಾಗುತ್ತಾಳೆ ಎಂಬುದನ್ನು ತಿಳಿಸಿದ್ದಾರೆ. ಆದರೆ ಮಹಿಳೆಯರ ಶಿಕ್ಷಣ ಕುರಿತ ಸಮಗ್ರ ಅಧ್ಯಯನವಿದಲ್ಲ.

ಹರ್ಟಗೊ(Hartog Committe Report) ಸಮಿತಿ ವರದಿಯು(೧೯೨೯)[೩೪] ಸ್ವಾತಂತ್ರ್ಯ ಪೂರ್ವದಲ್ಲೆ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ತೆರೆಯುವುದು. ಅವಶ್ಯಕತೆಗೆ ಅನುಗುಣವಾಗಿ ಪಠ್ಯಪುಸ್ತಕವನ್ನು ರೂಪಿಸುವುದು. ಮಹಿಳಾ ಶಿಕ್ಷಕಿಯರನ್ನು ಹಾಗೂ ಮಹಿಳಾ ತನಿಖಾಧಿಕಾರಿಗಳನ್ನು ನೇಮಕ ಮಾಡುವುದು. ಜೊತೆಗೆ ಸ್ತ್ರೀಯರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಸಮರ್ಪಕವಾದ ಪಿಠೋಪಕರಣಗಳಿರುವುದಿಲ್ಲ. ಹಳ್ಳಿಯ ವಾತಾವರಣಕ್ಕೆ ಹೊಂದಿಕೆಯಾಗುವ ಪಠ್ಯಕ್ರಮಗಳು ತರಬೇತಿ ಹೊಂದಿದ ಶಿಕ್ಷಕರ ಕೊರತೆ, ನೀರಸ ಹಾಗೂ ಪರಿಣಮಕಾರಿಯಲ್ಲದ ಭೋದನಾ ಪದ್ಧತಿ, ಪಾಲಕರ ಅನಕ್ಷರತೆ ಸ್ಥಳೀಯ ಪರಿಸರ ಮತ್ತು ಅವಶ್ಯಕತೆಗೆ ಹೊಂದಾಣಿಕೆಯಾಗದ ರಜಾದಿನಗಳು ಅಸಮಧಾನಕರ ರೀತಿಯಲ್ಲಿ ಜಾರಿಗೊಳಪಟ್ಟ ಕಡ್ಡಾಯ ಶಿಕ್ಷಣ ನೀತಿ ಮುಂತಾದವುಗಳನ್ನು ಈ ಸಮಿತಿಯಲ್ಲಿ ಉಲ್ಲೇಖಿಸಿದ್ದಾರೆ.

ಶಿವಶಂಕರ್ ಹೆಚ್.ವಿ. (೧೯೭೦) ಅವರ "ಭಾರತೀಯ ಶಿಕ್ಷಣ"[೩೫] ಎಂಬ ಪುಸ್ತಕದಲ್ಲಿ ಆಗಿನ ಮೈಸೂರು ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿದರು. ಮೈಸೂರು ರಾಜ್ಯದ ಶಾಲೆಗಳ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಾಧನೆ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ ಪೋಷಕರ ನಡವಳಿಕೆ ಸಂಸ್ಕೃತಿ, ಸಮುದಾಯದ ಪ್ರಭಾವ ಬೀರಿದೆ ಎಂಬುದರ ಅಧ್ಯಯನ ಮಾಡಿ ಈ ಕೆಳಕಂಡ ಫಲಿತಗಳನ್ನು ಪಡೆದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರುಗಳಿಗೆ ಒದಗಿಸುತ್ತಿರುವ ಸಮವಸ್ತ್ರ ಪುಸ್ತಕಗಳು ಸರಿಯಾದ ಸಮಯಕ್ಕೆ ದೊರೆಯದಿರುವ ಕಾರಣದಿಂದ ಕುಟುಂಬದ ವರಮಾನ ಕಡಿಮೆ ಇರುವ ಕಾರಣದಿಂದ ಸಮವಸ್ತ್ರ ಮತ್ತು ಪುಸ್ತಕಗಳನ್ನು ಖರೀದಿಸಲು ಆಗದೆ ಕಷ್ಟವಾಗುತ್ತಿತ್ತು. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ ಎಂಬ ಭಾವನೆ ಜನರಲ್ಲಿತ್ತು. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದಾರ್ಥಿನಿ ಯರು ದಾಖಲಾತಿಯಾಗಲು ಶಾಲೆಗಳಲ್ಲಿರುವ ಆಟದ ಶುಲ್ಕ ಗ್ರಂಥಾಲಯ ಶುಲ್ಕ ವಂತಿಗೆ ಮತ್ತು ಪರಿಶಿಷ್ಟ ಜಾತಿಯವರು ವಾಸಿಸುತ್ತಿರುವ ಪ್ರದೇಶಗಳಿಂದ ದೂರದಲ್ಲಿ ಸ್ಥಾಪನೆಯಾಗಿರುವುದು ಕಾರಣವಾಗಿದೆ. ಮಾಧ್ಯಮಿಕ ಶಾಲೆಗಳಿಗೆ ತಮ್ಮ ಮಕ್ಕಳು ಶಾಲೆಗೆ ಹೋಗಲು ಒಲವಿರಲಿಲ್ಲ. ತಮ್ಮ ಹೆಣ್ಣುಮಕ್ಕಳು ಮನೆಯ ಕೆಲಸದಲ್ಲಿ ತೊಡಗಿಸಲು ಪೋಷಕರಿಗೆ ಹೆಚ್ಚು ಆಸಕ್ತಿಯಿತ್ತು.

ಥೇಕೆಡತ್ ಕೆ.ಕೆ. (೧೯೭೮) (ಅನು) ಕೆ.ಎಲ್. ಗೋಪಾಲಕೃಷ್ಣಯ್ಯ ಅವರ "ಶಿಕ್ಷಣದ ಸವಾಲುಗಳು"[೩೬] ಎನ್ನುವ ಕೃತಿಯಲ್ಲಿ ಸಂವಿಧಾನದ ೪೫ನೇ ವಿಧಿಯು "ಜನ ಸಾಮಾನ್ಯರಿಗೆ ಶಿಕ್ಷಣವನ್ನು ದೊರಕಿಸುವುದೇ ಪ್ರಜಾತಾಂತ್ರಿಕ ಶಿಕ್ಷಣದ ಸಾರ" ಎನ್ನುತ್ತದೆ. ಶಿಕ್ಷಣದಲ್ಲಾದ ಪ್ರಗತಿ ಕಡಿಮೆಯೇನಲ್ಲ, ಎಲ್ಲಾ ಹಂತಗಳಲ್ಲಿ ಗಂಡು-ಹೆಣ್ಣು ಎರಡೂ ವರ್ಗಗಳ ದಾಖಲಾತಿಯಲ್ಲಿ ಸರ್ವತೋಮುಖ ಬೆಳವಣಿಗೆಯಾಗಿದೆ. ೧೯೫೦-೫೧ರಲ್ಲಿ ೨.೮ ಕೋಟಿಯಷ್ಟಿದ್ದ ವಿಧ್ಯಾರ್ಥಿ

ಸಂಖ್ಯೆಯು ೧೯೮೨-೮೩ರಲ್ಲಿ ೧೧.೪ ಕೋಟಿಗಳಿಗೆ ಏರಿ ವಾರ್ಷಿಕ ಶೇ. ೪.೫ರಷ್ಟು ಅಭಿವೃದ್ಧಿ ತೋರಿಸಿತ್ತು. ಇದೇ ಅವಧಿಯಲ್ಲಿ ಹೆಣ್ಣುಮಕ್ಕಳ ದಾಖಲಾತಿಯು ಶೇ. ೫.೫ರ ಮಿಶ್ರ ಸಂಕಲನ ದರದಲ್ಲಿ ಬೆಳೆಯಿತು. ಇದಕ್ಕೆ ಹೋಲಿಸಿದಾಗ ಗಂಡುಮಕ್ಕಳ ಪ್ರಮಾಣವು ವಾರ್ಷಿಕ ಶೇ. ೩.೯ಗೆ ಹೆಚ್ಚಾಗಿರುವುದು ಕಂಡುಬಂದಿದೆ. ಅದರೂ ಸಹ ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲಾ ಪುರುಷರಿಗಿಂತ ಮಹಿಳೆಯರ ಪ್ರಮಾಣ ಕ್ಷೀಣಿಸುತ್ತಾ ಬರುತ್ತಿದೆ ಎಂದು ತಿಳಿಸುತ್ತಾರೆ.

ಜಿನ್ ಡ್ರೇಜ್ ಮತ್ತು ಅಮರ್ತ್ಯಸೇನ್ (೧೯೯೯) "ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅವಕಾಶ"[೩೭] ಎಂಬ ಪುಸ್ತಕದಲ್ಲಿ ಶಿಕ್ಷಣವು ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಶ್ರೀಲಂಕಾದಲ್ಲಿ ಆರ್ಥಿಕ ಬೆಳವಣಿಗೆಗಿಂತ ಶಿಕ್ಷಣ ಸುಧಾರಣೆಯ ಮೂಲಕ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಿದೆ. ಭಾರತದ ಮಟ್ಟಿಗೆ ಕೇರಳದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಕಂಡುಬಂದರೂ, ಅರ್ಥಿಕ ಸಾಧನೆಯು ಕಡಿಮೆ ಇದೆ. ಥೈಲೆಂಡ್ ಮತ್ತು ದಕ್ಷಿಣ ಕೊರಿಯಾ ಇತ್ತೀಚಿಗೆ ಚೀನಾ ದೇಶಗಳ ರೀತಿಯಲ್ಲಿ ತ್ವರಿತ ಅರ್ಥಿಕ ಸಾಧನೆಯಲ್ಲಿ ಮುಂದುವರಿದಿವೆ. ಕೇವಲ ಶಿಕ್ಷಣವಲ್ಲದೆ ಇತರೆ ಸಾಮಾಜಿಕ ಅಂಶಗಳು ಸಹ ಇಲ್ಲಿ ಮುಖ್ಯವಾಗುತ್ತವೆ. ಆದರಿಂದ ಕೇರಳದಂತೆ ಇತರ ರಾಜ್ಯಗಳು ಕೂಡ ಶಿಕ್ಷಣದಲ್ಲಿ ಮುಂದುವರಿಯ ಬೇಕೆನ್ನುವುದು ಅನಿಸಿಕೆಯಾಗಿದೆ.

ಲೈಟನ್ ಜಿ.ಕೆ. (೨೦೦೦) ಅವರು "ಚಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್"[೩೮] ಇ.ಪಿ.ಡಬ್ಲ್ಯೂ (ಅಗಸ್ಟ್ ೨೦೦೦) ಲೇಖನದಲ್ಲಿ ವಿಕೇಂದ್ರಿಕರಣ, ಲಿಂಗ ಸಮಾನತೆ, ಶಿಕ್ಷಣ, ಶಿಕ್ಷಕರ ಸಾಮರ್ಥ್ಯ, ಶಿಕ್ಷಣದ ಗುಣಮಟ್ಟ, ತರಗತಿಯ ಚಟುವಟಿಕೆಗಳ ಜೊತೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸುವುದು. ಲೋಕ ಜಂಬಿಸ್ ಕಾರ್ಯಕ್ರಮದ ಮೂಲಕ ಹೆಣ್ಣುಮಕ್ಕಳ ಶಾಲಾ ಶಿಕ್ಷಣವನ್ನು ವಿಸ್ತೃತಪಡಿಸಲು ಜಾರಿಗೆ ಬರುತ್ತದೆ. ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆಯಲ್ಲಿ ಹಿಂದುಳಿದ ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರು ವುದರಿಂದ ಸಾಮಾಜಿಕವಾಗಿ ಈ ಯೋಜನೆಯಲ್ಲಿ ಮೇಲುಜಾತಿಯ ಹೆಣ್ಣುಮಕ್ಕಳು ಇದರ ಪ್ರಯೋಜನ ಪಡೆಯುತ್ತಾರೆ. ಹೀಗಾಗಿ ಕಾರ್ಯಕ್ರಮದ ಅನುಷ್ಠಾನದಿಂದ ಹಿಂದುಳಿದ ಜಾತಿಯ ಹೆಣ್ಣುಮಕ್ಕಳಿಗೆ ಮಿಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ ಎಂದು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಅಗರ್‌ವಾಲ್ (೨೦೦೧) ಅವರು ಆ್ಯನ್ ಅಸೆಸ್‌ಮೆಂಟ್ ಆಪ್ ಟ್ರೆಂಡ್ ಇನ್ ಆಕ್ಸೆಸ್ ಆಂಡ್ ರಿಟೆನ್ಷನ್[೩೯] ಎಂಬ ಪುಸ್ತಕದಲ್ಲಿ ಒಟ್ಟು ಭಾರತದ ಜನಸಂಖ್ಯೆಯಲ್ಲಿ ಶೇ. ೧೬.೨೧ರಷ್ಟು ದಲಿತರಿದ್ದು, ಭಾರತದಲ್ಲಿ ಇಷ್ಟು ದಲಿತರಲ್ಲಿ ಶೇ. ೪೧.೫ರಷ್ಟು ಮಾತ್ರ ಸಾಕ್ಷರರಾಗಿರುವುದು ಹಿಂದುಳಿದವರ ಶೈಕ್ಷಣಿಕ ಸ್ಥಿತಿಗತಿಯನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿಯ ಶೇ. ೪೭.೩ರಷ್ಟಿರುವ ದಲಿತರ ಸಾಕ್ಷರತಾ ಪ್ರಮಾಣವು ಭಾರತದ ಹಿಂದುಳಿದಿರುವವರ ಸಾಕ್ಷರತಾ ಪ್ರಮಾಣವನ್ನು ಲಿಂಗವಾರು

ನೋಡಿದರೆ ಶೇ. ೫೪.೭೦ರಷ್ಟು ಪುರುಷರು ಮತ್ತು ಶೇ. ೩೫.೬ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಕಂಡುಬಂದಿದೆ. ನಿರ್ದಿಷ್ಟವಾಗಿ ೬ರಿಂದ ೧೪ ವಯೋಮಾನದ ಶೇ. ೬೭.೫ರಷ್ಟು ಮಕ್ಕಳು ಮಾತ್ರ ಔಪಚಾರಿಕವಾಗಿ ಶಾಲೆಗೆ ದಾಖಲಿಸಿದ್ದಾರೆ. ಆದರೆ ಉಳಿದ ಶೇ. ೩೭ರಷ್ಟು ಹಿಂದುಳಿದ ಮಕ್ಕಳು ಶಾಲೆಗೆ ದಾಖಲಾಗದೆ ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆ. ಶಾಲೆಗೆ ದಾಖಲಾದ ಮತ್ತು ಮಧ್ಯದಲ್ಲಿಯೇ ಶಾಲೆಬಿಡುವ ೬ರಿಂದ ೧೪ ವಯೋಮಾನದ ಹಿಂದುಳಿದ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೆ ಜಾಸ್ತಿಯಾಗಿರುವುದು ಆತಂಕದ ವಿಷಯವಾಗಿದೆ ಎಂದಿದ್ದಾರೆ.

ಕೃಷ್ಣಪ್ಪ ಎಸ್. (೨೦೦೨) ಅವರ "ಆಧುನಿಕ ಶಾಲಾ ವ್ಯವಸ್ಥೆ"[೪೦] ಎಂಬ ಪುಸ್ತಕದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ತರುವ ಅನೇಕ ಯೋಜನೆಗಳನ್ನು ರೂಪಿಸುವುದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಈ ಯೋಜನೆಗಳು ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಇವರ ಕುಟುಂಬವು ಎದುರಿಸುವಂತಹ ಪ್ರಮುಖ ನಿರ್ಬಂಧ ಗಳನ್ನು ನೇರವಾಗಿ ಕೈಗೆತ್ತಿಕೊಳ್ಳುತ್ತಿದೆ. ಈ ವ್ಯವಸ್ಥೆಯ ಯೋಜನೆಗಳೆಂದರೆ ಚಿನ್ನರ ಅಂಗಳ, ರಾತ್ರಿ ಶಾಲೆಗಳು, ಕೊಳೆಗೇರಿ ನಿವಾಸಿಗಳ ಮಕ್ಕಳಿಗಾಗಿ ಬೀದಿಶಾಲೆಗಳು ಹೆಣ್ಣುಮಕ್ಕಳಿಗಾಗಿ ಕಿಶೋರಿ ಕೇಂದ್ರಗಳು, ಬಾ ಬಾಲೆ ಶಾಲೆಗೆ ಯೋಜನೆಗಳು ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಅನೇಕ ಮಕ್ಕಳನ್ನು ಪ್ರಾಥಮಿಕ ಮುಖ್ಯವಾಹಿನಿಗೆ ತರುವಲ್ಲಿ ಸಹಾಯಕವಾಗಿದೆ.

ಕುಮಾರ (೨೦೦೪) ಅವರು "ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಶಿಕ್ಷಣ: ಒಂದು ಚರ್ಚೆ"[೪೧] ಎಂಬ ಪುಸ್ತಕದಲ್ಲಿ ನಾವು ಕಳೆದ ಶತಮಾನವನ್ನು ಶೇ. ೫ರ ಸಾಕ್ಷರತೆಯಿಂದ ಪ್ರಾರಂಭಿಸಿದೆವು ಎಂಬುದನ್ನು ಮರೆಯಲಾಗದು. ಶತಮಾನದ ಮಧ್ಯದ ವೇಳೆಗೆ ಶೇ. ೨೦ರಷ್ಟು ಸಾಧನೆ ಕಂಡೆವು. ೧೯೯೧ರ ಜನಗಣತಿಯಂತೆ ಸಾಕ್ಷರತೆ ಪ್ರಮಾಣವು ೫೧.೨ರಷ್ಟಿದೆ. ಆದರೆ ನಮ್ಮ ನೀತಿ ನಿರೂಪಣೆಯಲ್ಲಿ ಕಂಡುಬಂದ ಉತ್ಸಾಹ ಅದನ್ನು ಜಾರಿಗೆ ತರುವಲ್ಲಿ ಇರಲಿಲ್ಲ. ರಾಜಕೀಯ ಇಚ್ಛಾಶಕ್ತಿಯು ಸಹ ಮುಖ್ಯ ಸಾರ್ವತ್ರೀಕರಣಕ್ಕೆ. ಪ್ರತಿಸಲ ಇಂದೊಂದು ಗಡುವನ್ನು ನಾವು ವಿಸ್ತರಿಸುತ್ತಾ ಬಂದೆವು. ಶಿಕ್ಷಣಕ್ಕೆ ರಾಷ್ಟ್ರಮಟ್ಟದಲ್ಲಿ ನಾವು ಖರ್ಚು ಮಾಡುತ್ತಿದ್ದ ಹಣ ೧.೧ ಬಿಲಿಯನ್ ರೂಪಾಯಿಗಳಿಂದ(೧೯೫೦-೫೧) ೪೧೨ ಬಿಲಿಯನ್(೧೯೯೭-೯೮) ಏರಿದೆ. ಆದರೆ ೩೬೦ ಪಟ್ಟು ಹೆಚ್ಚಾಗಿದೆ. ಇಂದು ಪ್ರಮುಖ ಅಂಶವೆಂದರೆ ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹೆಚ್ಚಳವನ್ನು ನಾವು ೧೯೫೦-೫೧ರ ಸಮಯದಲ್ಲಿ ರೂಪಾಯಿಯ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ೧೯೯೭-೯೮ ರೂಪಾಯಿ ಮೌಲ್ಯದ ಹಿನ್ನೆಲೆಯಲ್ಲಿ ಲೆಕ್ಕ ಹಾಕಿದಾಗ ಒಟ್ಟಾರೆ ಹೆಚ್ಚಳ ಕೇವಲ ೫.೮ ಮಾತ್ರ ಆಗುತ್ತದೆ. ಇಷ್ಟಿದ್ದರೂ ಉದ್ದೇಶಿತ ಗುರಿಗಳನ್ನು ತಲುಪಲು ಸಾಧ್ಯವಾಗುತ್ತಿಲ್ಲವೆಂದು ತಿಳಿಯಬಹುದು.

ಚಂದ್ರಶೇಖರ್ ಟಿ.ಆರ್., (೨೦೦೫) ಅವರ "ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ"[೪೨] ಎಂಬ ಪುಸ್ತಕದಲ್ಲಿ ಅತ್ಯಂತ ಕೂತೂಹಲ ಸಂಗತಿಯೆಂದರೆ ಶಾಲೆ ಬಿಟ್ಟ ಮಕ್ಕಳ ಲಿಂಗ

ಸ್ವರೂಪವನ್ನು ಪರಿಶೀಲಿಸಿದಾಗ ಹೆಣ್ಣುಮಕ್ಕಳ ಪ್ರಮಾಣವು ಗಂಡುಮಕ್ಕಳ ಪ್ರಮಾಣಕ್ಕೆ ಸರಿಸುಮಾರು ಸಮನಾಗಿರುವುದು ಕಂಡುಬರುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಗಂಡುಮಕ್ಕಳ ಪ್ರಮಾಣ ಶೇ. ೧೪.೫೯ ಮತ್ತು ಹೆಣ್ಣುಮಕ್ಕಳ ಪ್ರಮಾಣ ಶೇ. ೧೪.೩೪ ರಷ್ಟಿದೆ ಇದೇ ಪರಿಸ್ಥಿತಿ ಸರಿಸುಮಾರು ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಇದೆ. ಹೆಣ್ಣುಮಕ್ಕಳ ಶಿಕ್ಷಣದ ಕಾರ್ಯತಂತ್ರ(೨೦೦೨) ತಿಳಿಸುವುದೆನೆಂದರೆ "ಹೆಣ್ಣುಮಕ್ಕಳ ಶಿಕ್ಷಣದ ಮೇಲಿನ ಧನ ವಿನಿಯೋಗವು ವ್ಯಕ್ತಿ ಕುಟುಂಬಗಳನ್ನು ಒಳಗೊಂಡು ಇಡೀ ಸಮಾಜಕ್ಕೆ ಅತ್ಯಧಿಕ ಆರ್ಥಿಕ ಪ್ರತಿಫಲವನ್ನು ಮತ್ತು ಸಾಮಾಜಿಕ ಉಪಯುಕ್ತತೆಯನ್ನು ಬಂಡವಾಳವು ತಂದಿಟ್ಟಿದೆ.

ಶಾಲೆಗಳಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಬೆಳವಣಿಗೆಯ ದರ ಗಂಡುಮಕ್ಕಳಿಗಿಂತ ಹೆಚ್ಚಾಗಿದೆ. ಇದಕ್ಕೆ ಹೆಣ್ಣುಮಕ್ಕಳು ಶೈಕ್ಷಣಿಕವಾಗಿ ಭಾಗವಹಿಸಲು ನೀಡಿದ ಪ್ರಾಶಸ್ತ್ಯ ಮಾತ್ರ ಎಂದು ಹೇಳಲು ಬರುವುದಿಲ್ಲ. ಆದರೆ ಸರ್ಕಾರಗಳು ವಿವಿಧ ಅಭಿವೃದ್ದಿ ಯೋಜನೆಗಳ ಮೂಲಕ ಹೆಣ್ಣುಮಕ್ಕಳ ಶೈಕ್ಷಣಿಕ ಮಟ್ಟ ಹೆಚ್ಚಿಸಲು ಹಾಕಿಕೊಂಡ ಯೋಜನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಿವೆ ಎಂದು ಹೇಳಬಹುದು. ಪ್ರಾಥಮಿಕ ಶಾಲಾ ಹಂತದಲ್ಲಿ (೧ ರಿಂದ ೫ ನೇ ತರಗತಿ) ೧೯೯೦-೯೧ ರಿಂದ ೨೦೦೦-೨೦೦೧ರ ನಡುವೆ ಹೆಣ್ಣುಮಕ್ಕಳ ಸಂಖ್ಯೆ ಗಂಡು ಮಕ್ಕಳಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಮಾಧ್ಯಮಿಕ ಶಾಲಾ (೬ ರಿಂದ ೮ನೇ ತರಗತಿ) ಹಂತದಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯು ಎರಡು ಪಟ್ಟುಗಿಂತಲೂ ಹೆಚ್ಚಾಗಿರುವುದು ತಿಳಿದುಬರುತ್ತದೆ. ಒಟ್ಟಾರೆ ಇದೇ ಅವಧಿಯಲ್ಲಿ ಪ್ರಾಥಮಿಕ ಹಂತದಲ್ಲಿ ಹೆಣ್ಣುಮಕ್ಕಳ ದಾಖಲಾತಿಯ ಸಂಖ್ಯೆ ೮ ಮಿಲಿಯನ್‌ಗಿಂತಲೂ ಹೆಚ್ಚಾಗಿದ್ದರೆ ಮಾಧ್ಯಮಿಕ ಹಂತದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ೪.೩ ಮಿಲಿಯನ್‌ನಷ್ಟು ಹೆಚ್ಚಾಗಿದೆ ಎಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನರಸಿಂಹಾಚಾರ್ ಎ.ಎಲ್. (೨೦೦೬) ಅವರ "ಉದಯೋನ್ಮುಖ ಭಾರತದಲ್ಲಿ ಶಿಕ್ಷಣ"[೪೩] ಎಂಬ ಪುಸ್ತಕದಲ್ಲಿ ಸೆಕಂಡರಿ ಶಿಕ್ಷಣದ ಸಂಸ್ಥೆಗಳ ವಿಸ್ತರಣೆಯನ್ನು ಮಿತಿಗೊಳಿಸಿ ಹೊಸ ಮಕ್ಕಳನ್ನು ಹೆಣ್ಣುಮಕ್ಕಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಗ್ರಾಮಾಂತರ ಆಧಾರದ ಮೇಲೆ ತಿಳಿಯಲಾಗುವುದು, ಗುಣಮಟ್ಟ ರಕ್ಷಿಸುವುದು(೧೧ರಿಂದ೧೨) ಮುಂದುವರಿ ಸುವುದು, ಮರು ಪ್ರವೇಶಕ್ಕೆ ಅವಕಾಶ ನೀಡಿ ಉದ್ಯಮ ವಿಶ್ವದೊಡನೆ ಸಂಬಂಧ ಕಲ್ಪಿಸಿ ವಿಷಯಾಧಾರಿತ ಪರೀಕ್ಷೆ ಹಾಗೂ ವೃತ್ತಿ ಶಿಕ್ಷಣದ ಗುಣಮಟ್ಟಗಳಿಗೆ ಬೇಕಾಗುವ ಅಂಶಗಳ ಅಭಿವೃದ್ದಿಗೆ ಆಂತರಿಕ ವಿಕಾಸ ಸೌಲಭ್ಯ ಕಲ್ಪಿಸಲಾಗುವುದು ಹಾಗೂ ಉತ್ತಮ ಮೌಲ್ಯಗಳನ್ನು ರೂಢಿಸಲಾಗುವುದು. ದೂರಶಿಕ್ಷಣದ ಮೂಲಕ ಸೇವಾ ಶಿಕ್ಷಣ ಕಾರ್ಯಕ್ರಮಗಳ ಮುಖಾಂತರ ಸ್ತ್ರೀಯರಿಗೆ ಗ್ರಾಮಾಂತರದವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಸಮಾಜದಿಂದ ವಂಚಿತರಾದವರಿಗೆ ಹೊಂದಿಕೆಯಾಗುವ ವೃತ್ತಿ ಶಿಕ್ಷಣಕ್ಕೆ ವ್ಯವಸ್ಥಿತ ಅನೌಪಚಾರಿಕ ವೃತ್ತಿಶಿಕ್ಷಣ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸುವುದು ಹಾಗೂ ಶಿಕ್ಷಣದ ಪ್ರಗತಿ ತಿಳಿಯುವುದು. ರಾಷ್ಟ್ರೀಯ ಮೌಲ್ಯಮಾಪನ ಮಾಡಲಾಗುವುದು ವಿವಿಧ

ಪಂಗಡದವರನ್ನು ಶೈಕ್ಷಣಕ್ಕೆ ವಿದ್ಯಾರ್ಥಿ ವೇತನ ಬಹುಮಾನಗಳಿಂದ ಆಕರ್ಷಿಸಲಾಗುವುದು ಅಂಗವಿಕಲರಿಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

ನಿರಂಕರ್ ಶ್ರೀವಾಸ್ತವ (೨೦೦೭) ಅವರ "ಎಲಿಮೆಂಟರಿ ಎಜುಕೇಶನ್ ಪಾವರ್ಟಿ ಆ್ಯಂಡ್ ಜಂಡರ್"[೪೪] ಎನ್ನುವ ಕೃತಿಯಲ್ಲಿ ಬುಡಕಟ್ಟು ಸಮುದಾಯಗಳಿಂದ ಕೂಡಿದ ಈಶಾನ್ಯ ಪ್ರಾಂತ್ಯದ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಯಲ್ಲಿ ಬಡತನ ಮತ್ತು ಲಿಂಗತಾರತಮ್ಯಗಳು ಎದ್ದು ಕಾಣುತ್ತಿವೆ ಈಶಾನ್ಯ ಪ್ರಾಂತ್ಯದ ಕೇಲವು ರಾಜ್ಯಗಳಲ್ಲಿ ಬಡತನದ ತೀವ್ರತೆ ನಗರ ಮತ್ತು ಗ್ರಾಮೀಣ ಬಡತನಗಳ ಅಂತರ ಹೆಚ್ಚಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿರುವ ಸಾಕ್ಷರತೆಯಲ್ಲಿ ಲಿಂಗತಾರತಮ್ಯವಿದೆ. ಆಂದರೆ ಲಿಂಗ ತಾರತಮ್ಯಕ್ಕೆ ಬಡತನವೆ ಕಾರಣವಾಗಿಲ್ಲವೆಂಬುದು ವಿಶೇಷ. ಈಶಾನ್ಯ ರಾಜ್ಯಗಳ ಭಾಗದಲ್ಲಿ ಶಾಲೆಗೆ ಹೋಗುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ವಿಭಿನ್ನ ಸಂಗತಿ. ಅದರಂತೆಯೇ ಈ ರಾಜ್ಯಗಳಲ್ಲಿ ಶಾಲೆಗೆ ಹೋಗುವ ಪರಿಶಿಷ್ಟ ಜಾತಿ/ಪಂಗಡದವರು ಹಾಗೂ ಇತರೆ ವರ್ಗದ ಮಕ್ಕಳಲ್ಲಿ ಮಹತ್ವದ ವ್ಯತ್ಯಾಸ ವಿಲ್ಲದಿರುವುದು ಸಮಧಾನಪಡುವ ವಿಷಯವಾಗಿದೆ.

ವಿರಭದ್ರನಾಯ್ಕ ಪಿ. (೨೦೧೦) ಅವರ "ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು"[೪೫] ಎಂಬ ಪುಸ್ತಕದಲ್ಲಿ ಎರಡು ಪೋಡುಗಳ ಸಮುದಾಯದ ಮಕ್ಕಳು ಕಾಡಿನಲ್ಲಿ ಆಟ ಆಡಿಕೊಂಡು ಕಾಲಕಳೆಯುತ್ತಿದ್ದಾರೆ. ಶಿಕ್ಷಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳೆರಡು ನಮ್ಮ ಮಕ್ಕಳಿಗೆ ಅನ್ಯಾಯ ಮಾಡುತ್ತಿವೆ. ಎರಡು ಪೋಡುಗಳ ನಡುವೆ ಶಾಲೆ ತೆರೆದು ಎರಡು ಪೋಡುಗಳಿಂದ ಇಬ್ಬರು ಅಡುಗೆಯವರನ್ನು ನೇಮಿಸಿಕೊಂಡರೆ ಮಕ್ಕಳನ್ನು ಕರೆದುಕೊಂಡು ಬರಲು ಸಹಕಾರಿಯಾಗುತ್ತದೆ. ಶಾಲೆ ಮುಗಿದ ಮೇಲೆ ಮಕ್ಕಳನ್ನು ವಾಪಸ್ಸು ಕರೆದುಕೊಂಡು ಹೊಗಲು ಸಹಕಾರಿಯಾಗುತ್ತದೆ. ನಾವು ನಮ್ಮ ಪೋಡುಗಳಲ್ಲಿ ಇರುವ ಎಲ್ಲಾ ಮಕ್ಕಳನ್ನು ಶಾಲೆಗೆ ವ್ಯವಸ್ಥಿತವಾಗಿ ಹೋಗುವಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಒಟ್ಟಾರೆ ಈ ಪ್ರದೇಶದಲ್ಲಿ ಯಾವುದೇ ಮೂಲಸೌಕರ್ಯಗಳು, ಸಾರಿಗೆ ಸಂಪರ್ಕ ಇಲ್ಲದ ಕಾರಣ ಇಲ್ಲಿ ಕೆಲಸ ಮಾಡುವವರು ಬಹಳ ಬದ್ದತೆಯಿಂದ ನಮ್ಮಲ್ಲೇ ವಾಸವಿದ್ದು ಕಲಿಸಬೇಕಾಗುತ್ತದೆ.

ಕೆ. ಮಂಜಪ್ಪ ಅವರು "ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ"[೪೬] ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಬಡತನ ಸಮಸ್ಯೆಯಿಂದ ಅನೇಕ ಸಂಖ್ಯೆಯ ಮಕ್ಕಳು ಉತ್ತಮವಾದ ಬಟ್ಟೆ ಧರಿಸದೆ ಕೆಳದರ್ಜೆಯ ಬಟ್ಟೆಯನ್ನು ಧರಿಸಿಕೊಂಡು ಶಾಲೆಗೆ ಬಂದರೆ ಅವರಲ್ಲಿ ಅತೃಪ್ತಿ ಮತ್ತು ಕೀಳರಿಮೆಗಳು ಕಾಡಲಾರಂಭಿಸುತ್ತವೆ. ಈ ಕಾರಣದಿಂದಲೇ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವಂತಹ ಅಪಾಯಗಳಿರುತ್ತವೆ. ಇದಕ್ಕೆ ಬಹುಮುಖ್ಯ ಕಾರಣ ಪೋಷಕರ ಆರ್ಥಿಕ ಕಾರಣ. ಇದನ್ನು ಮನಗಂಡು ಸರ್ಕಾರಗಳು ಎಲ್ಲಾ ಮಕ್ಕಳಿಗೆ ಸಮಾನತೆ ಮತ್ತು ಶಿಸ್ತು ಮೂಡಿಸುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಬಡಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ಒದಗಿಸುವ

ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಶಾಲೆಗಳಲ್ಲಿ ಬಡಮಕ್ಕಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರವನ್ನು ವಿತರಿಸುವುದು ಮಕ್ಕಳಿಗೆ ಹೊಸ ಬಟ್ಟೆ ನೀಡಿದಂತಾಗುತ್ತದೆ. ಜೊತೆಗೆ ಪೋಷಕರಿಗೆ ಅವರ ಮಕ್ಕಳ ಶೈಕ್ಷಣಿಕ ಆರ್ಥಿಕ ಭಾರವನ್ನು ಸ್ವಲ್ಪವಾದರೂ ಇಳಿಸಿದಂತಾಗುತ್ತದೆ. ಅದೇ ರೀತಿಯಾಗಿ ಶಾಲೆಯಲ್ಲಿ ಪರಿಶಿಷ್ಟಜಾತಿ ಮತ್ತು ಪಂಗಡದ ಹೆಣ್ಣುಮಕ್ಕಳಿಗೆ ಉಚಿತ ಬ್ಯಾಗ್ ಮತ್ತು ಪಠ್ಯಪುಸ್ತಕಗಳು, ನೋಟ್‌ಬುಕ್‌ಗಳು ವಿತರಿಸುತ್ತಿದ್ದು, ಇತ್ತೀಚೆಗೆ ಖಾಸಗಿ ಶಾಲೆಗಳಲ್ಲಿಯೂ ಅದರಲ್ಲಿ ಅನುದಾನಿತ ಶಾಲೆಗಳಲ್ಲಿ ಉಚಿತ ಬೈಸಿಕಲ್ ವಿತರಣೆ ಮಾಡಲಾಗುತ್ತಿದ್ದು ಉತ್ತಮ ಬೆಳವಣಿಗೆ ಎಂದಿದ್ದಾರೆ.

ಕೊನೆ ಟಿಪ್ಪಣಿಗಳು

೧. ಮೀನಾಕ್ಷಿ ಬಿ; ೨೦೦೯; ಪು.೨

೨. ಅದೇ, ೨೦೦೯: ೨-೩

೩. ವೀರಭದ್ರಪ್ಪ; ಗಾಂಧಿ ಚಿಂತನೆಗಳು, ೧೯೯೮; ಪು.೧೫೬)

೪. ಜನಗಣತಿ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು.

೫. ಧನಂಜಯಕುಮಾರ್, ೧೯೯೪ ರೂರಲ್ ಕ್ರೆಡಿಟ್ (ಲೇಖನ), ಇಂಡಿಯನ್ ಎಕನಾಮಿಕ್, ೧೯೪೭-೧೯೯೨ ವ್ಯಾಲ್ಯೂಯಂ-೧, ಅಗ್ರಿಕಲ್ಚರ್, ನ್ಯೂಡೆಲ್ಲಿ, ಸಾಗಿ ಪಬ್ಲಿಕೇಷನ್, ಪು. ೩೪೧-೩೫೫

೬ ಬೇವೂರ ಕನ್‌ಷ್ಟ್ರಕ್ಷನ್ ಆಫ್ ಟ್ರೈಬಲ್ ಎಜುಕೇಶನ್ ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೭ ರೌಟ್ಸ್ ಡೈಮಸನ್ ಅಂಪ್ ಟ್ರೈಬಲ್ ಎಜುಕೇಶನ್ ಇನ್ ಒರಿಸ್ಸಾ, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೮. ಅಚಾರ್ ವನಮಾಲ (೧೯೬೫) ಸ್ತ್ರೀ ಮತ್ತು ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ರೇಖಾ ಕೌಲ್ (೨೦೧೦), ಪ್ರೈಮರಿ ಎಜುಕೇಶನ್ ಗೋಯಿಂಗ್ ಬಿಯಾಂಡ್ ದ ಕ್ಲಾಸ್ ರೂಂ (ಲೇಖನ), (ಇಪಿಡಬ್ಲ್ಯು) ವ್ಯಾ.೧೪, ಪು.೧೦

೧೦. ವಿಲ್‌ಪ್ರೆಡ್ ಡಿಸೋಜ, ರೈತರಿಗೆ ಆಸೆ ಕಂಪನಿಗೆ ಲಾಭ (ಲೇಖನ), (ಇಪಿಡಬ್ಲ್ಯು), ವ್ಯಾ.೧೪, ಪು. ೩೬-೩೭

೧೧. ಮಧು ಎಸ್.,(೨೦೦೭), ಶತಮಾನದ ಅಂಚಿನ ಶಿಕ್ಷಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೨. ಜಯಂತಿ ವೈ.ಕೆ., ಅಭಿವೃದ್ಧಿ ಮತ್ತು ಬದಲಾವಣೆ, ರಾಧಕೃಷ್ಣ ಪ್ರಕಾಶನ, ಬೆಂಗಳೂರು.

೧೩. ಓಂಕಾರ ಕಾಕಡೆ, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು, ಎಂ.ಬಿ.ಎಚ್. ಬುಕ್‌ಹೌಸ್, ಮೈಸೂರು.

14. Pradeepkumar Bosh, 1981, Stratification among Indian Tribes, Sage Publication, New Delhi.

15. Alokkumar, 1986, Tribal Culture and Economy, Rawat Publications, New Delhi.

16. Gheetha Menon, 1987, Tribal Women, Victims of Development Process, Rawat Publications, New Delhi

17. Bhuddadev Chaturvedhi, 1990, The Tribal Transformation in India, Gheetha Book House, New Delhi.

18. Kamarkar K G, 2002, The Silence Drum, Sage Publications, New Delhi.

19. Gopal Bhardwaj, 1977, The Social Moments among the Tribes of India, Suneetha Publications, Mumbai.

20. Gheetha Menon, 1987, Tribal Women, Victims of Development Process, Rawat Publications, New Delhi.

೨೧. ಬಾಲಸುಬ್ರಮಣ್ಯಂ, ೨೦೧೧, ಬುಡಕಟ್ಟು ಸಮುದಾಯಗಳು, ಸುಪ್ರಿಯ ಪ್ರಕಾಶನ, ತುಮಕೂರು

೨೨. ಪಾರ್ವತಮ್ಮ ಸಿ, ೨೦೦೭, ಬುಡಕಟ್ಟು ಶಿಕ್ಷಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

23. Muktesh Joshi, Tarakesh Joshi, 2010, New Aspect of Economic Sustainability among the Tribes, Nisha Publication, Mumbai.

೨೪. ಗುರುಲಿಂಗಯ್ಯ ಎಂ.೨೦೦೬, ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಮಂಗಳ ಗಂಗೋತ್ರಿ, ಮಂಗಳೂರು.

೨೫. ಪಾರ್ವತಮ್ಮ ಸಿ, ೨೦೦೮ ಆದಿವಾಸಿಗಳ ಅಭಿವೃದ್ಧಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೬. ಗಾಯತ್ರಿ ಎನ್., ೨೦೦೫, ಮಹಿಳೆ ಶೋಷಣೆ, ಸವಾಲುಗಳು, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೨೭. ಜೋತ್ಸ್ನ ಕಾಮತ್, ೨೦೦೦, ಮಹಿಳೆಯರು: ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೮. ಕೃಷ್ಣ ಎನ್ ಎಂ, ೨೦೦೦, ಮಹಿಳೆಯರು ಮೊದಲು ಅಕ್ಷರಸ್ಥರಾಗಬೇಕು, ಐಬಿಎಚ್ ಪ್ರಕಾಶನ, ಮೈಸೂರು.

೨೯. ಚಂದ್ರಶೇಖರ್ ಸಿ.ಪಿ, ೨೦೦೨, ವಿಫಲಗೊಂಡ ಮಾರುಕಟ್ಟೆ ಭಾರತದಲ್ಲಿ ನವ ಉದಾರೀಕರಣದ ಆರ್ಥಿಕ ಸುಧಾರಣೆಗಳು, ಸುಧನ್ವ ಪ್ರಕಾಶನ, ಮೈಸೂರು.

೩೦. ಓಬಳೇಶ್ ಕೆ ಎಚ್, ೨೦೧೧, ಅಕ್ಷರ ದೀಪ ಅರಸುತ್ತ: ಸೋಲಿಗ ಮಕ್ಕಳ ಕಲಿಕೆ ವ್ಯಥೆ–ಕಥೆ, ಡ್ರೀಜ್ ಇಂಡಿಯಾ, ಮೈಸೂರು.

೩೧. ವರ್ಮ ಕೆ ಕೆ, ೨೦೦೭, ಮಕ್ಕಳ ಹಕ್ಕುಗಳು, ಕರ್ನಾಟಕ ಸರ್ಕಾರ, ಬೆಂಗಳೂರು.

೩೨. ಶಿವಕುಮಾರ್ ಎ.ಕೆ, ೨೦೦೮, ಬಡತನ ನಿವಾರಣೆ: ಭಾರತದಿಂದ ಕಲಿಯಬೇಕಾದ ಪಾಠಗಳು, ಸುಚಿತ್ರ ಪ್ರಕಾಶನ, ಬೆಳಗಾವಿ.

೩೩. ಕಿರಣ್ ಬೇಡಿ, ೨೦೦೮, ನಾ ಕಂಡಂತೆ ಮಹಿಳಾ ಸಶಕ್ತೀಕರಣ, ಪದ್ಮಾಲಯ ಪ್ರಕಾಶನ, ಮೈಸೂರು.

೩೪. ಹರ್ಟಿಗೊ (Hartog Committe Report) ಸಮಿತಿ ವರದಿ, ೧೯೨೯, ಶಿಕ್ಷಣ ಇಲಾಖೆ, ಬೆಂಗಳೂರು.

೩೫. ಶಿವಶಂಕರ್ ಹೆಚ್.ವಿ., ೧೯೭೦, ಭಾರತೀಯ ಶಿಕ್ಷಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೬. ಥೇಕೆಡತ್ ಕೆ.ಕೆ, ೧೯೯೮, (ಅನು) ಕೆ.ಎಲ್. ಗೋಪಾಲಕೃಷ್ಣಯ್ಯ, ಶಿಕ್ಷಣದ ಸವಾಲುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೭. ಜಿನ್ ಡ್ರೇಜ್ ಮತ್ತು ಅಮರ್ತ್ಯಸೇನ್, ೧೯೯೯, "ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅವಕಾಶ, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೩೮. ಲೈಟನ್ ಜಿ.ಕೆ. (೨೦೦೦) ಅವರು "ಚಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್" ಇ.ಪಿ.ಡಬ್ಲ್ಯೂ (ಅಗಸ್ಟ್ ೨೦೦೦)

೩೯. Agarwala, 2001, An assessment of Trend in Access and Retention, Rawat Publication, New Delhi.

೪೦. ಕೃಷ್ಣಪ್ಪ ಎಸ್., ೨೦೦೨, ಆಧುನಿಕ ಶಾಲಾ ವ್ಯವಸ್ಥೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೪೧. ಕುಮಾರ, ೨೦೦೪, ಪ್ರಾಥಮಿಕ ಶಿಕ್ಷಣ, ಎನ್.ಎಸ್.ಇ.ಆರ್.ಟಿ., ಬೆಂಗಳೂರು.

೪೨. ಚಂದ್ರಶೇಖರ್ ಟಿ.ಆರ್., ೨೦೦೫, ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ನರಸಿಂಹಾಚಾರ್ ಎ.ಎಲ್., ೨೦೦೬, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಸಿವಿಜಿ ಪಬ್ಲಿಕೇಷನ್.

೪೪. Nirankar, Srivastava, 2007, Elementary Education: Poverty & Gender, Sigma Publication, New Delhi

೪೫. ವಿರಭದ್ರನಾಯ್ಕ ಪಿ, ೨೦೧೦, ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಮಂಜಪ್ಪ, ದಲಿತರ ಶೈಕ್ಷಣಿಕ ಸ್ಥಿತಿಗತಿಗಳು ೨೦೧೪, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಾಯ ಎರಡು

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ

೨.೧. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೨.೨. ಬಳ್ಳಾರಿ ಜಿಲ್ಲೆ ಹುಟ್ಟು ಮತ್ತು ಮಹತ್ವ

೨.೩. ಬಳ್ಳಾರಿ ಜಿಲ್ಲೆ-ಭೌಗೋಳಿಕತೆ

೨.೪. ಕುಟುಂಬಗಳು

೨.೫. ಬಳ್ಳಾರಿ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ

೨.೬. ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨.೭. ಆರ್ಥಿಕ ಚಟುವಟಿಕೆಗಳು

೨.೮. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕುಗಳು ಹಾಗೂ ಗ್ರಾಮಪಂಚಾಯಿತಿಗಳು

ಅಧ್ಯಾಯ ಎರಡು

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಾಗೂ ಭೌಗೋಳಿಕತೆ ಹಿನ್ನೆಲೆ

೨.೧. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೂ ಪೂರ್ವದಲ್ಲಿ ಕಲ್ಯಾಣ ಚಾಲುಕ್ಯರು, ತಲಕಾಡಿನ ಗಂಗರು, ಕಂಪಿಲರಾಯ ಕುಮಾರರಾಯರ ಸಿಂಘೇಯ ವಂಶಗಳ ಆಡಳಿತಕ್ಕೆ ಒಳಪಟ್ಟ ಪ್ರದೇಶ ಬಳ್ಳಾರಿಯಾಗಿತ್ತು. ಅಶೋಕನ ಶಿಲಾಶಾಸನಗಳು ಈ ಜಿಲ್ಲೆಯ ಸಿರಗುಪ್ಪ ತಾಲೂಕಿನ ನಿಟ್ಟೂರು ಗ್ರಾಮದ ಹೊರವಲಯದಲ್ಲಿ ಕಂಡು ಬರುತ್ತವೆ. ಅದಕ್ಕೂ ಪೂರ್ವದಲ್ಲಿ ಮಾನವನು ನೆಲೆ ನಿಂತಿರುವ ಕುರಿತು ಮಾಹಿತಿ ನೀಡುವ ಪ್ರಾಗೈತಿಹಾಸಿಕ ಕಾಲದ ಮಾನವನ ನೆಲೆಗಳು ಈ ಜಿಲ್ಲೆಯಲ್ಲಿ ಕಂಡು ಬರುತ್ತವೆ ಸಂಗನಕಲ್ಲು, ತೆಕ್ಕಲಕೋಟೆ, ದರೋಜಿ ಕರಡಿಧಾಮ ವಲಯ, ಹಂಪಿ, ತಿಮ್ಮಾಲಾಪುರ, ರಾಮಸಾಗರ, ವೆಂಕಟಾಪುರ, ಬುಕ್ಕಸಾಗರ, ಗಂಡೇಕೋಟೆ ಸುತ್ತಮುತ್ತಿನ ಬೆಟ್ಟಗಳಲ್ಲಿ ಹಳೇಶಿಲಾಯುಗ ಮತ್ತು ನೂತನ ಶಿಲಾಯುಗದ ಕುರುಹುಗಳು, ಕೆಮ್ಮಣ್ಣು ಮತ್ತು ಸುಣ್ಣದ ರೇಖಾ ಚಿತ್ರಗಳು ಹಾಗೂ ಬಂಡೆಗಳಲ್ಲಿ ಕೊರೆದ ಚಿತ್ರಗಳು ಕಂಡು ಬರುತ್ತವೆ.

"ಕಲ್ಯಾಣಿ ಚಾಲುಕ್ಯರು ಕ್ರಿ.ಶ. ೯೭೩ರಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿ ಬಳ್ಳಾರಿ ಪ್ರಾಂತ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡ ವಿಚಾರವನ್ನು ತಿಳಿಸುವ ಶಿಲಾ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುತ್ತದೆ. ಈ ಶಾಸನಗಳನ್ನು ಆಧಾರಿಸಿ ಹೇಳಬಹುದಾದರೆ ಕ್ರಿ.ಶ. ೧೦೧೪ರ ಗೋಣಿಹಾಳಿನ(ಗೋನಾಳ್) ಶಾಸನವು ಶ್ರೀಮಂತನಾದ ಇರಿವ ನೊಳಂಬವಾಡಿ ರಾಜನು ಕಂಪಲಿಯನ್ನು ಕೇಂದ್ರವಾಗಿರಿಸಿಕೊಂಡು ಈ ಪ್ರದೇಶದ ಆಳ್ವಿಕೆಯನ್ನು ನಡೆಸುತ್ತಿದ್ದನು, ಮುಂದೆ ಕಲ್ಯಾಣಿ ಚಾಲುಕ್ಯರ ದೊರೆ ಜಗದೇಕಮಲ್ಲ ಜಯಸಿಂಹದೇವನ ಸಾಮಂತನಾದ ನೊಳಂಬ ಪಲ್ಲವ ಪೆರ್ಮಾಡಿ ಎಂಬುವವನು ಈ ಪ್ರದೇಶವನ್ನು ಆಳಿದ ಕುರಿತು ಕ್ರಿ.ಶ. ೧೦೧೮ರ ಶಾಸನದ ಮೂಲಕ ತಿಳಿಯುತ್ತದೆ.

ಕ್ರಿ.ಶ. ೧೦೪೫ರ ಸುಮಾರಿಗೆ ಚಾಲುಕ್ಯರ ಒಂದನೇ ಸೋಮೇಶ್ವರನು ಹಡಗಲಿಯನ್ನು ತನ್ನ ನೆಲೆಯಾಗಿಸಿಕೊಂಡಿದ್ದನು ಅವನು ಚೋಳರ ರಾಜಧಾನಿಯಾದ ನೊಳಂಬವಾಡಿ ಮೇಲೆ ದಾಳಿ ನಡೆಸಿದನು ಹಾಗೂ ಕಂಪಲಿಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ತಿಳಿದುಬರುತ್ತದೆ.

ಕ್ರಿ.ಶ. ೧೦೫೪ರ ಸುಮಾರಿಗೆ ಕಲ್ಯಾಣ ಚಾಲುಕ್ಯರ ಅರಸ ಒಂದನೇ ಸೋಮೇಶ್ವರ ಬಳ್ಳಾರಿ ಪ್ರದೇಶವನ್ನು ಆಳಿದನೆಂದು ತಿಳಿದುಬರುತ್ತದೆ(ಎಫಿಗ್ರಾಫಿಕಾ ಕರ್ನಾಟಕ ೧೨) ಇವರ ತುರವಾಯ ಕೆಲವು ಕಾಲ ಕುಮ್ಮಟ ದುರ್ಗವನ್ನು ರಾಜಧಾನಿಯಾಗಿಸಿಕೊಂಡು ಹೊಯ್ಸಳ ಅರಸರು ರಾಜ್ಯಭಾರ ಮಾಡಿದುದಾಗಿ ತಿಳಿದು ಬರುತ್ತದೆ.”[೧]

ಕ್ರಿ.ಶ. ೧೨೮೦ ರಿಂದ ೧೩೦೦ ರವರೆಗೆ ಕಮ್ಮಟವನ್ನು ರಾಜಧಾನಿಯಾಗಿಸಿಕೊಂಡು ಮುಮ್ಮಡಿ ಸಿಂಘೇಯನು ಕಂಪಲಿ ಮತ್ತು ಅದರ ಸುತ್ತ ಮುತ್ತಿನ ಪ್ರದೇಶಗಳನ್ನು ಆಳಿದನು. ಮುಮ್ಮಡಿ ಸಿಂಘೇಯನ ಮಗ ಕಂಪಿಲ ಹಾಗೂ ಅವನ ಮಗ ಕುಮಾರರಾಮರು ಈ ಪ್ರದೇಶಗಳನ್ನು ಆಳಿದ ಕುರಿತು ಶಾಸನಾಧಾರಗಳು ದೊರೆಯುತ್ತವೆ. ಕಂಪಿಲ ಮತ್ತು ಕುಮಾರರಾಮರು ನಾಯಕ ಸಮುದಾಯದವರಾಗಿದ್ದು ಉತ್ತರ ಪ್ರದೇಶದಿಂದ ದಕ್ಷಿಣ ರಾಜ್ಯಗಳ ಮೇಲೆ ನಿರಂತರವಾಗಿ ದಂಡೆತ್ತಿ ಬರುತ್ತಿದ್ದ ಇಸ್ಲಾಂ ಅರಸರನ್ನು ಎದುರಿಸಿ ಹಿಮ್ಮೆಟ್ಟಿಸಿದ ಕೀರ್ತಿ ಕಂಪಿಲ ಹಾಗೂ ಕುಮಾರರಾಮರಿಗೆ ಸಲ್ಲುತ್ತದೆ. ಆದರೆ ಕೊನೆಗೆ ದೆಹಲಿ ಸುಲ್ತಾನರಿಂದಾಗಿ ಪರಾಭವಗೊಂಡು ಅವರ ಸೈನ್ಯದ ಕೈಯ್ಯಲ್ಲಿ ಈ ತಂದೆ ಮಕ್ಕಳು ಅವಸಾನಗೊಳ್ಳುತ್ತಾರೆ.

ಈ ಪ್ರದೇಶದಲ್ಲಿ ಕಂಪಿಲನ ಆಡಳಿತದ ತರುವಾಯ ವಿಜಯನಗರದ ಸ್ಥಾಪನೆಯಾಗುತ್ತದೆ ಕಂಪಿಲನ ಹತ್ತಿರದ ಸಂಬಂಧಿಗಳಾದ ಹರಿಹರ ಮತ್ತು ಬುಕ್ಕ ಸಹೋದರರು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ವಿಜಯನಗರವನ್ನು ಸ್ಥಾಪಿಸುತ್ತಾರೆ. ವಿಜಯನಗರ ಸ್ಥಾಪನೆಯ ತರುವಾಯ ದಕ್ಷಿಣ ಪ್ರಾಂತ್ಯದ ಎಲ್ಲಾ ಪ್ರದೇಶಗಳಿಗೆ ಒಂದು ರೀತಿಯ ರಕ್ಷಣೆ ದೊರೆಯುತ್ತದೆ. ವಿಜಯನಗರದ ಅರಸರು ತಮ್ಮ ಸುತ್ತಮುತ್ತಲಿದ್ದ ಚಿಕ್ಕ ಪುಟ್ಟ ಸಂಸ್ಥಾನಗಳು ಮತ್ತು ಪಾಳಯಪಟ್ಟುಗಳನ್ನು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡು ಅವುಗಳಿಗೆ ರಕ್ಷಣೆ ಕೊಡುವುದರೊಂದಿಗೆ ತಮ್ಮ ಸಾಮ್ರಾಜ್ಯ ವ್ಯಾಪಕವಾಗಿ ವಿಸ್ತರಿಸುತ್ತಾ ಸಾಗುತ್ತಾರೆ. ತುಳು, ಸಾಳವ, ಅರವೀಡು, ಸಂಗಮ ವಂಶಗಳು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯನ್ನು ಮಾಡುತ್ತವೆ. ವಿಜಯನಗರದ ಕೊನೆಯ ಪ್ರಭಲ ಅರಸನಾದ ಅಳಿಯರಾಮರಾಯನು ರಕ್ಕಸ ತಂಗಡಗಿ ಯುದ್ಧದಲ್ಲಿ ಬಿಜಾಪುರ ಸುಲ್ತಾನರಿಂದ ಹತನಾದ ತರುವಾಯ ವಿಜಯನಗರ ಸಾಮ್ರಾಜ್ಯವು ಅವನತಿಯ ಹಾದಿ ಹಿಡಿಯುತ್ತದೆ. ಅಳಿಯ ರಾಮರಾಯನ ಅವನತಿಯ ತರುವಾಯ ಪಟ್ಟಕ್ಕೆ ಬಂದ ವಿಜಯನಗರ ಅರಸ ವೆಂಕಟಪತಿದೇವನು ಬಳ್ಳಾರಿ ಪ್ರಾಂತ್ಯವನ್ನು ತ್ಯಜಿಸಿ ಪೆನುಗೊಂಡೆ(೧೫೮೬–೧೬೧೪)ಗೆ ಸೇರಿದ ತರುವಾಯ ಬಳ್ಳಾರಿ ಪ್ರಾಂತ್ಯವನ್ನು ಹರಪನಹಳ್ಳಿಯ ಪಾಳೆಗಾರರು ತಮ್ಮ ವಶಕ್ಕೆ ತೆಗೆದುಕೊಂಡರು. ವಿಜಯನಗರ ಪತನಾನಂತರ ಜರಮಲೆ, ಉಚ್ಚಂಗಿದುರ್ಗ, ಹರಪನಹಳ್ಳಿ, ತಿಮ್ಮಲಾಪುರ ಮುಂತಾದ ಪಾಳಯಪಟ್ಟುಗಳು

ಸ್ವತಂತ್ರವಾದವು ಮತ್ತು ಈ ಪಾಳಯಪಟ್ಟುಗಳ ಅಧಿಕಾರವನ್ನು ಬಹುತೇಕ ನಾಯಕ ಸಮುದಾಯದವರೇ ವಹಿಸಿಕೊಂಡರು. ನಾಯಕ ಸಮುದಾಯದ ಹರಪನಹಳ್ಳಿ ಪಾಳೆಯಗಾರರಿಂದ ಕ್ರಿಶ. ೧೬೭೭-೭೮ರ ಸುಮಾರಿಗೆ ಮರಾಠರ ಅರಸು ಶಿವಾಜಿಯು ಬಳ್ಳಾರಿ ಪ್ರಾಂತ್ಯವನ್ನು ವಶಪಡಿಸಿಕೊಂಡನು. ತರುವಾಯ ಔರಂಗಜೇಬನು (೧೬೮೦) ಬಳ್ಳಾರಿ ಪ್ರಾಂತವನ್ನು ಮರಾಠರ ಹಿಡಿತವನ್ನು ತಪ್ಪಿಸಿ ತನ್ನ ಹಿಡಿತದಲ್ಲಿರಿಸಿಕೊಂಡನು

೧೭೦೭ರಲ್ಲಿ ಹೈದರಾಬಾದಿನ ನಿಜಾಮನು ಬಳ್ಳಾರಿ ಪ್ರಾಂತವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಪಟ್ಟನಾದರೂ ಅದು ಸಾಧ್ಯವಾಗದೆ ಅವನಿಗೆ ತುಂಗಾಭದ್ರಾ ನದಿಯಾಚೆಗಿನ ಪ್ರದೇಶದ ಮೇಲೆ ಮಾತ್ರ ಹಕ್ಕು ಸ್ಥಾಪನೆ ಮಾಡಲು ಸಾಧ್ಯವಾಯಿತು.

"೧೭೬೧ರ ಸುಮಾರಿಗೆ ಹೈದರಾಲಿಯು ಹರಪನಹಳ್ಳಿ ಹಾಗೂ ರಾಯದುರ್ಗ ಸಂಸ್ಥಾನಗಳಿಗೆ ದಂಡೆತ್ತಿ ಬಂದು ಅಲ್ಲಿಯ ಸ್ಥಳೀಯ ಪಾಳೆಯಗಾರರಿಂದ ಕಪ್ಪ-ಕಾಣಿಕೆ ಪಡೆದುಕೊಳ್ಳುತ್ತಾನೆ"³

೧೭೬೨ ಸುಮಾರಿಗೆ ಈ ಪ್ರದೇಶ ಸಂಪೂರ್ಣವಾಗಿ ಹೈದರನ ವಶವಾಗಿ ಅವನ ಆಳ್ವಿಕೆ ಪ್ರಾರಂಭಗೊಂಡಿತು. ಬಳ್ಳಾರಿ ನಗರದಲ್ಲಿರುವ ಕೋಟೆಯನ್ನು ಹೈದರನೇ ನಿರ್ಮಿಸಿದ ಕುರಿತು ದಾಖಲೆಗಳು ದೊರೆಯುತ್ತವೆ. ಹೈದರನ ತರುವಾಯ ಅವನ ಮಗ ಟಿಪ್ಪುಸುಲ್ತಾನನು ತನ್ನ ಕೊನೆಗಾಲದವರೆಗೂ ಬಳ್ಳಾರಿ ಪ್ರಾಂತ್ಯದ ಮೇಲೆ ಹಿಡಿತವನ್ನು ಹೊಂದಿದ್ದನು.

೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋಲುತ್ತಾನೆ. ಅವನ ತರವಾಯ ಮೈಸೂರು ಪ್ರದೇಶ ಹಾಗೂ ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳು ಇಂಗ್ಲೀಷ್‌ರಿಗೆ ವಶವಾಗುತ್ತವೆ.

ಆಗಿನ ಗವರ್ನರ್ ಆಗಿದ್ದ ಲಾರ್ಡ್ ಆರ್ಥರ್ ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿಗೆ ಸಮ್ಮತಿಸಿ ಕ್ರಿಶ. ೧೮೦೦ರಲ್ಲಿ ಹೈದರಾಬಾದಿನ ನಿಜಾಮನು ಬ್ರಿಟೀಷರ ಮಾಂಡಲಿಕನಾಗುತ್ತಾನೆ. ಹೀಗಾಗಿ ನಿಜಾಮರ ವಶದಲ್ಲಿದ್ದ ಕನ್ನಡ ಜಿಲ್ಲೆಗಳು ಬ್ರಿಟೀಷರ ಆಧೀನಕ್ಕೆ ಸುಲಭವಾಗಿ ಒಳಪಡು ವಂತಾಯಿತು(ವಿರೂಪಾಕ್ಷಿ ಪೂಜಾರಿಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿನ ಕಲೆಕ್ಟರ್‌ಗಳ ಆಳ್ವಿಕೆ, ಕ.ವಿ.ವಿ. ಯೋಜನೆ, ಅಪ್ರಕಟಿತ).

ಕ್ರಿಶ. ೧೮೦೦ ಡಿಸೆಂಬರನಲ್ಲಿ ನಿಜಾಮನು ತನ್ನ ಆಡಳಿತಕ್ಕೆ ಒಳಪಟ್ಟಿದ್ದ ಬಳ್ಳಾರಿ ಪ್ರದೇಶವನ್ನು ಬ್ರಿಟೀಷರಿಗೆ ದತ್ತಿಯಾಗಿ ಬಿಟ್ಟುಕೊಟ್ಟನು. ಆಗಿನಿಂದ ಈ ಪ್ರದೇಶವನ್ನು ದತ್ತಿಮಂಡಲ(ಬಳ್ಳಾರಿ, ಕಡಪ, ಕರ್ನೂಲು)ವೆಂದು ಕರೆಯಲಾಯಿತು. ಕ್ರಿಶ ೧೮೦೦ರಲ್ಲಿ ನಿಜಾಮನಿಂದ ದೊರೆತ ಬಳ್ಳಾರಿ ಪ್ರಾಂತ್ಯವು ನೇರವಾಗಿ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟಿತು"(ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟ ಕ.ವಿ.ವಿ. ಹಂಪಿ ೧೯೯೮, ೨೧) ನಂತರ ಈ ಪ್ರದೇಶ ಮುಂಬೈ ಪ್ರಾಂತಾಡಳಿತಕ್ಕೆ ಒಳಪಟ್ಟು ಮುಂಬೈ ಕರ್ನಾಟಕವೆಂಬ ಹೆಸರಿಗೆ ಒಳಗಾಯಿತು. ಕ್ರಿಶ ೧೮೧೮ ಸುಮಾರಿಗೆ ಈ ಪ್ರದೇಶವು ಕೆಲವು ಕಾಲ ಮರಾಠ ಪೇಶ್ವೆಗಳ ವಶದಲ್ಲಿಯೂ ಇದ್ದುದಾಗಿ ತಿಳಿದುಬರುತ್ತದೆ.

"ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಳ್ಳೆಗಾಲ ಮುಂತಾದ ಕೆಲವು ಕನ್ನಡ ಪ್ರದೇಶಗಳು ಬ್ರಿಟೀಷರ ನೇರ ಆಡಳಿತಕ್ಕೆ ಒಳಪಟ್ಟು ಮದ್ರಾಸ್ ಪ್ರಾಂತಕ್ಕೆ ಸೇರಿಸಲ್ಪಟ್ಟವು.

ಬೆಳಗಾವಿ, ಬಿಜಾಪುರ, ಕೊಡಗು, ಉತ್ತರ ಕನ್ನಡದ ಕೆಲವು ಭಾಗಗಳು ಹಾಗೂ ಧಾರವಾಡ ಜಿಲ್ಲೆ ಮುಂಬೈ ಪ್ರಾಂತಕ್ಕೆ ಸೇರಿಸಲ್ಪಟ್ಟವು"[೩]

ಭಾರತದಾದ್ಯಂತ ವ್ಯಾಪಿಸಿದ್ದ ಸ್ವಾತಂತ್ರ್ಯ ಹೋರಾಟದ ಕಾವು ಬಳ್ಳಾರಿಯ ಮೇಲೂ ಪರಿಣಾಮ ಉಂಟುಮಾಡಿತು. ಆದರೆ ಬಳ್ಳಾರಿ ಪ್ರದೇಶದಲ್ಲಿ ನಡೆದ ಸ್ವಾತಂತ್ರ ಹೋರಾಟ ಚಳುವಳಿಯಲ್ಲಿ ಕೇವಲ ಮೇಲ್ವರ್ಗದವರೇ ಪಾಲ್ಗೊಂಡಂತೆ ಕಂಡು ಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕೋಲಾಚಲಂ ವೆಂಕಟರಾವ್, ಕಲ್ಲೂರು ಸುಬ್ಬಾರಾವ್, ನೇತ್ರಹಳ್ಳಿ ಸಂಜೀವರಾವ್, ವೆಂಕಟರಮಣಾಚಾರ್ಯ, ಬಾದನಹಟ್ಟಿ ವೆಂಕೋಬರಾಯರು, ಟೀಕೂರು ನಾರಾಯಣ ಶಾಸ್ತ್ರಿಗಳು, ವ್ಯಾಂಗ್ಲಿ ಭಿಮಸೇನರಾವ್, ಬಳ್ಳಾರಿ ರಾಘವ, ಪಂಡಿತ ತಾರಾನಾಥ ಮುಂತಾದ ಮೇಲ್ವರ್ಗದವರಾಗಿದ್ದರು.

೨.೨. ಬಳ್ಳಾರಿ ಜಿಲ್ಲೆ ಹುಟ್ಟು ಮತ್ತು ಮಹತ್ವ

ಈ ಹಿಂದೆ ನೋಡಿದಂತೆ ಬಳ್ಳಾರಿಗೆ ತುಂಬಾ ಪ್ರಾಚೀನ ಇತಿಹಾಸವಿದೆ ಪ್ರಾಗೈತಿಹಾಸಿಕ ನೆಲೆಗಳು ಇಲ್ಲಿ ಕಂಡುಬರುತ್ತವೆ. ಬಳ್ಳಾರಿಯ ಸಂಗನಕಲ್ಲಿನಲ್ಲಿ ಪ್ರಾಗೈತಿಹಾಸಿಕ ಕಾಲದ ಶಿಲಾ ಆಯುಧಗಳ ಕಾರ್ಯಗಾರವಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ ಬಳ್ಳಾರಿಗೆ ಬಳ್ಳಾರಿ ಎಂದು ಹೆಸರು ಬರಲು ಆ ಊರಿನ ಆದಿದೈವ ಬಳ್ಳಾರಿ ದುರ್ಗಮ್ಮನೇ ಕಾರಣವೆಂಬ ವಾದವೂ ಇದೆ. ಕ್ರಿಶ ೧೨ನೇ ಶತಮಾನದಲ್ಲಿ ರಚಿತಗೊಂಡ ಯಶೋಧರ ಚರಿತೆಯಲ್ಲಿ ಬಳರಿ ಎಂಬ ಪದ ಪ್ರಯೋಗಗೊಂಡಿದೆ ಬಳರಿ ಎಂದರೆ ದೇವತೆ, ಸ್ತ್ರೀದೈವ ಎಂಬ ಅರ್ಥಗಳಿವೆ. ಬಳ್ಳಾರಿಯ ಆದಿ ದೈವ ಬಳರಿ(ದುರ್ಗಮ್ಮ)ಯಿಂದಾಗಿಯೇ ಆ ಊರಿಗೆ ಬಳ್ಳಾರಿ ಎಂಬ ಹೆಸರು ಬಂದಿದೆ ಎಂಬ ವಾದವೂ ಇದೆ. ಈ ನಗರ ಕ್ರಿ.ಶ. ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ವಾದವಿದೆ. "ಬೈಲೂರಿನಲ್ಲಿ ಸಿಕ್ಕ ಶಾಸನ ಕ್ರಿ.ಶ. ೧೧೩೧ರದಾಗಿದ್ದು ಆ ಶಾಸನದಲ್ಲಿ ಬಳ್ಳಾರಿ ಪ್ರದೇಶ ಉಲ್ಲೇಖ ಗೊಂಡಿರುವುದನ್ನು ಕಾಣಬಹುದಾಗಿದೆ. ನಂತರ ಸಿಂಧೀಗೇರಿ, ಕೋಳೂರು, ಕುರುಗೋಡುಗಳಲ್ಲಿ ದೊರತ ಶಾಸನಗಳಲ್ಲಿ ಬಳ್ಳಾರಿ ಎಂಬ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ. ಹೊಯ್ಸಳರ ಮೂರು ಶಾಸನಗಳು"[೪] ಕ್ರಿ.ಶ. ೧೧೭೮ ರ ನಾಗಮಂಗಲ ಶಾಸನ, "ಕ್ರಿ.ಶ. ೧೧೮೩ರ ಬೇಲೂರು ಶಾಸನ ೧೩೭) ಶಾಸನಗಳಲ್ಲಿ ಬಳ್ಳಾರಿ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ"[೫]

ಬ್ರಿಟೀಷ್ ಭಾರತದ ಕಾಲದಲ್ಲಿ ಆಗಿನ ಹಳೇ ಮದ್ರಾಸ್ ಪ್ರಾಂತಕ್ಕೆ ಬಳ್ಳಾರಿ ಸೇರ್ಪಡೆಗೊಂಡಿತ್ತು ಕ್ರಿ.ಶ. ೧೮೦೦ರಲ್ಲಿ ನಿಜಾಮರಿಂದ ಬ್ರಿಟೀಷರಿಗೆ ಕಡಪ ಕರ್ನೂಲು ಅನಂತಪುರ ಜಿಲ್ಲೆ ಬಳ್ಳಾರಿಯನ್ನೊಳಗೊಂಡು ಮದ್ರಾಸ್ ಪ್ರೆಸಿಡೆನ್ಸಿಯ ದತ್ತಿ ಮಂಡಲವೆಂದು ಘೋಷಣೆಗೊಂಡಿದ್ದವು.

ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಪ್ರಥಮ ಕಲೆಕ್ಟರಾಗಿ ಥಾಮಸ್ ಮುನ್ರೊ ನೇಮಕಗೊಂಡಿದ್ದರು. ಭಾಷಾವಾರು ಪ್ರಾಂತಗಳಾಗಿ ವಿಂಗಡಣೆಗೊಳ್ಳುವವರೆಗೂ ಬಳ್ಳಾರಿಯು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿಯೇ ಇದ್ದಿತು. ಸ್ವಾತಂತ್ರ್ಯಾ ನಂತರ ಆಕ್ಟೋಬರ್ ೧, ೧೯೫೩ರಲ್ಲಿ ಭಾಷಾವಾರು ಪ್ರಾಂತಗಳು ವಿಂಗಡಣೆಯಾದ ತರುವಾಯ ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಬ್ರಿಟೀಷರು ಬಳ್ಳಾರಿಯನ್ನು ಸುಮಾರು ಒಂದುನೂರ ನಲವತ್ತೇಳು ವರ್ಷಗಳಷ್ಟು ದೀರ್ಘವಾಗಿ ಆಳಿದರು.

ಭಾರತ ಸ್ವತಂತ್ರವಾಗಿ ಹಲವು ವರ್ಷಗಳು ಕಳೆದರೂ ಭಾರತದಲ್ಲಿ ಇನ್ನೂ ಮಹಿಳೆಯರಿಗೆ ಪರಿಪೂರ್ಣವಾದ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅಷ್ಟೇಕೆ ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಬಂದಿರಲಿಲ್ಲ. ಅಂತಹ ಕಾಲದಲ್ಲಿ ಮಹಿಳೆಯೊಬ್ಬರು ಬಳ್ಳಾರಿ ಪ್ರಾಂತದಿಂದ ಚುನಾವಣೆಯಲ್ಲಿ ಗೆದ್ದು ಮದ್ರಾಸ್ ಶಾಸನ ಸಭೆಯ ಸದಸ್ಯರಾದುದು ಒಂದು ವಿಶೇಷವೆಂದೇ ಹೇಳಬಹುದು

ಗೊರ್ಲೆ ಮನೆತನದ ಗೊರ್ಲೆರುದ್ರಮ್ಮನವರನ್ನು ಚುನಾವಣೆಗೆ ನಿಲ್ಲಿಸಲು ಈ ಪ್ರಾಂತದ ಬ್ರಾಹ್ಮಣೇತರ ಮುಖ್ಯ ಜಾತಿಯಾದ ಲಿಂಗಾಯಿತ ಸಮುದಾಯ ಆಪೇಕ್ಷೆಪಟ್ಟಿತು. ಆದರೆ ಗೊರ್ಲೆ ರುದ್ರಮ್ಮ ಚುನಾವಣೆಗೆ ನಿಲ್ಲಲು ಹಿಂಜರಿದುದರಿಂದ ಆಗ ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷರಾದ ವಿ.ಬಿ. ಕೇಶವರಾವ್ ಅವರ ಪತ್ನಿ ಜಯಲಕ್ಷ್ಮಿಯವರ ವಿರುದ್ಧ ಅಲ್ಲಂ ಸುಮಂಗಳಮ್ಮ ನವರನ್ನು ಪ್ರತಿಸ್ಪರ್ಧಿಯಾಗಿ ನಿಲ್ಲಿಸಲಾಯಿತು. ಬ್ರಾಹ್ಮಣ ವರ್ಗದ ಜಯಲಕ್ಷ್ಮಿಯವರನ್ನು ಹಿಂದೆ ಹಾಕಿ ಅಲ್ಲಂ ಸುಮಂಗಳಮ್ಮನವರು ಜಯಶಾಲಿಗಳಾದರು. ಕಾಂಗ್ರೇಸ್ ಅಭ್ಯರ್ಥಿಯನ್ನೇ ಸೋಲಿಸಿದ ಅಲ್ಲಂ ಸುಮಂಗಳಮ್ಮನವರನ್ನು ನೋಡಲು ಆಗಿನ ಪ್ರಧಾನಿಯಾಗಿದ್ದ ಜವಹಾರ್‌ಲಾಲ್ ನೆಹರೂರವರೇ ಸ್ವತಃ ಬಳ್ಳಾರಿಗೆ ಬಂದಿದ್ದರಂತೆ. ಮದ್ರಾಸ್ ಶಾಸನ ಸಭೆಗೆ ಮಹಿಳಾ ಅಭ್ಯರ್ಥಿಯಾಗಿ ಅಲ್ಲಂ ಸುಮಂಗಳಮ್ಮನವರು ಕುರುಗೋಡು ಕ್ಷೇತ್ರದಿಂದ ಆಯ್ಕೆಯಾದುದು ತಿಳಿದು ಬರುತ್ತದೆ"[೬]

ಆದರೆ ಮೀಸಲಾತಿ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಯಾವುದೇ ಕೆಳವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ಮಹಿಳೆಯರಲ್ಲಿ ಒಬ್ಬೇ ಒಬ್ಬ ಮಹಿಳೆಯೂ ಯಾವುದೇ ರಾಜಕೀಯ ಸ್ಥಾನಗಳಿಗೆ ಸ್ಪರ್ಧಿಸಲು ಸಾಧ್ಯವಾಗದೇ ಹೋದುದು ದುರಂತವೆಂದೇ ಹೇಳಬಹುದು.

೨.೩. ಬಳ್ಳಾರಿ ಜಿಲ್ಲೆ–ಭೌಗೋಳಿಕತೆ

ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಐತಿಹಾಸಿಕವಾಗಿ ತುಂಬಾ ಪ್ರಸಿದ್ಧಿಯನ್ನು ಪಡೆದ ವಿಜಯನಗರ ಸಾಮಾಜ್ಯದ ಕೇಂದ್ರ ಸ್ಥಾನವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದೆ. ಈ ಜಿಲ್ಲೆಯು ನೈರುತ್ಯ ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹಗರಿ ಬೊಮ್ಮನಹಳ್ಳಿ ತಾಲೂಕಿನ ಕಲ್ಲಹಳ್ಳಿ ಗ್ರಾಮದಿಂದ ಈಶಾನ್ಯ ದಿಕ್ಕಿನಲ್ಲಿರುವ ಸಿರಗುಪ್ಪ ತಾಲೂಕಿನ ಸಂತೆ ಕೂಡ್ಲೂರು ಗ್ರಾಮದವರೆಗೆ ಒಟ್ಟು ೧೮೭ ಕಿ.ಮೀ. ಉದ್ದವಾಗಿದೆ ಹಾಗೂ

ಪೂರ್ವ ದಿಕ್ಕಿನಿಂದ ಪಶ್ಚಿಮಕ್ಕೆ ಬಳ್ಳಾರಿ ತಾಲೂಕಿನ ಕಾರೇಕಲ್ ವೀರಾಪುರ ಗ್ರಾಮದಿಂದ ಹಡಗಲಿ ತಾಲೂಕಿನ ಹಿರೇಬನ್ನಟ್ಟಿ ಗ್ರಾಮದವರೆಗೆ ೧೬೧ ಕಿ.ಮೀ. ಅಗಲವಾಗಿ ವ್ಯಾಪಿಸಿಕೊಂಡಿದೆ.

೧೯೭೭ರಲ್ಲಿ ಕರ್ನಾಟಕ ರಾಜ್ಯವು ಜಿಲ್ಲೆಗಳನ್ನು ಮರುವಿಂಗಡಿಸಿದಾಗ ಹರಪನಹಳ್ಳಿಯು ದಾವಣಗೆರೆ ಜಿಲ್ಲೆಯ ಪಾಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆ ಏಳು ತಾಲೂಕುಗಳನ್ನು ಮಾತ್ರ ಹೊಂದಿದೆ. ಪ್ರಸ್ತುತ ಜಿಲ್ಲೆಯು ಭೌಗೋಳಿಕ ವಿಸ್ತೀರ್ಣವು ೮೪೪೭೦೦ ಚ.ಕಿ. ಮೀಟರ್‌ಗಳಷ್ಟಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೪.೪೦ ರಷ್ಟು ಪಾಲನ್ನು ಹೊಂದಿದೆ. ಅಂದರೆ ರಾಜ್ಯದ ಒಟ್ಟು ಜಿಲ್ಲೆಗಳಿಗೆ ಹೋಲಿಸಿದರೆ ಇದು ವಿಸ್ತೀರ್ಣದಲ್ಲಿ ಎಂಟನೇ ಸ್ಥಾನದಲ್ಲಿದೆ.

ಉತ್ತರಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆ, ಪಶ್ಚಿಮಕ್ಕೆ ಗದಗ ಜಿಲ್ಲೆ, ಪೂರ್ವಕ್ಕೆ ಆಂದ್ರ ಪ್ರದೇಶಗಳಿಂದ ಬಳ್ಳಾರಿ ಜಿಲ್ಲೆಯು ಸುತ್ತುವರೆದಿದೆ. ಈ ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲಕರವಾಗಿದೆ. ಜಿಲ್ಲೆಯು ಉಷ್ಣ ಹವಾಮಾನದಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಂದೇ ಹೇಳಬಹುದು. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ಈ ಭಾಗದಲ್ಲಿ ತುಂಗಾಭದ್ರ ನದಿಯಿಂದಾಗಿ ಪೂರ್ವ ತಾಲೂಕುಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ. ಜಿಲ್ಲೆಯ ಹಡಗಲಿ ತಾಲೂಕನ್ನು ಪ್ರವೇಶಿಸುವ ತುಂಗಾಭದ್ರಾ ನದಿಯು ಮುಂದೆ ಹಗರಿಬೊಮ್ಮನ ಹಳ್ಳಿ, ಹೊಸಪೇಟೆ, ಸಿರಗುಪ್ಪ ತಾಲೂಕುಗಳನ್ನು ಹಾದು ಆಂಧ್ರ ಪ್ರದೇಶದ ಮೂಲಕ ಮುಂದೆ ಹೋಗಿ ಸಮುದ್ರ ಸೇರುತ್ತದೆ. ತುಂಗಾಭದ್ರಾ ನದಿಯು ಒಟ್ಟು ಮೂರು ನೂರ ಇಪ್ಪತ್ತು ಕಿ.ಮೀ ದೂರ ಹರಿಯುತ್ತದೆ. ತುಂಗಾಭದ್ರಾ ನದಿಯ ಹೊರತಾಗಿ ಹಗರಿ(ವೇದಾವತಿ) ಎಂಬ ಚಿಕ್ಕ ನದಿಯೊಂದು ಈ ಜಿಲ್ಲೆಯಲ್ಲಿ ಹರಿಯುತ್ತದೆ. ಇವುಗಳ ಹೊರತಾಗಿ ನಾರಿ ಹಳ್ಳದಂತಹ ಚಿಕ್ಕ ಪುಟ್ಟ ಹಳ್ಳಗಳು ಈ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಇವುಗಳಲ್ಲದೆ ಹಿಂದೆ ಕಂಪಲಿರಾಯ ಮತ್ತು ವಿಜಯನಗರದ ಅರಸರು, ಸಣ್ಣ ಪುಟ್ಟ ಪಾಳೆಯಗಾರರು ನಿರ್ಮಿಸಿದ ಕೆರೆ ಕುಂಟಿಗಳೂ ಸಹ ಜಿಲ್ಲೆಯಾದ್ಯಂತ ಕಂಡುಬರುತ್ತದೆ.

ಅತ್ಯತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪವನ್ನು ಈ ಜಿಲ್ಲೆಯಲ್ಲಿ ಕಾಣಬಹುದು. ಈ ಜಿಲ್ಲೆಯ ಸಂಡೂರು, ಹೊಸಪೇಟೆ, ಬಳ್ಳಾರಿ ತಾಲೂಕುಗಳು ಕಬ್ಬಿಣ ಮತ್ತು ಮ್ಯಾಂಗನೀಸ್ ಹೊಂದಿದ ಬೆಟ್ಟಗಳನ್ನು ಹೊಂದಿವೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಭೂಗರ್ಭಶಾಸ್ತ್ರಜ್ಞರು ಅಂದಾಜಿಸಿದ್ದಾರೆ ಹಾಗೇ ಮ್ಯಾಂಗನೀಸ್ ಪ್ರಮಾಣವು ೧೮.೮೧ ದಶಲಕ್ಷ ಟನ್‌ಗಳಿಷ್ಟಿದೆ ಎಂದು ಗುರುತಿಸಲಾಗಿದೆ.

ಇವಲ್ಲದೆ ಗ್ರಾನೇಟ್ ಕಲ್ಲುಗಳನ್ನು ಹೊಂದಿದ ಬೆಟ್ಟಗಳು ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಹೀಗಾಗಿ ಗ್ರಾನೇಟ್ ಗಣಿಗಾರಿಕೆಯು ಇಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಕಾಣಬಹುದಾಗಿದೆ. ೧೯೯೧ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ

ಪರಿಣಾಮವಾಗಿ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳ ಮೇಲೆ ಬಂಡವಾಳ ತೊಡಗಿಸಿವೆ. ಜೊತೆಗೆ ಇದರ ಬೆನ್ನಲ್ಲೇ ಚಿಕ್ಕ ಕಾರ್ಖಾನೆಗಳಿಂದ ಹಿಡಿದು ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯಂತಹ ಬೃಹತ್ ಕಾರ್ಖಾನೆಗಳು ಜಿಲ್ಲೆಯಲ್ಲಿ ತಲೆಯತ್ತಿವೆ. ಇದಲ್ಲದೆ ಮಿತ್ತಲ್‌ನಂತಹ ಕಂಪನಿಗಳು ಕಬ್ಬಿಣ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದಾಗಿವೆ.


ಕುಡಿತಿನಿ ಮತ್ತು ತೋರಣಗಲ್‌ನಲ್ಲಿ ಎರಡು ಉಷ್ಣವಿದ್ಯುತ್ ತಯಾರಿಕಾ ಘಟಕಗಳು ತಲೆಯತ್ತಿವೆ. ಕುಡಿತಿನಿಯ ಉಷ್ಣ ವಿದ್ಯುತ್ ಸ್ಥಾವರವನ್ನು ಕರ್ನಾಟಕ ವಿದ್ಯುತ್ ನಿಗಮ ನಿರ್ವಹಿಸಿದರೆ ತೋರಣಗಲ್ಲಿನ ಉಷ್ಣ ಸ್ಥಾವರವನ್ನು ಜಿಂದಾಲ್ ಕಂಪನಿಯು ನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ ಜರಗುತ್ತಿರುವ ಔದ್ಯೋಗಿಕರಣ ಪ್ರಕ್ರಿಯೆ ಜಿಲ್ಲೆಯ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿವೆ. ಪ್ರಾದೇಶಿಕವಾಗಿ ಈ ಜಿಲ್ಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು ಅವನ್ನು ಕ್ರಮವಾಗಿ ಪೂರ್ವಭಾಗ ಮತ್ತು ಪಶ್ಚಿಮ ಭಾಗವೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದಲ್ಲಿ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು ತಾಲೂಕುಗಳನ್ನು ಗುರುತಿಸಿದರೆ ಪಶ್ಚಿಮ ಭಾಗದಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳನ್ನು ಗುರುತಿಸಲಾಗಿದೆ. ಪಶ್ಚಿಮ ಭಾಗದ ಈ ಮೂರು ತಾಲೂಕುಗಳು ಔದ್ಯಮಿಕ ಚಟುವಟಿಕೆಗಳಿಂದ ದೂರವೇ ಉಳಿದಿವೆ. ಜೊತೆಗೆ ನೀರಾವರಿ ಸೌಲಭ್ಯಗಳಿಂದಲೂ ಈ ಮೂರು ತಾಲೂಕುಗಳು ವಂಚಿತಗೊಂಡಿವೆ. ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿಯ ಮೂಲಕ ತುಂಗಾಭದ್ರ ನದಿ ಹರಿದರೂ ಅದರ ಲಾಭವನ್ನು ಸಂಪೂರ್ಣವಾಗಿ ಪಡೆಯಲು ಆ ತಾಲೂಕುಗಳು ವಂಚಿತಗೊಂಡಿವೆ ಹಾಗೇ ಜಿಲ್ಲೆಯಲ್ಲಿಯೇ ತುಂಬಾ ಹಿಂದುಳಿದ ತಾಲೂಕೆಂದು ಕೂಡ್ಲಿಗಿಯನ್ನು ಗುರುತಿಸಲಾಗುತ್ತದೆ.

೨.೪. ಕುಟುಂಬಗಳು

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಕುಟುಂಬಗಳು ೧,೦೨,೩೨,೧೩೩ ಎಂದು ಗುರುತಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ಕುಟುಂಬಗಳ ಸಂಖ್ಯೆಯು ೩,೭೩,೦೩೪ ರಷ್ಟಿದೆ ಅಂದರೆ ಕರ್ನಾಟಕ ರಾಜ್ಯದ ಒಟ್ಟು ಕುಟುಂಬಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯು ಶೇ.೩.೬೫ ರಷ್ಟು ಕುಟುಂಬಗಳನ್ನು ಒಳಗೊಂಡಿದೆ. ಇದರಲ್ಲಿ ಜಿಲ್ಲೆಯ ತಾಲೂಕುವಾರು ಕುಟುಂಬಗಳ ಸಂಖ್ಯೆಯನ್ನು ನೋಡಿದರೆ ಹಡಗಲಿಯು ೩೧.೦೮೪ ಕುಟುಂಬಗಳನ್ನು ಒಳಗೊಂಡಿದ್ದರೆ ಹಗರಿಬೊಮ್ಮನಹಳ್ಳಿಯು ೨೮,೮೭೧ ಕುಟುಂಬಗಳನ್ನು, ಹೊಸಪೇಟೆಯು ೭೦,೭೯ ಕುಟುಂಬಗಳನ್ನು, ಸಿರಗುಪ್ಪ ೪೨,೦೯೮ ಕುಟುಂಬಗಳನ್ನು, ಬಳ್ಳಾರಿಯು ೧,೧೭,೨೩೩ ಕುಟುಂಬಗಳನ್ನು, ಸಂಡೂರು ೩೫,೨೧೮ ಕುಟುಂಬಗಳನ್ನು ಹಾಗೂ ಕೂಡ್ಲಿಗಿ ೪೭,೮೧೧ ಕುಟುಂಬಗಳನ್ನು ಹೊಂದಿರುವುದು ಕಂಡುಬರುತ್ತಿದೆ.

ಕೋಷ್ಟಕ ೨.೪ ಕುಟುಂಬಗಳ ವಿವರ (ಶೇಕಡವಾರುಗಳಲ್ಲಿ)



೨.೪.೧ ಜನಸಂಖ್ಯೆ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೧,೩೩,೦೦,೭೯೦ ಕುಟುಂಬಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆಯು ೬,೧೦,೯೫,೨೯೭ ಜನಸಂಖ್ಯೆಯನ್ನು ಹೊಂದಿದೆ ಇದರಲ್ಲಿ ಪುರುಷರು ೬,೧೦,೯೫,೨೯೭ ರಷ್ಟಿದ್ದರೆ ಮಹಿಳೆಯರು ೩,೦೧,೨೮,೬೪೦ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರು ಒಟ್ಟು ೧,೦೪,೭೪,೯೯೨ ಜನರಿರುವರು. ಇದರಲ್ಲಿ ೫೨,೬೪,೫೪೫ ಪುರುಷರು ಹಾಗೂ ೫೨,೧೦,೪೪೭ ಮಹಿಳೆಯರಿರುವರು. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೨,೪೮,೯೮೭ ಇದೆ. ಇದರಲ್ಲಿ ೨೧,೩೪,೭೫೪ ಪುರುಷರು ಹಾಗೂ ೨೧,೧೪,೨೩೩ ಮಹಿಳೆಯರು ನೆಲೆಸಿರುವರು.

ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇ. ೬.೯೫ರಷ್ಟಿದೆ.

ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರಿಗೆ ೩೧೯ರಷ್ಟಿದೆ. ಲಿಂಗಾನುಪಾತವು ಒಟ್ಟು ೧೦೦೦ ಪುರುಷರಿಗೆ ೯೭೩ ಮಹಿಳೆಯರಿರುವರು.

೨.೪.೨. ಬಳ್ಳಾರಿ ಜಿಲ್ಲೆಯ ಜನಸಂಖ್ಯೆ

೨೦೧೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಕುಟುಂಬಗಳು ೪,೮೭,೪೧೮. ಒಟ್ಟು ಜನಸಂಖ್ಯೆಯು ೨೪,೫೨,೫೯೫ರಷ್ಟಿದ್ದು ಇದರಲ್ಲಿ ಪುರುಷರು ೧೨,೩೬,೯೫೪ರಷ್ಟಿದ್ದಾರೆ ಹಾಗೂ ಮಹಿಳೆಯರು ೧೨,೧೫,೬೪೧ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯು ಜನಸಂಖ್ಯೆಯು ಒಟ್ಟು ೫,೧೭,೪೦೯ರಷ್ಟಿದೆ ಇದರಲ್ಲಿ ಪುರುಷರು ೨,೫೮,೫೮೨ ಹಾಗೂ ಮಹಿಳೆಯರು ೨,೫೮,೮೨೭ ರಷ್ಟಿದ್ದಾರೆ.



ಪರಿಶಿಷ್ಟ ಪಂಗಡದ ಜನಸಂಖ್ಯೆಯು ಜಿಲ್ಲೆಯಲ್ಲಿ ಒಟ್ಟು ೪,೫೧,೪೦೬ರಷ್ಟಿದ್ದು ಪುರುಷರು ೨,೨೫,೪೫೧ ಹಾಗು ಮಹಿಳೆಯರು ೨,೨೫,೯೫೫ರಷ್ಟಿದ್ದಾರೆ.

ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡ ೧೦.೬೨ರಷ್ಟು ಮಾತ್ರವಿದೆ,

೨೦೧೧ರ ಜನಗಣತಿ ಪ್ರಕಾರ ತಾಲೂಕುವಾರು ಮತ್ತು ಜಾತಿವಾರು ಜನಸಂಖ್ಯೆಯು ಈ ಕೆಳಗಿನಂತಿದೆ.

ಜಿಲ್ಲೆಯ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ತಾಲೂಕುವಾರು ಜನಸಂಖ್ಯೆಯನ್ನು ನೋಡಿದರೆ ಹಡಗಲಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯು ಶೇಕಡ ೩.೫೮ರಷ್ಟಿದೆ ಇದರಲ್ಲಿ ಪುರುಷರು ಶೇಕಡ ೧.೮೧ರಷ್ಟಿದೆ. ಮಹಿಳೆಯರ ಜನಸಂಖ್ಯಾ ಪ್ರಮಾಣವು ಶೇಕಡ ೧.೭೭ರಷ್ಟಿದೆ.

ಹಡಗಲಿ ತಾಲೂಕಿನಲ್ಲಿ ವಾಲ್ಮೀಕಿ ಮತ್ತು ಮೇಧ ಎರಡು ಪರಿಶಿಷ್ಟ ಪಂಗಡಗಳು ಮಾತ್ರ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇಧಾ ಸಮುದಾಯದ ಒಟ್ಟು ಪ್ರಮಾಣವು ಶೇ. ೦.೦೮ರಷ್ಟು ಮಾತ್ರ ಕಂಡುಬರುತ್ತದೆ, ಮೇಧಾ ಪುರುಷರ ಜನಸಂಖ್ಯಾ ಪ್ರಮಾಣ ಕೇವಲ ೦.೦೪ರಷ್ಟಿದೆ ಹಾಗೂ ಮಹಿಳೆಯರ ಪ್ರಮಾಣ ೦.೦೪ರಷ್ಟಿದೆ ಆದರೆ ವಾಲ್ಮೀಕಿ ಸಮುದಾಯದ ಜನಸಂಖ್ಯಾ ಪ್ರಮಾಣವು ಒಟ್ಟು ಶೇ. ೩.೫೦ರಷ್ಟಿದೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ, ಮೇಧಾ ಮತ್ತು ವಾಲ್ಮೀಕಿ ಸಮುದಾಯಗಳು ಕಂಡುಬರುತ್ತವೆ. ಈ ಮೂರು ಪರಿಶಿಷ್ಟ ಪಂಗಡದ ಸಮುದಾಯ ಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ ಪರಿಶಿಷ್ಟ ಪಂಗಡವೆಂದರೆ ಹಕ್ಕಿಪಿಕ್ಕಿ ಸಮುದಾಯವಾಗಿದೆ. ಹಕ್ಕಿ ಪಿಕ್ಕಿ ಸಮುದಾಯವು ಆ ತಾಲೂಕಿನ ಯಡ್ರಾಮನಹಳ್ಳಿ ಎನ್ನುವ ಗ್ರಾಮವೊಂದರಲ್ಲಿ ಮಾತ್ರ ನೆಲೆನಿಂತಿದೆ.

ಯಡ್ರಾಮನಹಳ್ಳಿಯಲ್ಲಿ ವಾಸಿಸುವ ಹಕ್ಕಿ ಪಿಕ್ಕಿಗಳಲ್ಲಿ ಪುರುಷರು ೧೯ರಷ್ಟು ಹಾಗೂ ಮಹಿಳೆಯರು ೩೧ರಷ್ಟಿದ್ದಾರೆ ಅಂದರೆ ಜಿಲ್ಲೆಯ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇ. ೦.೦೧ರಷ್ಟು ಹಕ್ಕಿಪಿಕ್ಕಿಗಳು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಕಂಡುಬರುತ್ತಾರೆ. ಇದರಲ್ಲಿ ಪುರುಷರು ಶೇಕಡ ೦.೦೦೫ರಷ್ಟು ಮಹಿಳೆಯರು ಶೇಕಡ ೦.೦೦೮ರಷ್ಟು ಕಂಡುಬರುತ್ತಾರೆ.

ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವವರು ಮೇಧಾ ಸಮುದಾಯವಾಗಿದೆ. ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇಧಾ ಸಮುದಾಯದ ಪುರುಷರ ಪ್ರಮಾಣ ಶೇಕಡ ೦.೦೩೭ ಹಾಗೂ ಮಹಿಳೆಯರ ಪ್ರಮಾಣ ಶೇ. ೦.೦೩೬ರಷ್ಟಿದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯೆ ಶೇ.೫.೮೬(೨೯,೩೪೫) ರಷ್ಟಿದೆ

ಇದರಲ್ಲಿ ಪುರುಷರ ಪ್ರಮಾಣ ಶೇಕಡ ೨.೯೫ ರಷ್ಟು ಹಾಗೂ ಮಹಿಳೆಯರ ಪ್ರಮಾಣ ಶೇಕಡ ೨.೯೧ರಷ್ಟಿದೆ.

ಹೊಸಪೇಟೆ ತಾಲೂಕಿನಲ್ಲಿ ಡುಂಗ್ರಿ ಗರಾಸಿಯಾ, ಹಕ್ಕಿಪಿಕ್ಕಿ, ಮೇಧಾ ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತಿವೆ. ಇವುಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆ ಹೊಂದಿದ ಸಮುದಾಯವೆಂದರೆ ಡುಂಗ್ರಿ ಗರಾಸಿಯಾವಾಗಿದೆ. ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಮತ್ತು ಬುಕ್ಕಸಾಗರ ಗ್ರಾಮಗಳಲ್ಲಿ ಕಂಡುಬರುವ ಈ ಸಮುದಾಯದವರ ಒಟ್ಟು ಜನಸಂಖ್ಯೆ ಪ್ರಮಾಣ ಶೇ. ೦.೦೪ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರು ಶೇ.೦.೦೨ರಷ್ಟಿದ್ದಾರೆ ಮಹಿಳೆಯರು ೦.೦೨ರಷ್ಟಿದ್ದಾರೆ

ಹಕ್ಕಿಪಿಕ್ಕಿ ಸಮುದಾಯವು ಕಾರಿಗನೂರು, ಕಂಪ್ಲಿ, ಹೊಸಪೇಟೆ ಪ್ರದೇಶಗಳಲ್ಲಿ ಕಂಡು ಬರುತ್ತಿದ್ದು ಇವರ ಪ್ರಮಾಣವು ಮೇಧಾ ಸಮುದಾಯದ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಜಿಲ್ಲೆಗೆ ಹೋಲಿಸಿದರೆ ಈ ತಾಲೂಕಿನಲ್ಲಿರುವ ಹಕ್ಕಿ ಪಿಕ್ಕಿಗಳ ಒಟ್ಟು ಜನಸಂಖ್ಯಾ ಪ್ರಮಾಣ ೦.೨೦ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೦.೯ರಷ್ಟಿದ್ದರೆ ಮಹಿಳೆಯರು ಶೇಕಡ ೦.೧೧ರಷ್ಟಿದ್ದಾರೆ.

ಮೇಧಾ ಸಮುದಾಯದವರು ಒಟ್ಟು ಶೇಕಡ ೦.೧೦ರಷ್ಟು ಜನಸಂಖ್ಯೆಯನ್ನು ಈ ತಾಲೂಕಿನಲ್ಲಿ ಹೊಂದಿದ್ದಾರೆ. ಇದರಲ್ಲಿ ಶೇಕಡ ೦.೫ರಷ್ಟು ಪುರುಷರು ಹಾಗೂ ಶೇಕಡ ೦.೫ರಷ್ಟು ಮಹಿಳೆಯರು ಕಂಡುಬರುತ್ತಾರೆ.

ಈ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೬.೨ರಷ್ಟಿದೆ, ಇದರಲ್ಲಿ ಪುರುಷರು ಶೇಕಡ ೮.೦೪ರಷ್ಟಿದ್ದರೆ ಮಹಿಳೆಯರು ಶೇಕಡ ೮.೧೮ರಷ್ಟಿದ್ದಾರೆ.

ಸಿರಗುಪ್ಪ ತಾಲೂಕಿನಲ್ಲಿ ಮೇಧಾ ಹಾಗು ವಾಲ್ಮೀಕಿಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡ ಗಳು ಕಂಡುಬರುವುದಿಲ್ಲ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸಿರಗುಪ್ಪದ ಮೇಧಾ ಸಮುದಾಯದ ಒಟ್ಟು ಜನಸಂಖ್ಯೆ ಪ್ರಮಾಣವು ೦.೦೨ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣ ಶೇಕಡ ೦.೦೧ ಮತ್ತು ಮಹಿಳೆಯರ ಪ್ರಮಾಣವು ಸಹ ಶೇಕಡ ೦.೦೧ ಇದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೧.೪೯ ಇದೆ.

ಬಳ್ಳಾರಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ಮೇಧಾ, ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಡುಂಗ್ರಿ ಗರಾಸಿಯ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣ ಶೇಕಡ ೦.೦೫ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೦.೦೨೭ರಷ್ಟು ಹಾಗೂ ಮಹಿಳೆಯರು ಶೇಕಡ ೦.೦೨೩ರಷ್ಟು ಕಂಡು ಬರುತ್ತಾರೆ.

ಈ ತಾಲೂಕಿನಲ್ಲಿ ಹಕ್ಕಿ ಪಿಕ್ಕಿಗಳು ಶೇಕಡ ೦.೦೧ರಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೦೦೪ರಷ್ಟಿದ್ದರೆ ಮಹಿಳೆಯರು ಶೇಕಡ ೦.೦೦೬ ರಷ್ಟಿದ್ದಾರೆ.

ಮೇಧಾ ಸಮುದಾಯವು ಈ ತಾಲೂಕಿನಲ್ಲಿ ಶೇ. ೦.೧೧ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೦.೦೫೯ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡ ೦.೦೫೧ರಷ್ಟಿದೆ. ಪರಿಶಿಷ್ಟ ಪಂಗಡದಲ್ಲಿ ವಾಲ್ಮೀಕಿ ಸಮುದಾಯವು ಹೆಚ್ಚು ಜನಸಂಖ್ಯೆ ಹೊಂದಿರುವ ತಾಲೂಕು ಬಳ್ಳಾರಿಯಾಗಿದೆ. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ತಾಲೂಕಿನ ವಾಲ್ಮೀಕಿ ಸಮುದಾಯದ ಜನಸಂಖ್ಯೆ ಪ್ರಮಾಣ ಶೇಕಡ ೨೭.೭೬ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೧೪.೦೫ ರಷ್ಟಿದ್ದರೆ ಮಹಿಳೆಯರು ಶೇಕಡ ೧೩.೭೧ರಷ್ಟಿದ್ದಾರೆ.

ಸಂಡೂರು ತಾಲೂಕಿನಲ್ಲಿ ಮೇಧಾ ಹಾಗು ವಾಲ್ಮೀಕಿ ಸಮುದಾಯಗಳು ಕಂಡುಬರುತ್ತವೆ. ಇದರಲ್ಲಿ ಮೇಧಾ ಸಮುದಾಯದ ಪ್ರಮಾಣ ಅತ್ಯಲ್ಪವೆಂದೇ ಹೇಳಬಹುದು. ಮೇಧಾ ಸಮುದಾಯದ ಒಟ್ಟು ಜನಸಂಖ್ಯೆಯು(ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ) ಶೇ. ೦.೦೩ರಷ್ಟು ಮಾತ್ರ ಕಂಡುಬರುತ್ತದೆ. ಇದರಲ್ಲಿ ಪುರುಷರು ಶೇಕಡ ೦.೦೧ರಷ್ಟು ಇದ್ದರೆ ಮಹಿಳೆಯರು ಶೇಕಡ ೦.೦೨ರಷ್ಟು ಕಂಡುಬರುತ್ತಾರೆ.

ಕೂಡ್ಲಿಗಿ ತಾಲೂಕಿನಲ್ಲಿ ಮೇಧಾ ಹಾಗೂ ವಾಲ್ಮೀಕಿ ಸಮುದಾಯಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡದ ಬುಡಕಟ್ಟುಗಳು ಕಂಡು ಬರುವುದಿಲ್ಲ. ಅದರಲ್ಲೂ ಮೇಧಾ ಸಮುದಾಯ ಅತ್ಯಲ್ಪ ಪ್ರಮಾಣದಲ್ಲಿದೆ. ತಾಲೂಕಿನ ಪ್ರಮುಖ ಸಮುದಾಯವೆಂದು ಗುರುತಿಸುವ ಸಮುದಾಯ ವಾಲ್ಮೀಕಿ ಸಮುದಾಯವಾಗಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ಸಮುದಾಯದ ಜನಸಂಖ್ಯಾ ಪ್ರಾಭಲ್ಯ ಅರ್ಥವಾಗುತ್ತದೆ.

ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ ಕೂಡ್ಲಿಗಿ ತಾಲೂಕಿನ ಮೇಧಾ ಸಮುದಾಯದ ಜನಸಂಖ್ಯೆಯು ಶೇಕಡ ೦.೦೨ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೦.೦೧ರಷ್ಟಿದೆ ಹಾಗೂ ಮಹಿಳೆಯರ ಪ್ರಮಾಣವು ಸಹ ಶೇಕಡ ೦.೦೧ರಷ್ಟು ಕಂಡುಬರುತ್ತದೆ.

ಈ ತಾಲೂಕಿನ ವಾಲ್ಮೀಕಿ ಸಮುದಾಯವನ್ನು ಜಿಲ್ಲಾ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇಕಡ ೨೦.೧೭ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೧೦.೨೧ರಷ್ಟಿದೆ ಮಹಿಳೆಯರ ಪ್ರಮಾಣವು ಶೇಕಡ ೯.೯೬ರಷ್ಟಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ವಾಲ್ಮೀಕಿ ಸಮುದಾಯದ ಪ್ರಮಾಣವು ಶೇ. ೨೭.೦೩ರಷ್ಟಿದೆ.

ಬಳ್ಳಾರಿ ಜಿಲ್ಲೆಯು ವಿವಿಧ ಜಾತಿ ಪಂಗಡಗಳನ್ನು ಒಳಗೊಂಡಿದೆ ಈ ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯಿತ, ಕುರುಬ, ಮುಸ್ಲೀಂ, ವಾಲ್ಮೀಕಿ ಮಾದಿಗ, ಚಲುವಾದಿ, ಕಮ್ಮಾರ, ಕುಂಬಾರ, ಅಗಸ, ಬಡಿಗ, ಕ್ಷೌರಿಕ, ಕಮ್ಮಾ ಡುಂಗ್ರಿಗರಾಸಿಯ, ಹಕ್ಕಿ ಪಿಕ್ಕಿ, ಮುಂತಾದ ಜಾತಿಗಳನ್ನು ಒಳಗೊಂಡಿದೆ. ಆದರೆ ಪ್ರಭಲ ಜಾತಿಯಾಗಿ ಲಿಂಗಾಯಿತ, ಕುರುಬ ಜಾತಿಗಳು ಕಂಡು ಬರುತ್ತವೆ. ವಾಲ್ಮೀಕಿ ಮಾದಿಗ ಚಲುವಾದಿ ಜಾತಿಗಳು ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಜಾತಿಗಳಾಗಿ ಕಂಡುಬರುತ್ತವೆ.

ಇನ್ನುಳಿದ ಮೇಧ ಡುಂಗ್ರಿಗರಾಸಿಯ ಹಕ್ಕಿಪಿಕ್ಕಿ, ಅಗಸ, ಕ್ಷೌರಿಕ, ಕಮ್ಮಾರ, ಕುಂಬಾರ ಮುಂತಾದ ಕೆಳ ಹಂತದ ಜಾತಿಗಳೂ ಜನಸಂಖ್ಯಾ ಪ್ರಮಾಣದಲ್ಲಿ ಹಿಂದುಳಿದವುಗಳಾಗಿದ್ದು ಆರ್ಥಿಕವಾಗಿ ಸಾಮಾಜಿಕವಾಗಿ ತುಂಬಾ ಹಿಂದುಳಿದಿವೆ. ಕೇವಲ ವೋಟ್ ಬ್ಯಾಂಕ್‌ಗಳ ದೃಷ್ಟಿಯಲ್ಲಿರಿಸಿಕೊಂಡು ರಾಜಕಾರಣ ಮಾಡುವುದರಿಂದ ಇಂತಹ ಕೆಳಗೆ ನೂಕಲ್ಪಟ್ಟ ಸಮುದಾಯಗಳು ಯಾವುದೇ ರೀತಿಯಲ್ಲಿ ರಾಜಕೀಯ ಸ್ಥಾನ ಗಳಿಸುವಲ್ಲಿ ಸೋಲನ್ನು ಅನುಭವಿಸಲೇಬೇಕಾಗುತ್ತವೆ

೨.೫ ಬಳ್ಳಾರಿ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ


ಕರ್ನಾಟಕದ ಒಟ್ಟು ವಿಸ್ತೀರ್ಣವು ೧,೯೧,೭೯೧ ಚ.ಕಿ.ಮೀ. ಗಳಷ್ಟಿದೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣವು ೮,೪೫೦. ಚ.ಕಿ,ಮೀಗಳಾಗಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿಯ ಒಟ್ಟು ವಿಸ್ತೀರ್ಣವು ಶೇಕಡ ೪.೪೦ಗಳಷ್ಟಾಗಿದೆ.

ಬಳ್ಳಾರಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ, ಈ ಜಿಲ್ಲೆಯ ಪ್ರತಿಯೊಂದು ತಾಲೂಕಿನ ವಿಸ್ತೀರ್ಣವು ಈ ಕೆಳಗಿನಂತಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಹಡಗಲಿ ತಾಲೂಕಿನ ವಿಸ್ತೀರ್ಣವು ೯೪೭.೮೨ ಚ.ಕಿ.ಮೀ (ಶೇಕಡ ೧೧.೨೯)ಗಳಿದೆ. ಅದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕು ೯೭೩.೯೫ ಚ.ಕಿ.ಮೀ (ಶೇಕಡ ೧೧.೬೦), ಹೊಸಪೇಟೆ ತಾಲೂಕು ೯೦೪.೭೦ ಚ.ಕಿ.ಮೀ(ಶೇಕಡ ೧೦.೭೯), ಸಿರಗುಪ್ಪ ತಾಲೂಕು ೧,೦೩,೬೧೭ ಚ.ಕಿ.ಮೀ (ಶೇಕಡ ೧೨.೩೩), ಬಳ್ಳಾರಿ ತಾಲೂಕು ೧,೬೮೮,೫೯ ಚ.ಕಿ.ಮೀ (ಶೇಕಡ ೧೯.೯೯), ಸಂಡೂರು ತಾಲೂಕು ೧,೧೫೨.೪೨ ಚ.ಕಿ.ಮೀ (ಶೇಕಡ ೧೩.೭೩) ಕೂಡ್ಲಿಗಿ ತಾಲೂಕು ೧,೬೧೮.೮೭ ಚ.ಕಿ.ಮೀ (ಶೇಕಡ ೨೦.೨೭) ವಿಸ್ತೀರ್ಣವನ್ನು ಒಳಗೊಂಡಿವೆ.

ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ

(ಚದರ ಕಿಲೋಮೀಟರ್ ಹಾಗೂ ಶೇಕಡವಾರುಗಳಲ್ಲಿ)





ಒಟ್ಟು ಬಳ್ಳಾರಿ ಜಿಲ್ಲೆಯ ವಿಸ್ತೀರ್ಣಕ್ಕೆ ಹೋಲಿಸಿದರೆ ಆ ಜಿಲ್ಲೆಯ ೭ ತಾಲೂಕುಗಳಲ್ಲಿ ಅತೀ ಹೆಚ್ಚು ಭೂ ವಿಸ್ತೀರ್ಣ ಹೊಂದಿದ ತಾಲೂಕೆಂದರೆ ಬಳ್ಳಾರಿ ತಾಲೂಕಾಗಿದೆ(೧,೬೮೮.೫ ಚ.ಕಿ.ಮೀ). ತರುವಾಯದ ಸ್ಥಾನ ಕೂಡ್ಲಿಗಿ ತಾಲೂಕಿಗೆ(೧,೬೧೮.೮೭ ಚ.ಕಿ.ಮೀ) ಸಲ್ಲುತ್ತದೆ. ಮೂರನೇ ಸ್ಥಾನ ಸಿರುಗುಪ್ಪಕ್ಕೆ ಸಲ್ಲಿದರೆ ಕೊನೆಯ ಸ್ಥಾನ ಹೊಸಪೇಟೆ ತಾಲೂಕಿಗೆ ಸಲ್ಲುತ್ತದೆ (೯೦೪.೧೭ ಚ.ಕಿ.ಮೀ). ಆದರೆ ಜನಸಾಂದ್ರತೆಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ಅತೀ ಹೆಚ್ಚು ಜನಸಾಂದ್ರತೆ ಹೊಂದಿರುವ ತಾಲೂಕು ಹೊಸಪೇಟೆಯಾಗಿದೆ(೧ ಚ.ಕಿ.ಮೀ.ಗೆ ೪೧೫ರಷ್ಟು) ಹಾಗೂ ಅತೀ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲೂಕು ಹಗರಿಬೊಮ್ಮನಹಳ್ಳಿ(೧೬೪) ಯಾಗಿದೆ. ಇನ್ನೂಳಿದಂತೆ ಬಳ್ಳಾರಿಯು ೩೭೦ ಜನಸಾಂದ್ರತೆ ಹೊಂದಿದ್ದರೆ, ಸಿರುಗುಪ್ಪ ೨೨೭ ಜನಸಾಂದ್ರತೆಯನ್ನು, ಕೂಡ್ಲಿಗಿ ೧೬೮ ಜನಸಾಂದ್ರತೆಯನ್ನು ಸಂಡೂರು ೧೬೬ ಜನ ಸಾಂದ್ರತೆಯನ್ನು ಹಡಗಲಿ ೧೭೭ ಜನಸಾಂದ್ರತೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

೨.೬. ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರರ ಸಂಖ್ಯೆ ೧೪,೨೧,೬೨೧(ಶೇಕಡ ೬೭.೪೩) ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇಕಡ ೭.೯೩ ಕಡಿಮೆ ಇದೆ. ಹೀಗಾಗಿ ಸಾಕ್ಷರತೆಯಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಇದೂ ಒಂದಾಗಿದೆ. ಇತ್ತೀಚೆಗೆ ಮದ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ಕಡ್ಡಾಯ ಶಿಕ್ಷಣ ಮುಂತಾದ ಯೋಜನೆಗಳಿಂದ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಅಲ್ಪಮಟ್ಟಿಗೆ ಹೆಚ್ಚಾಗಿದೆಯೆಂದು ತೋರಿಬಂದರೂ ಜಿಲ್ಲೆಯಲ್ಲಿ ನಡೆಯುವ ಗಣಿಗಾರಿಕೆ, ಕೃಷಿ ಕೂಲಿ ಮುಂತಾದ ಚಟುವಟಿಕೆಗಳ ಕಾರಣಗಳಿಗಾಗಿ ಬಹುತೇಕ ಕೆಳವರ್ಗದ ಮಕ್ಕಳು ಶಾಲೆಯಿಂದ ವಂಚಿತವಾಗಿ ಶಾಲೆಯ ಹೊರಗೆ ಉಳಿಯುವುದೇ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ನಿರ್ಲಕ್ಷಿತ ಅಲ್ಪಸಂಖ್ಯಾತ ಕೆಳ ಜಾತಿ ವರ್ಗಗಳ ಮಕ್ಕಳು ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು, ಅದರಲ್ಲೂ ಶಾಲೆಯಿಂದ ಹೊರಗುಳಿಯುವವರಲ್ಲಿ ಹೆಣ್ಣುಮಕ್ಕಳ ಪ್ರಮಾಣವೇ ಹೆಚ್ಚಾಗಿ ಕಂಡುಬರುತ್ತದೆ.

೨.೭. ಆರ್ಥಿಕ ಚಟುವಟಿಕೆಗಳು

ಜಿಲ್ಲೆಯಲ್ಲಿ ನಡೆಯುವ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಿಂದ ಔದ್ಯೋಗಿಕ ಚಟುವಟಿಕೆಗಳು ಹೆಚ್ಚಾಗಿ ಜರಗುತ್ತಿದೆ, ಆದರೆ ವಿಪರ್ಯಾಸವೆಂದರೆ ತಾಂತ್ರಿಕ ಶಿಕ್ಷಣದ ಕೊರತೆ, ವೃತ್ತಿ ಪ್ರಾವಿಣ್ಯತೆಯ ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಯುವ ಶಕ್ತಿ ಔದ್ಯೋಗಿಕ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗುಳಿಯಬೇಕಾಗಿದೆ. ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸಲು ಉತ್ತರ ಪ್ರದೇಶ, ರಾಜಸ್ಥಾನ ಮುಂತಾದ ಕಡೆಯಿಂದ ಜನ ಬರುವುದರಿಂದ ಸ್ಥಳೀಯ ಜನರು ಕೇವಲ ಕೂಲಿ ಕೆಲಸಕ್ಕೆ ಮಾತ್ರ ಸೀಮಿತ ಎನ್ನುವ ಮಟ್ಟದ ವಾತಾವರಣ ಸೃಷ್ಟಿಗೊಂಡಿದೆ.

ಅದರಲ್ಲೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಯುವಕರು ಉನ್ನತ ಉದ್ಯೋಗ ಅವಕಾಶಗಳಿಂದ ಹೆಚ್ಚು ವಂಚಿತರಾಗಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವ ಭಾಗ ಮತ್ತು ಪಶ್ಚಿಮ ಭಾಗಗಳೆಂದು ವಿಂಗಡಿಸಲಾಗಿದೆ ಮುಖ್ಯವಾಗಿ ಪಶ್ಚಿಮ ಭಾಗದವೆಂದು ಗುರುತಿಸಲಾಗುವ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಔದ್ಯೋಗಿಕ ಚಟುವಟಿಕೆಗಳಿಂದ ದೂರವುಳಿದಿವೆ. ಈ ಪ್ರದೇಶಗಳು ಹೆಚ್ಚಾಗಿ ಲಾಭಕರವಲ್ಲದ ಕೃಷಿ ಚಟುಚಟಿಕೆಗಳಲ್ಲಿ ತೊಡಗಿರುವುದನ್ನು ನೋಡಬಹುದು. ಜಿಲ್ಲೆಯ ಪೂರ್ವ ಭಾಗದಲ್ಲಿ ಔದ್ಯೋಗಿಕ ಚಟುವಟಿಕೆ, ಗಣಿಗಾರಿಕೆ ಇತ್ಯಾದಿ ಚಟುವಟಿಕೆಗಳು ತೀವ್ರಗತಿಯಲ್ಲಿ ಸಾಗಿವೆ. ಆದರೆ ಈ ಔದ್ಯೋಗಿಕ ಚಟುವಟಿಕೆ ಮತ್ತು ಗಣಿಗಾರಿಕೆಗಳ ಲಾಭ ಮಾತ್ರ ಕೆಲವೇ ಕೆಲವು ಬಂಡವಾಳಶಾಹಿಗಳಿಗೆ ಸೀಮಿತವಾಗಿ ಉಳಿದಿರುವುದು ಕಂಡುಬರುತ್ತದೆ. ಆ ಎಲ್ಲಾ ಚಟುವಟಿಕೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ರೀತಿಯ ಲಾಭ ಕಂಡು ಬರುವುದಿಲ್ಲ. ಅಂದರೆ ಸಾಮಾನ್ಯ ಜನರು ಅ ಎಲ್ಲಾ ಚಟುವಟಿಕೆಗಳಿಂದ ದೂರವುಳಿದಿದ್ದಾರೆ. ಹೀಗಾಗಿ ಜಿಲ್ಲೆಯು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವುದು ಕಂಡು ಬರುತ್ತಿವೆ. ಇತ್ತೀಚೆಗೆ ಕೃಷಿ ವಲಯದ ಭೂಮಿಗಳನ್ನು ಸಹ ಬಂಡವಾಳಶಾಹಿಗಳು ಹೆಚ್ಚಿನ ಲಾಭ ಕೊಡುವ ಆಮಿಷ ಒಡ್ಡಿ ಕೃಷಿಕರಿಂದ ಕೃಷಿ ಭೂಮಿಗಳನ್ನು ತಮ್ಮದಾಗಿಸಿ ಕೊಳ್ಳುತಿದ್ದಾರೆ. ತರುವಾಯ ಅವರು ಕೃಷಿಯೇತರ ಚಟುವಟಿಕೆಗಳಿಗೆ ಆ ಭೂಮಿಗಳನ್ನು ಬಳಸಿಕೊಳ್ಳುತ್ತಾರೆ. ಕೃಷಿ ಭೂಮಿಯನ್ನು ಮಾರಿಕೊಂಡು, ಇಲ್ಲವೆ ಕಳೆದುಕೊಂಡ ಕೃಷಿಕನು ಕೃಷಿ ಚಟುವಟಿಕೆಯಿಂದ ದೂರವುಳಿಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅತ್ತ ಕೃಷಿಭೂಮಿ ಇಲ್ಲ ಇತ್ತ ಉದ್ಯೋಗವಿಲ್ಲದಂತಹ ಸ್ಥಿತಿಯಲ್ಲಿರುವ ಜಿಲ್ಲೆಯ ರೈತ ಜೀವನ ನಿರ್ವಹಣೆಗಾಗಿ ಗುಳೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಲು ಹೆಚ್ಚು ದೂರ ಉಳಿದಿಲ್ಲ. ವಲಯವಾರು ದುಡಿಮೆಗಾರರ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ಶೇಕಡ ೭೬.೧೮ರಷ್ಟು ದ್ವಿತೀಯ ವಲಯ ಶೇಕಡ ೭.೪೩ರಷ್ಟು ತೃತೀಯ ವಲಯ ಶೇಕಡ ೧೬.೦೯ರಷ್ಟಿದೆ. ರಾಜ್ಯಕ್ಕೆ ಹೋಲಿಸಿದರೆ ಈ ಪ್ರಮಾಣ ಕ್ರಮವಾಗಿ ಶೇಕಡ ೧೬.೦೯ರಷ್ಟಿದೆ.

ಜಿಲ್ಲೆಯ ಒಟ್ಟು ಶ್ರಮ ಶಕ್ತಿಯ ವಲಯವಾರು ವಿತರಣೆ ಹಾಗೂ ಆ ವಿತರಣೆಯಲ್ಲಿ ೧೯೮೧ರಿಂದ ೧೯೯೧ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿಯ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರವಾಗಿಲ್ಲ ಪ್ರಾಥಮಿಕ ವಲಯವೆಂದರೆ ಕೃಷಿ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿರುವವರ ಪ್ರಮಾಣ ಶೇಕಡ ೮೭.೦೧ರಿಂದ ಶೇಕಡ ೮೭.೮೭ರಷ್ಟು ಏರಿಕೆಯಾಗಿದೆ ಇದನ್ನು ಅಭಿವೃದ್ಧಿಯ ವಿಮುಖ ಚಲನೆ ಎಂದು ಹೇಳಲಾಗುತ್ತದೆ.

ತುಂಗಾಭದ್ರಾ ನದಿ ಜಿಲ್ಲೆಯೊಳಗೆ ಹಾದು ಹೋದರೂ ಜಿಲ್ಲೆಯ ಪಶ್ಚಿಮವಲಯದ ತಾಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಡಗಲಿಗಳು ಕೃಷಿಗಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ನದಿಯ ದಂಡೆಯ ಮೇಲಿನ ಭಾಗದಲ್ಲಿರುವ ಕೆಲವೇ ಕೆಲವು ರೈತರು

ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡಿಕೊಳ್ಳುವರಾದರೂ ರಾಜ್ಯದ ವಿದ್ಯುತ್ ಅಭಾವದಿಂದಾಗಿ ಪಂಪಸೆಟ್‌ಗಳು ಸಹ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ, ಸಂಡೂರು, ಬಳ್ಳಾರಿ ತಾಲೂಕುಗಳು ಸಹ ಇದರಿಂದ ಹೊರತಾಗಿಲ್ಲ. ಬಳ್ಳಾರಿಯ ಕೆಲವು ಭಾಗಗಳು ಮಾತ್ರ ಎಲ್.ಎಲ್.ಸಿ ಕಾಲುವೆ ಮತ್ತು ಹೆಚ್.ಎಲ್.ಸಿ ಕಾಲುವೆಯ ಸೋರಿಕೆ ನೀರು ಬಳಸಿ ಇಲ್ಲವೆ ಅಲ್ಪಾವಧಿ (೬ ತಿಂಗಳು) ನೀರು ಬಳಸಿ ಒಂದು ಬೆಳೆಯನ್ನು ಪಡೆಯಲು ಸಾಧ್ಯ ವಾಗಿದೆ. ಆದರೆ ಆ ನೀರಾವರಿ ಸೌಲಭ್ಯ ಅಷ್ಟೇನೂ ತೃಪ್ತಿಕರವಾಗಿಲ್ಲ ಎಂಬ ಅಳಲು ರೈತರಿಂದ ಕೇಳಿಬರುತ್ತದೆ.

ಹಡಗಲಿ ಹಗರಿಬೊಮ್ಮನಹಳ್ಳಿಯ ರೈತರಿಗೆ ಅನುಕೂಲ ನೀಡಬಹುದಾದ ಸಿಂಗಟಾಲೂರು ಯೋಜನೆಯೊಂದು ರೂಪುಗೊಂಡಿದೆಯಾದರು ಅದು ಪೂರ್ಣಗೊಂಡು ಕಾರ್ಯಾರಂಭ ಮಾಡಲು ಇನ್ನು ಸಾಧ್ಯವಾಗಿಲ್ಲ.

ಒಟ್ಟಾರೆಯಾಗಿ ಈ ಎಲ್ಲ ಚಟುವಟಿಕೆಗಳನ್ನು ಗಮನಿಸಿದರೆ ಜಿಲ್ಲೆಯು ಒಟ್ಟಾರೆಯಾಗಿ ಹಿಂದುಳಿದಿರುವುದನ್ನು ಸೂಚಿಸುತ್ತವೆ. ಯಾವ ಪ್ರದೇಶವು ಕೇವಲ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಗ್ರಹಿಸಲಾಗಿದೆ.

ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫-೯೬ರ ಅವಧಿಯಲ್ಲಿ ಶೇ.೮೫೪೪ ರೂಪಾಯಿ ಗಳಿದ್ದು ರಾಜ್ಯದ ಸರಾಸರಿಗಿಂತ ರೂ ೮೪೦ ಕಡಿಮೆ ಇದೆ. ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೮ನೇ ಸ್ಥಾನವನ್ನೂ ಹೊಂದಿದೆ. ಜಿಲ್ಲೆಯಲ್ಲಿ ಗಣಿಗಾರಿಕೆ ಔದ್ಯೋಗಿಕ ವಲಯದ ಪ್ರಗತಿ ಕಂಡು ಬರುತ್ತಿದ್ದರೂ ಅದು ಕೇವಲ ಕೆಲವೇ ಕೆಲವು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ಜಿಲ್ಲೆಯ ಜನಸಾಮಾನ್ಯನ ವರಮಾನ ಅತ್ಯಂತ ಕಡಿಮೆಯಿರುವುದನ್ನು ಕಾಣಬಹುದಾಗಿದೆ.

ಇತ್ತೀಚೆಗೆ ರಾಜ್ಯದ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಇಡೀ ರಾಜ್ಯದ ರಾಜಕೀಯ ದಾಳಗಳು ಬಳ್ಳಾರಿ ಜಿಲ್ಲೆಯ ಬಂಡವಾಳಶಾಹಿಗಳ ಕೈಯಲ್ಲಿದೆ ಎಂಬ ಮಾತು ಇಂದು ಪ್ರತಿಯೊಂದು ಸುದ್ದಿ ಮಾಧ್ಯಮ ವಲಯಗಳ ಮೂಲಕ ಕೇಳಿಬರುತ್ತಿದೆ. ಬಳ್ಳಾರಿಯ ಗಣಿಗಳಿಗೂ ರಾಜ್ಯದ ರಾಜಕೀಯಕ್ಕೂ ಸಂಬಂಧಗಳಿರುವುದನ್ನು ಈ ಮಾಧ್ಯಮಗಳು ಹೊರಚಲ್ಲುತ್ತ ಲಿರುವುದನ್ನು ನೋಡಬಹುದು

ಜಿಲ್ಲೆಯನ್ನು ಆಡಳಿತಾತ್ಮಕವಾಗಿ ಎರಡು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ ಒಂದು ಬಳ್ಳಾರಿ ಮತ್ತೊಂದು ಹೊಸಪೇಟೆ ಬಳ್ಳಾರಿ ಉಪವಿಭಾಗದಲ್ಲಿ ಮೂರು ತಾಲೂಕುಗಳಿದ್ದರೆ ಹೊಸಪೇಟೆ ಉಪವಿಭಾಗದಲ್ಲಿ ನಾಲ್ಕು ತಾಲೂಕುಗಳು ಇವೆ.

ಈ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಹಾಗೂ ಪ್ರತಿ ತಾಲೂಕಿನ ನಾಲ್ಕು ಗ್ರಾಮಪಂಚಾಯತಿಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವುದರಿಂದ ಅವುಗಳ ಭೌಗೋಳಿಕ ಸ್ವರೂಪವನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

೨.೮. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕುಗಳು ಹಾಗೂ ಗ್ರಾಮಪಂಚಾಯಿತಿಗಳ ವಿವರ

ಕ್ರಸಂ	ತಾಲೂಕು	ಗ್ರಾಮಪಂಚಾಯತಿಗಳು
೦೧	ಕೂಡ್ಲಿಗಿ	ಕಂದಗಲ್ಲು ಜುಮ್ಮೋಬನಹಳ್ಳಿ ಜರ್ಮಲಿ ಪೂಜಾರಹಳ್ಳಿ ಮೊರಬ
೦೨	ಹೊಸಪೇಟೆ	ಚಿಲಕನಹಟ್ಟಿ ಡಣಾಯಕನಕೆರೆ ನಾಗಲಾಪುರ ಗಾದಿಗನೂರು ಮುದ್ದಾಪುರ
೦೩	ಸಂಡೂರು	ತಾರಾನಗರ ದರೋಜಿ ಮೆಟ್ರಿಕಿ ಯಶವಂತನಗರ ವಿಠ್ಠಲಾಪುರ
೦೪	ಬಳ್ಳಾರಿ	ಎತ್ತಿನಬೂದಿಹಾಳ್ ಏಳುಬೆಂಚಿ ಓರ್ವಾಯಿ ಬೆಳಗಲ್ಲು ಶಂಕರಬಂಡ
೦೫	ಸಿರಗುಪ್ಪ	ಉತ್ತನೂರು ಮುದ್ದಟನೂರು ಶಾನವಾಸಪುರ ಹಚ್ಚೊಳ್ಳಿ ಎಂ.ಸೂಗೂರು
೦೬	ಹಡಗಲಿ	ದಾಸನಹಳ್ಳಿ ನಂದಿಹಳ್ಳಿ ನವಲಿ ಮಹಾಜನದಹಳ್ಳಿ ಹಿರೇಹಡಗಲಿ
೦೭	ಹ.ಬೊ.ಹಳ್ಳಿ	ಅಲಬೂರು ಬನ್ನಿಗೋಳ ದಸಮಾಪುರ ಕೋಗಳಿ ಸೊನ್ನ

೨.೮.೧ ಕೂಡ್ಲಿಗಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟ ತಾಲೂಕು ಕೂಡ್ಲಿಗಿಯಾಗಿದೆ. ಜಿಲ್ಲಾ ಕೇಂದ್ರದಿಂದ ಸುಮಾರು ೧೦೦ ಕಿ.ಮೀ ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯಿಂದ ಸುತ್ತುವರೆದಿರುವ ಈ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಶೇಕಡ ೨೭.೧ ರಷ್ಟಿದ್ದಾರೆ. ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ಈ ತಾಲೂಕು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆ. ಬಳ್ಳಾರಿ ತಾಲೂಕಿನ ನಂತರ ಅತೀ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿರುವ ತಾಲೂಕು ಇದಾಗಿದೆ. ಇದರ ಒಟ್ಟು ವಿಸ್ತೀರ್ಣವು ೧.೬೧೮.೮೭ ಚ.ಕಿ. ಮೀಟರ್‌ಗಳಷ್ಟಿದೆ ಹಾಗೇ ಜಿಲ್ಲೆಯಲ್ಲಿಯೇ ಅತೀಹೆಚ್ಚು ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ಒಟ್ಟು ೯೧ ಗ್ರಾಮಗಳಿವೆ. ತಾಲೂಕಿನಲ್ಲಿ ಕೂಡ್ಲಿಗಿಯ ನಂತರ ಕೊಟ್ಟೂರು ಪಟ್ಟಣ ಪ್ರದೇಶವಾಗಿದೆ. ಅವೆರಡರ ಹೊರತಾಗಿ ಇನ್ನುಳಿದವು ಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ.

ಒಟ್ಟು ೪೭,೮೧೧ ಕುಟುಂಬಗಳನ್ನು ಈ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳ ಹೊರತಾಗಿ ಇಲ್ಲಿಯ ಜನರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯವಿಲ್ಲ. ಇಂದಿಗೂ ಮಳೆಯಾಶ್ರಿತ ಒಣಬೇಸಾಯ ಕ್ರಮವನ್ನೇ ರೈತರು ಅನುಸರಿಸುತ್ತಿರುವುದನ್ನು ತಾಲೂಕಿನಾದ್ಯಂತ ಕಾಣಬಹುದು. ಈ ತಾಲೂಕಿನ ಜನಸಾಂದ್ರತೆಯು ೧೬.೮ರಷ್ಟಿದೆ. ಈ ತಾಲೂಕು ಒಟ್ಟು ೪೭.೮೧೧ ಕುಟುಂಬಗಳನ್ನು ಹೊಂದಿರುವುದನ್ನು ಕಾಣಬಹುದು.

೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಒಟ್ಟು ಜನಸಂಖ್ಯೆ ೨,೭೨,೧೮೩ ಇದ್ದು ಇದರಲ್ಲಿ ಪುರುಷರು ೧,೩೯,೨೦೨ ಹಾಗೂ ಮಹಿಳೆಯರು ೧,೩೨,೯೮೧ ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೨,೨೧೨ ಇದ್ದು ಪುರುಷರು ೨೬,೫೪೦ ಹಾಗೂ ಮಹಿಳೆಯರು ೨೫,೬೭೨ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೭೩,೬೫೦ ಇದ್ದು ಇದರಲ್ಲಿ ಪುರುಷರು ೩೭,೨೯೮ ಹಾಗೂ ಮಹಿಳೆಯರು ೩೬,೩೫೨ ರಷ್ಟು ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಡುಂಗ್ರಿಗರಾಸಿಯ, ಹಕ್ಕಿಪಿಕ್ಕಿ, ಮೇಧ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯಗಳು ಕಂಡು ಬರುತ್ತವೆಯಾದರೂ ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ವಾಲ್ಮೀಕಿ ಸಮುದಾಯದವರೇ ಶೇಕಡ ೯೯ ರಷ್ಟು ಕಂಡು ಬರುತ್ತಾರೆ.

ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೨ ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡ ೨೭.೧ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾದರೂ ಅದರ ನಿರ್ಣಾಯಕ ಶಕ್ತಿಯಿರುವುದು ಪರಿಶಿಷ್ಟ

ಪಂಗಡದಲ್ಲಿದೆ ಎಂಬ ನಂಬುಗೆಯನ್ನು ಈ ತಾಲೂಕು ಉಳಿಸಿಕೊಂಡಿದೆ. ಪ್ರಸ್ತುತ ಕೂಡ್ಲಿಗಿಯು ವಿಧಾನ ಸಭಾ ಸದಸ್ಯರ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿದೆ. ಜಿಲ್ಲೆಯ ಸಾಕ್ಷರರಿಗೆ ಹೋಲಿಸಿದರೆ ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೦ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೬೦ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇಕಡ ೪೦ರಷ್ಟು ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣದಲ್ಲಿ ಹೊಸಪೇಟೆ (ಶೇ೬೦.೯)ಯ ನಂತರದ ಸ್ಥಾನ ಕೂಡ್ಲಿಗಿಗೇ ಸಲ್ಲುತ್ತದೆ.

ಈ ತಾಲೂಕಿನಲ್ಲಿರುವ ಐದು ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವುದರಿಂದ ಆ ನಾಲ್ಕು ಗ್ರಾಮ ಪಂಚಾಯಿತಿಗಳ ವಿವರಗಳು ಈ ಕೆಳಗಿನಂತಿವೆ.

೨.೮.೧.೧ ಕಂದಗಲ್ಲು ಗ್ರಾಮಪಂಚಾಯತಿ: ಕಂದಗಲ್ಲು ಗ್ರಾಮಪಂಚಾಯತಿಯು ಕೂಡ್ಲಿಗಿ ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಪ್ರಾಗೈತಿಹಾಸಿಕ ನೆಲೆ ಇದಾಗಿದ್ದು ಕಂದಾದ ಕಲ್ಲು ಇರುವುದರಿಂದಾಗಿ ಕಂದುಗಲ್ಲು ಎಂದು ಕರೆದಿರುವರು. ಬಯಲು ನಾಡಿನ ಈ ಪಂಚಾಯತಿಯು ಭೌಗೋಳಿಕವಾಗಿ ೫,೩೭೩.೯೦ ಹೆಕ್ಟೇರ್ ವಿಸ್ತಾರವಾಗಿದೆ.

ಈ ಪಂಚಾಯತಿಯ ಪರಿಸರವು ಕೆಂಪು ಹಾಗೂ ಮರಳು ಮಿಶ್ರಿತ ಕಪ್ಪು ಕೂಡಿದ ಮೇಲ್ಮೈ ಮಣ್ಣಿನಿಂದ ಕೂಡಿದೆ. ಬೇವು, ಹೊಂಗೆ, ಹುಣಸೆ, ನಿರಲೆ, ಮಾವು, ಹಾಲ ಬಸಲಿ ಹಳ್ಳಿ ಮರಗಳಿವೆ.

ಕಾಡು ಹಂದಿ, ತೋಳ, ಮೊಲ, ಜಿಂಕೆ, ಉಡ, ಕಾಡುಬೆಕ್ಕು, ನರಿ ಇತ್ಯಾದಿ ಕಾಡು ಪ್ರಾಣಿಗಳಿವೆ. ಈ ಪಂಚಾಯತಿಯಲ್ಲಿ ಕಂದಗಲ್ಲು, ಗಜಾಪುರ, ತಿಮ್ಮಲಾಪುರ ಎನ್ನುವ ಕಂದಾಯ ಗ್ರಾಮಗಳು ಹಾಗೂ ಅಕ್ಕಾಪುರ, ಬತ್ತನಹಳ್ಳಿ, ತಿಮ್ಮಲಾಪುರ ತಾಂಡ ಎನ್ನುವ ನೆಲಸಿಗ ಗ್ರಾಮಗಳೂ ಇವೆ.

ಕಂದಗಲ್ಲು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಚಿಕ್ಕ ಕುಂಟೆಯನ್ನು ಹೊಂದಿರುವ ಈ ಗ್ರಾಮವು ಮಳೆಯಾಶ್ರಿತ ಕೃಷಿಯನ್ನು ಅವಲಂಭಿಸಿದೆ.

೨೦೧೧ರ ಜನಗಣತಿ ಪ್ರಕಾರ ೪೨೯ ಕುಟುಂಬಗಳನ್ನು ಹೊಂದಿದೆ. ಒಟ್ಟು ಜನಸಂಖ್ಯೆಯು ೨೪೬೫ ಇದೆ. ಇದರಲ್ಲಿ ೧೨೫೫ ಪುರುಷರು ಹಾಗೂ ೧೨೧೦ ಮಹಿಳೆಯರು ಇರುವರು. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧೨೦೬ ಇದೆ. ಪರಿಶಿಷ್ಟ ಪಂಗಡದ ಜನಸಂಖ್ಯೆಯು ಒಟ್ಟು ೯೪ ಇದೆ. ಗ್ರಾಮದಲ್ಲಿರುವ ಒಟ್ಟು ಸಾಕ್ಷರರು ೧೬೧೪ ಜನರಿರುವರು. ಇದರಲ್ಲಿ ೯೪೭ ಪುರುಷರೂ, ೬೬೭ ಮಹಿಳಾ ಸಾಕ್ಷರರಿರುವರು. ಮಾದಿಗ, ನಾಯಕ, ಬೆಸ್ತ, ಕುರುಬ, ವೀರಶೈವ ಲಿಂಗಾಯತ ಇತ್ಯಾದಿ ಸಮುದಾಯಗಳಿವೆ.

ಕೇವಲ ರಸ್ತೆ ಮಾರ್ಗವನ್ನು ಮಾತ್ರ ಹೊಂದಿರುವ ಈ ಗ್ರಾಮದಲ್ಲಿ ಸರ್ಕಾರಿ ಬಸ್ಸುಗಳು ಹಾಗೂ ಖಾಸಗಿ ವಾಹನಗಳು ಮಾತ್ರ ಓಡಾಡುತ್ತವೆ. ೪ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗ್ರಂಥಾಲಯ, ಆರೋಗ್ಯ ಉಪಕೇಂದ್ರಗಳನ್ನು ಹೊಂದಿದೆ. ಎರಡು ಸಾರ್ವಜನಿಕ ಸ್ಮಶಾನಗಳಿವೆ.

ಈಶ್ವರ, ಆಂಜನೇಯ, ಉಡಚಲಮ್ಮ, ಬಾವಿ ದುರುಗಮ್ಮ, ಗಲ್ಲಿ ದುರುಗಮ್ಮ, ಶ್ರೀ ಹಾಲಸ್ವಾಮಿ ಇತ್ಯಾದಿ ದೇವಸ್ಥಾನಗಳಿವೆ. ಈ ಗ್ರಾಮಪಂಚಾಯತಿಯು ಅಕ್ಕಪುರ, ಬತ್ತನಹಳ್ಳಿ, ಗಜಾಪುರ, ತಿಮ್ಮಲಾಪುರ, ತಿಮ್ಮಲಾಪುರ ತಾಂಡಾಗಳನ್ನು ಹೊಂದಿದೆ.

೨.೮.೧.೨. ಜುಮ್ಮೋಬನಹಳ್ಳಿ: ಜುಮ್ಮೋಬನಹಳ್ಳಿ ಗ್ರಾಮಪಂಚಾಯತಿಯು ಕೂಡ್ಲಿಗಿ ತಾಲೂಕು ಕೇಂದ್ರದಿಂದ ೩೭ ಕಿಲೋಮೀಟರ್ ದೂರದಲ್ಲಿದೆ. ಪಂಚಾಯತ್ ವ್ಯಾಪ್ತಿಯಲ್ಲಿ ಹಳ್ಳ, ಕೆರೆ ಹಾಗೂ ಚಿಕ್ಕ ಕಣಶಿಲೆಯ ಗುಡ್ಡಗಳಿವೆ. ಪ್ರಾಗೈತಿಹಾಸಿಕ ಕಾಲದ ಕುರುಹುಗಳು ಈ ಪಂಚಾಯತಿ ವ್ಯಾಪ್ತಿಯಲ್ಲಿವೆ ಎಂದು ಹೇಳಲಾಗುತ್ತದೆ. ಮಳೆಯಾಶ್ರಿತ ಕೃಷಿಯನ್ನು ಇಲ್ಲಿಯ ಜನ ಆಶ್ರಯಿಸಿದ್ದಾರೆ. ಈ ಪಂಚಾಯತಿಗೆ ಜುಮ್ಮೋಬನಹಳ್ಳಿ, ಕುಮತಿ, ಮ್ಯಾಸರಹಟ್ಟಿ, ತಮ್ಮಯ್ಯನಗುಡ್ಡ, ಲೋಕಿಕೆರೆ ಗ್ರಾಮಗಳು ಸೇರಿವೆ.

ನಾಯಕ ಸಮುದಾಯಕ್ಕೆ ಸೇರಿದ ಜಂಬುನಾಯಕ ಎನ್ನುವವರು ಆಳ್ವಿಕೆಮಾಡಿದ್ದರು ಎಂದು ನಂತರದಲ್ಲಿ ಅದನ್ನು ಜುಮ್ಮೋಬನಹಳ್ಳಿ ಎಂದು ಹೆಸರಿಸಲಾಯಿತು ಎಂಬ ಪ್ರತೀತಿ ಇದೆ. ಮಲಿಯಮ್ಮನ ಹಳ್ಳ ಇದ್ದು, ಈ ಹಳ್ಳವು ಗ್ರಾಮದ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ.

ಭೌಗೋಳಿಕವಾಗಿ ೨,೭೩೧.೧೫ ಹೆಕ್ಟೇರು ವಿಸ್ತೀರ್ಣವನ್ನು ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ಗ್ರಾಮದಲ್ಲಿ ಒಟ್ಟು ೫೫೯ ಕುಟುಂಬಗಳಿದ್ದು, ಒಟ್ಟು ಜನಸಂಖ್ಯೆ ೩೧೬೦ ಇದೆ. ಅದರಲ್ಲಿ ಪುರುಷರ ಸಂಖ್ಯೆ ೧೬೦೫, ಮಹಿಳೆಯರ ಸಂಖ್ಯೆ ೧೫೫೫. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೩೩೧ ಇದೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨೪೮೨. ಇದರಲ್ಲಿ ಗಂಡು ೧೨೪೭, ಹೆಣ್ಣು ೧೨೩೫. ಸಾಕ್ಷರರ ಪ್ರಮಾಣ ಒಟ್ಟು ೧೮೩೪ ಇದೆ. ಅದರಲ್ಲಿ ಪುರುಷರ ಸಂಖ್ಯೆ ೧೦೮೮ ಇದ್ದು, ಮಹಿಳೆಯರು ೭೪೬ ಜನ ಇದ್ದಾರೆ.

ಮಾದಿಗ, ನಾಯಕ, ಗೊಲ್ಲ, ಗಾಣಿಗ, ಬಡಿಗೇರ, ಮುಸ್ಲೀಂ, ಲಿಂಗಾಯತ ಇತ್ಯಾದಿ ಸಮುದಾಯಗಳಿವೆ. ೪ ಗಳು, ೪ ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಗ್ರಂಥಾಲಯ, ಸಮುದಾಯ ಭವನ, ಸ್ತ್ರೀ ಶಕ್ತಿ ಸಂಘಗಳಿವೆ. ಎರಡು ಸಾರ್ವಜನಿಕ ಸ್ಮಶಾನಗಳಿವೆ.

ಗ್ರಾಮದಲ್ಲಿ ಪತ್ರಿಸ್ವಾಮಿ, ಮಲಿಯಮ್ಮ, ಬಸವಣ್ಣ, ಪೆದ್ದಮ್ಮ, ಓಬಳದೇವರು ಮುಂತಾದ ದೇವಸ್ಥಾನಗಳು ಇವೆ. ೧ ಮಸೀದಿಯು ಇದೆ.

೨.೮.೧.೩ **ಜರ್ಮಲಿ:** ಜರ್ಮಲಿ ಗ್ರಾಮ ಪಂಚಾಯತ್ ಕೇಂದ್ರವು ದೂರವಿದೆ. ವಿಜಯನಗರ ಪಾಳೇಗಾರರ ಆಡಳಿತಕ್ಕೆ ಒಳಪಟ್ಟ ನಾಡಿನ ಕೇಂದ್ರ ಸ್ಥಳ ಇದಾಗಿರುವುದಾಗಿ ಚರಿತ್ರೆಯ ಮೂಲಕ ತಿಳಿದುಬರುತ್ತದೆ. ಪಾಳೇಗಾರರ ಕೋಟೆಯಿರುವ ಕಣಶಿಲೆಯ ಗುಡ್ಡ ಈ ಪಂಚಾಯತಿ ವ್ಯಾಪ್ತಿಯಲ್ಲಿದೆ. ಹಳ್ಳ, ಕೆರೆಗಳಿಂದ ಕೂಡಿದ ಇಲ್ಲಿಯ ಪರಿಸರವು ಕುರುಚಲು ಕಾಡಿನಿಂದ ಕೂಡಿದೆ. ಮಳೆಯಾಶ್ರಿತ ಕೃಷಿ ಪದ್ಧತಿ ಇದೆ. ಜೋಳ, ಮೆಕ್ಕೆಜೋಳ, ನೆಲಗಡಲೆ (ಶೇಂಗಾ), ಸಜ್ಜೆ, ರಾಗಿ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಪಂಚಾಯತಿಯು ಜರ್ಮಲಿ, ಅಗಸರ ದಿಬ್ಬದಹಳ್ಳಿ, ಕಾಮಯ್ಯನಕಟ್ಟೆ, ಗೆದ್ದಲಗಟ್ಟೆ, ಹರವದಿ ಗ್ರಾಮಗಳಿಂದ ಕೂಡಿದೆ. ೧೨ ಸದಸ್ಯರು ಹಾಗೂ ೧೩ ಜನ ಸಿಬ್ಬಂದಿಯನ್ನೊಳಗೊಂಡಿದೆ. ಜರ್ಮಲಿಯು ಒಂದು ಪಾಳೆಪಟ್ಟಿನ ಕೇಂದ್ರವಾಗಿತ್ತು ನಾಯಕ ವಂಶಸ್ಥರ ಆಳ್ವಿಕೆಗೆ ಒಳಪಟ್ಟಿದ್ದ ಈ ಸಂಸ್ಥಾನವು. ಇಂದು ನಾಲ್ಕು ಹಳ್ಳಿಗಳನ್ನೊಳಗೊಂಡ ಚಿಕ್ಕ ಗ್ರಾಮಪಂಚಾಯತಿ ಕೇಂದ್ರವಾಗಿದೆ. ಈ ಪಂಚಾಯತಿಯು ತಾಲೂಕು ಕೇಂದ್ರ ಕೂಡ್ಲಿಗಿಯಿಂದ ೧೫ ಕಿಲೋಮೀಟರ್ ದೂರದಲ್ಲಿದೆ.

ಜರ್ಮಲಿ ಗ್ರಾಮದ ಹತ್ತಿರದಲ್ಲಿಯೇ ಗುಡ್ಡವಿದ್ದು ಗುಡ್ಡದ ಮೇಲೆ ಹಳೆಯ ಕೋಟೆ ಅವಶೇಷಗಳು ಇವೆ. ರಾಜರ ಉಪ್ಪರಿಗೆ ಮತ್ತು ಮೇಲು ಉಪ್ಪರಿಗೆ, ರಮೇಶನ ದೋಣಿ, ಆನೆ ಹೊಂಡ, ಕೋಟೆಯ ಹೆಬ್ಬಾಗಿಲು ಇಂದಿಗೂ ಶಿಥಿಲಗೊಂಡ ಸ್ಥಿತಿಯಲ್ಲಿ ನೋಡಲು ಸಿಗುತ್ತವೆ.

ಭೌಗೋಳಿಕವಾಗಿ ೨೫೯೯.೨೭ ಹೆಕ್ಟೇರು ಇದೆ. ೨೦೧೧ರ ಜನಗಣತಿಯ ಪ್ರಕಾರ ಒಟ್ಟು ೬೨೭ ಕುಟುಂಬಗಳಿವೆ. ಒಟ್ಟು ಜನಸಂಖ್ಯೆಯು ೩೧೬೧ ಇದೆ. ಅದರಲ್ಲಿ ೧೫೯೯ ಪುರುಷರು ಹಾಗೂ ೧೫೬೨ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೪೩ ಇದೆ. ಇದರಲ್ಲಿ ಗಂಡು ೨೬೮, ಹೆಣ್ಣು ೨೭೫. ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೧೬೧೬ ಇದೆ. ಇದರಲ್ಲಿ ೮೧೮ ಪುರುಷರು ಹಾಗೂ ೭೯೮ ಮಹಿಳೆಯರಿರುವರು. ಒಟ್ಟು ಸಾಕ್ಷರರು ೧೪೭೦ ಜನರಿರುವರು. ಇದರಲ್ಲಿ ೯೦೩ ಪುರುಷರೂ ೫೬೭ ಮಹಿಳೆಯರಿರುವರು.

ಕೊರಚ, ಮಾದಿಗ, ನಾಯಕ, ಗಾಣಿಗ, ಕಮ್ಮಾರ, ಲಿಂಗಾಯಿತ, ಬ್ರಾಹ್ಮಣ ಇತ್ಯಾದಿ ಸಮುದಾಯಗಳಿವೆ. ಕೃಷಿ ಪತ್ತಿನ ಸಹಕಾರಿ ಸಂಘ, ೬ ಸ್ತ್ರೀಶಕ್ತಿ ಸಂಘಗಳಿದ್ದು, ೨ ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಗ್ರಂಥಾಲಯ ೨ ಸಮುದಾಯ ಭವನಗಳಿವೆ. ೨ ಸಾರ್ವಜನಿಕ ಸ್ಮಶಾನಗಳಿವೆ.

ಗ್ರಾಮದಲ್ಲಿ ಮಾರೆಮ್ಮ, ಗ್ರಾಮದಲ್ಲಿ ಮಾರೆಮ್ಮ, ಬಸವೇಶ್ವರ, ಆಂಜಿನೇಯ, ಓಬಳಸ್ವಾಮಿ, ಈಶ್ವರ, ಆದಿಬಸವೇಶ್ವರ, ಉಚ್ಚಂಗಮ್ಮದೇವಿ, ಸಿದ್ದಯ್ಯ ದೇವರು ದೇವಸ್ಥಾನಗಳಿವೆ. ಗ್ರಾಮದಲ್ಲಿ ಒಂದು ಮುರುಗೇಶ್ವರ ಮಠ ಇದೆ.

೨.೮.೧.೪ ಪೂಜಾರಹಳ್ಳಿ: ಪೂಜಾರಹಳ್ಳಿಯು ಗ್ರಾಮಪಂಚಾಯತಿಯಾಗಿದೆ. ತಾಲೂಕು ಕೇಂದ್ರದಿಂದ ೪೦ ಕೀ.ಮಿ. ದೂರದಲ್ಲಿದೆ. ಪಂಚಾಯತಿ ವ್ಯಾಪ್ತಿಯಲ್ಲಿ ಪೂಜಾರಹಳ್ಳಿ, ಪೂಜಾರಹಳ್ಳಿ ತಾಂಡ, ಕಲ್ಲಳ್ಳಿ, ಕನ್ನಬೋರಯ್ಯನಹಟ್ಟಿ, ಕಾಡಲಿಹಟ್ಟಿ, ತಿಪ್ಪೇಹಳ್ಳಿ, ಮಾಲಹಳ್ಳಿ ಗ್ರಾಮಗಳು ಸೇರಿವೆ.

ಭೌಗೋಳಿಕವಾಗಿ ೧,೬೧೦.೮೭ ಹೆಕ್ಟೇರು ಇದೆ. ೨೦೧೧ರ ಜನಗಣತಿಯ ಪ್ರಕಾರ ಒಟ್ಟು ೬೨೩ ಕುಟುಂಬಗಳಿದ್ದು, ಒಟ್ಟು ಜನಸಂಖ್ಯೆ ೩೩೧೯ ಇದೆ. ಅದರಲ್ಲಿ ಪುರುಷರ ಸಂಖ್ಯೆ ೧೬೬೯, ಮಹಿಳೆಯರ ಸಂಖ್ಯೆ ೧೬೫೦. ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೯೪೯ ಇದೆ. ಇದರಲ್ಲಿ ಗಂಡು ೪೯೨, ಹೆಣ್ಣು ೪೫೭. ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೧೫೬೦. ಇದರಲ್ಲಿ ಗಂಡು ೭೫೯, ಹೆಣ್ಣು ೮೦೧. ಸಾಕ್ಷರರ ಪ್ರಮಾಣ ಒಟ್ಟು ೧೯೯೧. ಅದರಲ್ಲಿ ಪುರುಷರ ಸಂಖ್ಯೆ ೧೧೬೧ ಇದ್ದು, ಮಹಿಳೆಯರು ೮೩೦ ಜನ ಇದ್ದಾರೆ.

ಗ್ರಾಮದಲ್ಲಿ ನಾಯಕರು, ಮಾದಿಗರು, ಉಪ್ಪರು, ಕುರುಬರು, ಕಮ್ಮಾರರು ವಾಸವಿದ್ದು, ನಾಯಕ ದೊಡ್ಡ ಹಾಗೂ ಶೆಟ್ಟರು ಅತಿ ಚಿಕ್ಕ ಸಮುದಾಯವಾಗಿದೆ. ಮೂರು ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಇದೆ. ಸಾರ್ವಜನಿಕ ಸ್ಮಶಾನವಿದೆ.

ದುರುಗಮ್ಮ ಈಶ್ವರ, ಆಂಜನೇಯ, ಚೌಡಮ್ಮ, ಬಸವಣ್ಣ, ತಿಮ್ಮಪ್ಪ ಮಾರೆಮ್ಮ ದೇವಸ್ಥಾನಗಳು ಇವೆ. ಪ್ರತಿ ವರ್ಷ ಫೆಬ್ರವರಿಯಲ್ಲಿ ಗುಗ್ರಿ ಹಬ್ಬವನ್ನು ಮತ್ತು ಸೆಪ್ಟೆಂಬರ್‌ನಲ್ಲಿ ಮಾರೆಮ್ಮನಿಗೆ ಜಾತ್ರೆಯನ್ನು ಬಲಿಕೊಡುವ ಮೂಲಕ ಅಚರಿಸುತ್ತಾರೆ.

೨.೮.೧.೫ ಮೊರಬ: ಮೊರಬ ಗ್ರಾಮಪಮಚಾಯತಿಯಾಗಿದ್ದು ತಾಲೂಕು ಕೇಂದ್ರದಿಂದ ೭ ಕಿಲೋಮೀಟರ್ ದೂರದಲ್ಲಿದೆ. ಜಿಲ್ಲಾ ಕೇಂದ್ರದಿಂದ ೮೭ ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಗ್ರಾಮ ಪಂಚಾಯತಿಗಳಲ್ಲಿಯೇ ಹಿರಿಯ ಶ್ರೇಣಿಯ ಪಂಚಾಯಿತಿ ಇದಾಗಿದೆ. ಮಳೆಯಾಧಾರಿತ ಕೃಷಿಯನ್ನು ಇಲ್ಲಿಯ ಜನ ಅವಲಂಭಿಸಿದ್ದಾರೆ. ಜೋಳ, ನವಣೆ, ಸಜ್ಜೆ, ರಾಗಿ, ಸೂರ್ಯಕಾಂತಿ, ನೆಲಗಡಲೆ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಗ್ರಾಮಪಂಚಾಯತಿಯು ಮೊರಬ ಹಾಗೂ ಗೊಲ್ಲರಹಟ್ಟಿಗಳನ್ನು ಹೊಂದಿದೆ. ೨೪ ಜನ ಸದಸ್ಯರೂ ೧೪ ಸಿಬ್ಬಂದಿಯನ್ನೊಳಗೊಂಡಿದೆ.

ಒಟ್ಟು ಭೌಗೋಳಿಕ ವಿಸ್ತೀರ್ಣ ೧,೭೭೯.೯೧ ಹೆಕ್ಟರ್ ಇದೆ. ೨೦೧೧ರ ಜನಗಣತಿಯ ಪ್ರಕಾರ ಒಟ್ಟು ೯೨೦ ಕುಟುಂಬಗಳಿದ್ದು, ಒಟ್ಟು ಜನಸಂಖ್ಯೆ ೫೧೭೭ ಇದೆ. ಅದರಲ್ಲಿ ಪುರುಷರ ಸಂಖ್ಯೆ ೨೬೮೨, ಮಹಿಳೆಯರ ಸಂಖ್ಯೆ ೨೪೯೫. ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೨೭ ಇದೆ. ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೨೦೧೬. ಸಾಕ್ಷರರ ಪ್ರಮಾಣ ಒಟ್ಟು ೨೭೮೭ ಅದರಲ್ಲಿ ಪುರುಷರ ಸಂಖ್ಯೆ ೧೭೦೪ ಇದ್ದು, ಮಹಿಳೆಯರು ೧೦೮೩ ಜನ ಇದ್ದಾರೆ.

ಸಾಮಾಜಿಕವಾಗಿ ವಾಲ್ಮೀಕಿ ದೊಡ್ಡ ಸಮುದಾಯವಾಗಿದೆ. ಉಪ್ಪಾರರು, ಬಾರಿಕರು, ಮಾದಿಗರು, ಮುಸ್ಲಿಂ ಇತ್ಯಾದಿ ಸಮುದಾಯಗಳಿವೆ.

೬ ಅಂಗನವಾಡಿ ಕೇಂದ್ರಗಳಿವೆ. ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಂಥಾಲಯ, ಸಾರ್ವಜನಿಕ ಆರೋಗ್ಯ ಉಪ ಕೇಂದ್ರ, ಸಮುದಾಯ ಭವನಗಳಿವೆ. ಎರಡು ಸ್ಮಶಾನಗಳಿವೆ.

ವೀರಭದ್ರೇಶ್ವರ, ಈಶ್ವರ, ಆಂಜನೇಯ, ಶ್ರೀ ಉಡಚಲಮ್ಮ, ದುರುಗಮ್ಮ, ಗಲ್ಲಿ ದುರುಗಮ್ಮ, ಬನ್ನಿ ಮಹಾಕಾಳಿ, ಪತ್ರಿ ಬಸವೇಶ್ವರ ಇತ್ಯಾದಿ ದೇವಾಲಯಗಳಿವೆ. ಈ ಗ್ರಾಮಕ್ಕೆ ಅಡವಿಸೂರವ್ವನಹಳ್ಳಿ, ಅಮ್ಮನಕೆರೆ, ಎಂ ಗೊಲ್ಲರಹಟ್ಟಿ, ಗುಂಡಿನಹೊಳೆ, ಬೀರಲಗುಡ್ಡ, ಮ್ಯಾಸರಹಟ್ಟಿ, ಬೋರಗಟ್ಟಿ, ಮೊರಬನಹಳ್ಳಿ, ವಿರುಪಾಪುರ, ಕಕ್ಕುಪ್ಪಿ ಗ್ರಾಮಗಳಿವೆ.

೨.೮.೨. ಹೊಸಪೇಟೆ ತಾಲೂಕು

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ತುಂಗಾಭದ್ರಾ ನದಿಗೆ ಹೊಸಪೇಟೆ ನಗರದ ಬಳಿಯೇ ಆಣೆಕಟ್ಟು ಕಟ್ಟಲಾಗಿದೆ. ಹೀಗಾಗಿ ಈ ತಾಲೂಕಿನಲ್ಲಿ ಹೊಸಪೇಟೆ ನಗರದಿಂದ ಕೆಳಭಾಗಕ್ಕೆ ಕೃಷಿಗೆ ನೀರಾವರಿ ಸೌಲಭ್ಯ ಸುಲಭವಾಗಿ ಸಿಗುತ್ತದೆ. ಆದರೆ ಹೊಸಪೇಟೆಯ ಮೇಲ್ಭಾಗಕ್ಕೆ ನೀರಾವರಿ ಸೌಲಭ್ಯ ಇರುವುದಿಲ್ಲ. ಹೀಗಾಗಿ ಹೊಸಪೇಟೆಯಿಂದ ಮೇಲ್ಭಾಗದ ಜನರು ಕೇವಲ ಮಳೆಯಾಧಾರಿತ ಒಣ ಬೇಸಾಯವನ್ನೇ ಅವಲಂಬಿಸಬೇಕಾಗಿದೆ. ಈ ತಾಲೂಕಿನಲ್ಲಿ ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉದ್ಯಮವನ್ನು ಹಾಗೂ ಗಣಿಗಾರಿಕೆಯನ್ನು ಕಾಣಬಹುದು. ೨೦೦೧ರ ಈಚೆಗೆ ಹೊಸಪೇಟೆಯ ಮೇಲ್ಭಾಗಕ್ಕೆ ಸ್ಪಾಂಜ್ ಐರನ್ ಉತ್ಪಾದಿಸುವ ಕಾರ್ಖಾನೆಗಳು ಹೆಚ್ಚಾಗಿ ಹುಟ್ಟಿಕೊಂಡಿವೆ. ಕೇವಲ ಇಪ್ಪತ್ತೈದು ಕಿಲೋ ಮೀಟರ್ ವ್ಯಾಪ್ತಿಯೊಳಗೆ ಸುಮಾರು ಏಳೆಂಟು ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕಾಣಬಹುದು. ಇದಲ್ಲದೆ ಖ್ಯಾಧ್ಯ ಎಣ್ಣೆ ಉತ್ಪಾದನಾ ಘಟಕ, ಬಿಸ್ಕಿಟ್ ಕಾರ್ಖಾನೆ ಇತ್ಯಾದಿ ಇತರೆ ಕಾರ್ಖಾನೆಗಳನ್ನು ಹೊಸಪೇಟೆ ನಗರದ ಸುತ್ತ ಮುತ್ತಲೂ ಕಾಣಬಹುದು.

ಹೊಸಪೇಟೆ ತಾಲೂಕು ೯೦೪.೧೭ ಚ.ಕಿ.ಮೀ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಇನ್ನುಳಿದ ಆರು ತಾಲೂಕುಗಳಿಗಿಂತ ಕಡಿಮೆ ವಿಸ್ತೀರ್ಣ(ಶೇ. ೧೦.೭೦)ವನ್ನು ಹೊಂದಿರುವ ಈ ತಾಲೂಕು ಜಿಲ್ಲೆಯ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಜನ ಸಾಂದ್ರತೆ ಹೊಂದಿದೆ. ಈ ತಾಲೂಕಿನ ಜನ ಸಾಂದ್ರತೆಯು ४೧೫ ರಷ್ಟಿದೆ ಒಟ್ಟು ೭४ ಗ್ರಾಮಗಳನ್ನು ಒಳಗೊಂಡಿರುವ ಈ ತಾಲೂಕು ಕಂಪ್ಲಿ, ಕಮಲಾಪುರ ಎಂಬ ಎರಡು ಹೋಬಳಿ ಪ್ರದೇಶಗಳನ್ನು ಒಳಗೊಂಡಿದೆ.

ಈ ತಾಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ೭೦.೭೮೯ ಕುಟುಂಬಗಳು ನೆಲೆನಿಂತಿದ್ದು ಕಂಡುಬರುತ್ತದೆ. ಹಾಗೇ ಒಟ್ಟು ೨೦೦೧ ರ ಪ್ರಕಾರ ಜನಸಂಖ್ಯೆಯು ೩.೭४.೯४೪ ರಷ್ಟಿದೆ. ಇದರಲ್ಲಿ ಪುರುಷರು ೧.೮೯.೬೭४ರಷ್ಟಿದ್ದರೆ, ಮಹಿಳೆಯರು ೧.೮೫.೨೭೫ರಷ್ಟಿದ್ದಾರೆ.

ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೭೫,೭೮೦ರಷ್ಟಿದೆ. ಇದರಲ್ಲಿ ಪರಿಶಿಷ್ಠ ಜಾತಿಯ ಪುರುಷರು ೩೮,೦೪೩ರಷ್ಟಿದ್ದಾರೆ ಹಾಗೂ ಮಹಿಳೆಯರು ೩೭,೭೩೭ರಷ್ಟಿದ್ದಾರೆ

ಹೊಸಪೇಟೆ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೬೦,೪೯೧ರಷ್ಟಿದೆ. ಇದರಲ್ಲಿ ಪರುಷರು ೨೯,೯೫೨ ಹಾಗೂ ಮಹಿಳೆಯರು ೩೦,೫೩೮ರಷ್ಟಿದ್ದಾರೆ.

ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೧.೬ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಪ್ರಮಾಣ ಕೇವಲ ಶೇಕಡ ೫೦ ರಷ್ಟು ಮಾತ್ರವಿದೆ. ಅದರಲ್ಲೂ ಮೇಲ್ವರ್ಗದ ಮಹಿಳೆಯರೇ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗಗಳು ಬಹುತೇಕ ಶಿಕ್ಷಣದಿಂದ ವಂಚಿತಗೊಂಡಿವೆ. ಅದರಲ್ಲೂ ಮಹಿಳೆಯರು ಶಿಕ್ಷಣದಿಂದ ಹೆಚ್ಚು ವಂಚಿತರಾಗಿರುವುದು (ಶೇ.೫೦) ಕಂಡುಬರುತ್ತದೆ.

ಈ ತಾಲೂಕಿನಲ್ಲಿನ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಐದು ಗ್ರಾಮ ಪಂಚಾಯಿತಿಗಳಲ್ಲಿ ಹೊಸಪೇಟೆ ನಗರದ ಮೇಲ್ಭಾಗದಲ್ಲಿ ಒಣಬೇಸಾಯವನ್ನೇ ಹೆಚ್ಚು ಅವಲಂಬಿಸಿರುವ ಡಣಾಪುರ ಹಾಗೂ ನಾಗಲಾಪುರ ಗ್ರಾಮ ಪಂಚಾಯಿತಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಅದೇ ರೀತಿಯಾಗಿ ಈ ತಾಲೂಕಿನ ನೀರಾವರಿ ಪ್ರದೇಶವನ್ನು ಒಳಗೊಂಡಿರುವ ನಂ.೧೦ ಮುದ್ದಾಪುರ ಹಾಗೂ ರಾಮಸಾಗರ ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

೨.೮.೨.೧ ಚಿಲಕನಹಟ್ಟಿ: ಚಿಲಕನಹಟ್ಟಿ ಗ್ರಾಮವು ಪಂಚಾಯತಿ ಕೇಂದ್ರವಾಗಿದೆ. ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ೨೨ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಒಟ್ಟು ವಿಸ್ತೀರ್ಣ ೪೦೧.೪೮ ಹೆಕ್ಟೇರ್ ಇದೆ. ಗ್ರಾಮದಲ್ಲಿ ಜಂಬಯ್ಯನ ಕೆರೆ ಇದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೫೦೫. ಒಟ್ಟು ಜನಸಂಖ್ಯೆ ೨೮೪೪, ಪುರುಷರು ೧೪೪೩, ಮಹಿಳೆಯರು ೧೪೦೧. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೩೭೦ ಇದರಲ್ಲಿ ಪುರುಷರು ೧೮೭, ಮಹಿಳೆಯರು ೧೮೩. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೫೨೪ ಇದೆ. ಇದರಲ್ಲಿ ಪುರುಷರು ೭೮೧, ಮಹಿಳೆಯರು ೭೪೩. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೧೩೫೨ ಇದರಲ್ಲಿ ಪುರುಷರು ೭೯೪, ಮಹಿಳೆಯರು ೫೫೮ ಇರುವರು.

ವಾಲ್ಮೀಕಿ ಸಮುದಾಯವು ಈ ಗ್ರಾಮದ ದೊಡ್ಡಸಮುದಾಯವಾಗಿದ್ದು ಉಪ್ಪಾರ ಇತ್ಯಾದಿ ಸಮುದಾಯಗಳಿವೆ.

೫ ಅಂಗನವಾಡಿ, ಸರ್ಕಾರಿ ಪ್ರಾಥಮಿಕ ಶಾಲೆ, ಗ್ರಂಥಾಲಯ, ಸಮುದಾಯ ಭವನಗಳಿವೆ. ಸ್ಮಶಾನಗಳಿವೆ.

ಬನಶಂಕರಿ, ಆಂಜನೇಯ, ಹುಲಿಗೆಮ್ಮ, ಮಾರ್ಗದಪ್ಪ, ಊರಮ್ಮ, ಭವಾನಮ್ಮ, ಗಾಳೆಮ್ಮ, ನಿಜಲಿಂಗಮ್ಮ, ಬರ್ಮಪ್ಪ, ಗಣೇಶ, ಈಶ್ವರ, ಬನ್ನಿಮಾಂಕಾಳಮ್ಮ, ದುರ್ಗಮ್ಮ ದೇವಸ್ಥಾನಗಳಿವೆ. ವರ್ಷಕ್ಕೊಮ್ಮೆ ಯುಗಾದಿಯಲ್ಲಿ ಮಾರ್ಗದಪ್ಪನ ಜಾತ್ರೆಯನ್ನು ಮಾಡುವರು. ಈ ಪಂಚಾಯತಿಯ ವ್ಯಾಪ್ತಿಯಲ್ಲಿ ತಾಳೆ ಬಸಾಪುರ, ತಾಳೆಬಸಾಪುರ ತಾಂಡ, ತಿಮ್ಮಲಾಪುರ, ಪೋತಲಕಟ್ಟೆ, ಹಾರವ್ವನಹಳ್ಳಿ ಗ್ರಾಮಗಳಿವೆ.

೨.೮.೨.೨. ಡಣಾಯಕನ ಕೆರೆ: ಡಣಾಯಕನಕೆರೆಯು ಹೊಸಪೇಟೆ ತಾಲೂಕಿನಲ್ಲಿ ಬರುವ ಗ್ರಾಮಪಂಚಾಯತಿ ಗಳಲ್ಲೊಂದು. ಕರ್ನಾಟಕ ರಾಜ್ಯದಲ್ಲಿಯೇ ಅತೀ ದೊಡ್ಡ ಕೆರೆಗಳಲ್ಲಿ ಮೂರನೇ ಕೆರೆಯನ್ನು ಹೊಂದಿದ ಕೀರ್ತಿ ಈ ಗ್ರಾಮಕ್ಕೆ ಸಲ್ಲುತ್ತದೆ. ಈ ಗ್ರಾಮದ ಒಟ್ಟು ವಿಸ್ತೀರ್ಣ ಸುಮಾರು ೪೯೬.೫೯೫ ಹೆಕ್ಟರ್ ಇದೆ. ಮುದ್ದಣ ದಂಡನಾಯಕನ ಆಳ್ವಿಕೆಗೆ ಒಳಪಟ್ಟ ಪ್ರದೇಶ ಇದಾಗಿತ್ತು ಎಂದು ಹೇಳಲಾಗುತ್ತದೆ.

ಬಯಲುನಾಡಾದ ಈ ಗ್ರಾಮದಲ್ಲಿ ಬಿಳಿ ಕಲ್ಲು ಮತ್ತು ಕೆಂಪು ಬಣ್ಣದ ಮಣ್ಣು ಹೊಂದಿದೆ. ಬೆಟ್ಟ ಮತ್ತು ಗುಡ್ಡಗಳಿಲ್ಲದ ಈ ಗ್ರಾಮದಲ್ಲಿ ಕನ್ನೀರಮ್ಮನ ಬಂಡೆ ಎಂಬ ಒಂದು ಕಲ್ಲು ಬಂಡೆಯ ಹಾಸು ಇದೆ. ನಾಯಕ ಸಮುದಾಯವು ಈ ಗ್ರಾಮದ ದೊಡ್ಡ ಸಮುದಾಯ ವಾಗಿದ್ದು ಸುಮಾರು ಜಂಗಮ ಸಮುದಾಯದವರು ಅತ್ಯಂತ ಸಣ್ಣ ಸಮುದಾಯದವರಾಗಿದ್ದಾರೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೫೧೬. ಒಟ್ಟು ಜನಸಂಖ್ಯೆ ೨೭೭೪, ಪುರುಷರು ೧೪೨೧, ಮಹಿಳೆಯರು ೧೩೫೩. ಪರಿಶಿಷ್ಟ ಜಾತಿ ೮೭೪ ಇದರಲ್ಲಿ ಪುರುಷರು ೪೨೭, ಮಹಿಳೆಯರು ೪೪೭. ಪರಿಶಿಷ್ಟ ಪಂಗಡ ೬೩೩ ಇದರಲ್ಲಿ ಪುರುಷರು ೩೧೬, ಮಹಿಳೆಯರು ೩೧೭. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೧೧೮೬ ಇದರಲ್ಲಿ ಪುರುಷರು ೭೦೧, ಮಹಿಳೆಯರು ೪೮೫. ಗ್ರಾಮದಲ್ಲಿ ಒಟ್ಟು ಉದ್ಯೋಗಸ್ಥರು ೧೩೯೯ ಇದರಲ್ಲಿ ಪುರುಷರು ೭೯೭, ಮಹಿಳೆಯರು ೬೦೨ ಜನ ಇದ್ದಾರೆ.

ಈ ಗ್ರಾಮದಲ್ಲಿ ಸಾಮಾನ್ಯವಾಗಿ ವಾಲ್ಮೀಕಿ, ಅಗಸ, ಅಕ್ಕಸಾಲಿಗ, ಕಮ್ಮಾರ, ನೇಕಾರ, ಕಿಳ್ಳೇಕ್ಯಾತ, ವಡ್ಡ, ಮಾದಿಗ, ಮುಸ್ಲಿಂ, ಸಾಧು ಲಿಂಗಾಯಿತ ಮೊದಲಾದ ಜಾತಿಯವರಿದ್ದಾರೆ. ಕನ್ನಡ, ತೆಲುಗು, ಉರ್ದು, ಮರಾಠಿ ಮೊದಲಾದ ಭಾಷೆಗಳಿವೆ.

ಈ ಗ್ರಾಮದಲ್ಲಿ ಹೊಸಪೇಟೆಯಿಂದ ಬೆಂಗಳೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಇದೆ. ಅಂಚೆ ವ್ಯವಸ್ಥೆ ಇದೆ.

ಎರಡು ಅಂಗನವಾಡಿ ಕೇಂದ್ರಗಳು ಮತ್ತು ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗ್ರಂಥಾಲಯ, ಬಯಲು ರಂಗ ಮಂದಿರ, ಸಮುದಾಯ ಉಪ ಆರೋಗ್ಯ ಕೇಂದ್ರಗಳಿವೆ.

ಆಂಜನೇಯ, ದುರ್ಗಮ್ಮ, ಊರಮ್ಮ, ಕೆಂಚಮ್ಮ, ವೀರಭದ್ರ, ಪಾರ್ವತಿ ಪರಮೇಶ್ವರ, ಈಶ್ವರ, ಹುಲಿಗೆಮ್ಮ, ಬನ್ನಿ ಮಾಂಕಾಳಿ, ಕನ್ನೀರಮ್ಮ, ಬರ್ಮಪ್ಪ, ಕೆಂಚಮ್ಮ ಸೇರಿದಂತೆ ಇತ್ಯಾದಿ ದೇವಾಲಯಗಳಿವೆ. ಒಂದು ಮಸೀದಿ ಮತ್ತು ಒಂದು ದರ್ಗ ಇದ್ದು ಕಲ್ಲುಮಠ ಇದೆ.

ಪ್ರತಿ ಶ್ರಾವಣ ಮಾಸದಲ್ಲಿ ಕನ್ನೀರಮ್ಮ ಮತ್ತು ಕೆಂಚಮ್ಮನ ಜಾತ್ರೆಯನ್ನು ಹಾಗೂ ೯ ವರ್ಷಕ್ಕೊಮ್ಮೆ ಊರಮ್ಮನ ಜಾತ್ರೆಯನ್ನು ಮಾಡುವರು. ಡಣಾಯಕನಕೆರೆಯು ಗ್ರಾಮ ಪಂಚಾಯಿತಿಯಾಗಿದ್ದು ದೇವಲಾಪುರ, ಗೊಲ್ಲರಹಳ್ಳಿ, ನಂದಿಬಂಡ ಈ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತದೆ.

೨.೮.೨.೩. ನಾಗಲಾಪುರ: ನಾಗಲಾಪುರವು ಗ್ರಾಮಪಂಚಾಯತಿ ಕೇಂದ್ರವಾಗಿದೆ. ನಾಗಲಾಪುರ ಗ್ರಾಮ ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿ ೨೮ ಕಿ.ಮೀ ದೂರ ಚಲಿಸಿದರೆ ಸಿಗುವ ಕಂದಾಯ ಗ್ರಾಮವಾಗಿದೆ. ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮೯೩೬.೩೨ ಹೆಕ್ಟರ್ ಇದೆ. ವಿಜಯನಗರದ ಅರಸ ಸದಾಶಿವರಾಯರ ಹೆಂಡತಿಯಾದ ನಾಗಲಾಂಬಿಕೆಯ ತವರೂರಾದ್ದರಿಂದ ನಾಗಲಾಪುರ ಎಂಬ ಹೆಸರು ಬಂದಿದೆಯಂತೆ. ನಾಗಲಾಪುರ ಗ್ರಾಮಪಂಚಾಯತಿಯಲ್ಲಿ ನಾಗಲಾಪುರ ತಾಂಡ, ಗುಂಡಾ, ಗುಂಡಾ ತಾಂಡಾ, ಬ್ಯಾಲಕುಂದಿ, ಗರಗ, ಹೊಸಗರಗ ಗ್ರಾಮಗಳು ಸೇರಿವೆ. ಬೆಟ್ಟ ಮತ್ತು ಕಲ್ಲು ಬಂಡೆಗಳಿಲ್ಲದ ಈ ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ರಾಮಾಲಿ ಗುಡ್ಡ ಇದ್ದು ಸುಮಾರು ೭೦೮.೩ ಹೆಕ್ಟೇರ್ ಕಾದಿಟ್ಟ ಅರಣ್ಯವಿದ್ದು, ತೋಪುಗಳು ಕಂಡು ಬರುವುದಿಲ್ಲ. ಗ್ರಾಮದ ಪೂರ್ವ ದಿಕ್ಕಿನಲ್ಲಿ ಹಿರೇಹಳ್ಳ ಮತ್ತು ಪಶ್ಚಿಮ ದಿಕ್ಕಿನಲ್ಲಿ ಶಾಲೆಹಳ್ಳ ಎಂಬ ಎರಡು ಹಳ್ಳವಿದ್ದು ಅದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ.

ವೀರಶೈವ ಸಮುದಾಯವು ಈ ಗ್ರಾಮದ ದೊಡ್ಡಸಮುದಾಯವಾಗಿದ್ದು ಚೆಲುವಾದಿ ಸಮುದಾಯದವರು ಅತ್ಯಂತ ಸಣ್ಣ ಸಮುದಾಯದವರುದ್ದಾರೆ. ಈ ಗ್ರಾಮದ

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೯೪೫. ಒಟ್ಟು ಜನಸಂಖ್ಯೆ ೫೫೬೮ ಅದರಲ್ಲಿ ಪುರುಷರು ೨೮೬೯, ಮಹಿಳೆಯರು ೨೬೯೯. ಪರಿಶಿಷ್ಟ ಜಾತಿ ೨೨೮೧ ಇದರಲ್ಲಿ ಪುರುಷರು ೧೧೭೬, ಮಹಿಳೆಯರು ೧೧೦೫. ಪರಿಶಿಷ್ಟ ಪಂಗಡದಲ್ಲಿ ಒಟ್ಟು ೨೧೯೦, ಇದರಲ್ಲಿ ಪುರುಷರು ೧೧೦೭, ಮಹಿಳೆಯರು ೧೦೮೩. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೨೬೨೭ ಅದರಲ್ಲಿ ಪುರುಷರು ೧೬೩೭, ಮಹಿಳೆಯರು ೯೯೦. ಗ್ರಾಮದಲ್ಲಿ ಒಟ್ಟು ಉದ್ಯೋಗಸ್ಥರು ೨೬೧೮ ಇದರಲ್ಲಿ ಪುರುಷರು ೧೫೫೯, ಮಹಿಳೆಯರು ೧೦೫೯ ಜನ ಇದ್ದಾರೆ.

ಬಡವರು ಮತ್ತು ಮಧ್ಯಮ ವರ್ಗದವರಿರುವರು.

ಸ್ತ್ರೀಶಕ್ತಿ ಸಂಘಗಳಿವೆ. ೩ ಅಂಗನವಾಡಿ ಕೇಂದ್ರಗಳು ಮತ್ತು ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಬಯಲು

ರಂಗಮಂದಿರ, ಸಮುದಾಯ ಭವನಗಳಿವೆ. ಇದ್ದು, ಗಂಡು ೧೨೯ ಮತ್ತು ಹೆಣ್ಣು ೭೮ ಜನರಿದ್ದಾರೆ. ಈ ಗ್ರಾಮದ ಒಟ್ಟು ಸಾಕ್ಷರರ ಸಂಖ್ಯೆ ೨೬೨೭, ಪುರುಷರ ಸಾಕ್ಷರರು ೧೬೩೭ ಮತ್ತು ಮಹಿಳಾ ಸಾಕ್ಷರರು ೯೯೦ ಆಗಿದೆ.

ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಶ್ರೀಗುರು ಒಪ್ಪತ್ತೇಶ್ವರ ರಥೋತ್ಸವದ ಅಂಗವಾಗಿ ಸಾಮೂಹಿಕ ವಿವಾಹವನ್ನು ಮಾಡಲಾಗುತ್ತದೆ. ಆಂಜನೇಯ, ದುರ್ಗಮ್ಮ, ಹುಲಿಗೆಮ್ಮ, ಮಾರೆವ್ವ, ವೀರಭದ್ರೇಶ್ವರ, ಈಶ್ವರ, ಲಕ್ಷ್ಮಿ, ಕಳವಮ್ಮ, ಒಳಕಲ್ಲಮ್ಮ, ರಾಮಪ್ಪ, ಜಾಲಿದುರ್ಗಮ್ಮ, ಕೋಳಿ ದುರ್ಗಮ್ಮ, ಲಟ್ಟಿ ದುರ್ಗಮ್ಮ ಇತ್ಯಾದಿ ದೇವಾಲಯಗಳಿವೆ. ಒಂದು ಒಪ್ಪತ್ತೇಶ್ವರ ಮಠ ಇದೆ.

ಪ್ರತಿ ವರ್ಷ ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಒಪ್ಪತ್ತೇಶ್ವರನ ಜಾತ್ರೆಯನ್ನು ಆಚರಿಸುತ್ತಾರೆ. ಗ್ರಾಮಕ್ಕೆ ಹತ್ತಿರದಲ್ಲಿ ಲಂಬಾಣಿ ತಾಂಡವಿದೆ. ೩ ಕಿಲೋಮೀಟರ್ ಒಳಗೆ ಬ್ಯಾಲಕುಂದಿ, ಗರಗ, ಗುಂಡ ಗ್ರಾಮಗಳಿವೆ. ಈ ಗ್ರಾಮಗಳೆಲ್ಲವೂ ನಾಗಲಾಪುರ ಗ್ರಾಮಪಂಚಾಯತಿ ವ್ಯಾಪ್ತಿಗೆ ಸೇರಿವೆ.

೨.೮.೨.೪. ಗಾದಿಗನೂರು: ಗಾದಿಗನೂರು ಹೊಸಪೇಟೆ ತಾಲೂಕಿನ ಗ್ರಾಮಪಂಚಾಯತಿಗಳಲ್ಲೊಂದಾಗಿದೆ. ಸುತ್ತಲೂ ಗುಡ್ಡಗಳಿಂದ ಕೂಡಿರುವ ಈ ಗ್ರಾಮವು ಹಳ್ಳ, ಕೆರೆಗಳನ್ನು ಹೊಂದಿದೆ. ಕುರುಚಲು ಕಾಡನ್ನು ಹೊಂದಿರುವ ಈ ಪಂಚಾಯತಿಯು ಭೌಗೋಳಿಕವಾಗಿ ೨,೮೦೪.೭೯ ಹೆಕ್ಟೆರ್ ವಿಸ್ತೀರ್ಣವನ್ನು ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೧೨೦೦. ಒಟ್ಟು ಜನಸಂಖ್ಯೆ ೬೦೦೪. ಪುರುಷರು ೨೯೭೨, ಮಹಿಳೆಯರು ೩೦೩೨. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೮೪೯. ಇದರಲ್ಲಿ ಪುರುಷರು ೪೩೧, ಮಹಿಳೆಯರು ೪೧೮. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೦೧೬, ಇದರಲ್ಲಿ ಪುರುಷರು ೪೯೦, ಮಹಿಳೆಯರು ೫೨೬. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೩೦೩೨ ಇದರಲ್ಲಿ ಪುರುಷರು ೧೭೭೬, ಮಹಿಳೆಯರು ೧೨೫೬ ಇರುವರು. ಗ್ರಾಮದಲ್ಲಿ ಒಟ್ಟು ಉದ್ಯೋಗಸ್ಥರು ೨೫೭೫ ಇದರಲ್ಲಿ ಪುರುಷರು ೧೫೮೭, ಮಹಿಳೆಯರು ೯೮೮ ಜನ ಇದ್ದಾರೆ.

ದೊಡ್ಡಸಮುದಾಯದವರು ನಾಯಕರು, ಕುರುಬರು, ಹರಿಜನ. ಸಣ್ಣ ಸಮುದಾಯದವರು ಲಿಂಗಾಯತರು ಮತ್ತು ಮುಸ್ಲಿಂರು, ಕ್ರಿಶ್ಚಿಯನ್ನರು ಇರುವ ಈ ಊರಲ್ಲಿ ಮನೆಮಾತು ಕನ್ನಡವಾಗಿದೆ. ಉಳಿದಂತೆ ತೆಲುಗು, ಉರ್ದು ಮತ್ತು ತಮಿಳು ಮಾತಾಡುವವರಿದ್ದಾರೆ.

೬ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಿವೆ. ಜಿಂದಾಲ್ ಕಾರ್ಖಾನೆಯು ಹತ್ತಿರವಾಗುವುದರಿಂದ ಇಲ್ಲಿಯ ಜನ ಕೂಲಿ ಕಾರ್ಮಿಕರಾಗಿ ಹಾಗೂ ಇತರೆ ಕೆಲಸಗಳಲ್ಲಿ ನಿರತರಾಗಿರುವರು.

ಗಾದಿಗನೂರಿನಲ್ಲಿ ಸಂತೆಯನ್ನು ಸೋಮವಾರ ಮಾಡುತ್ತಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ೪ ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ

ಸರಕಾರಿ ಪದವಿ ಪೂರ್ವ ಕಾಲೇಜು, ಪೋಲೀಸ್ ಠಾಣೆ, ಗ್ರಂಥಾಲಯ, ಪಶು ವೈದ್ಯ ಶಾಲೆ, ಉಣ್ಣೆ ಅಭಿವೃದ್ಧಿ ಉಪಕೇಂದ್ರ, ಬಯಲು ರಂಗಮಂದಿರ, ಸಮುದಾಯ ಭವನಗಳಿವೆ. ಸಾರ್ವಜನಿಕ ಸ್ಮಶಾನಗಳಿವೆ.

ಗಾದಿಲಿಂಗಪ್ಪ, ಸಿದ್ದೇಶ್ವರ, ಈಶ್ವರ, ಬಸವಣ್ಣ, ಸುಂಕ್ಲಮ್ಮ, ದ್ಯಾವಮ್ಮ, ಮಾರೆಮ್ಮ, ಕೆಂಚಮ್ಮ, ಮೂಕ ಮಾರೆಮ್ಮ ಇತ್ಯಾದಿ ದೇವಸ್ಥಾನಗಳಿವೆ. ಶಿವರಾತ್ರಿಗೆ ಗಾದಿಗಲಿಂಗಪ್ಪ ಜಾತ್ರೆ ನಡೆಯುತ್ತದೆ. ಗೋನಾಳ್, ಕೊಟಗಿನಹಾಳು, ಭುವನಹಳ್ಳಿ ಗ್ರಾಮಗಳು ಇದೇ ಪಂಚಾಯತಿಯಲ್ಲಿ ಬರುತ್ತವೆ.

೨.೮.೨.೫. ಮುದ್ದಾಪುರ (ನಂ.೧೦) ಗ್ರಾಮಪಂಚಾಯತಿ: ತಾಲೂಕು ಕೇಂದ್ರದಿಂದ ಸುಮಾರು ೩೦ ಕಿ.ಮೀ ದೂರವಿರುವ ಮುದ್ದಾಪುರ(ನಂ–೧೦)ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ದಾರಿಯಲ್ಲಿ ಬರುತ್ತದೆ ಹೋಬಳಿ ಕೇಂದ್ರದಿಂದ ಎರಡು ಕಿಲೋ ಮೀಟರ್ ದೂರದಲ್ಲಿರುವ ಈ ಗ್ರಾಮ ಹಿಂದೆ ಸಣಾಪುರ ಗ್ರಾಮ ಪಂಚಾಯಿತಿಗೆ ಸೇರಿಸಲ್ಪಟ್ಟಿತು. ಗ್ರಾಮ ಪಂಚಾಯಿತಿಗಳನ್ನು ಮರುವಿಂಗಡಿಸಿದ ತರುವಾಯ ಕಣವಿ ತಿಮ್ಮಾಲಾಪುರ, ಸಣಾಪುರ, ಹಾಗೂ ಮುದ್ದಾಪುರ ಗ್ರಾಮಗಳನ್ನು ಸೇರಿಸಿ ಮುದ್ದಾಪುರ ಗ್ರಾಮ ಪಂಚಾಯಿತಿಯನ್ನು ನಿರ್ಮಿಸಲಾಯಿತು. ಈ ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮೪೬ ಚದರ ಕಿಲೋ ಮೀಟರುಗಳು. ಸಮತಟ್ಟಾದ ಭೂಮಿಯನ್ನು ಹೊಂದಿದ ಈ ಪ್ರದೇಶದ ಕೃಷಿ ಯೋಗ್ಯ ಭೂಮಿಯ ಒಟ್ಟು ವಿಸ್ತೀರ್ಣ ೬೯೯ ಹೆಕ್ಟೇರುಗಳಾಗಿದೆ. ರಾಮಸಾಗರದಿಂದ ಬರುವ ವಿಜಯನಗರ ಕಾಲುವೆ ಈ ಗ್ರಾಮದ ಮೂಲಕ ಹಾದು ಕಂಪ್ಲಿಯ ಸೋಮಪ್ಪನ ಕೆರೆಗೆ ಸೇರಿಲ್ಪಡುತ್ತದೆ. ಈ ಕಾಲುವೆಯ ಉದ್ದ ೨ ಕಿ.ಮೀ. ಗಳು. ಈ ಕಾಲುವೆಯಿಂದ ನೀರಾವರಿಯಾದ ಭೂಮಿಯ ವಿಸ್ತೀರ್ಣ ೩೯೦ ಹೆಕ್ಟೆರುಗಳಷ್ಟಿದೆ. ಈ ಗ್ರಾಮಕ್ಕೆ ಸುಮಾರು ಒಂದುವರೆ(೧.೫) ಕಿ.ಮೀ ದೂರದಲ್ಲಿರುವ ಗೌರಮ್ಮನ ಕೆರೆಯಿಂದಲೂ ನೀರಾವರಿ ಸೌಲಭ್ಯವನ್ನು ಇಲ್ಲಿಯ ಕೃಷಿಕರು ಪಡೆಯುತ್ತಿದ್ದಾರೆ. ಕೆರೆಯಿಂದ ನೀರಾವರಿಯ ಸೌಲಭ್ಯವನ್ನು ಪಡೆಯುವ ಭೂಮಿಯ ವಿಸ್ತೀರ್ಣ ೭೬ ಹೆಕ್ಟೇರುಗಳಷ್ಟಿದೆ. ಹಾಗೆ ತೆರೆದ ಬಾವಿಗಳು ಹಾಗೂ ಕೊಳವೆ ಬಾವಿಗಳಿಂದಲೂ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ರೀತಿಯ ಬಾವಿಗಳು ಒಟ್ಟು ೩೮ ಇವೆ. ಇಂಥ ಬಾವಿಗಳಿಂದ ನೀರಾವರಿಯಾದ ಪ್ರದೇಶದ ವಿಸ್ತೀರ್ಣವು ೧೪೬ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿರುವ ಒಟ್ಟು ೬೯೯ ಹೆಕ್ಟೇರು ಗಳಷ್ಟಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಒಟ್ಟು ನೀರಾವರಿ ಸೌಲಭ್ಯ ಹೊಂದಿದ ಕೃಷಿಭೂಮಿಯ ವಿಸ್ತೀರ್ಣ ೬೧೨ ಹೆಕ್ಟೇರುಗಳಾಗಿದೆ. ಇನ್ನುಳಿದ ೮೭ ಹೆಕ್ಟೇರುಗಳಷ್ಟು ಭೂಮಿಯು ಮಳೆಯಾಧಾರಿತ ಒಣ ಬೇಸಾಯವನ್ನು ಆಶ್ರಯಿಸಿದೆ. ಆದರೆ ಬಹುತೇಕರಿಗೆ ನೀರಾವರಿ ಭೂಮಿಯಿರುವುದರಿಂದ ಒಣ ಬೇಸಾಯದ ಕಡೆ ಅಷ್ಟಾಗಿ ಲಕ್ಷ್ಯವನ್ನು ವಹಿಸುವುದಿಲ್ಲ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಣಾಪುರವು ತುಂಗಾಭದ್ರ ನದಿಯ ದಂಡೆಯ ಮೇಲಿದ್ದರೆ ಕಣವಿ ತಿಮ್ಮಲಾಪುರ ಸುತ್ತಲೂ ಗ್ರೈನೇಟ್ ಕಲ್ಲುಗಳನ್ನು ಹೊಂದಿದ ಗುಡ್ಡಗಳಿಂದ ಆವರಿಸಿದೆ. ಮುದ್ದಾಪುರವು ರಾಮಸಾಗರ,

ಕಂಪ್ಲಿ ಮಾಗಾಣಿಳಿಂದ ಸುತ್ತುವರೆದಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಣವಿ ತಿಮ್ಮಲಾಪುರದಲ್ಲಿ ಕಂಡುಬರುವ ಕುರುಚಲು ಕಾಡಿನ ಹೊರತಾಗಿ ಅಂತಹ ಹೇಳಿಕೊಳ್ಳಬಹುದಾದ ಅರಣ್ಯ ಪ್ರದೇಶ ವಿಲ್ಲವಾಗಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಯ ಒಟ್ಟು ಠಾಣಾ ಪ್ರದೇಶವು ೨೨ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಜನಸಂಖ್ಯೆ ೨೦೧೧ರ ಪ್ರಕಾರ ೪,೯೨೫ ಇದ್ದು ಇದರಲ್ಲಿ ಪುರುಷರು ೨,೪೮೫ ಹಾಗೂ ಮಹಿಳೆಯರ ೨,೪೪೦ರಷ್ಟಿದ್ದಾರೆ. ಇದರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೧,೨೪೫ ರಷ್ಟಿದೆ. ಇದರಲ್ಲಿ ಪುರುಷರು ೬೨೪ ಹಾಗೂ ಮಹಿಳೆಯರು ೬೨೧ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೩೨೧ರಷ್ಟಿದೆ. ಇದರಲ್ಲಿ ಪುರುಷರು ೧೬೬ ಹಾಗೂ ಮಹಿಳೆಯರು ೧೬೧ರಷ್ಟಿದ್ದಾರೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಲಿಂಗಾಯುತ, ಗೊಲ್ಲ, ಗಂಗಾಮತ, ಭೋವಿ, ಮುಸ್ಲೀಂ, ಮಾದಿಗ, ಕ್ಷೌರಿಕ, ಅಗಸ, ವಾಲ್ಮೀಕಿ ಮುಂತಾದ ಜಾತಿಗಳು ಕಂಡುಬರುತ್ತಿದ್ದು ಇವುಗಳಲ್ಲಿ ಬಲಿಷ್ಟ ಜಾತಿಯಾಗಿ ಲಿಂಗಾಯಿತ ಹಾಗೂ ಗೊಲ್ಲ ಸಮುದಾಯಗಳು ಕಂಡುಬರುತ್ತವೆ. ಪರಿಶಿಷ್ಟ ಜಾತಿಯವರ ಒಟ್ಟು ಪ್ರಮಾಣ ಶೇಕಡ ೨೫.೨೭ ರಷ್ಟಿದೆ ಹಾಗೇ ಪರಿಶಿಷ್ಟ ಪಂಗಡದ ಪ್ರಮಾಣ ಶೇಕಡ ೬.೬೩ ರಷ್ಟಿದೆ. ಈ ಗ್ರಾಮಗಳಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆಯ ೯೨೧ ಇದ್ದು ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೨೪೯ ಹಾಗೂ ಪರಿಶಿಷ್ಟ ಪಂಗಡದವರ ಕುಟುಂಬಗಳ ಸಂಖ್ಯೆ ೬೫ರಷ್ಟಿದೆ.

೨.೮.೩. ಸಂಡೂರು ತಾಲೂಕು

ಬಿಸಿಲುನಾಡು ಬಳ್ಳಾರಿ ಜಿಲ್ಲೆಗೆ ಸಂಡೂರು ಮಲೆನಾಡಿದ್ದಂತೆ. ನಿತ್ಯ ಹರಿದ್ವರ್ಣ ಕಾಡುಗಳು, ಸಂಪದ್ಭರಿತವಾದ ಕಬ್ಬಿಣ, ಮ್ಯಾಂಗನೀಸ ನಿಕ್ಷೇಪವನ್ನು ಒಳಗೊಂಡ ಬೆಟ್ಟಸಾಲುಗಳು, ನಾರಿಹಳ್ಳ, ಕೆರೆ ಕುಂಟೆಗಳು ಹೀಗೆ ನಾನಾ ವೈವಿದ್ಯದಿಂದ ಕೂಡಿದ ಈ ತಾಲೂಕು ಪ್ರಾಚೀನ ಗ್ರಾಮೀಣ ಸೊಗಡನ್ನು ಇಂದಿಗೂ ಉಳಿಸಿಕೊಂಡುಬಂದಿರುವ ತಾಲೂಕಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಘೋರ್ಪಡೆ ವಂಶಸ್ಥರಿಂದ ಆಳಿಕೆಗೆ ಒಳಗಾಗಿದ್ದ ಸಂಡೂರಿಗೆ ಸ್ವಾತಂತ್ರ್ಯ ದೊರೆತಿರಲಿಲ್ಲ. ಭಾರತದ ಒಕ್ಕೂಟದೊಳಗೆ ಸೇರುವುದಿಲ್ಲ ಎಂದು ಹಟ ಮಾಡುತ್ತಿದ್ದ ಸಂಡೂರಿನ ಸಂಸ್ಥಾನಿಕರು ೧೯೪೮ರಲ್ಲಿ ಭಾರತ ಒಕ್ಕೂಟದೊಳಗೆ ವಿಲೀನವಾದರು. ತನ್ನ ಒಡಲಲಿರಿಸಿಕೊಂಡಿರುವ ಕಬ್ಬಿಣ ಮ್ಯಾಂಗನೀಸ್ ಗಣಿಯಿಂದಾಗಿಯೇ ಜಗತ್ತಿನಾದ್ಯಂತ ಈ ತಾಲೂಕು ಪ್ರಸಿದ್ಧಿಗೊಂಡಿದೆ. ಇಲ್ಲಿಯ ನಿಕ್ಷೇಪವನ್ನು ಬೇನಾಮಿಯಾಗಿ, ಬೇಕಾಬಿಟ್ಟಿಯಾಗಿ ಕೀಳಿದ ಕೀರ್ತಿಯೂ ಗಣಿಗಳ್ಳರಿಗೆ ಸೇರುತ್ತದೆ. ಸಂಡೂರು ತಾಲೂಕು ೧,೨೩೪.೩೫ ಚದರ ಕಿಲೋಮೀಟರ್ ವಿಸ್ತಾರತೆಯನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಈ ತಾಲೂಕಿನಲ್ಲಿ ಒಟ್ಟು ೪೪,೫೦೫ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯು ೨,೨೨,೭೮೨ ಇದೆ. ಇದರಲ್ಲಿ ೧,೧೪,೮೮೭ ಪುರುಷರು ಹಾಗೂ ೧,೦೭.೮೯೫ ಮಹಿಳೆಯರು ಇರುವರು. ೦-೬ ವಯೋಮಾನದ ಒಟ್ಟು ೩೫.೫೫೭ ಮಕ್ಕಳಿರುವರು. ಇದರಲ್ಲಿ ೧೮.೧೫೫ ಗಂಡು ಹಾಗೂ ೧೭,೪೦೨ ಹೆಣ್ಣುಮಕ್ಕಳಿರುವರು. ಪರಿಶಿಷ್ಟ ಜಾತಿಯವರು ೪೦.೬೨೩

ಜನರಿದ್ದಾರೆ. ಇದರಲ್ಲಿ ೨೦,೩೪೭ ಪುರುಷರು ಹಾಗೂ ೨೦,೨೭೬ ಮಹಿಳೆಯರಿರುವರು. ಪರಿಶಿಷ್ಟ ಪಂಗಡದವರು ಒಟ್ಟು ೬೨,೧೭೭ ಜನರಿದ್ದಾರೆ. ಇದರಲ್ಲಿ ೩೧,೩೬೦ ಪುರುಷರು ಹಾಗೂ ೩೦,೮೧೭ ಮಹಿಳೆಯರಿರುವರು. ಒಟ್ಟು ಸಾಕ್ಷರರು ೧,೨೧,೪೮೭ ಇರುವರು. ಇದರಲ್ಲಿ ೭೨,೬೩೧ ಪುರುಷರು ಹಾಗೂ ೪೮,೮೫೬ ಮಹಿಳೆಯರಿರುವರು.

೨.೮.೩.೧. ತಾರಾನಗರ: ತಾರಾನಗರ ಗ್ರಾಮವು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಸಂಡೂರು ತಾಲೂಕು ಕೇಂದ್ರದ ಉತ್ತರ ದಿಕ್ಕಿಗೆ ೧೨ ಕಿ.ಮೀ. ದೂರದಲ್ಲಿದೆ. ಮತ್ತು ಜಿಲ್ಲಾ ಕೇಂದ್ರದಿಂದ ಸುಮಾರು ೪೮ ಕಿ.ಮೀ.ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೩೦ ಹೆಕ್ಟೇರ್ ಇದೆ. ಈ ಗ್ರಾಮದ ಪೂರ್ವದ ಹೆಸರು 'ಎತ್ತಿನ ಹಟ್ಟಿ'. ಯಶವಂತರಾವ್ ಘೋರ್ಪಡೆಯವರ ಆಡಳಿತದ ಸಂದರ್ಭದಲ್ಲಿ ಎತ್ತಿನ ಹಟ್ಟಿ ಗ್ರಾಮವು ತಾರಾನಗರ ಎಂದು ಮರುನಾಮಕರಣಗೊಂಡಿತೆಂದು ಸ್ಥಳೀಯರು ತಿಳಿಸುತ್ತಾರೆ. ತಾರಾನಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೪ ಕಂದಾಯ ಗ್ರಾಮಗಳಿವೆ.

ಈ ಗ್ರಾಮ ಕಂದಾಯ ಗ್ರಾಮವಾಗಿದ್ದು, ಗ್ರಾಮಪಂಚಾಯತಿಯನ್ನು ಹೊಂದಿದೆ. ಹಾಗೇ ಇದು ತಾಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತಿಗಳ ಮತಕ್ಷೇತ್ರವೂ ಆಗಿದೆ. ಸಂಡೂರು ವಿಧಾನಸಭೆ ಮತ್ತು ಬಳ್ಳಾರಿ ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ತಾರಾನಗರ ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ ೨೩ ಇದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಗೆ ತಾರಾನಗರ, ಬನ್ನಿಹಟ್ಟಿ, ಗಂಗಲಾಪುರ, ನಾಗಲಾಪುರ ಗ್ರಾಮಗಳು ಬರುತ್ತವೆ.

ತಾರಾನಗರದಲ್ಲಿ ಕೃಷಿ ಚಟುವಟಿಕೆಗಳಿಗೆ ನೀರೊದಗಿಸುವ ಆರು ತೆರೆದ ಬಾವಿಗಳು, ಹನ್ನೊಂದು ಕೊಳವೆ ಬಾವಿಗಳಿವೆ. ತಾರಾನಗರದ ನಾರಿಹಳ್ಳ ಆಣೆಕಟ್ಟಿನಿಂದಲೇ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಮೊಲ, ನರಿ, ಚಿರತೆ, ಜಿಂಕೆ, ಕಾಡುಹಂದಿ, ಕರಡಿ, ವಿವಿಧ ಜಾತಿಯ ಹಾವು, ಕೌಜುಗ, ಪುರ್ಲೆ, ಗೂಗಿ, ಗುಬ್ಬಿ, ನವಿಲು, ಕಾಗೆ, ಹದ್ದು, ಗಿಳಿ ಮುಂತಾದ ಕಾಡಿನ ಪ್ರಾಣಿ ಪಕ್ಷಿಗಳಿವೆ.

ಆಕಳು, ಎಮ್ಮೆ, ಎತ್ತು, ನಾಯಿ, ಬೆಕ್ಕು, ಕುರಿ, ಕೋಳಿ, ಆಡುಗಳನ್ನು ಇಲ್ಲಿಯ ಜನ ಸಾಕಿದ್ದಾರೆ.

ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿವೆ. ತೆರೆದ ಚರಂಡಿಗಳಿವೆ. ಶೇಕಡ ೬೫% ಶೌಚಾಲಯ ವ್ಯವಸ್ಥೆಯೂ ಇದೆ.

ಮಾದಿಗ, ಲಂಬಾಣಿ, ವಾಲ್ಮೀಕಿ, ಮುಸ್ಲಿಮ್, ಮಡ್ಡೇರು (ಬೆಸ್ತರ ಒಂದು ಪಂಗಡ) ಲಿಂಗಾಯತ ಮುಂತಾದ ಸಮುದಾಯಗಳು ಇವೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೧೩೪೩ ಇವೆ. ಒಟ್ಟು ಜನಸಂಖ್ಯೆ ೬೭೨೨ ಅದರಲ್ಲಿ ೩೪೧೩ ಪುರುಷರು, ೩೩೦೯ ಮಹಿಳೆಯರಿದ್ದಾರೆ. ಪರಿಶಿಷ್ಟ

ಜಾತಿಯ ಒಟ್ಟು ಜನಸಂಖ್ಯೆ ೮೯೦ ಇದೆ. ಇದರಲ್ಲಿ ೪೫೭ ಪುರುಷರು, ೪೩೩ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨೧೦೦ ಇದೆ. ಇದರಲ್ಲಿ ೧೦೬೨ ಪುರುಷರು, ೧೦೩೮ ಮಹಿಳೆಯರಿದ್ದಾರೆ. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೪೧೦೩ ಇದೆ. ಅದರಲ್ಲಿ ೨೩೩೯ ಪುರುಷರು, ೧೭೬೪ ಮಹಿಳೆಯರಿದ್ದಾರೆ.

ರಸ್ತೆ ಸಂಚಾರಕ್ಕೆ ಸರಕಾರಿ ಬಸ್‌ಗಳ ಮತ್ತು ಖಾಸಗಿ ವಾಹನಗಳ ಸೌಲಭ್ಯವಿದೆ. ಹತ್ತಿರದ ಗಾದಿಗನೂರು ಮತ್ತು ತೋರಣಗಲ್‌ನಲ್ಲಿ ರೈಲು ಮಾರ್ಗವಿದೆ.

ಪ್ರಗತಿ ಗ್ರಾಮೀಣ ಬ್ಯಾಂಕ್, ನ್ಯಾಯ ಬೆಲೆ ಅಂಗಡಿ, ೧೦ ಸ್ತ್ರೀ ಶಕ್ತಿ ಸಂಘ, ಕನ್ನಡ ರಕ್ಷಣಾ ವೇದಿಕೆ, ನವಕರ್ನಾಟಕ ಯುವಕ ಸಂಘ, ಅರುಣೋದಯ ಸಂಘ ಮತ್ತು ಅಂಬೇಡ್ಕರ್ ಸಂಘಗಳಿವೆ.

ಐದು ಅಂಗನವಾಡಿ ಕೇಂದ್ರ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆ.ಆರ್. ಚೆನ್ನಮ್ಮ ಖಾಸಗಿ ಕಿರಿಯ ಪ್ರಾಥಮಿಕ ಶಾಲೆ ಶ್ರೀ ಬನಶಂಕರಿ ಖಾಸಗಿ ಕಿರಿಯ ಪ್ರಾಥಮಿಕ ಶಾಲೆ ಎಸ್.ಕೆ.ಆರ್. ಖಾಸಗಿ ಪ್ರೌಢಶಾಲೆ, ಖಾಸಗಿ ಪದವಿ ಪೂರ್ವ ಕಾಲೇಜು, ಗ್ರಂಥಾಲಯ, ಸರಕಾರಿ ಅಲೋಪತಿ ಆಸ್ಪತ್ರೆ, ಪಶುವೈದ್ಯಶಾಲೆಗಳಿವೆ. ಹರಿಜನ ಗುಂಡಪ್ಪ ಎಂಬುವವರು ನಾಟಿ ಔಷದಿಯನ್ನು ಕೊಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನವನ್ನು ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯನ್ನು ಪಡೆಯುವ ಫಲಾನುಭವಿಗಳಿದ್ದಾರೆ. ಹತ್ತು ಸಣ್ಣ ಹೋಟೆಲ್‌ಗಳಿವೆ. ಇಪ್ಪತ್ತೈದು ಅಂಗಡಿಗಳಿವೆ.

ಬನಶಂಕರಿ, ಮಾರೆಮ್ಮ, ಕೊಲರೆಮ್ಮ, ದೇವಮ್ಮ, ಕುಮಾರಸ್ವಾಮಿ, ಆಂಜನೇಯ, ಗಂಡಿ ಬಸವೇಶ್ವರ ಮುಂತಾದ ದೇವಸ್ಥಾನಗಳಿವೆ. ಹಾಗೆಯೇ ಮೂರು ಮಸೀದಿಗಳಿವೆ. ಯುಗಾದಿ, ದಸರಾ, ದೀಪಾವಳಿ, ಮೊಹರಂ ಮುಂತಾದ ಹಬ್ಬಗಳ ಆಚರಣೆಯೂ ಇದೆ. 'ಭವಾನಿಶಂಕರ', 'ಕುಮಾರಸ್ವಾಮಿ', 'ಶೆಟ್ರಬಾವಿ', 'ಗೌಡ್ರು ಬಾವಿ', 'ಊರ ಮುಂದಿನ ಬಾವಿ' ಎಂಬ ಐದು ಬಾವಿಗಳಿವೆ.

ಗ್ರಾಮದ ಹತ್ತಿರದ ಬೆಟ್ಟದಲ್ಲಿ ಬೈರವ ತೀರ್ಥವಿದೆ. ಇದು ಭಲಬದ್ರ, ದೋಣಿಮಲೈ, ಬುಡುಬಡಿಕೆ ತಟ್ಟು ಮತ್ತು ದೇವೇಂದ್ರ ಕುತ್ತಿಗೆ ಗುಡ್ಡಗಳ ಮಧ್ಯದಲ್ಲಿದೆ. ವಿಶೇಷವಾಗಿ ಈ ಸ್ಥಳದಲ್ಲಿ ಪ್ರತಿ ವರ್ಷ ಜನವರಿ ೨೬ ಗಣರಾಜ್ಯ ದಿನದಂದು ಯಾವ ಜಾತಿ ಬೇದ ಬಾವವಿಲ್ಲದೆ ಎಲ್ಲಾ ಸಮುದಾಯದವರು ಸೇರಿ ಅನ್ನದಾಸೋಹವನ್ನು ಮಾಡಿ ಹಬ್ಬವನ್ನು ಆಚರಿಸುವುದು ವಿಶೇಷವಾಗಿದೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಗಂಗಲಾಪುರ, ನಾಗಲಾಪುರ, ಬನ್ನಿಹಟ್ಟಿ ಗ್ರಾಮಗಳಿವೆ.

೨.೮.೩.೨. ದರೋಜಿ : ದರೋಜಿ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ವ್ಯಾಪ್ತಿಯಲ್ಲಿ ಒಟ್ಟು ೩ ಹಳ್ಳಿಗಳಿದ್ದು ಅದರಲ್ಲಿ ೧ ಕಂದಾಯ ಗ್ರಾಮ ಹಾಗು ೨ ಮಜಿರೆ ಗ್ರಾಮಗಳು ಬರುತ್ತವೆ. ಕರ್ನಾಟಕ ರಾಜ್ಯದ್ಲಿಯೇ ಎರಡನೇ ಅತೀ ದೊಡ್ಡ ಕೆರೆ ಹೊಂದಿರುವ ಗ್ರಾಮ ಇದಾಗಿದೆ ಎನ್ನುವ ಹೆಗ್ಗಳಿಕೆಗೆ ಈ ಗ್ರಾಮ ಒಳಗಾಗಿದೆ. ತಾಲೂಕು ಕೇಂದ್ರ ಸಂಡೂರಿಗೆ ೪೦ ಕಿ.ಮೀ. ಹಾಗು ಹೋಬಳಿಗೆ ಸುಮಾರು ೧೬ ಕಿ.ಮೀ. ದೂರದಲ್ಲಿದೆ. ದರೋಜಿ ಗ್ರಾಮದಲ್ಲಿ ೦೯ ಅಂಗನವಾಡಿ ಕೇಂದ್ರಗಳು ಬರುತ್ತವೆ. ಈ ಗ್ರಾಮದಲ್ಲಿ ಶ್ರೀ. ಕೋಡಿ ವೀರಭದ್ರೇಶ್ವರಸ್ವಾಮಿ ದೇವಸ್ಥಾನ, ಏಷ್ಯಾದಲ್ಲಿಯೇ ಏಕೈಕವಾದ ದರೋಜಿ ಕರಡಿ ಧಾಮವು ಇದರ ವ್ಯಾಪ್ತಿಗೆ ಒಳಪಟ್ಟಿದೆ. ದರೋಜಿ ಕೆರೆಯಿಂದಾಗಿ ಇಲ್ಲಿಯ ಕೃಷಿಭೂಮಿಗಳು ನೀರಾವರಿಯನ್ನು ಕಾಣುವಂತಾಗಿದೆ. ಗ್ರಾಮದಲ್ಲಿ ಹೇರಳವಾಗಿ ಭತ್ತ, ಮೆಕ್ಕೆಜೋಳ ಹಾಗು ತರಕಾರಿಗಳನ್ನು ಬೆಳೆಯಲಾಗುತ್ತದೆ.

ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೫೦.೮೦ ಎಕ್ಟರ್ ಇದೆ. ದರೋಜಿ ಎಂಬುದು ದರವಾಜ ಎಂಬುದರಿಂದ ಬಂದುದಾಗಿ ಸ್ಥಳೀಯರು ತಿಳಿಸುತ್ತಾರೆ. ವಿಜಯನಗರದ ಕೋಟೆಯ ಹೆಬ್ಬಾಗಿಲು ಇಲ್ಲಿದ್ದಿತು. ಹೀಗಾಗಿ ದರವಾಜ ಎಂಬ ಹೆಸರು ಬಂದಿತು ಎಂದು ಹೇಳಲಾಗುತ್ತದೆ. ಹೊಸ ದರೋಜಿ, ಹಳೆ ದರೋಜಿ, ಮಾದಾಪುರ ಗ್ರಾಮಗಳು ಈ ಪಂಚಾಯತಿ ವ್ಯಾಪ್ತಿಗೆ ಸೇರಿವೆ.

ಕಾಡು ಪ್ರಾಣಿಗಳಾದ ಚಿರತೆ, ಕರಡಿ, ಮೊಲ, ಮುಂಗಸಿ, ನರಿ, ತೋಳ, ನವಿಲು, ಕೌಜುಗ, ಗುಬ್ಬಿ ಬುರ್ಲೆ ಮುಂತಾದ ಪ್ರಾಣಿ ಪಕ್ಷಿಗಳಿವೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೨೩೦೧ ಇವೆ. ಒಟ್ಟು ಜನಸಂಖ್ಯೆ ೧೧೯೯೩ ಅದರಲ್ಲಿ ೫೪೨೯ ಪುರುಷರು, ೫೫೬೪ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೩೯೧೦ ಇದೆ. ಇದರಲ್ಲಿ ೧೯೪೮ ಪುರುಷರು, ೩೦೯ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೧೧೦೭ ಇದೆ. ಇದರಲ್ಲಿ ೫೫೪೮ ಪುರುಷರು, ೫೪೯ ಮಹಿಳೆಯರಿದ್ದಾರೆ. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೧೩೫೨ ಇದೆ. ಅದರಲ್ಲಿ ೮೪೩ ಪುರುಷರು, ೫೧೩ ಮಹಿಳೆಯರಿದ್ದಾರೆ.

ನಾಯಕ ಸಮುದಾಯದವರೇ ಪ್ರಧಾನವಾಗಿದ್ದು, ಭೋವಿ, ಮಾದಿಗ, ಮುಸ್ಲಿಮ್ಸ್, ಕೊರಚ, ಬಡಿಗೇರ್, ಕಮ್ಮಾರರು, ವೀರಶೈವ ಕಿರು ಸಮುದಾಯಗಳು.

೫ ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಂಥಾಲಯ, ಪಶುವೈದ್ಯ ಶಾಲೆ, ಆಯುರ್ವೇದ ಆಸ್ಪತ್ರೆ, ಪ್ರಗತಿ ಗ್ರಾಮೀಣ ಬ್ಯಾಂಕ್‌ಗಳಿವೆ.

ಕೃಷಿಯೇ ಪ್ರಧಾನವಾಗಿರುವ ಈ ಗ್ರಾಮದಲ್ಲಿ ಕೃಷಿಕರೊಂದಿಗೆ ಕೃಷಿಕೂಲಿ ಕೃಷಿಯೇತರ ಕೂಲಿಕಾರ್ಮಿಕರಿದ್ದಾರೆ. ಕೆಲವರು ಸಣ್ಣಪುಟ್ಟ ವ್ಯಾಪಾರ ಮಾಡುತ್ತಾರೆ.

ಆಧುನಿಕ ವಾಹನಗಳಾದಂತಹ ಟ್ರಾಕ್ಟರ್, ಲಾರಿ, ಟ್ರಾಕ್ಸ್, ಕಾರು, ಟಾಟಾ ಏಸ್, ಹೋಮಿನಿ ಮತ್ತು ದ್ವಿಚಕ್ರವಾಹನಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬಂದರೂ ಸಾಂಪ್ರದಾಯಿಕ ಎತ್ತಿನ ಬಂಡಿಗಳು ಸಹ ಉಳಿದುಕೊಂಡು ಬಂದಿವೆ.

೨.೮.೩.೩. ಮೆಟ್ರಿಕಿ : ಮೆಟ್ರಿಕಿ ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ತಾಲೂಕು ಕೇಂದ್ರದಿಂದ ೪೫ ಕೀ.ಮೀ.ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿದೆ ಮತ್ತು ಜಿಲ್ಲಾ ಕೇಂದ್ರದಿಂದ ೫೫ ಕೀ.ಮೀ.ದೂರದಲ್ಲಿದೆ. ಮೆಟ್ರಿಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೮ ಗ್ರಾಮಗಳಿದ್ದು ೭ ಕಂದಾಯ ಗ್ರಾಮವನ್ನು ೧ ಮಜರೆ ಗ್ರಾಮವನ್ನು ಹೂಂದಿದೆ. ಮೆಟ್ರಿಕಿ ಗ್ರಾಮದಲ್ಲಿ ಪ್ರಸಿದ್ದ ಕುಮಾರರಾಮನ ದೇವಸ್ಥಾನ ಇದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಉಬ್ಬಳಗುಂಡಿ, ಎಂ ಗುಂಡ್ಲಹಳ್ಳಿ, ಎಂ ರಾಮಸಾಗರ, ಯು ಮಲ್ಲಾಪುರ, ಯು ರಾಜಾಪುರ, ಲಕ್ಕಲಹಳ್ಳಿ, ಮೆಟ್ರಿಕಿ ಗ್ರಾಮಗಳು ಬರುತ್ತವೆ.

ಗ್ರಾಮಪಂಚಾಯತಿ ಕೇಂದ್ರವಾಗಿರುವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಬ್ಬಿಣ ಉಕ್ಕಿನ ನಿಕ್ಷೇಪವಿರುವ ವಿಭೂತಿಗುಡ್ಡ, ಉಬ್ಬಲಗಂಡಿ ಗುಡ್ಡ, ರಾಜಾಪುರ ಗುಡ್ಡಗಳಿವೆ. ಮಳೆಯಾಶ್ರಿತ ಕೃಷಿಯಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣವು ೧,೨೧೮.೨೧ ಹೆಕ್ಟೇರ್ ಇದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ಏಳು ಗ್ರಾಮಗಳಿವೆ. ಮೆಟ್ರಿಕಿ, ಉಬ್ಬಳಗುಂಡಿ, ಎಂ ರಾಮಸಾಗರ, ಯು ರಾಜಾಪುರ, ಯು ಮಲ್ಲಾಪುರ, ಲಕ್ಕಲಹಳ್ಳಿ, ಎಂ ಗುಂಡ್ಲೂರು ಗ್ರಾಮಗಳು ಬರುತ್ತವೆ. ಎಂ ಗುಂಡ್ಲೂರು ಮಾತ್ರ ಮುಜಿರೆ ಗ್ರಾಮವಾಗಿದ್ದು ಉಳಿದ ಎಲ್ಲವೂ ಕಂದಾಯ ಗ್ರಾಮಗಳಾಗಿವೆ. ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಈ ಗ್ರಾಮವು ತಾಲೂಕಿನ ಕೊನೆಯ ಗ್ರಾಮವಾಗಿದೆ. ಗ್ರಾಮದ ಉತ್ತರ ಭಾಗಕ್ಕೆ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪವಿರುವ ವಿಭೂತಿ ಗುಡ್ಡವಿದೆ. ಬಳ್ಳಾರಿ, ಕುಡಿತಿನಿ, ಸಂಡೂರುಗಳಿಂದ ಕೆಲವೇ ಕೆಲವು ಸರ್ಕಾರಿ ಬಸ್ಸುಗಳು ಈ ಗ್ರಾಮದ ಮೇಲೆ ಹಾದುಹೋಗುತ್ತವೆ. ಇಲ್ಲಿಯ ಜನ ಪ್ರಯಾಣಕ್ಕಾಗಿ ಬಹುತೇಕ ಆಟೋಗಳನ್ನೇ ಆಶ್ರಯಿಸಿದ್ದಾರೆ. ಗ್ರಾಮದ ಹೊರಭಾಗದಲ್ಲಿ ಸ್ವಾಮಿಹಳ್ಳ ಎಂಬ ಹಳ್ಳ ಹರಿಯುತ್ತದೆ. ಮಳೆಗಾಲದಲ್ಲಿ ಮಾತ್ರ ತುಂಬಿಹರಿಯುವ ಈ ಹಳ್ಳ ಬೇಸಿಗೆಯ ವೇಳೆಗೆ ಬತ್ತಿರುತ್ತದೆ. ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೧೭ ಮಿಮೀ, ಗರಿಷ್ಠ ಬಿಸಿಲಿನ ಪ್ರಮಾಣ ೪೩ ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಮೊಲ, ನರಿ, ಚಿರತೆ, ಜಿಂಕೆ, ಕಾಡುಹಂದಿ, ಕರಡಿ, ವಿವಿಧ ಜಾತಿಯ ಹಾವು, ಕೌಜುಗ, ಪುರ್ಲೆ, ಗೂಗಿ, ಗುಬ್ಬಿ, ನವಿಲು, ಕಾಗೆ, ಹದ್ದು, ಗಿಳಿ ಮುಂತಾದ ಕಾಡಿನ ಪ್ರಾಣಿ ಪಕ್ಷಿಗಳಿವೆ.

ಗ್ರಾಮದಲ್ಲಿ ಬೇಡನಾಯಕರೇ ಹೆಚ್ಚಿನ ಪ್ರಮಾಣದಲ್ಲಿದ್ದು ಕುರುಬ, ನೇಕಾರ, ಲಿಂಗಾಯತ, ಮುಸ್ಲೀಂ, ಮಾದಿಗ, ಅಗಸ, ಹಡಪದ ಮುಂತಾದ ಸಮುದಾಯಗಳು ನೆಲೆಸಿವೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೨೪೧ ಇವೆ. ಒಟ್ಟು ಜನಸಂಖ್ಯೆ ೧೪೨೭ಅದರಲ್ಲಿ ೭೨೨ ಪುರುಷರು, ೭೦೫ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ

ಒಟ್ಟು ಜನಸಂಖ್ಯೆ ೬೬ ಇದೆ. ಇದರಲ್ಲಿ ೩೬ ಪುರುಷರು, ೩೦ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೫೯೭ ಇದೆ. ಇದರಲ್ಲಿ ೨೯೩ ಪುರುಷರು, ೩೦೪ ಮಹಿಳೆಯರಿದ್ದಾರೆ. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೬೧೮ ಇದೆ. ಅದರಲ್ಲಿ ೩೯೩ ಪುರುಷರು, ೨೨೫ ಮಹಿಳೆಯರಿದ್ದಾರೆ.

ಮೂರು ಅಂಗನವಾಡಿ, ಪ್ರಾಥಮಿಕ ಶಾಲೆ, ಮುರಾರ್ಜಿ ವಸತಿ ಶಾಲೆ, ಆಯುರ್ವೇದ ಆಸ್ಪತ್ರೆ, ಪಶುವೈದ್ಯ ಶಾಲೆ, ಅಂಚೆ ಕಛೇರಿ, ಸಮುದಾಯ ಆರೋಗ್ಯ ಕೇಂದ್ರ, ಸಮುದಾಯ ಭವನ, ಮೆಟ್ರಿಕ್ ಪೂರ್ವ ವಸತಿ ನಿಲಯಗಳಿವೆ.

ಈ ಗ್ರಾಮದಲ್ಲಿ ಶ್ರೀ ಗಂಡುಗಲಿ ಕುಮಾರರಾಮ ಸಂಘ, ಅಂಬೇಡ್ಕರ್ ಸಂಘ, ವಾಲ್ಮೀಕಿ ಯುವಕ ಸಂಘ, ಸ್ತ್ರೀ ಶಕ್ತಿ ಸಂಘಗಳು ಇವೆ.

ಮೆಟ್ರಿಕಿ ಗ್ರಾಮದ ಆಕರ್ಷಣೆಯ ಕೇಂದ್ರವೇ ಈ ಗ್ರಾಮದ ಮಧ್ಯಭಾಗದಲ್ಲಿರುವ ಕುಮಾರರಾಮನ ದೇವಾಲಯವಾಗಿದೆ. ಹದಿನೈದು ವರ್ಷಗಳ ಹಿಂದೆ ಬುಡಕಟ್ಟು ಲಕ್ಷಣದ ಕಾಚಿ ಹುಲ್ಲಿನ ದೇವಾಲಯ ಇದಾಗಿದ್ದಿತು. ಸಂಡೂರು ಕ್ಷೇತ್ರದಿಂದ ಆಯ್ಕೆಯಾಗಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿದ್ದ ಎಂ ವೈ ಘೋರ್ಪಡೆಯವರು ಹುಲ್ಲಿನ ಮೇಲ್ಛಾವಣಿಯ ದೇವಾಲಯದ ಸ್ಥಳದಲ್ಲಿಯೇ ಸಿಮೆಂಟು ಕಲ್ಲನ್ನು ಬಳಸಿ ರಾಮನ ದೇವಸ್ಥಾನವನ್ನು ರಚಿಸಿ ಕೊಟ್ಟಿದ್ದಾರೆ. ಹಿಂದೆ ಸುತ್ತಲೂ ಬೇಲಿಯಿಂದ ದೇವಾಲಯದ ಆವರಣವನ್ನು ಕಾಪಾಡಲಾಗುತ್ತಿತ್ತು. ಆದರೆ ಘೋರ್ಪಡೆ ಯವರು ದೇವಾಲಯದ ಸುತ್ತಲೂ ತಡೆಗೋಡೆ(ಕಾಂಪೋಂಡು) ನಿರ್ಮಿಸಿಕೊಟ್ಟಿದ್ದಾರೆ. ಈ ದೇವಾಲಯದೊಳಗೆ ಪೆಟ್ಟಿಗೆ ದೇವರಿದೆ. ಪೆಟ್ಟಿಗೆಯೊಳಗೆ ಕಪ್ಪು ಬಣ್ಣದ ಕುಮಾರರಾಮನ ಮುಖವಾಡವಿದೆ. ಬಾಯ್ದೆರೆದ ಆಕಾರದಲ್ಲಿ ರುದ್ರಭೀಕರವಾಗಿ ಕುಮಾರರಾಮನ ಕಟ್ಟಿಗೆಯ ಮುಖವಾಡವಿದೆ. ಈ ದೇವಾಲಯದ ಪ್ರಜಾರಿ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಪ್ರತಿವರ್ಷ ಏಪ್ರಿಲ್– ಮೇಯೊಳಗೆ ಕುಮಾರರಾಮನ ಜಾತ್ರೆ ಜರಗುತ್ತದೆ. ವೈರಿಗಳೊಂದಿಗೆ ಯುದ್ಧಮಾಡುವ ಕ್ರಿಯೆಯ ಪುನರಭಿನಯವೇ ಜಾತ್ರೆಯ ಮುಖ್ಯ ಅಂಗ. ರಾತ್ರಿ ಪ್ರಾರಂಭವಾಗುವ ರಾಮನ ಉತ್ಸವ ಮಾರನೇ ದಿನ ಮುಂಜಾವಿಗೆ ಗುಡಿದುಂಬುವ ಮೂಲಕ ಮುಕ್ತಾಯಗೊಳ್ಳುತ್ತದೆ. ಕುಮಾರರಾಮನ ಕುರಿತು ಹಾಡುಗಳನ್ನು ಹಾಡುವ ತಂಡಗಳು ಇಲ್ಲಿವೆ.

ಕುಮಾರರಾಮನ ಹೊರತಾಗಿ ಈಶ್ವರ, ಆಂಜನೇಯ, ಊರಮ್ಮ, ಮಲಿಯಮ್ಮ ಮುಂತಾದ ದೇವಾಲಯಗಳಿವೆ. ಒಂದು ಮಸೀದಿಯೂ ಇದೆ. ಯುಗಾದಿ, ದಸರೆ, ದೀಪಾವಳಿ, ಮೊಹರಂ ಮುಂತಾದ ಹಬ್ಬಗಳ ಆಚರಣೆ ಇಲ್ಲಿದೆ.

ಮುಸ್ಲೀಂ ಮತ್ತು ಇತರ ಸಮುದಾಯಗಳಿಗಾಗಿ ಎರಡು ಪ್ರತ್ಯೇಕ ಸ್ಮಶಾನಗಳಿವೆ.

೨.೮.೩.೪ **ಯಶವಂತನಗರ :** ಯಶವಂತನಗರ ಗ್ರಾಮವು ಸಂಡೂರು ತಾಲೂಕು ಕೇಂದ್ರದ ದಕ್ಷಿಣ ದಿಕ್ಕಿಗೆ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೦೨.೬೭ ಹೆಕ್ಟೇರ್ ಇದೆ. ಪೂರ್ವದ ಹೆಸರು 'ಕನುಮೆಹಳ್ಳಿ' ಎಂದಿದ್ದು ಕಣಿವೆಹಳ್ಳಿಯಂದೂ ಸಹ ಕರೆಯಲಾಗುತ್ತದೆ. ಕಬ್ಬಿಣ ತಯಾರಿಕಾ ಘಟಕ ಇಲ್ಲಿರುವ ಕುರುಹುಗಳಿವೆ. ಇಂದಿಗೂ ಪಾರಂಪರಿಕ ಕಬ್ಬಿಣ ತಯಾರಿಸುವ ಮುದ್ದೆಗಮ್ಮಾರ ಸಮುದಾಯ ಈ ಗ್ರಾಮದಲ್ಲಿದೆ. ಸಂಡೂರು ಸಂಸ್ಥಾನದ ಅರಸನಾಗಿದ್ದ ಯಶವಂತರಾವರ ನೆನಪಿಗಾಗಿ ಈ ಗ್ರಾಮಕ್ಕೆ 'ಯಶವಂತನಗರ' ಎಂದು ಮರು ನಾಮಕರಣ ಮಾಡಲಾಗಿದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಗೆ ಸೋಮಲಾಪುರ ಗ್ರಾಮವು ಒಳಪಟ್ಟಿದೆ. ಮಳೆ ಮಾಪನ ಕೇಂದ್ರದ ಮಾಹಿತಿಯ ಪ್ರಕಾರ ವಾರ್ಷಿಕ ಸರಾಸರಿ ೮೦.೨೭ ಸೆಂ.ಮೀ. ಮಳೆ ಬೀಳುತ್ತದೆ. ಗರಿಷ್ಟ ಬಿಸಿಲು ೪೦ ಡಿಗ್ರಿ ಸೆಲ್ಸಿಯಸ್‌ವರೆಗೂ ದಾಖಲಾಗಿದೆ.

ಗ್ರಾಮದ ಸುತ್ತಲೂ ಕಬ್ಬಿಣ ಹಾಗೂ ಮ್ಯಾಂಗನಿಸ್ ನಿಕ್ಷೇಪದ ದೇವಗಿರಿ, ಕೆ–೧, ಕೆ–೨, ಮಲಿಯಮ್ಮನ ಬೆಟ್ಟಗಳಿವೆ. ಕಾಡಿನಲ್ಲಿ ಶ್ರೀಗಂಧ, ತೇಗ, ಮತ್ತಿ, ತಾರೆ, ಆಸು, ಆಲ, ಅತ್ತಿ, ಮೊಸಬಾಳೆ, ಸುರಗಿ, ಕಣೆ, ನಂಜು, ಬೂರುಗ, ಭೂತೆ ಮುಂತಾದ ಮರಗಳು ಇವೆ. ವಿಶೇಷವಾಗಿ ಕಾಚಿಹುಲ್ಲು ಹಾಗೂ ನಿಂಬೆಹುಲ್ಲು ಈ ಕಾಡಿನಲ್ಲಿ ದೊರೆಯುತ್ತವೆ. ಬ್ರಿಟೀಷ್ ಆಡಳಿತ ಸಂದರ್ಭದಲ್ಲಿ ನಿಂಬೆಹುಲ್ಲಿನ ಎಣ್ಣೆಯನ್ನು ಭಟ್ಟಿ ಇಳಿಸುವ ಘಟಕಗಳು ಇಲ್ಲಿದ್ದವೆಂದು ಹೇಳಲಾಗುತ್ತದೆ. ಅಂತಹ ಘಟಕಗಳ ಕುರುಹುಗಳು ಇಂದಿಗೂ ಈ ಪರಿಸರದಲ್ಲಿ ಉಳಿದಿವೆ. ಮೊಲ, ನರಿ, ಚಿರತೆ, ಜಿಂಕೆ, ಕಾಡುಹಂದಿ, ಜಿಂಕೆ, ಕಡವೆ, ಕಾಂಗುರಿ, ಕರಡಿ ಮುಂತಾದ ಪ್ರಾಣಿಗಳೊಂದಿಗೆ ವಿವಿಧ ಜಾತಿಯ ಹಾವು, ಕೌಜುಗ, ಪುರ್ಲೆ, ಗೂಗಿ, ಗುಬ್ಬಿ, ನವಿಲು, ಕಾಗೆ, ಹದ್ದು, ಗಿಳಿ ಮುಂತಾದ ಪಕ್ಷಿಗಳಿವೆ.

ಈ ಗ್ರಾಮದ ಹೊರಭಾಗದಲ್ಲಿ 'ನಾರಿಹಳ್ಳ' ಹಾಗೂ ಕಳವಿನ ಸರವು ಹೆಸರಿನ ಹಳ್ಳಗಳಿವೆ. 'ರಾಘಾಪುರ' ಕೆರೆಯೂ ಇದೆ. ಇತ್ತೀಚೆಗೆ ಕರ್ನಾಟಕ ಸರ್ಕಾರವು ಹೊಸ ಕೆರೆಯೊಂದನ್ನು ಇಲ್ಲಿ ನಿರ್ಮಿಸಿದ್ದಾರೆ. ಗ್ರಾಮದ ಮುಂಭಾಗದಲ್ಲಿಯೇ ಪ್ರಚೀನ ಕಾಲದ ಸುಂದರವಾಗಿ ಮೆಟ್ಟಿಲಿನಿಂದ ಅಲಂಕಾರಗೊಂಡ ಬೃಹತ್ ತೆರೆದ ಬಾವಿ ಇದೆ. ಇದಲ್ಲದೆ ಗ್ರಾಮದೊಳಗೆ ೨ ಚಿಕ್ಕ ತೆರೆದ ಬಾವಿಗಳು ಇವೆ. ಕುಡಿಯುವ ನೀರಿಗೆ ೧ ಲಕ್ಷ ಲೀಟರ್ ನೀರಿನ ಸಂಗ್ರಹ ಸಾಮರ್ಥ್ಯದ ೨ ನೀರಿನ ಟ್ಯಾಂಕ್‌ಗಳಿದ್ದು, ೪೬೫ ಮನೆಗಳು ನಲ್ಲಿ ಸಂಪರ್ಕ ಹೊಂದಿವೆ. ಅಲ್ಲದೆ ನಾಲ್ಕು ಸಿಸ್ಟನ್‌ಗಳೂ(ನಲ್ಲಿಯನ್ನು ಹೊಂದಿದ ಸಣ್ಣ ಟ್ಯಾಂಕ್‌ಗಳು) ಬಳಕೆಯಲ್ಲಿರುತ್ತವೆ.

ಮಾದಿಗ, ಬೇಡನಾಯಕ, ಮೇಧಾ, ಮುಸ್ಲಿಮ, ಮುದ್ದೆಗಮ್ಮಾರ, ಬಡಿಗ, ಅಗಸ, ಕುರುಬ, ಕುಂಬಾರ, ಸಿಂಪಿಗ, ಲಿಂಗಾಯತ, ಬ್ರಾಹ್ಮಣ ಮುಂತಾದ ಸಮುದಾಯಗಳು ಇವೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೧೨೭೦ ಇವೆ. ಒಟ್ಟು ಜನಸಂಖ್ಯೆ ೬೮೪೭ ಅದರಲ್ಲಿ ೩೬೦೮ ಪುರುಷರು, ೩೨೩೯ ಮಹಿಳೆಯರಿದ್ದಾರೆ. ಪರಿಶಿಷ್ಟ

ಜಾತಿಯ ಒಟ್ಟು ಜನಸಂಖ್ಯೆ ೬೮೫ ಇದೆ. ಇದರಲ್ಲಿ ೩೪೯ ಪುರುಷರು, ೩೩೬ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೫೩೩ ಇದೆ. ಇದರಲ್ಲಿ ೮೦೮ ಪುರುಷರು, ೭೨೫ ಮಹಿಳೆಯರಿದ್ದಾರೆ. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೪೪೧೬ ಇದೆ. ಅದರಲ್ಲಿ ೨೬೧೪ ಪುರುಷರು, ೧೮೦೨ ಮಹಿಳೆಯರಿದ್ದಾರೆ.

ಕೃಷಿಯೇ ಪ್ರಧಾನವಾಗಿದ್ದರೂ ಇತ್ತೀಚೆಗೆ ನಡೆಯುತ್ತಿದ್ದ ಗಣಿ ಚಟುವಟಿಕೆಯಿಂದಾಗಿ ಲಾರಿ ಚಾಲಕರು, ಗಣಿ ಕೂಲಿ ಕಾರ್ಮಿಕರು ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಈ ಗ್ರಾಮದಲ್ಲಿ ಆಹಾರ ಬೆಳೆಯಾಗಿ ಜೋಳ, ಸಜ್ಜೆ, ನವಣೆ, ರಾಗಿ, ಮೆಕ್ಕೆಜೋಳ ಬೆಳೆಯುತ್ತಾರೆ. ಬೇಳೆಕಾಳುಗಳನ್ನು ಅಕ್ಕಡಿಯ ಬೆಳೆಯಾಗಿ ಬೆಳೆಯುತ್ತಾರೆ. ಎಣ್ಣೆ ಕಾಳುಗಳಲ್ಲಿ ಸೂರ್ಯಕಾಂತಿ, ಶೇಂಗಾ ಬೆಳೆಯುತ್ತಾರೆ. ತೋಟಗಾರಿಕಾ ಬೆಳೆಯಾಗಿ ಬಾಳೆ, ಪಪ್ಪಾಯಿ, ತರಕಾರಿ ಬೆಳೆಯುತ್ತಾರೆ.

ಆರು ಅಂಗನವಾಡಿ ಕೇಂದ್ರ, ಒಂದು ಸರ್ಕಾರಿ ಪ್ರಾಥಮಿಕ ಹಾಗೂ ಒಂದು ಉರ್ದು ಕಿರಿಯ ಪ್ರಾಥಮಿಕ ಶಾಲೆ, ಎರಡು ಖಾಸಗಿ ಪ್ರಾಥಮಿಕ ಹಾಗೂ ಖಾಸಗಿ ಪ್ರೌಢಶಾಲೆ, ಸೊಂಡೂರು ಎಜುಕೇಶನ್ ಸೊಸೈಟಿಯ ಪೊಲಿಟೆಕ್ನಿಕ್ ಕಾಲೇಜು, ಆಯುರ್ವೇದ ಆಸ್ಪತ್ರೆ, ಗ್ರಂಥಾಲಯಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯನ್ನು ಪಡೆಯುವ ಫಲಾನುಭವಿಗಳು ಇದ್ದಾರೆ.

ಮುಸ್ಲಿಮ್ ಹಾಗೂ ಇತರೆ ಸಮುದಾಯದವರ ಎರಡು ಪ್ರತ್ಯೇಕ ಸ್ಮಶಾನಗಳಿವೆ.

ಗಂಡಿ ಮಲೆಯಮ್ಮ, ಈಶ್ವರ, ಆಂಜನೇಯ, ಕಾಳಮ್ಮ ಮುಂತಾದ ದೇವಸ್ಥಾನಗಳಿವೆ. ಎರಡು ಜುಮ್ಮಾ ಮಸೀದಿ, ಎರಡು ಪಂಝಾಗಳನ್ನು ಕೂರಿಸುವ ಮಸೀದಿಗಳಿವೆ. ೧೬ನೇ ಶತಮಾನದಲ್ಲಿದ್ದರೆಂದು ಹೇಳಲಾಗುವ ಅವಧೂತ ಪರಂಪರೆಯ ಸಿದ್ದರಾಮೇಶ್ವರ ಮಠ ಇಲ್ಲಿದೆ. ಪ್ರತಿವರ್ಷ ಸಿದ್ಧರಾಮೇಶ್ವರ ರಥೋತ್ಸವ ನಡೆಯುತ್ತದೆ. ಗಂಡಿ ಮಲೆಯಮ್ಮನ ಜಾತ್ರೆಯನ್ನು ಡಿಸೆಂಬರ್–ಜನೆವರಿ ಮಧ್ಯಭಾಗದಲ್ಲಿ ಮೂರು ದಿನಗಳವರೆಗೆ ಆಚರಿಸಲಾಗುತ್ತದೆ.

೨.೮.೩.೫. ವಿಠ್ಠಲಾಪುರ : ವಿಠಲಾಪುರ ಗ್ರಾಮ ಪಂಚಾಯಿತಿಯು ಸಂಡೂರು ತಾಲೂಕಿನ ಬಳ್ಳಾರಿ ಜಿಲ್ಲೆಯ ಒಂದು ಗ್ರಾಮವಾಗಿದ್ದು, ಈ ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ೬೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮ ಪಂಚಾಯಿತಿಯು ಎಂಟು ಹಳ್ಳಿಗಳಿಂದ ಕೂಡಿದ ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನವಾಗಿರುತ್ತದೆ. ಈ ಗ್ರಾಮದಲ್ಲಿ ಪುರಾತನ ಕಾಲದ ಶಂಕರ್ ದೇವಸ್ಥಾನವು ವಿಜಯನಗರ ಸಾಮ್ರಾಜ್ಯದ ಸಮಕಾಲಿನ ದಾಖಲೆಗೆ ಸಾಕ್ಷಿಯಾಗಿದೆ. ಜೊತೆಗೆ ವಿಜಯ ವಿಠಲ ದೇವರ ಪ್ರಭಾವವಿದ್ದಿದ್ದರಿಂದ ಈ ಗ್ರಾಮಕ್ಕೆ ವಿಠಲಾಪುರ ಎಂಬ ಹೆಸರು ಬಂದಿದೆ ಎಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ.

ಗ್ರಾಮದ ಪರಿಸರವು ಬಯಲು ನಾಡಾಗಿದ್ದು ಗ್ರಾಮದ ಪೂರ್ವಭಾಗಕ್ಕೆ ವಿಭೂತಿ ಗುಡ್ಡವಿದೆ. ಊರಿನ ಮುಂಭಾಗದಲ್ಲಿ ಹಳ್ಳವೊಂದು ಹರಿಯುತ್ತಿದ್ದು ಮಳೆಗಾಲದಲ್ಲಿ ತುಂಬಿರುತ್ತದೆ. ಈ ಹಳ್ಳವು ವಿಠ್ಠಲಾಪುರ ಕೆರೆಗೆ ಹೋಗಿ ಸೇರುತ್ತದೆ. ೪ ತೆರೆದ ಬಾವಿಗಳು, ೫ ಕೊಳವೆ ಬಾವಿಗಳಿವೆ. ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತವೆ.

ಭೋವಿ, ಮಾದಿಗ, ವಾಲ್ಮೀಕಿ, ಮುಸ್ಲಿಮ್, ಕುರುಬ, ನೇಕಾರ, ಬಡಿಗೇರ್, ಕಮ್ಮಾರರು, ಲಿಂಗಾಯತ ಮುಂತಾದ ಸಮುದಾಯಗಳು ಇವೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೫೪೯ ಇವೆ. ಒಟ್ಟು ಜನಸಂಖ್ಯೆ ೨೮೭೫ ಅದರಲ್ಲಿ ೧೪೨೬ ಪುರುಷರು, ೧೪೪೯ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೪೪೭ ಇದೆ. ಇದರಲ್ಲಿ ೨೩೫ ಪುರುಷರು, ೨೧೨ ಮಹಿಳೆಯರಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೯೬ ಇದೆ. ಇದರಲ್ಲಿ ೯೪ ಪುರುಷರು, ೧೦೨ ಮಹಿಳೆಯರಿದ್ದಾರೆ. ಗ್ರಾಮದಲ್ಲಿ ಒಟ್ಟು ಸಾಕ್ಷರರ ಸಂಖ್ಯೆ ೧೪೬೬ ಇದೆ. ಅದರಲ್ಲಿ ೮೭೭ ಪುರುಷರು, ೫೮೯ ಮಹಿಳೆಯರಿದ್ದಾರೆ.

೩ ಅಂಗನವಾಡಿ, ಪ್ರಾಥಮಿಕ ಶಾಲೆ ಇವೆ, ಪ್ರೌಢಶಾಲೆ, ೫ ಸ್ತ್ರೀ ಶಕ್ತಿ ಸಂಘ, ವಾಲ್ಮೀಕಿ ಯುವಕ ಸಂಘ, ಅಂಬೇಡ್ಕರ್ ಸಂಘ, ಕನ್ನಡ ರಕ್ಷಣಾ ವೇದಿಕೆ, ರೈತ ಸಂಘಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯನ್ನು ಪಡೆಯುವ ಫಲಾನುಭವಿಗಳು ಇದ್ದಾರೆ. ೨ ಸಣ್ಣ ಹೋಟೆಲ್‌ಗಳಿವೆ. ೩ ಅಂಗಡಿಗಳಿವೆ.

ಈಶ್ವರ, ವಿಠ್ಠಲ, ಆಂಜನೇಯ, ಉಡುಚಲಮ್ಮ, ಮಾರೆಮ್ಮ, ಮಲೆಯಮ್ಮ ಮುಂತಾದ ದೇವಸ್ಥಾನಗಳೊಂದಿಗೆ ಮಸೀದಿ ಇದೆ. ಯುಗಾದಿ, ದಸರ, ದೀಪಾವಳಿ, ಮೊಹರಂ ಮುಂತಾದ ಹಬ್ಬಗಳೊಂದಿಗೆ ಮುಸ್ಲಿಂ ಹಬ್ಬಗಳ ಆಚರಣೆ ಇದೆ. ಡೊಳ್ಳು, ಹಲಗೆ, ಉರುಮೆ ಬಾರಿಸುವ ಕಲಾವಿದರಿದ್ದಾರೆ. ಮುಸ್ಲಿಮ್ ಮತ್ತು ಇತರೆ ಸಮುದಾಯದವರ ಎರಡು ಪ್ರತ್ಯೇಕ ಸ್ಮಶಾನಗಳಿವೆ.

೨.೮.೪. ಬಳ್ಳಾರಿ ತಾಲೂಕು

ಬಳ್ಳಾರಿಯು ತಾಲೂಕು ಕೇಂದ್ರಗಳಲ್ಲೊಂದು ಜಿಲ್ಲೆಯಲ್ಲಿಯೇ ವಿಸ್ತಾರವಾದ ತಾಲೂಕು ಇದಾಗಿದೆ. ತುಂಗಾಭದ್ರಾ ಬಲದಂಡೆಯ ಕಾಲುವೆಗಳಿಂದಾಗಿ ಜಿಲ್ಲೆಯ ಅರ್ಧದಷ್ಟು ಭಾಗವು ಕೃಷಿಗೆ ನೀರನ್ನ ಪಡೆದರೆ ಇನ್ನೂ ಅರ್ಧದಷ್ಟು ಕೃಷಿ ಭೂಮಿಯು ಮಳೆ ನೀರನ್ನೇ ಆಶ್ರಯಿಸ ಬೇಕಾಗಿದೆ. ಬೆಟ್ಟಗುಡ್ಡಗಳು ಈ ತಾಲೂಕಿನಲ್ಲಿವೆ ಅಷ್ಟೇ ಅಲ್ಲದೆ ಪ್ರಾಗೈತಿಹಾಸಿಕ ನೆಲೆಗಳೂ ಇಲ್ಲಿವೆ. ಈ ತಾಲೂಕು ಭೌಗೋಳಿಕವಾಗಿ ೧,೬೭೯.೬೮ ಚದರ ಕಿಲೋಮೀಟರ್ ವಿಸ್ತಾರವಾಗಿದೆ. ೨೦೧೧ರ ಜನಗಣತಿ ಪ್ರಕಾರ ತಾಲೂಕಿನಲ್ಲಿ ೬೯.೫೮೮ ಕುಟುಂಬಗಳು ನೆಲೆಗೊಂಡಿವೆ. ಒಟ್ಟು ಜನಸಂಖ್ಯೆ

೩,೬೦,೪೮೪ ಇದೆ. ಇದರಲ್ಲಿ ಪುರುಷರು ೧,೮೧,೫೯೫ ಹಾಗೂ ಮಹಿಳೆಯರು ೧,೭೮,೮೮೯ ಇರುವರು. ೦–೬ ವಯೋಮಾನದ ಮಕ್ಕಳು ಒಟ್ಟು ೫೨,೩೦೩ ಇರುವರು. ಇವರಲ್ಲಿ ೨೬,೫೮೦ ಗಂಡು ಹಾಗೂ ೨೫,೭೨೩ ಹೆಣ್ಣುಮಕ್ಕಳಿವೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೭೫,೮೭೮ ಇದೆ. ಇದರಲ್ಲಿ ೩೭,೯೫೨ ಪುರುಷರು ಹಾಗೂ ೩೭,೯೨೬ ಮಹಿಳೆಯರಿರುವರು ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೮೮,೫೪೧ ಇದೆ. ಇದರಲ್ಲಿ ೪೪,೧೮೦ ಪುರುಷರು ಹಾಗೂ ೪೪,೩೬೧ ಮಹಿಳೆಯರಿರುವರು. ಒಟ್ಟು ೧,೭೬,೫೧೨ ಸಾಕ್ಷರರಿರುವರು. ಇದರಲ್ಲಿ ೧,೦೬,೫೧೪ ಪುರುಷರು ಹಾಗೂ ೬೯,೯೮ ಮಹಿಳೆಯರಿರುವರು.

೨.೮.೪.೧. ಎತ್ತಿನ ಬೂದಿಹಾಳ್ : ಎತ್ತಿನಬೂದಿಹಾಳ್ ಗ್ರಾಮಪಂಚಾಯತಿ ಕೇಂದ್ರವು ತಾಲೂಕು ಕೇಂದ್ರ ಬಳ್ಳಾರಿಗೆ ೧೮ ಕಿಲೋ ಮೀಟರ್ ದೂರವಿದೆ, ಗ್ರಾಮಪಂಚಾಯತಿಯ ಒಟ್ಟು ವಿಸ್ತೀರ್ಣ ೧೧೦೯೭.೮೨ ಇದೆ. ಕಣಶಿಲೆಯ ಗುಡ್ಡಗಳು ಪಂಚಾಯತಿ ವ್ಯಾಪ್ತಿಯಲ್ಲಿವೆ. ಆಂಧ್ರ, ಕರ್ನಾಟಕದ ಗಡಿಭಾಗದಲ್ಲಿ ಈ ಪಂಚಾಯತಿ ಇದೆ. ಹತ್ತಿರದಲ್ಲಿ ಹಗರಿ ಹಳ್ಳ ಹರಿಯುತ್ತದೆ. ಕುರುಚಲು ಕಾಡೂ ಇದೆ. ಆಂಧ್ರದ ಗಡಿಗೆ ಹತ್ತಿರದಲ್ಲಿರುವುದರಿಂದ ದ್ವೈಭಾಷಿಕತೆ, ಮಿಶ್ರ ಸಂಸ್ಕೃತಿಯನ್ನು ನೋಡುತ್ತೇವೆ.

ವಾರ್ಷಿಕ ಸರಾಸರಿ ೪೧ ಸೆಂ.ಮೀ. ಮಳೆ ಬೀಳುತ್ತದೆ. ಬಿಸಿಲು ೪೩ ಸೆಂ ಮೀ. ಮತ್ತು ಚಳಿ ೨೬ ಸೆಂ. ಮೀ ದಾಖಲಾಗಿದೆ. ಪರಿಸರದಲ್ಲಿ ಕೃಷಿಗೆ ಯೋಗ್ಯವಾದ ಕಪ್ಪು ಮತ್ತು ಕೆಂಪು ಮಣ್ಣು ಇದೆ ಇಲ್ಲಿ ಹುಣಸೆ, ಬೇವು, ತಾರೆ, ಬಾಗೆ, ತೇಗ, ಮುಂತಾದ ಮರಗಳಿವೆ. ಕಾಡಿನಲ್ಲಿ ನರಿ, ತೋಳ, ಮೊಲ, ಕಾಡುಹಂದಿ ಮುಂತಾದ ಪ್ರಾಣಿಗಳು ಮತ್ತು ಕೌಜಗ, ಬುರ್ಲೆ, ಬೆಳವ ಮುಂತಾದ ಪಕ್ಷಿಗಳು ಮತ್ತು ವಿಷಜಂತುಗಳಾದ ಹಾವು, ಚೇಳುಗಳು ಕಾಣಸಿಗುತ್ತವೆ. ಹೀಗೆ ಹತ್ತು ಹಲವು ವನ್ಯ ಮೃಗಗಳಿವೆ ದಟ್ಟವಾದ ಕಾಡು ಗುಡ್ಡಗಳಿದ್ದು ವಿವಿಧ ಪ್ರಾಣಿ–ಪಶು–ಪಕ್ಷಿಗಳಿವೆ, ಆಶ್ರಯ ತಾಣವಾಗಿದೆ.

ಪ್ರಾಗೈತಿಹಾಸಿಕ ನೆಲೆಯಾಗಿರುವ ಈ ಗ್ರಾಮವು ನವಶಿಲಾಯುಗಕ್ಕೆ ಸಂಬಂಧಿಸಿದ ಬೂದಿಗುಡ್ಡವನ್ನು ಹೊಂದಿತ್ತು. ಈ ಬೂದಿದಿಬ್ಬದಿಂದಾಗಿಯೇ ಗ್ರಾಮಕ್ಕೆ ಎತ್ತಿನಬೂದಿ+ಹಾಳ್> ಎತ್ತಿನಬೂದಿಹಾಳ್ ಎಂದು ಹೆಸರು ಬಂದಿರುವ ಸಾಧ್ಯತೆಗಳಿವೆ. ಕರ್ನಾಟಕದಲ್ಲಿ ಈ ರೀತಿಯ ಬೂದಿ ದಿಬ್ಬಗಳು ಸಾಕಷ್ಟುಕಡೆ ದೊರೆಯುತ್ತವೆ.

ಗ್ರಾಮದ ಪಶ್ಚಿಮಕ್ಕೆ ದ್ಯಾವಮ್ಮಗುಡ್ಡ ಎಂದು ಕರೆಯುವ ಕಣಶಿಲೆಯ ಗುಡ್ಡವಿದೆ. ಗರಚು ಹಾಗೂ ಕಪ್ಪು ಭೂಮಿಯನ್ನು ಹೊಂದಿದ್ದು ಕಪ್ಪು ಭೂಮಿಯು ಕೃಷಿಗೆ ಯೋಗ್ಯವಾಗಿದೆ. ಗ್ರಾಮಕ್ಕೆ ಹತ್ತಿರದಲ್ಲಿಯೇ ಚಂದ್ರಗಿರಿ ಹಳ್ಳ ಹರಿಯುತ್ತದೆ.

೨೦೧೧ರ ಜನಗಣತಿಯ ಪ್ರಕಾರ ಈ ಗ್ರಾಮದ ಒಟ್ಟು ಜನಸಂಖ್ಯೆ ೪೬೨೭. ಪರಿಶಿಷ್ಟ ಜಾತಿಯವರ ಜನಸಂಖ್ಯೆ ೬೭೨, ಪರಿಶಿಷ್ಟ ಪಂಗಡದವರ ಜನಸಂಖ್ಯೆ ೨೦೪೦, ಒಟ್ಟು ಸಾಕ್ಷರರ ಸಂಖ್ಯೆ ೧೯೭೬. ಅದರಲ್ಲಿ ಪುರುಷರು ೧೨೪೭, ಮಹಿಳೆಯರು ೭೨೯ ಜನರು ಇದ್ದಾರೆ. ಹೆಂಚಿನ, ಕಲ್ಲಿನ, ಮಣ್ಣಿನ, ಆರ್. ಸಿ. ಸಿ ಮನೆಗಳು ಹಾಗೂ ಗುಡಿಸಲುಗಳಿವೆ.

ಮಾದಿಗ, ಭೋವಿ, ನಾಯಕ, ಮುಸ್ಲೀಂ, ಅಗಸ, ಉಪ್ಪಾರ, ಕುರುಬ, ಬಡಿಗೇರ, ಶೆಟ್ಟಿಬಲಿಜ, ಲಿಂಗಾಯತ ಮುಂತಾದ ಸಮುದಾಯಗಳಿವೆ. ಪ್ರಮುಖ ಭಾಷೆ ಕನ್ನಡವಾಗಿದ್ದು ತೆಲುಗು, ಉರ್ದು ಭಾಷೆಗಳನ್ನೂ ಮಾತನಾಡುವವರಿದ್ದಾರೆ.

ಸಿಮೆಂಟ್ ಮತ್ತು ಕಚ್ಚಾ ರಸ್ತೆಗಳಿವೆ. ತೆರೆದ ಚರಂಡಿ, ಸಮುದಾಯ ಶೌಚಾಲಯಗಳಿವೆ. ಇತ್ತೀಚೆಗೆ ಸರ್ಕಾರದ ಯೋಜನೆಯಿಂದಾಗಿ ಬಹುತೇಕ ಕುಟುಂಬಗಳು ವೈಯಕ್ತಿಕ ಶೌಚಾಲಯ ಕಟ್ಟಿಕೊಳ್ಳುತ್ತಿವೆ. ಮುಸ್ಲೀಂ, ಕ್ರೈಸ್ತ, ಮತ್ತು ಇತರ ಎಲ್ಲಾ ಸಮುದಾಯಗಳ ಪ್ರತ್ಯೇಕ ಸ್ಮಶಾನಗಳಿವೆ.

ಕುಡಿಯುವ ನೀರಿನ ಸಂಗ್ರಹಕ್ಕಾಗಿ ಎರಡು ಟ್ಯಾಂಕ್‌ಗಳನ್ನು ಕಟ್ಟಲಾಗಿದೆ. ಸಾರ್ವಜನಿಕ ನಲ್ಲಿಯ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇತ್ತೀಚೆಗೆ ಸರ್ಕಾರದಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲಾಗಿದೆ.

ರಸ್ತೆ ಸಂಚಾರಕ್ಕೆ ಸರಕಾರಿ ಬಸ್‌ಗಳ ಮತ್ತು ಖಾಸಗಿ ವಾಹನಗಳ ಸೌಲಭ್ಯವಿದೆ. ಅಂಚೆ ಸೇವೆಯೊಂದಿಗೆ ಸಂಪರ್ಕ ಸಾಧನವಾಗಿ ಮೊಬೈಲ್‌ಗಳು ಬಳಕೆಗೊಳ್ಳುತ್ತಿವೆ. ೧೦ ಸ್ತ್ರೀಶಕ್ತಿ ಗುಂಪುಗಳಿದ್ದು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಯ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯುತ್ತಾರೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಎತ್ತಿನಬೂದಿಹಾಳು, ಕಮ್ಮರಚೇಡು, ಬುರ್‍ರನಾಯಕನಹಳ್ಳಿ ಗ್ರಾಮಗಳು ಬರುತ್ತವೆ.

೨.೮.೪.೨. ಏಳುಬೆಂಚಿ : ಏಳುಬೆಂಚಿಯು ಗ್ರಾಮಪಂಚಾಯತಿ ಕೇಂದ್ರವಾಗಿದೆ. ತಾಲೂಕು ಕೇಂದ್ರದಿಂದ ೨೮ ಕಿಲೋಮೀಟರ್ ದೂರದಲ್ಲಿದೆ. ಏಳುಬೆಂಚಿ ಗ್ರಾಮವು ಸಪ್ತಪಲ್ಲವಪುರ ಎಂಬ ನಾಮದಿಂದ ಸಂಭೋದನೆಗೊಳ್ಳುತ್ತಿತ್ತು ಎಂದೂ, ಈ ಗ್ರಾಮದಲ್ಲಿ ಏಳು ಕೆರೆಗಳು ಇರುವ ಕಾರಣದಿಂದ ಸಂಸ್ಕೃತ ಭಾಷೆಯಲ್ಲಿ ಈ ಗ್ರಾಮವನ್ನು ಸಪ್ತಪಲ್ಲವಪುರವೆಂದು ಕರೆಯಲಾಗುತ್ತಿದ್ದೆಂದೂ ಗ್ರಾಮಪಂಚಾಯತಿಯು ಗ್ರಾಮದ ಕುರಿತು ಸ್ಥಳೀಯರು ತಿಳಿಸುತ್ತಾರೆ. ಗ್ರಾಮದ ಸುತ್ತಲೂ ಗುಡ್ಡಗಳಿದ್ದು ಅವುಗಳನ್ನು ಏಳುಬೆಂಚಿ(ಏಳು ಗುಡ್ಡ) ಎಂದು ಕರೆದಿರುವ ಸಾಧ್ಯತೆ ಇದೆ. ಏಳು ಗಡ್ಡಗಳ ಕೆಳಗೂ ಏಳು ಕುಂಟೆಗಳಿವೆ. ಮಳೆಗಾಲದಲ್ಲಿ ಗುಡ್ಡದಿಂದ ಹರಿದುಬರುವ ನೀರು ಈ ಕುಂಟೆಗಳಲ್ಲಿ ಸಂಗ್ರಹವಾಗುತ್ತವೆ.

ಭೌಗೋಳಿಕವಾಗಿ ೧೯೭೧.೫೮ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಇಲ್ಲಿಯ ಭೂಮಿಯು ಕೆಂಪು ಮತ್ತು ಕಪ್ಪು ಮಣ್ಣು ಹೊಂದಿದೆ. ತುಂಗಾಭದ್ರಾ ಬಲದಂಡೆಯ ಮೇಲ್ಮಟ್ಟದ ಕಾಲುವೆಯಿಂದಾಗಿ ಭೂಮಿಯು ನೀರಿನ ಸೌಲಭ್ಯವನ್ನು ಪಡೆಯುವಂತಾಗಿದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೮೧೮ ಇದ್ದು ಗ್ರಾಮದ ಒಟ್ಟು ಜನಸಂಖ್ಯೆಯು ೪೦೫೦, ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೬೩೧, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೭೦೭, ಒಟ್ಟು ಸಾಕ್ಷರರು ೧೮೮೩, ಇದರಲ್ಲಿ ಪುರುಷರು ೧೧೧೫ ಹಾಗೂ ಮಹಿಳೆಯರು ೭೬೮ ಇದ್ದಾರೆ. ಮಾದಿಗ, ಕೊರಮ, ನಾಯಕ, ಕುರುಬ, ಲಿಂಗಾಯತ ಮುಂತಾದ ಸಮುದಾಯದವರಿದ್ದಾರೆ. ಪ್ರಮುಖ ಭಾಷೆ ಕನ್ನಡವಾಗಿದೆ. ಉರ್ದು, ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ.

ಐದು ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗ್ರಂಥಾಲಯ, ಆಯುರ್ವೇದ ಆಸ್ಪತ್ರೆ, ಎ.ಎನ್ ಎಂ ಕೇಂದ್ರಗಳಿವೆ. ಒಂದು ಸಮುದಾಯಭವನವನ್ನು ಕಟ್ಟಲಾಗಿದೆ. ಬಯಲು ರಂಗಮಂದಿರವಿದೆ.

ಕಿರುನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ. ಮುಸ್ಲೀಂ ಹಾಗೂ ಇತರ ಸಮುದಾಯಗಳಿಗಾಗಿ ಪ್ರತ್ಯೇಕವಾದ ಸಾರ್ವಜನಿಕ ಸ್ಮಶಾನಗಳಿವೆ.

ಈಶ್ವರ, ತಾಯಮ್ಮ, ಸುಂಕಲಮ್ಮನ, ಕರಿಬಸವೇಶ್ವರ, ಕಟ್ಟಿ ಬಸವೇಶ್ವರ, ಆಂಜನೇಯ, ಈರಣ್ಣ, ದುರ್ಗವ್ವ, ಉಡಚಲಮ್ಮ ಮುಂತಾದ ದೇವಸ್ಥಾನಗಳಿವೆ. ವರ್ಷಕ್ಕೊಮ್ಮೆ ಬಸವೇಶ್ವರ ಜಾತ್ರೆ ನಡೆಯುತ್ತದೆ. ಬಯಲಾಟ ಪ್ರದರ್ಶನಕ್ಕೆ ತುಂಬಾ ಹೆಸರುವಾಸಿಯಾದ ಈ ಗ್ರಾಮದಲ್ಲಿ ಮನೆಗೊಬ್ಬರಂತೆ ಬಯಲಾಟ ಕಲಾವಿದರು ದೊರೆಯುತ್ತಾರೆ. ಕಾಳಿಂಗರಾಯ, ಮಾಳಿಂಗರಾಯ, ಗುಣಸಾಗರಿ ಮುಂತಾದ ಖಂಡಕಾವ್ಯ ಹಾಗೂ ಸೋಬಾನೆಯಂತಹ ಜನಪದ ಹಾಡುಗಾರರು ಇಲ್ಲಿದ್ದಾರೆ.

ಏಳುಬೆಂಚಿ ಗ್ರಾಮ ಪಂಚಾಯತಿಯು ಏಳುಬೆಂಚಿ, ತಿಮ್ಮಲಾಪುರ ಗ್ರಾಮಗಳಿವೆ.

೨.೮.೪.೩. ಓರ್ವಾಯಿ : ಓರ್ವಾಯಿ ಗ್ರಾಮಪಂಚಾಯತಿ ಕೇಂದ್ರವಾಗಿದೆ. ನಾರಿಹಳ್ಳದ ದಂಡೆಯಮೇಲೆ ಗ್ರಾಮವಿದೆ. ಕುರುಗೋಡು ಸೀಮೆಗೆ ಸೇರಿದ ಓರ್ವಾಯ ಎನ್ನುವ ಸಾಮಂತ ದೊರೆಯ ನೆನಪಿಗಾಗಿ ಈ ಗ್ರಾಮಕ್ಕೆ ಓರ್ವಾಯಿ ಎಂದು ಹೆಸರು ಬಂದಿದೆಯಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಓರ್ವಾಯಿ ಗ್ರಾಮವು ಕುರುಗೋಡು ಸೀಮೆಯ ಸಾಮಂತ ದೊರೆಗಳ ಆಡಳಿತಕ್ಕೆ ಸೇರಿದ್ದಿತೆಂದು ಚರಿತ್ರೆಯ ಮೂಲಕ ತಿಳಿದುಬರುತ್ತದೆ. ಗ್ರಾಮದೊಳಗೆ ಕುರುಗೋಡಿನ ಅರಸರು ಕಟ್ಟಿಸಿದರೆಂದು ಹೇಳಲಾಗುವ ರಾಮಲಿಂಗೇಶ್ವರ ಪಾಳು ದೇಗುಲವಿದೆ.

ನಾರಿಹಳ್ಳದ ದಂಡೆಯ ಮೇಲೆ ಗ್ರಾಮವಿದೆ. ಕಿರು ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರನ್ನು ಗ್ರಾಮಕ್ಕೆ ಒದಗಿಸಲಾಗಿದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದಲ್ಲಿ ಒಟ್ಟು ೫೬೪ ಕುಟುಂಬಗಳಿದ್ದು, ಜನಸಂಖ್ಯೆಯು ೨೯೭೧ ಇರುವುದು. ಇದರಲ್ಲಿ ಪರಿಶಿಷ್ಟ ಜಾತಿಯ ૩೪೮, ಪರಿಶಿಷ್ಟ ಪಂಗಡದ ೧೦೪೦ ಜನಸಂಖ್ಯೆ ಇರುವುದು. ಒಟ್ಟು ಸಾಕ್ಷರರು ೧೩೯೮ ಇದ್ದಾರೆ. ಇದರಲ್ಲಿ ಪುರುಷರು ೮೧೮ ಹಾಗೂ ಮಹಿಳೆಯರು ೫೮೦ ಇದ್ದಾರೆ.

೪ ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಂಥಾಲಯ, ಅಂಚೆ ಕಛೇರಿ ಇವೆ. ೭ ಸ್ತ್ರೀ ಶಕ್ತಿ ಸಂಘಗಳು ಇವೆ. ಒಂದು ಸಮುದಾಯಭವನ ಇದೆ. ಒಂದು ಬಯಲು ರಂಗಮಂದಿರವಿದೆ. ಮುಸ್ಲೀಂ ಹಾಗೂ ಇತರ ಸಮುದಾಯಗಳಿಗೆ ಒಟ್ಟು ಎರಡು ಸಾರ್ವಜನಿಕ ಸ್ಮಶಾನಗಳು ಇವೆ.

ರಾಮಲಿಂಗೇಶ್ವರ, ಪಂಪಾಪತಿ, ಈಶ್ವರ, ಬಿಳಿಬಾಯಪ್ಪ, ಆಂಜನೇಯ, ಈರಣ್ಣ, ಮಾರೆಮ್ಮ, ಮಹಾಂಕಾಳಿ ಮುಂತಾದ ದೇವಸ್ಥಾನಗಳು ಇವೆ. ಒಂದು ಮಸೀದಿ ಇದೆ. ಪ್ರತಿ ವರ್ಷ ಈಶ್ವರನ ಜಾತ್ರೆ ಮಾಡುತ್ತಾರೆ. ಈ ಪಂಚಾಯತಿಯ ವ್ಯಾಪ್ತಿಯಲ್ಲಿ ಗುತ್ತಿಗನೂರು, ಪಟ್ಟಣಸೆರಗು, ಓರ್ವಾಯಿ, ಮಾರುತಿ ಕ್ಯಾಂಪುಗಳಿವೆ.

೨.೮.೪.೪ ಬೆಳಗಲ್ಲು : ಬೆಳಗಲ್ಲು ಗ್ರಾಮ ಪಂಚಾಯತಿಯು ಬಳ್ಳಾರಿ ತಾಲ್ಲೂಕು ಕೇಂದ್ರದಿಂದ ೦೯ ಕಿ.ಮೀ ದೂರದಲ್ಲಿದೆ. ಬೆಳಗಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬೆಳಗಲ್ಲು, ಜಾನಕುಂಟೆ, ಹರಗಿನದೋಣಿ ಗ್ರಾಮಗಳು ಬರುತ್ತವೆ. ಬೆಳಗಲ್ಲು ತಾಂಡ ಹಾಗೂ ಜಾನುಕುಂಟೆ ತಾಂಡಗಳಿವೆ. ಬಿ. ಬೆಳಗಲ್ಲು ಗ್ರಾಮಪಂಚಾಯತಿ ಪ್ರದೇಶವು ಬಳ್ಳಾರಿ ನಗರ ಪ್ರದೇಶಕ್ಕೆ ಹತ್ತಿರವಿರುವುದರಿಂದ ವಿವಿಧ ಉದ್ದಿಮೆಗಳು ಇಲ್ಲಿ ಪ್ರವೇಶಪಡೆದಿವೆ. ಕೆಂಪು ಭೂಮಿಯನ್ನು ಹೊಂದಿರುವ ಈ ಪ್ರದೇಶವು ವ್ಯವಸಾಯಕ್ಕೆ ಯೋಗ್ಯವಾಗಿದೆ.

ವಾರ್ಷಿಕ ಸರಾಸರಿ ೨೮ ಸೆಂ.ಮೀ. ಮಳೆ ಬೀಳುತ್ತಿತ್ತು. ಆದರೆ ಇತ್ತೀಚೆಗೆ ಪರಿಸರದಲ್ಲಾದ ಏರುಪೇರಿನಿಂದಾಗಿ ಮಳೆಯ ಪ್ರಮಾಣ ಕಡಿಮೆಯಾಗಿದೆ.

ಬೆಳಗಲ್ಲಿಗೆ ಪೂರ್ವಪದವಾಗಿ ಬಿ ಸೇರಿಸಲ್ಪಟ್ಟಿದೆ. ಇಂಗ್ಲೀಷ್ ಬಿ ಅಕ್ಷರವು ಬೇಡ ಎಂಬುದನ್ನು ಸೂಚಿಸುತ್ತದೆ. ಬೇಡರು ಹೆಚ್ಚಿನ ಪ್ರಮಾಣದಲ್ಲಿ ಗ್ರಾಮದೊಳಗಿರುವುದರಿಂದ ಬೇಡರ ಬೆಳಗಲ್ಲು ಎಂದು ಕರೆಯುವುದಾಗಿ ಸ್ಥಳೀಯರು ತಿಳಿಸುತ್ತಾರೆ. ಗ್ರಾಮದ ಸುತ್ತ ಕಣಶಿಲೆಯ ಬೆಟ್ಟಗಳಿವೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೭೧೨.೬ ಹೆಕ್ಟರ್ ಇದೆ. ಈ ಗ್ರಾಮ ವ್ಯಾಪ್ತಿಗೆ ಬೆಳಗಲ್ಲು ತಾಂಡ ಒಳಪಟ್ಟಿದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೧೦೫೧ಇದ್ದು ಗ್ರಾಮದ ಒಟ್ಟು ಜನಸಂಖ್ಯೆಯು ೫೬೨೬ ಇದೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೩೪೮೯, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೭೮೬. ಸಾಕ್ಷರರ ಸಂಖ್ಯೆಯು ಒಟ್ಟು ೩೦೨೮ರಷ್ಟಿದೆ. ಇದರಲ್ಲಿ ಪುರುಷರು ೧೮೮೭ ಹಾಗೂ ಮಹಿಳೆಯರು ೧೧೪೧ರಷ್ಟಿದ್ದಾರೆ.

ಮಾದಿಗ, ಬೋವಿ, ನಾಯಕ, ಮುಸ್ಲಿಮ್, ಅಗಸ, ಉಪ್ಪಾರ, ಕಮ್ಮಾರ, ಕಾಪುರೆಡ್ಡಿ, ಕುರುಬ, ಪದ್ಮಸಾಲಿ, ಲಿಂಗಾಯಿತ ಮತ್ತು ಹಜಾಮ ಮುಂತಾದ ಸಮುದಾಯಗಳಿವೆ. ಹೆಂಚು, ಕಲ್ಲು, ಮಣ್ಣು, ಕಾಂಕ್ರೇಟ್ ಮನೆ ಹಾಗೂ ಗುಡಿಸಲುಗಳಿವೆ.

ಕನ್ನಡ ಭಾಷೆಯೊಂದಿಗೆ ಉರ್ದು, ತೆಲುಗು ಮುಂತಾದ ಭಾಷೆಗಳನ್ನೂ ಮಾತನಾಡುತ್ತಾರೆ.

ಗ್ರಾಮದವರು ಆರ್ಥಿಕ ವ್ಯವಹಾರಕ್ಕಾಗಿ ಬೆಳಗಲ್ಲು ಗ್ರಾಮದಲ್ಲಿರುವ ಪ್ರಗತಿ ಗ್ರಾಮೀಣ ಬ್ಯಾಂಕ್, ವ್ಯವಸಾಯೋತ್ಪನ್ನ ಸಹಕಾರಿ ನಿಯಮಿತ ಮುಂತಾದವುಗಳನ್ನು ಆಶ್ರಯಿಸಿದ್ದಾರೆ. ೧೨ ಸ್ತ್ರೀ ಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ೩ ಅಂಗನವಾಡಿ ಕೇಂದ್ರ, ಸರಕಾರಿ ಪ್ರಾಥಮಿಕ ಶಾಲೆ, ಇದೆ. ಆಂಗ್ಲ ಮಾಧ್ಯಮದ ನಂದಿ ಇಂಟರ್‌ನ್ಯಾಸನಲ್, ಅಕ್ಷರ ಗಂಗೋತ್ರಿ, ಸಾಯಿ ಹೆಸರಿನ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆ, ನಂದಿ ಇಂಟರ್‌ನ್ಯಾಸನಲ್ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು, ಎ.ಎನ್.ಎಂ ಕೇಂದ್ರ, ಗ್ರಂಥಾಲಯ, ವಸತಿ ನಿಲಯಗಳಿವೆ.

ಹನುಮಂತ, ಮಾರೆಮ್ಮ, ಸುಂಕ್ಲಮ್ಮ, ಈಶ್ವರ, ಕಲ್ಲೇಶ್ವರ, ಸಿದ್ದೇಶ್ವರ ಮುಂತಾದ ದೇವಸ್ಥಾನಗಳಿವೆ. ಗ್ರಾಮದಲ್ಲಿ ಪ್ರತಿವರ್ಷ ಶ್ರಾವಣ ಮೂರನೇ ಶನಿವಾರ ಆಂಜನೇಯನ ಜಾತ್ರೆ, ಶ್ರಾವಣ ಎರಡನೇ ಸೋಮವಾರ ಸಿದ್ದೇಶ್ವರ ಜಾತ್ರೆ, ಶ್ರಾವಣ ಮೂರನೇ ಮಂಗಳವಾರ ಶುಕ್ಲದೇವಿ ಜಾತ್ರೆಯನ್ನು ವಿಶೇಷವಾಗಿ ಮಾಡುತ್ತಾರೆ.ಬಲಿಯ ಆಚರಣೆ ಇದೆ. ಗ್ರಾಮದಲ್ಲಿ ಸಮುದಾಯ ಭವನವಿದೆ.

೨.೮.೪.೫ ಶಂಕರಬಂಡೆ : ಶಂಕರಬಂಡೆ ಗ್ರಾಮವು ಬಳ್ಳಾರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೧೨ ಕಿ.ಮೀ. ದೂರದಲ್ಲಿದೆ. ಗ್ರಾಮದ ಹತ್ತಿರದಲ್ಲಿ ಶಂಕರ ದೇವಸ್ಥಾನವಿರುವ ಕಣಶಿಲೆಯ ಗುಡ್ಡವಿದೆ. ಈ ಗುಡ್ಡದಿಂದಾಗಿಯೇ ಗ್ರಾಮಕ್ಕೆ ಶಂಕರಬಂಡೆ ಎನ್ನುವ ಹೆಸರು ಬಂದಿರಬಹುದೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೭೯೪.೫೭ ಹೆಕ್ಟರ್ ಇದೆ. ಗ್ರಾಮದ ಪರಿಸರದಲ್ಲಿ ಫಲವತ್ತಾದ ಕೆಂಪು ಹಾಗೂ ಕಪ್ಪು ಭೂಮಿ ಇದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಕುರುಚಲು ಕಾಡನ್ನು ಒಳಗೊಂಡಿರುವ ಈ ಗ್ರಾಮದೊಳಗೆ ಹಾವು, ಚಿರತೆ, ಕರಡಿ, ಮೊಲ, ಕಾಡು ಬೆಕ್ಕು, ಕತ್ತೆಕಿರುಬ, ಕಾಡು ಹಂದಿ, ಕಾಗೆ, ಗಿಳಿ, ನವಿಲು, ಹದ್ದು ಮುಂತಾದ ಪ್ರಾಣಿಪಕ್ಷಿಗಳು ಕಂಡುಬರುತ್ತವೆ.

ಈ ಗ್ರಾಮದಲ್ಲಿ ಬಹುಸಂಖ್ಯಾತರು ಲಿಂಗಾಯಿತ ಸಮುದಾಯದವರಾಗಿದ್ದಾರೆ. ಇನ್ನುಳಿದಂತೆ ನಾಯಕ, ಕುರುಬ, ಪದ್ಮಸಾಲಿ, ಕಾಪುರೆಡ್ಡಿ, ಮುಸ್ಲಿಮ್, ಮಾದಿಗ, ನಾಯಕ, ಕಮ್ಮಾ, ಉಪ್ಪಾರ, ಬೋವಿ, ಕಮ್ಮಾರ, ಹಜಾಮ ಮುಂತಾದ ಅಲ್ಪಸಂಖ್ಯಾತ ಸಮುದಾಯಗಳಿವೆ. ೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೭೨೦ ಇದ್ದು ಗ್ರಾಮದ ಒಟ್ಟು ಜನಸಂಖ್ಯೆಯು ೩೪೮೮ ಇದೆ. ಇದರಲ್ಲಿ ಪುರುಷರು ೧೭೭೬ ಇದ್ದರೆ ಮಹಿಳೆಯರು ೧೭೭೨ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೨೦೭ ಇದ್ದು ೯೩ ಪುರುಷರು ಹಾಗೂ ೧೧೪ ಮಹಿಳೆಯರು ಇದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೦೩೬ ಇದೆ. ಇದರಲ್ಲಿ ಪುರುಷರು ೫೦೧ ಇದ್ದರೆ ಮಹಿಳೆಯರು ೫೩೫ ರಷ್ಟಿದ್ದಾರೆ.

ಪ್ರಮಾಣವು ಶೇಕಡ ೧೯.೩ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೭.೯ರಷ್ಟಿದೆ. ಈ ತಾಲೂಕಿನಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತೀ ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ. ಈ ತಾಲೂಕಿನ ಸಾಕ್ಷರತೆಯ ಪ್ರಮಾಣ ಕೇವಲ ಶೇಕಡ ೪೩.೬ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೫೭.೯ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಶೇಕಡ ೩೦.೩ ರಷ್ಟಿದೆ. ಈ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸಿದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಈ ತಾಲೂಕು ತುಂಬಾ ಹಿಂದುಳಿದಿರುವುದ

೨.೮.೫.೧ ಉತ್ತನೂರು: ಉತ್ತನೂರು ಗ್ರಾಮಪಂಚಾಯತಿ ಕೇಂದ್ರವು ತಾಲ್ಲೂಕು ಕೇಂದ್ರದಿಂದ ೩೫ ಕಿ.ಮೀ. ದೂರವಿದೆ. ಉತ್ತನೂರು ಗ್ರಾಮವು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಉತ್ತರೇಶ್ವರನ ಊರೇ ಉತ್ತನೂರಾಗಿದೆ ಎಂದು ಸ್ಥಳೀಯರು ತಿಳಿಸುತ್ತಾರೆ. ಉತ್ತಣ್ಣ ಎನ್ನುವ ಕುರಿಗಾಹಿ ಇಲ್ಲಿ ನೆಲೆಸಿದ್ದರಿಂದ ಗ್ರಾಮಕ್ಕೆ ಉತ್ತನೂರು ಎಂದು ಹೆಸರು ಬಂದಿತೆಂಬ ಅಭಿಪ್ರಾಯವನ್ನು ಸ್ಥಳೀಯರು ವ್ಯಕ್ತಪಡಿಸಿದರು. ಕರ್ನಾಟಕ ಆಂಧ್ರದ ಗಡಿ ಗ್ರಾಮವಾಗಿದೆ. ಉತ್ತನೂರು ಗ್ರಾಮದ ಪಕ್ಕದಲ್ಲಿಯೇ ಹಗರಿ ಹಳ್ಳ ಹರಿಯುತ್ತದೆ. ಕರ್ನಾಟಕ ಆಂಧ್ರದ ಗಡಿಯನ್ನು ವಿಭಾಗಿಸುವುದೇ ಈ ಹಗರಿ ಹಳ್ಳವಾಗಿದೆ. ಈ ಗ್ರಾಮಪಂಚಾಯತಿ ಪರಿಸರವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ನೀರಾವರಿ ಸೌಲಭ್ಯದಿಂದ ಕೃಷಿ ಚಟುವಟಿಕೆ ನಡೆಸಲು ಯೋಗ್ಯವಾಗಿದೆ. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬಳ್ಳಾರಿ ಜಾಲಿಯೇ ಹೆಚ್ಚಾಗಿ ಕಂಡುಬರುತ್ತಿದ್ದು ಬೇವು, ಹುಣುಸೆ, ಕಾಣಿಗ, ತುಗ್ಗಲಿ, ತೆರೆ ಮುಂತಾದ ಮರಗಳು ಬೆಳೆದಿವೆ. ಗ್ರಾಮ ಪಂಚಾಯತಿ ವ್ಯಾಪ್ತಿ ಪ್ರದೇಶದಲ್ಲಿ ಸಾಮಾನ್ಯವಾದ ನರಿ, ತೋಳ, ಚಿರತೆ, ಉಡ, ಕಾಡುಬೆಕ್ಕು, ವಿವಿಧ ಜಾತಿಯ ಹಾವು ಹಾಗೂ ಕೊಕ್ಕರೆ, ಮೈನಾ, ಗಿಳಿ, ಗೀಜುಗ ಮುಂತಾದ ಪಕ್ಷಿಗಳೂ ಕಾಣುತ್ತವೆ.

೨೦೧೧ರ ಜನಗಣತಿ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೬೪೪, ಒಟ್ಟು ಜನಸಂಖ್ಯೆ ೩೬೫೫, ಪರಿಶಿಷ್ಟ ಜಾತಿಯ ಜನಸಂಖ್ಯೆ ೪೩೮, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೫೨೫, ಒಟ್ಟು ಸಾಕ್ಷರರು ೧೩೯೯, ಇದರಲ್ಲಿ ಪುರುಷರು ೮೩೪, ಮಹಿಳೆಯರು ೫೩೫ರಷ್ಟಿದ್ದಾರೆ. ಮಾದಿಗ, ಚಲುವಾದಿ, ಬೋವಿ, ನಾಯಕ, ಅಗಸ, ಮುಸ್ಲಿಂ, ಬೆಸ್ತ, ಕುರುಬ, ವಿಶ್ವಕರ್ಮ, ರೆಡ್ಡಿ ಲಿಂಗಾಯಿತ ಮುಂತಾದ ಸಮುದಾಯದವರು ನೆಲೆಸಿದ್ದಾರೆ. ೫ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ, ಗ್ರಂಥಾಲಯ, ಆಯುರ್ವೇದ ಆಸ್ಪತ್ರೆ, ಸಮದಾಯ ಆರೋಗ್ಯ ಕೇಂದ್ರ, ಗ್ರಾಮೀಣ ಬ್ಯಾಂಕ್‌ಗಳಿವೆ.

ಈ ಗ್ರಾಮದಲ್ಲಿ ಉತ್ತರೇಶ್ವರ, ಈಶ್ವರ, ಆಂಜನೇಯ, ಚಾಗಲಿಂಗೇಶ್ವರ, ದ್ಯಾವಮ್ಮ, ಮಾರೆಮ್ಮ, ಸುಂಕ್ಲಮ್ಮ ಮುಂತಾದ ದೇವಾಲಯಗಳಿವೆ ಹಾಗೂ ಎರಡು ಮಸೀದಿ ಇವೆ. ಶ್ರಾವಣ ಮಾಸದಲ್ಲಿ ಮಾರೆಮ್ಮ ಉತ್ಸವ, ಹಂಪಿ ಹುಣ್ಣಿಮೆಗೆ ಉತ್ತರೇಶ್ವರ ರಥೋತ್ಸವ ಜರಗುತ್ತದೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಕೂರಿಗನೂರು, ಮೋಟಸೂಗೂರು, ಮೋಟ ಸೂಗೂರು ಕ್ಯಾಂಪ್‌ಗಳಿವೆ.

೨.೮.೫.೨ ಮುದ್ದಟನೂರು : ಮುದ್ದಟನೂರು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಸಿರುಗುಪ್ಪ ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ ದೂರದಲ್ಲಿದೆ. ಭೌಗೋಳಿಕವಾಗಿ ೪೫೩೨.೮೪ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಹತ್ತು ಕಿಲೋಮೀಟರ್ ದೂರದಲ್ಲಿ ನಿಟ್ಟೂರಿನ ಅಶೋಕನ ಶಾಸನಗಳು ದೊರೆತಿವೆ. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ತುಂಗಾಭದ್ರ ನದಿ ಹರಿಯುತ್ತಿದ್ದು ಈ ನದಿಯಿಂದ ಇಲ್ಲಿನ ರೈತರು ಪಂಪ್‌ಗಳನ್ನಳವಡಿಸಿ ತಮ್ಮ ಕೃಷಿ ಬೆಳೆಗಳಿಗಾಗಿ ನೀರನ್ನು ಉಪಯೋಗಿಸುತ್ತಾರೆ. ಇಲ್ಲಿ ಪ್ರಮುಖವಾಗಿ ಭತ್ತವನ್ನು ಬೆಳೆಯಲಾಗುತ್ತದೆ.

ಮುದ್ದಟನೂರು ಗ್ರಾಮವು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಈ ಗ್ರಾಮದಿಂದ ತುಂಗಾಭದ್ರಾ ನದಿಯು ೭ ಕಿಲೋಮೀಟರ್ ದೂರದಲ್ಲಿ ಹರಿಯುತ್ತದೆ. ನಾರಿಹಳ್ಳವು ಊರ ಮುಂಭಾಗದಲ್ಲಿಯೇ ಹರಿಯುತ್ತದೆ. ಹಳ್ಳವನ್ನು ರೈತರು ಒತ್ತುವರಿ ಮಾಡಿರುವುದರಿಂದ ಮಳೆಗಾಲದಲ್ಲಿ ಹಳ್ಳದ ನೀರು ಊರೊಳಗೇ ನುಗ್ಗುತ್ತದೆ. ಊರಿನ ಪರಿಸರದಲ್ಲಿ ಬೆಟ್ಟಗುಡ್ಡಗಳಿರದೆ ಸಮತಟ್ಟಾದ ಭೂಮಿಯಿದೆ. ಗ್ರಾಮವು ೧೦೮೬.೯೪ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ.

ಕುಡಿಯುವ ನೀರಿನ ಸಂಗ್ರಹಣೆಗಾಗಿ ಒಂದು ದೊಡ್ಡ ಟ್ಯಾಂಕ್ ಕಟ್ಟಲಾಗಿದೆ. ಸಾರ್ವಜನಿಕ ನಲ್ಲಿಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದಲ್ಲಿ ಒಟ್ಟು ಕುಟುಂಬಗಳು ೭೨೧, ಜನಸಂಖ್ಯೆ ೩೬೬೩, ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧೦೪೯, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೮೬, ಒಟ್ಟು ಸಾಕ್ಷರರು ೧೩೭೬, ಇದರಲ್ಲಿ ೭೯೭ ಪುರುಷರು, ೫೭೯ ಮಹಿಳೆಯರಿದ್ದಾರೆ.

ಮಾದಿಗ, ಭೋವಿ, ವಾಲ್ಮೀಕಿ, ಮುಸ್ಲೀಂ, ಅಗಸ, ಉಪ್ಪಾರ, ಕಮ್ಮಾ, ಕುರುಬ, ಬಡಿಗೇರ, ರೆಡ್ಡಿ, ಲಿಂಗಾಯತ, ಹಜಾಮ, ವೈಶ್ಯ, ಬ್ರಾಹ್ಮಣ ಮುಂತಾದ ಸಮುದಾಯಗಳಿವೆ.

೬ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಸರ್ಕಾರಿ ಪ್ರೌಢ ಶಾಲೆ, ಖಾಸಗಿ ಪ್ರಾಥಮಿಕ ಶಾಲೆ, ಗ್ರಂಥಲಯ, ಅಂಚೆ ಕಛೇರಿ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪಶುಚಿಕಿತ್ಸಾಲಯ, ಪ್ರಗತಿಕೃಷ್ಣಾ ಗ್ರಾಮೀಣ ಬ್ಯಾಂಕ್ ಇವೆ. ಸಮುದಾಯ ಭವನ, ಬಯಲು ರಂಗಮಂದಿರಗಳಿವೆ. ಮುಸ್ಲೀಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳಿವೆ.

ಈಶ್ವರ, ಬಸವೇಶ್ವರ, ಆಂಜನೇಯ, ಈರಣ್ಣ, ಕಲ್ಲಪ್ಪ, ಹುಲಿಗೆಮ್ಮ, ಊರಮ್ಮ, ದ್ಯಾಮವ್ವ ಮುದ್ದಮ್ಮ, ಕೆಂಚಮ್ಮ ಮುಂತಾದ ದೇವಾಲಯಗಳಿವೆ. ಎರಡು ಮಸೀದಿಗಳಿವೆ. ಪ್ರತೀವರ್ಷ ಶ್ರಾವಣ ಮಾಸದಲ್ಲಿ ಆಂಜನೇಯನ ಉತ್ಸವ ಜರಗುತ್ತದೆ. ಐದು ವರ್ಷಕ್ಕೊಮ್ಮೆ ಊರಮ್ಮನ ಜಾತ್ರೆ ಮಾಡುತ್ತಾರೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಮುದ್ದಟನೂರು, ಗುಂಡಿಗನೂರು, ಮಾಳಾಪುರ, ಹಾವಿನಹಾಳು ಗ್ರಾಮಗಳಿವೆ.

೨.೮.೫.೩ ಶಾನಾವಾಸಪುರ : ಶಾನವಾಸಪುರ ಗ್ರಾಮಪಂಚಾಯತಿಯು ಸಿರುಗುಪ್ಪ ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೨೩.೦೭ ಹೆಕ್ಟೇರಷ್ಟು ಇದೆ. ಶ್ರೀ ದಾರುಕ ಆಶ್ರಮದ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಮಠ ಪ್ರಸಿದ್ಧಿ ಪಡೆದಿರುತ್ತದೆ. ಗ್ರಾಮಪಂಚಾಯತ್ ವ್ಯಾಪ್ತಿಯೊಳಗೆ ತುಂಗಾಭದ್ರಾ ಬಲದಂಡೆ ಕೆಳಹಂತದ ಕಾಲುವೆ ಹರಿಯುತ್ತದೆ. ಪಂಚಾಯತ್ ಪರಿಸರದಲ್ಲಿ ಕಣಶಿಲೆಯ ಗುಡ್ಡಗಳಿವೆ. ಈ ಗುಡ್ಡಗಳ ಮೇಲೆ ಪವನ ವಿದ್ಯುತ್ ತಯಾರಿಕೆಗಾಗಿ ಫ್ಯಾನ್‌ಗಳನ್ನು ಅಳವಡಿಸಲಾಗಿದೆ. ಇಲ್ಲಿ ಕೆಂಪು ಹಾಗೂ ಕಪ್ಪು ಮಿಶ್ರಿತ ಫಲವತ್ತಾದ ಭೂಮಿಯನ್ನು ಹೊಂದಿದೆ.

ಶಾನವಾಸಪುರ ಗ್ರಾಮವು ಪಂಚಾಯತ್ ಕೇಂದ್ರವಾಗಿದೆ. ಈ ಗ್ರಾಮವು ಹಿಂದೆ ಕೆಂಚನಗುಡ್ಡದ ಅರಸುಮನೆತನದವರ ತಂಗುದಾಣವಾಗಿದ್ದಿತಂತೆ. ಶಹನವಾಸಪುರ>ಶಾನವಾಸಪುರ ವಾಗಿರಬೇಕೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಈ ಗ್ರಾಮ ತಿರುಪತಿಯ ಶ್ರೀನಿವಾಸನ ನೆಲೆಯಾಗಿತ್ತು. ಮೈಲಾರನ ಜೊತೆ ಜಗಳಮಾಡಿಕೊಂಡು ಶ್ರೀನಿವಾಸನು ತಿರುಮಲ ಬೆಟ್ಟ ಸೇರಿದನು. ಶ್ರೀನಿವಾಸಪುರ > ಶಾನವಾಸಪುರವಾಯಿತು ಎಂದೂ ಸಹ ಕೆಲವರು ತಿಳಿಸುತ್ತಾರೆ.

ಊರಿನ ಪಶ್ಚಿಮ ದಿಕ್ಕಿನಲ್ಲಿ ಕಣಶಿಲೆಯ ಗುಡ್ಡಗಳಿವೆ. ಸುಜಾಲ ಪವನ ವಿದ್ಯುತ್ ತಯಾರಿಕ ಕೇಂದ್ರದವರು ಈ ಗುಡ್ಡಗಳಲ್ಲಿ ಪವನ ವಿದ್ಯುತ್ ತಯಾರಿಕೆಗಾಗಿ ದೊಡ್ಡಫ್ಯಾನ್‌ಗಳನ್ನು ಅಳವಡಿಸಿದ್ದಾರೆ. ಇದರ ಭೌಗೋಳಿಕ ವಿಸ್ತೀರ್ಣವು ೧೫೩೪.೦೨ ಹೆಕ್ಟೇರ್ ಇದೆ.

ಗ್ರಾಮದ ಪೂರ್ವ ದಿಕ್ಕಿಗೆ ತುಂಗಭದ್ರ ಬಲದಂಡೆ ಕೆಳಹಂತದ ಕಾಲುವೆಯು ಹರಿಯುತ್ತದೆ. ಗ್ರಾಮಕ್ಕೆ ಅಂಟಿಕೊಂಡಂತೆ ಗರ್ಜಿಹಳ್ಳದ ಹರಿಯುತ್ತದೆ. ಕುಡಿಯುವ ನೀರಿಗಾಗಿ ಎರಡು ದೊಡ್ಡ ಟ್ಯಾಂಕ್‌ಗಳನ್ನು ಕಟ್ಟಲಾಗಿದೆ. ಸಾರ್ವಜನಿಕ ನಲ್ಲಿಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದಲ್ಲಿ ಒಟ್ಟು ಕುಟುಂಬಗಳು ೭೮೩, ಜನಸಂಖ್ಯೆ ೪೫೨೬, ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೭೮೦, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೪೮೦೬, ಒಟ್ಟು ಸಾಕ್ಷರರು ೧೭೨೦, ಇದರಲ್ಲಿ ೧೦೫೭ ಪುರುಷರು, ೬೬೩ ಮಹಿಳೆಯರಿದ್ದಾರೆ.

ಮಾದಿಗ, ಚಲುವಾದಿ, ಭೋವಿ, ಬುಡ್ಗಜಂಗಮ, ವಾಲ್ಮೀಕಿ, ಮುಸ್ಲೀಂ, ಅಗಸ, ಉಪ್ಪಾರ, ಕಮ್ಮಾ, ಕುರುಬ, ಬಡಿಗೇರ, ರೆಡ್ಡಿ, ಲಿಂಗಾಯತ, ಹಜಾಮ, ವೈಶ್ಯ, ಬ್ರಾಹ್ಮಣ ಮುಂತಾದ ಸಮುದಾಯಗಳಿವೆ.

೬ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಹಾಗೂ ಸರ್ಕಾರಿ ಪ್ರೌಢ ಶಾಲೆ, ಖಾಸಗಿ ಪ್ರಾಥಮಿಕ ಶಾಲೆ, ಗ್ರಂಥಾಲಯ, ಅಂಚೆ ಕಛೇರಿ, ಸಮುದಾಯ, ಆರೋಗ್ಯ ಕೇಂದ್ರ ಮತ್ತು ಪಶುಚಿಕಿತ್ಸಾಲಯ, ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಇವೆ. ಸಮುದಾಯ ಭವನ, ಬಯಲು

ರಂಗಮಂದಿರಗಳಿವೆ. ಮುಸ್ಲಿಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳಿವೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಶಾನವಾಸಪುರ, ದರೂರು ಗ್ರಾಮಗಳು ಬರುತ್ತವೆ.

೨.೮.೫.೪. ಹಚ್ಚೊಳ್ಳಿ : ಹಚ್ಚೊಳ್ಳಿ ಐತಿಹಾಸಿಕ ಹಿನ್ನಲ್ಲೆ ಕೆದುಕಿತ್ತ ಹೊದಾಗ? ಗ್ರಾಮ ನವಶಿಲಾಯುಗದ ಕಾಲದಲ್ಲಿಯೆ ಇಲ್ಲಿ ಜನ ವಾಸವಾಗಿದ್ದರು ಎಂಬುವದಕ್ಕೆ ಪುರಾವೆಗಳು ದೊರಕಿವೆ. ಶಿಲಾಯುಗದ ನಾಗರಿಕತೆಯಲ್ಲಿ ಬೀದಿ ದೀಪಗಳು ಇಂದಿನ ಕೋಟೆ ಭಾಗದಲ್ಲಿ ಜನತೆ ವಾಸವಾಗಿದ್ದರು ಎಂಬುದು ತಿಳಿದುಬರುತ್ತದೆ. ಹಚ್ಚೊಳ್ಳಿ ಹಿಂದೆ ಪಚ್ಚೊಳ್ಳಿ ಎಂಬ ಹೆಸರಿನಿಂದ ಕರೆಯುತ್ತಿದ್ದರು 'ಪಚ್ಚೊಳ್ಳಿ' ಎಂದರೆ ಹಸಿರು ನಾಡು. ತುಂಗಭದ್ರ ನದಿಯ ದಡದಲ್ಲಿರುವ ಹಚ್ಚಹಸಿರಿನ ನಾಡು ಎಂದರ್ಥ. ಇಂತಹ ಪ್ರಾಂತವನ್ನು ೧೨ನೇ ಶತಮಾನದಲ್ಲಿ ಕಲ್ಯಾಣ ಚಾಲೂಕ್ಯರ ಸಿಂದುವಾಡಿ ೧೦೦೦ ಪ್ರಾಂತ್ಯಕ್ಕೆ ಸೇರಿದ್ದು ಪಿರಿಯಾ ಕೋತಲದೇವಿಯು ಈ ನಾಡನ್ನು ಆಳ್ವಿಕೆ ಮಾಡುತ್ತಿದ್ದಳು. ಪಚ್ಚೊಳ್ಳಿ ಸಿರುಗುಪ್ಪ ಪ್ರಾಂತ್ಯಕ್ಕೆ ಸೇರಿತ್ತು. ಕಲ್ಯಾಣ ಚಾಲುಕ್ಯರ ನಂತರ ನೇಳೆಂಬರು ಈ ಪ್ರಾಂತ್ಯವನ್ನು ಆಳಿದರು. ೧೫ನೇ ಶತಮಾನದಲ್ಲಿ ವಿಜಯನಗರದ ಸಾಮಾಂತರು ಆಳ್ವಿಕೆ ಒಳಪಟ್ಟಿದ್ದು ಸಂಪತ್ಭರಿತ ದೇಶವಾಗಿತ್ತು ಎಂಬುದಕ್ಕೆ ಪಚ್ಚೊಳ್ಳಿಯಲ್ಲಿ ದೊರಕಿರುವ ೨ ಶಾಸನಗಳು ನಮ್ಮಲ್ಲಿ ಮಾಹಿತಿ ಕೋಡುತ್ತವೆ. ಹೀಗೆ ಪಚ್ಚೊಳ್ಳಿ ಕ್ರಮೇಣವಾಗಿ ಬ್ರೀಟಿಷರ ಆಳ್ವಿಕೆ ಒಳಪಟ್ಟಾಗ ಜನರ ಅಡು ಭಾಷೆಯಲ್ಲಿ ಹಚ್ಚೊಳ್ಳಿಯಾಗಿ ಮಾರ್ಪಟ್ಟಿರುವದು ಕಾಣಬಹುದು. ಹಚ್ಚೊಳ್ಳಿ ಬೆಂಗಳೂರು ರಾಜಧಾನಿಯಿಂದ ೪೫೦ ಕಿ.ಮೀ. ಬಳ್ಳಾರಿ ಜಿಲ್ಲೆಯಿಂದ ೮೦ ಕಿ.ಮೀ. ಹಾಗೂ ಸಿರುಗುಪ್ಪದಿಂದ ೨೧ ಕಿ.ಮೀ. ದೂರವಿರುವ ಈ ಗ್ರಾಮ ಆಂಧ್ರಪ್ರದೇಶದ ಗಡಿನಾಡಿನಲ್ಲಿದೆ ಆಂಧ್ರ ಪ್ರದೇಶದ ಐತಿಹಾಸಿಕ ಪ್ರೇಕ್ಷಣಿಯ ಸ್ಥಾಳಗಳಾದ ಉರುಕುಂದಿ ಈರಣ್ಣ, ಮಂತ್ರಾಲಯ ಸ್ಥಳಗಳು ಬಹಳ ಹತ್ತಿರದಲ್ಲಿವೆ. ೧೯೮೭ರಲ್ಲಿ ಮಂಡಲಪಂಚಾಯಿತಿ ಕೇಂದ್ರ ಸ್ಥಾನವಾಗಿದ್ದು, ಹಚ್ಚೊಳ್ಳಿ ಗ್ರಾಮ ಪಂಚಾಯಿತಿಗೆ ಮಾಟೂರು, ಚಳ್ಳೆಕೂಡ್ಲೂರು, ಹೊನ್ನರಳ್ಳಿ, ಚಿಕ್ಕಬಳ್ಳಾರಿ ಈ ನಾಲ್ಕು ಗ್ರಾಮಗಳು ಸೇರಿ ರಚನೆಯಾಯಿತು. ಈ ಪಂಚಾಯಿತಿಯಲ್ಲಿ ಲಿಂಗಾಯಿತರು, ಕುರುಬರು, ನಾಮಕರು, ಭೋವಿ, ಮಾದಿಗರು, ಹೊತಿಮರು, ಮುಸ್ಲಿಂ, ಗೋಲ್ಲರು ಕ್ರಮವಾಗಿ ಜನಸಂಖ್ಯೆ ಹೊಂದ್ದಿದ್ದು ಸಹಕಾರ ಸಹಬಾಳ್ವೆ ಅನ್ನೊನ್ಯತೆಯಿಂದ ಬದುಕು ಸಾಗಿಸುತ್ತಿದ್ದರೆ. ಹಚ್ಚೊಳ್ಳಿ ಗ್ರಾಮ ಪಂಚಾಯಿತಿ ಭೂಮಿ ವಿಸ್ತಿರ್ಣದಲ್ಲಿ ದೊಡ್ಡದಾಗಿದ್ದು ಸಾಗುವಳಿ ಭೂಮಿ ಹೊಂದಿದ್ದು ಲಿಂಗಾಯಿತರು ಅತಿದೊಡ್ಡ ರೈತರಾಗಿದ್ದು, ಪರಿಶಿಷ್ಟ ಜನಾಂಗ/ಪರಿಶಿಷ್ಟ ಪಂಗಡ ಆರ್ಥಿಕವಾಗಿ ಹಿಂದುಳಿದಿದ್ದರೆ. ಹಚ್ಚೊಳ್ಳಿ ಪಂಚಾಯಿತಿನ ವಿಶೇಷವೆಂದರೆ ೨೦೦೯ ಆಕ್ಟೋಬರ್ ೧ ಮತ್ತು ೨ರಂದು ನೇರೆಹಾವಳಿಯಿಂದ ಇಡೀ ಪಂಚಾಯಿತಿ ವ್ಯಾಪ್ತಿಯ ಐದು ಹಳ್ಳಿಗಳು ತುಂಗಭದ್ರ ನದಿಯ ದಡದಲ್ಲಿದ್ದು ಸಂಪೂರ್ಣ ಮುಳುಗಿಹೊಗಿವೆ. ಐದು ಗ್ರಾಮಗಳು ಈಗ ಸಂಪೂರ್ಣ ಸ್ಥಳಾಂತರ ಗೊಂಡಿದ್ದು ವಸತಿ ನಿರ್ಮಾಣ ಪ್ರಗತಿಯಲ್ಲಿದೆ. ಭತ್ತದ ಕಣಜವಾಗಿರುವ ಈ ಪ್ರದೇಶ ಆಂಧ್ರ ಮತ್ತು ಕನ್ನಡ ಜನರ ಸಹಬಾಳ್ವೆ ಸಹಕಾರ ಸಂಕೇತವಾಗಿದೆ ಎನ್ನಬಹುದು.

೨.೮.೫.೫ ಮಣ್ಣೂರು ಸೂಗೂರು : ಮಣ್ಣೂರು ಸೂಗೂರು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ತುಂಗಾಭದ್ರಾ ನದಿಯ ದಂಡೆಯ ಮೇಲಿರುವ ಈ ಗ್ರಾಮವು ಭೌಗೋಳಿಕವಾಗಿ ೧೦೧೨.೧೪ ಹೆಕ್ಟರ್‌ನಷ್ಟು ವಿಸ್ತಾರವಾಗಿದೆ. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ ದೂರದಲ್ಲಿದೆ. ಹೋಬಳಿ ಕೇಂದ್ರದಿಂದ [ತೆಕ್ಕಲಕೋಟೆ] ೩೮ ಕಿ.ಮೀ ದೂರದಲ್ಲಿದೆ. ಜಿಲ್ಲಾ ಕೇಂದ್ರದಿಂದ ೮೦ ಕಿ.ಮೀ ದೂರದಲ್ಲಿದೆ.

ಎಂ. ಸೂಗೂರು ಗ್ರಾಮವು ಐತಿಹಾಸಿಕ ಮಾನ್ಯತೆ ಪಡೆದ ಹಳ್ಳಿಯಾಗಿದೆ. ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿದ್ದು, ಪ್ರಮುಖ ನಡು ನಾಡಾಗಿತ್ತು ಎಂಬ ಅಂಶವು ಉಲ್ಲೇಖಾರ್ಹ. ತದನಂತರದಲ್ಲಿ ಹೈದ್ರಾಬಾದ್ ನಿಜಾಮನ ಆಡಳಿತಕ್ಕೂ ಒಳಪಟ್ಟಿತ್ತು.

ತುಂಗಭದ್ರೆಯ ದಡದ ಮೇಲಿದ್ದರೂ ಕೂಡ ಇಲ್ಲಿಯ ಭೂಮಿಯು ಬರಡಾಗಿಯೇ ಇದ್ದಿತು. ಏತ ನೀರಾವರಿ ವ್ಯವಸ್ಥೆಯಿಂದ ಇತ್ತೀಚೆಗೆ ಇಲ್ಲಿಯ ಭೂಮಿಯು ನೀರಾವರಿ ಸೌಲಭ್ಯ ಪಡೆದಿದೆ.

ಈ ಗ್ರಾಮ ಪಂಚಾಯತಿಯು ಮಣ್ಣೂರು, ಸೂಗೂರು, ಮಣ್ಣೂರು ಕ್ಯಾಂಪ್, ದೊಡ್ಡರಾಜ ಕ್ಯಾಂಪ್, ಮಾರೆಮ್ಮ ಕ್ಯಾಂಪ್, ಮಡೇ ಕ್ಯಾಂಪ್ ಮತ್ತು ಕವಳೆ ಬಸವೇಶ್ವರ ಕ್ಯಾಂಪ್ ಎಂಬ ಹಳ್ಳಿಗಳನ್ನು ಹೊಂದಿದೆ.

ಈ ಗ್ರಾಮಪಂಚಾಯತಿಯು ಸಿರಗುಪ್ಪ ವಿಧಾನಸಭಾ, ಕೊಪ್ಪಳ ಲೋಕಸಭಾ, ಎಂ ಸೂಗೂರು ತಾಲೂಕು ಪಂಚಾಯತಿ, ಸಿರಿಗೇರಿ ಜಿಲ್ಲಾ ಪಂಚಾಯತಿ ಮತಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ.

ತುಂಗಾಭದ್ರಾ ನದಿಯ ದಂಡೆಯ ಮೇಲೆ ಈ ಗ್ರಾಮವಿದೆ. ಎಂ ಸೂಗೂರು ಎಂದರೆ ಮಣ್ಣೂರು ಸೂಗೂರೆಂದು ಅರ್ಥ. ಸಿರಗುಪ್ಪ ತಾಲೂಕಿನಲ್ಲಿಯೇ ೩-೪ ಸೂಗೂರುಗಳಿರು ವುದರಿಂದ ಈ ಗ್ರಾಮಕ್ಕೆ ಮಣ್ಣೂರು ಸೂಗೂರು ಅಥವಾ ಎಂ ಸೂಗೂರು ಎಂದು ಕರೆಯಲಾಗುತ್ತದೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಸೂಗೂರೇಶ್ವರ ದೇವಾಲಯದಿಂದಾಗಿ ಗ್ರಾಮಕ್ಕೆ ಸೂಗೂರೆಂದು ಹೆಸರು ಬಂದಿರುವ ಸಾಧ್ಯತೆ ಇದೆ. ಯಾವುದೇ ಬೆಟ್ಟ-ಗುಡ್ಡಗಳಿರದೆ ಸಮತಟ್ಟಾದ ಪ್ರಸ್ಥ ಭೂಮಿಯನ್ನು ಹೊಂದಿದೆ.

ಈ ಗ್ರಾಮದ ಹತ್ತಿರದಲ್ಲಿ ಪ್ರಮುಖ ಖಾಸಗಿ ಕಂಪನಿಯಾದ "ಬೊರುಖಾ ಜಲ ವಿದ್ಯುತ್ ಸ್ಥಾವರ" ಇದೆ. ಪಕ್ಕದಲ್ಲಿಯೇ ಇರುವ ನದಿಯ ನೀರನ್ನು ಏತ ನೀರಾವರಿಯ ಮೂಲಕ ಕೃಷಿ ಭೂಮಿಗಳಿಗೆ ನೀರನ್ನು ಪಡೆಯಲಾಗುತ್ತದೆ. ಈ ಗ್ರಾಮದ ಪರಿಸರದಲ್ಲಿ ಯಾವುದೇ ಬೆಟ್ಟ-ಗುಡ್ಡಗಳು ಕಂಡುಬರುವುದಿಲ್ಲ.

ಕುಡಿಯುವ ನೀರನ್ನು ತುಂಗಾಭದ್ರಾ ನದಿಯಿಂದ ಪಡೆಯಲಾಗುತ್ತದೆ. ಕುಡಿಯುವ ನೀರಿನ ಸಂಗ್ರಹಕ್ಕಾಗಿ ಒಂದು ದೊಡ್ಡ ಟ್ಯಾಂಕ್ ಕಟ್ಟಲಾಗಿದೆ. ಸಾರ್ವಜನಿಕ ನಲ್ಲಿಯ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ.

೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೯೭೦, ಒಟ್ಟು ಜನಸಂಖ್ಯೆ ೪೬೬೦, ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧೩೦೪, ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೭೮, ಒಟ್ಟು ಸಾಕ್ಷರರ ಸಂಖ್ಯೆ ೨೧೫೫ ಇದೆ. ಅದರಲ್ಲಿ ೧೨೬೬ ಪುರುಷರು, ೮೮೯ ಮಹಿಳೆಯರಿದ್ದಾರೆ

ಮಾದಿಗ, ಚಲುವಾದಿ, ಬೋವಿ, ನಾಯಕ, ಮುಸ್ಲಿಂ, ಬೆಸ್ತ, ಕುರುಬ, ಅಕ್ಕಸಾಲಿ, ಬಡಿಗೇರ, ಲಿಂಗಾಯತ ಮುಂತಾದ ಸಮುದಾಯದವರಿದ್ದಾರೆ.

ಮೂರು ಅಂಗನವಾಡಿ, ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಗ್ರಂಥಾಲಯ, ಆಯುರ್ವೇದ ಆಸ್ಪತ್ರೆ, ಸಮುದಾಯ ಭವನಗಳಿವೆ. ಮುಸ್ಲಿಂ ಹಾಗೂ ಇತರ ಸಮುದಾಯ ದವರಿಗಾಗಿ ಪ್ರತ್ಯೇಕ ಸ್ಮಶಾನಗಳಿವೆ.

ಗ್ರಾಮದಲ್ಲಿ ಈಶ್ವರ, ಆಂಜನೇಯ, ಹುಲಿಗೆಮ್ಮ, ಸವಾರಮ್ಮ, ಊರಮ್ಮ ಮುಂತಾದ ದೇವಾಲಯಗಳಿವೆ. ಪ್ರತಿವರ್ಷ ಯುಗಾದಿಯಂದು ಸೂಗೂರೇಶ್ವರ ರಥೋತ್ಸವ ಜರಗುತ್ತದೆ. ಮೂರು ವರ್ಷಕ್ಕೊಮ್ಮೆ ಊರಮ್ಮನ ಜಾತ್ರೆ ಮಾಡಲಾಗುತ್ತದೆ.

ಮಣ್ಣೂರು ಸೂಗೂರು, ಮಣ್ಣೂರು, ಮಣ್ಣೂರು ಕ್ಯಾಂಪ್, ದೊಡ್ಡರಾಜ ಕ್ಯಾಂಪ್, ಮಜ್ಜಿಗೆರ ಕ್ಯಾಂಪುಗಳು ಈ ಪಂಚಾಯತಿಯ ವ್ಯಾಪ್ತಿಯಲ್ಲಿವೆ.

೨.೮.೬. ಹಡಗಲಿ ತಾಲೂಕು

ಹಡಗಲಿಯು ಬಳ್ಳಾರಿ ಜಿಲ್ಲೆಯ ತಾಲೂಕುಗಳಲ್ಲೊಂದು. ಈ ತಾಲೂಕಿನ ಒಂದು ಭಾಗಕ್ಕೆ ತುಂಗಾಭದ್ರಾ ನದಿಯು, ಮತ್ತೊಂದು ಭಾಗಕ್ಕೆ ಹರಪನಹಳ್ಳಿ, ಇನ್ನೊಂದು ಕಡೆ ಹಗರಿಬೊಮ್ಮನ ಹಳ್ಳಿಯ ಗಡಿಗಳನ್ನು ಹೊಂದಿದೆ. ಚಿಕ್ಕಪಟ್ಟ ಮಣ್ಣಿನ ಗುಡ್ಡಗಳನ್ನು ಹೊಂದಿರುವ ಈ ತಾಲೂಕು ಕೆಂಪು ಹಾಗೂ ಕಪ್ಪು ಬಣ್ಣದ ಮೇಲ್ಮೈ ಮಣ್ಣನ್ನು ಹೊಂದಿದೆ. ತುಂಗಾಭದ್ರಾ ನದಿಯು ಈ ತಾಲೂಕಿನಲ್ಲಿ ಹರಿದುಹೋಗುತ್ತಿದ್ದರೂ ಈ ತಾಲೂಕು ನೀರಾವರಿಯ ಸೌಲಭ್ಯವನ್ನು ಕಾಣಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದಾಗಿ ಶೇಕಡ ೩೦ರಷ್ಟು ಭೂಮಿಯು ಕೃಷಿಗಾಗಿ ನೀರಾವರಿ ಸೌಲಭ್ಯವನ್ನು ಪಡೆಯುವಂತಾಗಿದೆ. ಅದರಾಚೆಗೆ ನದಿ ದಂಡೆಯ ಮೇಲಿರುವ ಕೃಷಿ ಭೂಮಿಗಳಿಗೆ ನೇರವಾಗಿ ನದಿಗೆ ಪಂಪುಗಳನ್ನು ಅಳವಡಿಸಿಕೊಂಡು ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡ ಉದಾಹರಣೆಯೂ ಇದೆ. ದೇಶಾದ್ಯಾಂತ ಜನಪದ ಆಚರಣೆ ಹಾಗೂ ಪಶುಪಾಲಕರ ದೈವವಾದ ಮೈಲಾರ ಕ್ಷೇತ್ರವು ಈ ತಾಲೂಕಿನಲ್ಲಿಯೇ ಇದೆ. ಹಡಗಲಿ ತಾಲೂಕು ೯೨೮.೧೨ ಚ.ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಈ ತಾಲೂಕಿನಲ್ಲಿ ಒಟ್ಟು ೩೩,೦೦೮ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯು ೧,೬೭,೨೫೨ ಇದೆ. ಇದರಲ್ಲಿ ೮೪,೮೮೯ ಪುರುಷರು ಹಾಗೂ ೮೨,೪೩೩ ಮಹಿಳೆಯರು ನೆಲೆಸಿರುವರು. ೦-೬ ವಯೋಮಾನದ ಒಟ್ಟು ಮಕ್ಕಳು ೨೨,೪೦೮ ಇವೆ. ಇದರಲ್ಲಿ

೧೧,೪೭೧ ಗಂಡು ಹಾಗೂ ೧೦,೯೩೭ ಹೆಣ್ಣುಮಕ್ಕಳಿವೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೪೯,೯೨೫ ಇದೆ. ಇದರಲ್ಲಿ ೨೫,೨೩೫ ಪುರುಷರು ಹಾಗೂ ೨೪,೬೯೦ ಮಹಿಳೆಯರಿರುವರು.

ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೨,೯೧೭ ಇದೆ. ಇದರಲ್ಲಿ ೬,೫೦೫ ಪುರುಷರು ಹಾಗೂ ೬,೪೧೨ ಮಹಿಳೆಯರು ಇರುವರು. ಒಟ್ಟು ಸಾಕ್ಷರರು ೧,೦೧,೭೦೮ ಇರುವರು. ಇದರಲ್ಲಿ ೫೮,೬೪೯ ಪುರುಷರು ಹಾಗೂ ೪೩,೦೧೯ ಮಹಿಳೆಯರು ಇರುವರು. ಈ ತಾಲೂಕಿನಲ್ಲಿ ಐದು ಗ್ರಾಮಪಂಚಾಯತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

೨.೮.೬.೧ ದಾಸನಹಳ್ಳಿ : ದಾಸನಹಳ್ಳಿ ಗ್ರಾಮವು ತಾಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿ ದಕ್ಷಿಣ ದಿಕ್ಕಿಗಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೧೭.೮೧ ಹೆಕ್ಟೇರ್ ಇದೆ. ನಡುವಿನ ಹಳ್ಳಿ, ವೀರಾಪುರ, ಕಳಾಸಪುರ, ಬೂದನೂರು, ಕತ್ತೆಬೆನ್ನೂರು, ವೀರಾಪುರ ಮತ್ತು ಪೋತಲಕಟ್ಟಿ (ಬೇಚರಾಕ್ ಗ್ರಾಮ) ಎಂಬ ಆರು ಗ್ರಾಮಗಳು ಈ ಗ್ರಾಮಪಂಚಾಯತಿ ವ್ಯಾಪ್ತಿಗೆ ಸೇರಿವೆ. ಕತ್ತೆಬೆನ್ನೂರು ತಾಲ್ಲೂಕ ಪಂಚಾಯಿತಿ, ಹೊಳಲು ಜಿಲ್ಲಾ ಪಂಚಾಯತಿ, ಹೂವಿನಹಡಗಲಿ ವಿಧಾನಸಭಾ, ಬಳ್ಳಾರಿ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿಯ ಭೂಮಿಯು ಕೆಂಪು ಮತ್ತು ಕಪ್ಪು ಭೂಮಿಯ ಲಕ್ಷಣವನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಗ್ರಾಮಕ್ಕೆ ಹತ್ತಿರದಲ್ಲಿ ಮಲ್ಲೇಶ್ವರ ಬೆಟ್ಟವಿದ್ದು ಕುರುಚಲು ಕಾಡಿನಿಂದ ಕೂಡಿದೆ. ಗ್ರಾಮದ ಹೊರಭಾಗದಲ್ಲಿ ಸುಡುಗಟ್ಟಿ ಹಳ್ಳ ಮತ್ತು ದಾಸನಹಳ್ಳಗಳಿವೆ. ಇವು ಮಳೆಗಾಲದಲ್ಲಿ ನೀರಿನಿಂದ ತುಂಬಿದ್ದು, ದನಕರುಗಳಿಗೆ ಕುಡಿಯಲು ಅನುಕೂಲವಾಗಿವೆ. ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೪,೪೪೮.೦೧ ಹೆಕ್ಟೆರ್ ಇದೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ೪೭೦ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆಯು ೨೦೮೮ ಇದೆ. ಅದರಲ್ಲಿ ೧೦೬೫ ಪುರುಷ ಮತ್ತು ೧೦೨೩ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧೭೯ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೩೪೧ ಇದೆ. ಒಟ್ಟು ಸಾಕ್ಷರರು ೧೪೩೫ ಜನರಿರುವರು. ಇದರಲ್ಲಿ ಪುರುಷರು ೮೩೮ ಮಹಿಳೆಯರು ೬೧೫ ಜನರಿರುವರು.

ಗ್ರಾಮದಲ್ಲಿ ಲಿಂಗಾಯಿತ ಸಮುದಾಯ ಪ್ರಮುಖವಾಗಿದೆ. ಉಳಿದಂತೆ ಮಾದಿಗ, ನಾಯಕ, ಗಾಣಿಗ, ಶಿವಚಿಂಪಿಗ, ಗಂಗಾಮತ, ಕುಂಬಾರ, ಅಕ್ಕಸಾಲಿ, ಮುಸ್ಲಿಂ, ಪಿಂಜಾರ, ಕ್ಷೌರಿಕ, ಕುರುಬ, ಮರಾಠ, ಮಾದಿಗ ಮುಂತಾದ ಸಮುದಾಯಗಳು ಇವೆ. ಕನ್ನಡ ಭಾಷೆಯೊಂದಿಗೆ ಕೆಲವರು ಹಿಂದಿ ಮತ್ತು ತೆಲುಗು ಭಾಷೆಗಳನ್ನು ಮಾತನಾಡುವರು.

ಬೆಟ್ಟದ ಮಲ್ಲೇಶ್ವರ ದೇವಾಲಯ, ಆಂಜನೇಯ, ಮಾತಂಗೆಮ್ಮ, ಕಾಳಿಕಾ ದೇವಿ ಮುಂತಾದ ದೇವಸ್ಥಾನಗಳಿವೆ. ಯುಗಾದಿಯಲ್ಲಿ ಬೆಟ್ಟದ ಮಲ್ಲೇಶ್ವರ ಉತ್ಸವ ನಡೆಯುತ್ತದೆ. ಹಿಂದೂ ಹಾಗೂ ಮುಸ್ಲೀಂ ಹಬ್ಬಗಳನ್ನು ಆಚರಿಸುತ್ತಾರೆ.

ದೊಡ್ಡ ಪ್ರಮಾಣದ ನೀರಾವರಿ ವ್ಯವಸ್ಥೆಯಿದ್ದು, ಬೇಸಾಯವೇ ಗ್ರಾಮದ ಮುಖ್ಯ ಕಸುಬಾಗಿದೆ. ಆಹಾರ ಬೆಳೆಯಾಗಿ ಜೋಳ, ಮೆಕ್ಕೆಜೋಳ, ನವಣೆ, ಭತ್ತ ಬೆಳೆಯುತ್ತಾರೆ. ಬೇಳೆಕಾಳುಗಳಲ್ಲಿ ತೊಗರಿ, ಅಲಸಂದೆ, ಹೆಸರು ಬೆಳೆಯುತ್ತಾರೆ. ಎಣ್ಣೆಕಾಳುಗಳಲ್ಲಿ ಸೂರ್ಯಕಾಂತಿ, ಶೇಂಗಾ ಬೆಳೆಯುತ್ತಾರೆ. ತೋಟಗಾರಿಕೆಯಲ್ಲಿ ತರಕಾರಿ, ವೀಳ್ಯದ ಎಲೆ, ಸೇವಂತಿಗೆ, ಚೆಂಡು, ಕನಕಾಂಬರಿ, ಮಲ್ಲಿಗೆಯ ಹೂವುಗಳನ್ನು ಬೆಳೆಯುತ್ತಾರೆ.

ಆರು ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಇವೆ. ಒಂದು ಗ್ರಂಥಾಲಯವಿದೆ. ಪಶು ಆಸ್ಪತ್ರೆ ಇದೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಕಳಸಾಪುರ, ಬೂದನೂರು, ವೀರಾಪುರ ಗ್ರಾಮಗಳಿವೆ.

೨.೮.೬.೨ ನಂದಿಹಳ್ಳಿ : ನಂದಿಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ೩,೧೩೧.೮೯ ಹೆಕ್ಟೇರ್ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ಗ್ರಾಮಪಂಚಾಯತಿ ಕೇಂದ್ರವಾಗಿರುವ ಈ ಗ್ರಾಮಕ್ಕೆ ಮುದೇನೂರು, ಉಗುಲೂರು, ಉಗುಲೂರು ತಾಂಡಗಳು ಸೇರಿವೆ. ಇಲ್ಲಿಯ ಭೂಮಿಯು ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣನ್ನು ಹೊಂದಿದೆ. ಮೂರು ತೆರೆದ ಬಾವಿಗಳು ಇವೆ. ಈ ಗ್ರಾಮದಲ್ಲಿ ಸೋಗಿಹಳ್ಳ, ದಾಸರ ಹಳ್ಳ ಮತ್ತು ಬಾರಿಕರ ಹಳ್ಳ ಎನ್ನುವ ಹಳ್ಳಗಳಿವೆ. ಹಾಗೂ ನಂದಿಹಳ್ಳಿ ಮತ್ತು ಮುದೇನೂರು ಊರುಗಳ ಮಧ್ಯೆ ಒಂದು ಕೆರೆ ಇದೆ. ಸಾರ್ವಜನಿಕ ನಲ್ಲಿಯ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುತ್ತಾರೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ಕುಟುಂಬಗಳ ಸಂಖ್ಯೆ ೪೨೧ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆಯು ೨೨೫೯ ಇದೆ. ಅದರಲ್ಲಿ ೧೧೯೩ ಪುರುಷರು ೧೦೬೬ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ೩೧೦ ಇದೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೬೪ ಇದೆ. ಒಟ್ಟು ಸಾಕ್ಷರರು ೧೪೯೨ ಇದೆ. ಇದರಲ್ಲಿ ೮೬೮ ಪುರುಷರು ೬೨೪ ಮಹಿಳೆಯರಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಲಿಂಗಾಯತ ಸಮುದಾಯವಿದ್ದು ಉಳಿದಂತೆ ಕುರುಬ, ಉಪ್ಪಾರ, ಬಡಿಗ, ಕಮ್ಮಾರ, ಅಗಸ, ಮುಸ್ಲಿಂ, ಮಾದಿಗ ಸಮುದಾಯಗಳಿವೆ.

ಬೇಸಾಯವೇ ಗ್ರಾಮದ ಮುಖ್ಯ ಕಸುಬಾಗಿದೆ. ಆಹಾರ ಬೆಳೆಯಾಗಿ ಜೋಳ, ಮೆಕ್ಕೆಜೋಳ, ನವಣೆ, ಭತ್ತ ಬೆಳೆಯುತ್ತಾರೆ. ಬೇಳೆಕಾಳುಗಳಲ್ಲಿ ತೊಗರಿ, ಅಲಸಂದೆ, ಹೆಸರು ಬೆಳೆಯುತ್ತಾರೆ. ಎಣ್ಣೆಕಾಳುಗಳಲ್ಲಿ ಸೂರ್ಯಕಾಂತಿ, ಶೇಂಗಾ ಬೆಳೆಯುತ್ತಾರೆ. ತೋಟಗಾರಿಕೆಯಲ್ಲಿ ತರಕಾರಿ, ವೀಳ್ಯದ ಎಲೆ, ಸೇವಂತಿಗೆ, ಚೆಂಡು, ಕನಕಾಂಬರಿ, ಮಲ್ಲಿಗೆಯ ಹೂವುಗಳನ್ನು ಬೆಳೆಯುತ್ತಾರೆ. ಜನರು ಸಾಂಪ್ರದಾಯಿಕ ಹೈನುಗಾರಿಕೆಯನ್ನು ಮಾಡುತ್ತಿದ್ದು, ಈ ಗ್ರಾಮದಲ್ಲಿ ಇಲಾಖೆಯ ಕೆರೆ ಮೀನುಗಾರಿಕೆ ಇದ್ದು, ಮೀನಿನ ಮರಿಗಳನ್ನು ತಂದು ಸಾಕುತ್ತಾರೆ.

ಅಂಚೆ ಕಛೇರಿ, ನಾಲ್ಕು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ಗ್ರಂಥಾಲಯ, ಆಯುರ್ವೇದ ಆಸ್ಪತ್ರೆ ಎಸ್.ಸಿ, ಎಸ್.ಟಿ. ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಮತ್ತು ಬಾಲಕಿಯರ ವಸತಿ ನಿಲಯಗಳಿವೆ.

ಒಂದು ಎಕರೆ ಭೂಮಿಯಲ್ಲಿ ೩೦೦ ವರ್ಷ ಹಿಂದಿನ ಆಲದ ಮರ ಇದೆ. ಒಂದು ವೀರಗಲ್ಲು ಈ ಆಲದ ಮರದ ಕೆಳಗಿದೆ.

ಇಲ್ಲಿ ಹರಿಜನ, ಲಿಂಗಾಯತ, ನಾಯಕ, ಮುಸ್ಲೀಂರ ಸ್ಮಶಾನಗಳು ಪ್ರತ್ಯೇಕವಾಗಿವೆ.

ಕಂಠೀ ಬಸವೇಶ್ವರ, ಹಾಲಸ್ವಾಮಿ, ಆಂಜನೇಯ, ಯಲ್ಲಮ್ಮ, ದುರುಗಮ್ಮ, ಪಕೀರಸ್ವಾಮಿ, ಮಲ್ಲೆಮ್ಮ, ದೊಡ್ಡಬಸವೇಶ್ವರ ಮುಂತಾದ ದೇವಸ್ಥಾನಗಳಿವೆ. ಒಂದು ಮಸೀದಿ ಇದೆ. ಕಾರು ಉಣ್ಣಿಮೆಯಂದು ಮರಿಯಮ್ಮದೇವಿಗೆ ಸಿಡಿಯಾಡುವ ಆಚರಣೆ ಇದೆ. ಸೋಗಿ ವೀರಭದ್ರೇಶ್ವರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ವೀರಶೈವ ಯುವಕ ಸಂಘ ಹಾಗೂ ಅಂಬೇಡ್ಕರ್ ಯುವಕ ಸಂಘಗಳಿವೆ.

೨.೮.೬.೩ ನವಲಿ : ನವಲಿ ಗ್ರಾಮವು ತಾಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೬ ಕಿ.ಮೀ ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೬೨೫.೩೭ ಹೆಕ್ಟರ್ ಇದೆ. ಗ್ರಾಮಪಂಚಾಯತಿ ಕೇಂದ್ರವಾಗಿದೆ. ಈ ಗ್ರಾಮ ಪಂಚಾಯತಿಗೆ ಅಲ್ಲಿಪುರ, ಕಾಗನೂರು, ರಾಜವಾಳ, ಹೊನ್ನೂರು, ಕೊಟ್ನೆಕಲ್ ಕ್ಯಾಂಪ್ ಗ್ರಾಮಗಳು ಸೇರಿವೆ. ನವಲಿಯಿಂದ ತುಂಗಭದ್ರಾ ನದಿಯು ಕೇವಲ ಅರ್ಧ ಕಿ.ಮೀ. ದೂರ ಇದೆ. ಇಲ್ಲಿಯ ಭೂಮಿಯು ಕೆಂಪು ಹಾಗೂ ಉಸುಕು ಮಿಶ್ರಿತ ಕಪ್ಪು ಮಣ್ಣು ಲಕ್ಷಣವನ್ನು ಹೊಂದಿದೆ.

ಲಿಂಗಾಯತ ಬಹುಸಂಖ್ಯಾತ ಸಮುದಾಯವಾಗಿದೆ. ಉಳಿದಂತೆ ಕುರುಬ, ಬೆಸ್ತರ್, ಉಪ್ಪಾರ, ದರ್ಜಿ, ಮುಸ್ಲೀಂ, ಮಾದಿಗ ಮುಂತಾದ ಸಮುದಾಯಗಳಿವೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ೫೯೭ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆಯು ೨೯೫೬ ಇದೆ. ಅದರಲ್ಲಿ ೧೫೧೧ ಪುರುಷ ಮತ್ತು ೧೪೪೫ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೯೫೬ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೫೬೨ ಇದೆ. ಒಟ್ಟು ಸಾಕ್ಷರರು ೧೯೯೦ ಜನರಿರುವರು. ಇದರಲ್ಲಿ ಪುರುಷರು ೧೦೮೫, ಮಹಿಳೆಯರು ೭೮೧ ಜನರಿರುವರು.

ಅಂಚೆ ಕಛೇರಿ, ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆ ಗ್ರಂಥಾಲಯಗಳಿವೆ, ಬಯಲು ರಂಗ ಮಂದಿರಗಳಿವೆ.

ದುರುಗಮ್ಮ, ರಣದಮ್ಮ, ಕೊಟ್ಟೂರೇಶ್ವರ, ಕಲ್ಲೇಶ್ವರ, ಆಂಜನೇಯ, ದೋಣಿ ಕೆಂಚಮ್ಮ ಮುಂತಾದ ದೇವಸ್ಥಾನ ಹಾಗೂ ಒಂದು ಮಸೀದಿ ಇದೆ. ಪ್ರತಿ ವರ್ಷ ದುರುಗಮ್ಮ, ದ್ಯಾಮವ್ವನ ಜಾತ್ರೆಯನ್ನು ಮಾಡುತ್ತಾರೆ. ಹಿಂದೂ ಮುಸ್ಲೀಮ ಹಬ್ಬಗಳನ್ನು ಮಾಡುತ್ತಾರೆ.

೨.೮.೬.೪ ಮಹಾಜನದ ಹಳ್ಳಿ : ಮಹಾಜನದಹಳ್ಳಿಯು ತಾಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೩ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೧,೯೩೧.೯೧ ಹೆಕ್ಟರ್ ಭೂ ಪ್ರದೇಶವನ್ನು ಹೊಂದಿದೆ. ಈ ಗ್ರಾಮ ಪಂಚಾಯಿತಿಗೆ ಮುಸುಕಿನ ಕಲ್ಲಹಳ್ಳಿ, ಕೆಂಚಮ್ಮನಹಳ್ಳಿ, ತಳಕಲ್ಲು, ಅಡವಿ ಮಲ್ಲನ ಕೆರೆ, ಅಡವಿ ಮಲ್ಲನ ಕೆರೆ ತಾಂಡಗಳು ಸೇರಿವೆ. ಇಲ್ಲಿಯ ಭೂಮಿಯು ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣಿನ ಲಕ್ಷಣವನ್ನು ಹೊಂದಿದೆ. ಬತ್ತಿ ಹಳ್ಳ, ನರಕನಹಳ್ಳ ಎಂಬ ಎರಡು ಹಳ್ಳಗಳಿವೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ೮೧೮ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆಯು ೪೩೧೩ ಇದೆ. ಅದರಲ್ಲಿ ೨೧೬೬ ಪುರುಷ ಮತ್ತು ೨೧೪೭ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೫೮೯ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೨೨೬ ಇದೆ. ಒಟ್ಟು ಸಾಕ್ಷರರು ೨೭೪೭ ಜನರಿರುವರು. ಇದರಲ್ಲಿ ಪುರುಷರು ೧೫೬೩ ಮಹಿಳೆಯರು ೧೧೮೪ ಜನರಿರುವರು. ಕಮ್ಮ ದೊಡ್ಡ ಸಮುದಾಯವಾಗಿದೆ. ಈ ಗ್ರಾಮದಲ್ಲಿ ಮಾದಿಗ ಅತ್ಯಂತ ಚಿಕ್ಕ ಸಮುದಾಯವಾಗಿದೆ.

ಅಂಚೆ ಕಛೇರಿ ೫ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಶಾಲೆ, ಗ್ರಂಥಾಲಯ, ಸಮುದಾಯ ಭವನ, ಬಯಲು ರಂಗಮಂದಿರ ಇವೆ.

ಬಸವೇಶ್ವರ, ದುರುಗಮ್ಮ, ಕರಿಯಮ್ಮ, ಆಂಜಿನೇಯ, ಪಕ್ಕೀರ ಸ್ವಾಮಿ, ಈರಣ್ಣ, ಏರಿತಾತ, ಪೇಟೆ ಬಸಮ್ಮ ದೇವಸ್ಥಾನಗಳಿವೆ. ಬಸವೇಶ್ವರ, ದುರುಗಮ್ಮ, ಪಲ್ಲಕ್ಕಿ ಉತ್ಸವವನ್ನು ಪ್ರತಿ ವರ್ಷ ಮಾಡುತ್ತಾರೆ. ದುರುಗಮ್ಮ ದೇವಿಯು ಈ ಗ್ರಾಮದೇವತೆಯಾಗಿದ್ದು ಬಲಿ ಕೊಡುವ ಪದ್ಧತಿ ಇದೆ.

೨.೮.೬.೫ ಹಿರೇಹಡಗಲಿ : ಹಿರೇಹಡಗಲಿ ಗ್ರಾಮವು ತಾಲೂಕು ಕೇಂದ್ರದಿಂದ ಹದಿನೈದು ಕಿ.ಮೀ. ದೂರದಲ್ಲಿ ಈಶಾನ್ಯ ದಿಕ್ಕಿಗಿದೆ. ಈ ಗ್ರಾಮವು ಹೋಬಳಿಯಾಗಿದ್ದು ತಾಲೂಕಿನಲ್ಲಿರುವ ದೊಡ್ಡ ಗ್ರಾಮವಾಗಿದೆ. ಈ ಗ್ರಾಮವು ಒಟ್ಟು ೩,೧೭೮.೪೪ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ.

ಪ್ರಾಚೀನ ಕಾಲದಲ್ಲಿ ಈ ಗ್ರಾಮವು ಚಾಲುಕ್ಯ ಮತ್ತು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ಗ್ರಾಮಕ್ಕೆ ಕಾನನಹಳ್ಳಿ ಮತ್ತು ಮಾನಿಹಳ್ಳಿ ಗ್ರಾಮಗಳು ಸೇರುತ್ತವೆ.

ಗ್ರಾಮದ ಭೌಗೋಳಿಕ ಪ್ರದೇಶವು ಕಪ್ಪು, ಬಿಳುಪು ಮತ್ತು ಜೇಡಿಮಣ್ಣಿನ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.

ತುಂಬಿಕೆರೆ, ಕಾನಳ್ಳಿ ಕೆರೆ ಮತ್ತು ಹಿರೆಹಡಗಲಿ ಕೆರೆಗಳಿರುವುದರಿಂದ ಹೊಲಗಳು ನೀರಾವರಿ ಸೌಲಭ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆದಿವೆ. ಗ್ರಾಮಕ್ಕೆ ಹತ್ತಿರದಲ್ಲಿ ತುಂಬಿನಕೆರೆ ಹಳ್ಳ, ಚಪ್ಪನಕಟ್ಟೆ ಹಳ್ಳ, ಅಳ್ಳಿಪುರದ ಹಳ್ಳಗಳು ಇವೆ. ತೆರದ ಬಾವಿಗಳಿದ್ದು ಅನುಪಯುಕ್ತವಾಗಿವೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ೧೬೬೧ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆಯು ೮೨೫೪ ಇದೆ. ಅದರಲ್ಲಿ ೪೧೩೪ ಪುರುಷ ಮತ್ತು ೪೧೨೦ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧೩೭೦ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೮೦೭ ಇದೆ. ಒಟ್ಟು ಸಾಕ್ಷರರು ೨೮೮೯ ಜನರಿರುವರು. ಇದರಲ್ಲಿ ಪುರುಷರು ೩೦೨೧, ಮಹಿಳೆಯರು ೨೩೪೪ ಜನರಿರುವರು.

ಇಲ್ಲಿ ಲಿಂಗಾಯಿತ ಸಮುದಾಯದವರು ಅಧಿಕ ಸಂಖ್ಯೆಯಲ್ಲಿದ್ದು, ಉಳಿದಂತೆ ಬೆಸ್ತ, ನಾಯಕ, ಮುಸ್ಲಿಂ, ಪಿಂಜಾರ, ಕುಂಬಾರ, ಕ್ಷೌರಿಕ, ಬ್ರಾಹ್ಮಣ, ಬಡಿಗ, ಲಂಬಾಣಿ. ಜೋಶಿಕರು, ಜೈನ, ಬೋವಿ, ರೆಡ್ಡಿ, ಕೊರವ ಮತ್ತು ಮಾದಿಗ ಮುಂತಾದ ಸಮುದಾಯಗಳು ಇವೆ.

ಬಿಡಿಸಿಸಿ ಬ್ಯಾಂಕ್, ಪ್ರಗತಿ ಗ್ರಾಮೀಣ ಬ್ಯಾಂಕ್, ರೈತ ಸಂಪರ್ಕ ಕೇಂದ್ರ ಮತ್ತು ೨ ಸಹಕಾರಿ ಸಂಘ, ೭ ಅಂಗನವಾಡಿ, ಸರ್ಕಾರಿ ಪ್ರಾಥಮಿಕ, ಸರಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆ, ಬಾಲಕರ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ವೀರಪ್ಪ ಕೂಗಪ್ಪ ಕೊಂಪಿ ಸರಕಾರಿ ಪದವಿ ಪೂರ್ವ ಕಾಲೇಜ್, ಗ್ರಾಮದಲ್ಲಿ ೦೭ ಅಂಗನವಾಡಿ ಕೇಂದ್ರ, ಗ್ರಂಥಾಲಯ ಸರಕಾರಿ ಪ್ರಾಥಮಿಕ ಆರೋಗ್ಯ ಘಟಕ, ಪಶುವೈದ್ಯ ಶಾಲೆ, ವಸತಿನಿಲಯಗಳಿವೆ. ಖಾಸಗಿ ಶಾಲೆಗಳೂ ಇವೆ. ಗುರುವಾರ ವಾರದ ಸಂತೆ ನಡೆಯುತ್ತದೆ.

ಕಲ್ಲೇಶ್ವರ ದೇವಾಲಯವಿದೆ. ಇದು ಕೆರೆಯ ದಂಡೆಯ ಮೇಲಿದ್ದು, ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿ ಹೊಯ್ಸಳರ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಇದಕ್ಕೆ ಕಟ್ಟೆಬಸಪ್ಪನ ಗುಡಿಯೆಂದೂ ಕರೆಯುವರು. ವೇಸರ ಶೈಲಿಯಲ್ಲಿ ರಚನೆಗೊಂಡ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗುಡಿ, ಶುಕನಾಶಿ, ಸಭಾಮಂಟಪಗಳಿಂದ ಕೂಡಿದೆ. ಆಂಜನೇಯ, ವೀರಭದ್ರೇಶ್ವರ, ಮೈಲಾರ ಲಿಂಗೇಶ್ವರ, ವಿಘ್ನೇಶ್ವರ, ದುರ್ಗಮ್ಮ, ಊರಮ್ಮ, ಹಾಲೇಶ್ವರ, ಸೋಮೇಶ್ವರ ಕಾಡಬಸವೇಶ್ವರ ಮುಂತಾದ ದೇವಾಲಯಗಳಿವೆ. ಹಾಗೆಯೇ ೦೨ ಮಸೀದಿ, ೦೩ ದರ್ಗಾ, ಹಾಲಸ್ವಾಮಿ ಮಠ ಮತ್ತು ಮಾನಿಹಳ್ಳಿ ಪುರದ ಮಠಗಳಿವೆ.

ವರ್ಷಕ್ಕೊಮ್ಮೆ ದರ್ಗದ ಉರುಸು, ಸೀಗೆ ಹುಣ್ಣಿಮೆಯಲ್ಲಿ ಹಾಲಸ್ವಾಮಿ ಮುಳ್ಳುಗದ್ದಿಗೆ, ಫೆಬ್ರವರಿಯಲ್ಲಿ ಕಲ್ಲೇಶ್ವರ ಜಾತ್ರೆ, ೫ ವರ್ಷಕ್ಕೊಮ್ಮೆ ಊರಮ್ಮನ ಜಾತ್ರೆ ನಡೆಯುತ್ತವೆ.

೨.೮.೭ ಹಗರಿಬೊಮ್ಮನಹಳ್ಳಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿ ಎಣ್ಣೆಕಾಳು ಬೀಜೋತ್ಪಾದನೆಗೆ ಹೆಸರುವಾಸಿಯಾದ ತಾಲೂಕು ಹಗರಿಬೊಮ್ಮನ ಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ತಾಲೂಕುಗಳಿಂದ ಸುತ್ತುವರೆದಿರುವ ಈ ತಾಲೂಕನ್ನು ಹಾಯ್ದು ತುಂಗಾಭದ್ರ ನದಿ ಮುಂದೆ ಬರುವುದಾದರೂ ಆ ತಾಲೂಕಿಗೆ ನದಿಯಿಂದಾದ ಉಪಯೋಗ ಅತ್ಯಲ್ಪ ಎಂದೇ ಹೇಳಬಹುದು. ತುಂಗಾಭದ್ರ ನದಿ ದಂಡೆಯಲ್ಲಿನ ಭೂಮಿಗಳಿಗೆ

ಪಂಪ್‌ಸೆಟ್‌ಗಳ ಮೂಲಕ ನದಿ ನೀರನ್ನು ಹರಿಸಲಾಗುವು ದಾದರೂ ತಾಲೂಕಿನ ಎಲ್ಲಾ ಭೂಮಿಗಳಿಗೆ ನೀರನ್ನು ಹಾಯಿಸಲು ಸಾಧ್ಯವಾಗಿಲ್ಲದಿರುವುದು ಕಂಡುಬರುತ್ತದೆ.ಈ ತಾಲೂಕಿನ ಮಾಲವಿ ಎಂಬ ಗ್ರಾಮದಲ್ಲಿ ಹಗರಿಗೆ ಆಣೆಕಟ್ಟನ್ನು ಕಟ್ಟಲಾಗಿದೆ ಯಾದರೂ ಮಳೆ ಪ್ರಮಾಣ ಅತ್ಯಲ್ಪವಾಗಿರುವ ಪ್ರದೇಶ ಇದಾಗಿರುವುದರಿಂದ ಮಾಲವಿ ಆಣೆಕಟ್ಟಿನಲ್ಲಿ ಮಳೆಯಾದ ವರ್ಷ ಮಾತ್ರ ನೀರನ್ನು ಕಾಣಬಹುದು ಬಳ್ಳಾರಿ ಜಿಲ್ಲೆಯಲ್ಲಿ ಮೊದಲಿಗೆ ಈ ತಾಲೂಕಿಗೆ ಮಲ್ಲಾಪುರ ತಾಲೂಕು ಎಂದು ಕರೆಯಲಾಗುತ್ತಿತ್ತಾದರೂ ದಶಕಗಳ ಹಿಂದೆ ಮಲ್ಲಾಪುರ ಹೆಸರನ್ನು ತೆಗೆದು ಹಾಕಿ ಹಗರಿಬೊಮ್ಮನಹಳ್ಳಿ ತಾಲೂಕೆಂದು ಮರುನಾಮಕರಣ ಮಾಡಲಾಯಿತು. ಬಹುತೇಕ ಮಳೆಯಾಶ್ರಿತ ಭೂಮಿಯನ್ನು ಹೊಂದಿರುವ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೯೭೩.೯೫ ಚ.ಕಿ.ಮೀ.ಗಳು. ಇಡೀ ತಾಲೂಕಿನಲ್ಲಿ ಹಗರಿಬೊಮ್ಮನಹಳ್ಳಿಯಂತಹ ಚಿಕ್ಕ ಪಟ್ಟಣದಾಚೆ ಒಂದೇ ಒಂದು ನಗರ ಪ್ರದೇಶವನ್ನು ಕಾಣಲು ಸಾಧ್ಯವಾಗುವುದಿಲ್ಲ. ಇಡೀ ತಾಲೂಕಿನಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳು ೨೮,೮೭೧ರಷ್ಟು. ಈ ತಾಲೂಕಿನ ಒಟ್ಟು ಜನ ಸಾಂದ್ರತೆಯು ೧೬೪ರಷ್ಟಿದೆ.

೨೦೧೧ರ ಜನಗಣತಿ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆಯು ೧,೫೯,೮೮೬ ರಷ್ಟಿದೆ. ಇದರಲ್ಲಿ ಪುರುಷರು ೮೦,೭೭೦ ಹಾಗೂ ಮಹಿಳೆಯರು ೭೯,೧೧೬ ರಷ್ಟು ಕಂಡು ಬರುತ್ತಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೨೯,೯೪೧ ಇದ್ದು ಪುರುಷರು ೧೫,೦೬೮ ಹಾಗೂ ಮಹಿಳೆಯರು ೧೪,೮೯೩ರಷ್ಟು ಕಂಡು ಬರುತ್ತಾರೆ. ಈ ತಾಲೂಕಿನ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೨೧,೭೧೬ ಇದ್ದು ಇದರಲ್ಲಿ ಪುರುಷರು ೧೦,೯೨೪ ಹಾಗೂ ಮಹಿಳೆಯರು ೧೦,೭೯೨ರಷ್ಟು ಕಂಡುಬರುತ್ತಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಶೇಕಡ ೧೮.೭ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೩.೬ ರಷ್ಟಿದೆ. ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೫೮.೧ ರಷ್ಟು ಇರುವುದು ತಿಳಿದು ಬರುತ್ತದೆ.

ಈ ತಾಲೂಕಿನಲ್ಲಿಯ ನಾಲ್ಕು ಗ್ರಾಮ ಪಂಚಾಯಿಗಳನ್ನು ಸಹ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಆ ನಾಲ್ಕು ಗ್ರಾಮ ಪಂಚಾಯಿತಿಗಳ ವಿವರಗಳು ಈ ಕೆಳಗಿನಂತಿವೆ.

೨.೮.೭.೧ ಅಲಬೂರು : ಅಲಬೂರು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಅಲಬೂರು ಎಂಬುದಕ್ಕೆ ಮೊದಲು ಅಲಂಬೂರು ಎನ್ನುವ ಹೆಸರಿತ್ತು. ಈ ಗ್ರಾಮವು ಚಾಲುಕ್ಯರ ಕಾಲದಿಂದಲೂ ಪ್ರಸಿದ್ಧಿಯಾಗಿದ್ದಿ ತೆಂಬುದು ಚರಿತ್ರೆಯ ಮೂಲಕ ತಿಳಿದುಬರುತ್ತದೆ. ಈ ಗ್ರಾಮದಲ್ಲಿರುವ ಪ್ರಾಚೀನ ದೇವಾಲಯ ದೊಳಗೆ ಬ್ರಹ್ಮ, ವಿಷ್ಣು, ಮಹೇಶ್ವರನ ಮೂರ್ತಿಗಳಿವೆ. ಚಾಲುಕ್ಯರ ಕಾಲದಿಂದಲೂ ಗುರುತಿಸಲ್ಪಡು ತ್ತಿರುವ ಅಲಂಬೂರು ಗ್ರಾಮವೇ ಜನರ ಆಡುಮಾತಿನಲ್ಲಿ ಅಲಬೂರಾಗಿ ಪರಿವರ್ತನೆ ಗೊಂಡಿರುವುದು ತಿಳಿದುಬರುತ್ತದೆ. ಅಲಂಬೂರು ಎಂದರೆ ಸುಂದರವಾದ, ಅಲಂಕೃತವಾದ ಊರು ಎಂದಿರಬೇಕೆಂಬ ಅರ್ಥದಲ್ಲಿ ಬಳಸಿರಬೇಕು ಎಂಬ ಅಭಿಪ್ರಾಯ ಸ್ಥಳೀಯರು ವ್ಯಕ್ತಪಡಿಸುತ್ತಾರೆ.

ಕೋಗಳಿ ಹೋಬಳಿಗೆ ಈ ಗ್ರಾಮವು ಸೇರಿದೆ. ಕೋಗಳಿಯಂತೆ ಅಲಂಬೂರು ಸಹ ಜೈನ ಶ್ರದ್ಧಾ ಕೇಂದ್ರವಾಗಿದ್ದು ಚಾಲುಕ್ಯರ ಕಾಲದಲ್ಲಿ ಶೈವಪರಂಪರೆಗೆ ಒಳಗಾಗಿರಬೇಕು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಲ್ಲಿರುವ "ಪ್ರಾಚೀನ ರುಕ್ಮಿಣಿ ದೇವಿಯ ವಿಗ್ರಹವನ್ನು ಪ್ರಸ್ತುತ ಸ್ಥಳೀಯರು ಹೊನ್ನತೆಮ್ಮ ಎಂಬ ಹೆಸರಿನಿಂದ ಪೂಜಿಸುವುದು ಕಂಡು ಬರುತ್ತಿದೆ. ಚಾಲುಕ್ಯರ ಕಾಲದಲ್ಲಿಯೇ ರಾಮಲಿಂಗೇಶ್ವರ ದೇವಾಲಯ ನಿರ್ಮಾಣವಾಗಿದೆ ಎಂಬುದನ್ನು ಶಾಸನಗಳ ಮೂಲಕ ತಿಳಿಯುತ್ತದೆ"[೮] ಅಲಬೂರಿನ ರಾಮಲಿಂಗೇಶ್ವರ ದೇವಾಲಯದ ಬಳಿ ನಿಲ್ಲಿಸಿರುವ ಶಾಸನವನ್ನು ಕ್ರಿಶ ೨೫-೧೨-೧೧೪೭ರಲ್ಲಿ ಸ್ಥಾಪಿಸಲಾಗಿದೆ. ಜಗದೇಕಮಲ್ಲ ಪಾಂಡ್ಯದೇವನು ನೊಳಂಬವಾಡಿ-೩೨೦ನ್ನು ಆಳುತ್ತಿದ್ದಾಗ, ಕೋಗಳಿ ೫೦೦ನ್ನು ನಾಚಿದೇವರಸನು ಆಳುತ್ತಿರಲು, ಅಲಂಬೂರಿನ ೪೪ ಮಹಾಜನರು ಸೋಗೆಯ ಕಳೇಶ್ವರಪಂಡಿತರ ಶಿಷ್ಯ ವಾಮಶಕ್ತಿಪಂಡಿತರ ಕಾಲನ್ನು ತೊಳೆದು ಸ್ವಯಂಭೂ ಮೂಲಸ್ಥಾನದೇವರ ಪೂಜಾರ್ಥ ಹಾಗೂ ಗುರುಗಳ ಆಹಾರ ಇತ್ಯಾದಿಗಳಿಗಾಗಿ ಭೂದಾನ ನೀಡುತ್ತಾರೆ. ಮಹಾಜನರ ಕೆಲವು ವಿಶಿಷ್ಟಗುಣಗಳನ್ನು ಈ ಶಾಸನದಲ್ಲಿ ವರ್ಣಿಸಲಾಗಿದೆ.

ಅದೇ ಗ್ರಾಮದ ಹೊನ್ನತ್ತೆಮ್ಮನ ದೇವಾಲಯದಲ್ಲಿರುವ ಶಾಸನವನ್ನು ಕ್ರಿ.ಶ. ೨೯-೯-೧೫೧೮ ರಲ್ಲಿ ನಿರ್ಮಿಸಲಾಗಿದೆ. ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸೋಲೂರನ ಬಸವಪನಾಯಕನ ಮಗ ಕೃಷ್ಣಪನಾಯಕನು ಅಲಬೂರಿನ ಹೊಂನತಿದೇವಿಗೆ ಮಾಡಿದ ಭೂದಾನದ ವಿವರವಿದೆ. ಗ್ರಾಮದ ಪೂರ್ವ ದಿಕ್ಕಿಗೆ ಹಗರಿ ಹಳ್ಳ ಇದ್ದು, ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ತೆರೆದ ಬಾವಿಗಳಿವೆ. ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರನ್ನು ಗ್ರಾಮಕ್ಕೆ ಒದಗಿಸಲಾಗಿದೆ. ಸಾರ್ವಜನಿಕ ನಲ್ಲಿಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಅಲಬೂರು ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು ೩,೬೭೭.೪೭ ಹೆಕ್ಟೇರ್. ೨೦೧೧ರ ಜನಗಣತಿಯ ಪ್ರಕಾರ ಗ್ರಾಮದ ಒಟ್ಟು ಕುಟುಂಬಗಳು ೭೦೨ ಇದ್ದು ಗ್ರಾಮದ ಒಟ್ಟು ಜನಸಂಖ್ಯೆ ೩೪೬೨, ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೬೫೮ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೮೯ ದಾಖಲಾಗಿರುವುದು. ಒಟ್ಟು ೨೩೮೭ ಸಾಕ್ಷರರಲ್ಲಿ ೧೩೭೫ ಪುರುಷರು ಹಾಗೂ ೧೦೧೨ ಮಹಿಳೆಯರು ದಾಖಲಾಗಿರುವರು. ಕನ್ನಡ ಪ್ರಮುಖ ಭಾಷೆಯಾಗಿದೆ. ತೆಲುಗು, ಉರ್ದು ಇತ್ಯಾದಿ ಭಾಷೆಗಳನ್ನು ಮಾತನಾಡುವವರೂ ಇಲ್ಲಿದ್ದಾರೆ.

೫ ಅಂಗನವಾಡಿ, ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಂಥಾಲಯಗಳಿವೆ. ಸ್ತ್ರೀಶಕ್ತಿ ಸಂಘಗಳಿವೆ. ಕುರುಬ, ಇತರೆ ಹಾಗೂ ಮುಸ್ಲೀಂ ಸಮುದಾಯಗಳ ಪ್ರತ್ಯೇಕ ಸ್ಮಶಾನಗಳಿವೆ.

ಬ್ರಹ್ಮ, ವಿಷ್ಣು ಮಹೇಶ್ವರ, ಆಂಜನೇಯ, ಊರಮ್ಮ, ದುರ್ಗಮ್ಮ, ಹೊನ್ನೆತ್ತಮ್ಮ, ಉಡಚಲಮ್ಮ, ಬೀರಲಿಂಗೇಶ್ವರ, ಕೇರಿದುರ್ಗಮ್ಮ, ಕೇರಿಗಾಳೆಮ್ಮ, ರಾಮಲಿಂಗೇಶ್ವರ, ಬಸವೇಶ್ವರ, ಬನ್ನಿಕಾಳಮ್ಮ ದೇವಸ್ಥಾನಗಳಿವೆ. ಊರಮ್ಮನ ಜಾತ್ರೆ ಮೂರು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಪ್ರತಿವರ್ಷ

ಶ್ರಾವಣ ಮಾಸದ ಕೊನೆಯ ಶನಿವಾರ ಆಂಜನೇಯನ ಜಾತ್ರೆ ಮಾಡಲಾಗುತ್ತದೆ. ಅಂದು ಗ್ರಾಮದವರೆಲ್ಲಾ ಸೇರಿ ಕಾಡಿಗೆ ಹೋಗಿ ಕಾರೇ ಗಿಡಗಳನ್ನು ಕಡಿದುತಂದು ಗುಡಿಯ ಮುಂಭಾಗದಲ್ಲಿ ಗುಂಪೆಹಾಕುತ್ತಾರೆ. ಪೂಜಾರಿಯು ಆಂಜನೇಯನ ಪೂಜೆ ಮಾಡಿದ ತರುವಾಯ ಮೈತುಂಬಿ ಬಂದು ಕಾರೆಯ ಮುಳ್ಳಿನ ಗದ್ದಿಗೆ ಏರಿ ಕುಳಿತುಕೊಂಡು ಕಾರ್ಣಿಕ ಹೇಳುತ್ತಾನೆ. ಪೂಜಾರಿಯ ಮುಳ್ಳಿನ ಗದ್ದಿಗೆಯ ಸವಾರಿಯ ನಂತರ ಸೇರಿದ ಭಕ್ತರಲ್ಲಿ ದೇವರಿಗೆ ಬೇಡಿಕೊಂಡವರು ಕಾರೆಮುಳ್ಳಿನ ಗದ್ದಿಗೆ ಮೇಲೆ ಬಿದ್ದು ತಮ್ಮ ಹರಕೆಯನ್ನು ತೀರಿಸುತ್ತಾರೆ. ಮಾರನೇ ದಿನ ಕಡುಬಿನ ಕಾಳಗವಿರುತ್ತದೆ. ಅಂದು ದೇವರ ಹೊಂಡದಲ್ಲಿ ಬಣ್ಣ ಕಲೆಸಿ ಪರಸ್ಪರ ಬಣ್ಣ ಎರಚಾಡಿಕೊಳ್ಳುತ್ತಾರೆ. ಹಿಂದೆ ದೇವದಾಸಿಯರಿಗೆ ಊರಿನ ಮೇಲ್ಜಾತಿಯ ಪುರುಷರು ಬಣ್ಣ ಎರಚುತ್ತಿದ್ದರಂತೆ. ಆದರೆ ಪ್ರಸ್ತುತ ದೇವದಾಸಿಯರಿಗೆ ಬಣ್ಣ ಎರಚುವ ಪದ್ಧತಿ ನಿಂತಿದೆ. ಇದಲ್ಲದೆ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳ ಆಚರಣೆ ಮಾಡುತ್ತಾರೆ.

ಅಲಬೂರು ಗ್ರಾಮ ಪಂಚಾಯಿತಿಗೆ ೧) ಅಲಬೂರು ೨) ದಿಬ್ಬದಹಳ್ಳಿ ೩) ಹೊನ್ನಿಹಳ್ಳಿ ೪) ಕನ್ನಿಹಳ್ಳಿ ಎಂಬ ನಾಲ್ಕು ಗ್ರಾಮಗಳನ್ನು ಹೊಂದಿದೆ.

೨.೮.೭.೨ ಬನ್ನಿಗೋಳ : ಬನ್ನಿಗೋಳವು ಗ್ರಾಮಪಂಚಾಯತಿ ಕೇಂದ್ರವಾಗಿದೆ. ತುಂಗಾಭದ್ರಾ ನದಿಯ ದಂಡೆಯ ಮೇಲೆ ಗ್ರಾಮವಿದೆ. ನದಿಯೊಳಗೆ ಬನ್ನಿಕೊಳ ಎಂದು ಕರೆಯುವ ಪ್ರದೇಶವಿದೆ. ಬನ್ನಿಕೊಳ > ಬನ್ನಿಗೊಳ > ಬನ್ನಿಗೋಳ ಆಗಿರಬೇಕೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ.

ಗ್ರಾಮದ ಒಟ್ಟು ಭೂವಿಸ್ತೀರ್ಣ ೧,೦೭೭.೯೩ ಹೆಕ್ಟೆರ್. ೨೦೧೧ರ ಜನಗಣತಿಯ ಪ್ರಕಾರ ೪೩೩ ಕುಟುಂಬಗಳು ಈ ಗ್ರಾಮದಲ್ಲಿ ವಾಸವಾಗಿವೆ. ಒಟ್ಟು ಜನಸಂಖ್ಯೆ ೨೨೭೯. ಅದರಲ್ಲಿ ಪರಿಶಿಷ್ಟ ಜಾತಿಯ ೭೬೮ ಮತ್ತು ಪರಿಶಿಷ್ಟ ಪಂಗಡದ ೪೫೫ ಜನ ದಾಖಲಾಗಿರುವರು. ಒಟ್ಟು ೧೩೨೨ ಸಾಕ್ಷರರಲ್ಲಿ ೭೬೪ ಪುರುಷರು ಮತ್ತು ೫೫೮ ಸ್ತ್ರೀಯರಿರುವರು.

ಬೋವಿ, ಮಾದಿಗ, ನಾಯಕ, ಬೆಸ್ತ, ಅಗಸ, ಬಡಿಗೇರ, ಹಡಪದ, ಕುರುಬ, ಮುಸ್ಲಿಂ, ಕಮ್ಮಾ, ರೆಡ್ಡಿ, ವೀರಶೈವ ಲಿಂಗಾಯತ ಇತ್ಯಾದಿ ಸಮುದಾಯಗಳು ಸೌಹಾರ್ದಯುತವಾಗಿ ಗ್ರಾಮದಲ್ಲಿ ಬಾಳುತ್ತಿವೆ. ಸಮುದಾಯ ಕೇಂದ್ರಿತ ಓಣಿಗಳು ಕಾಣಸಿಗುತ್ತವೆ. ಕನ್ನಡ ಪ್ರಧಾನ ಭಾಷೆಯಾಗಿದ್ದು ಉರ್ದು, ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ.

ಗ್ರಾಮವು ಗುಡಿಸಲು, ಮಣ್ಣು, ಹೆಂಚು, ಕಲ್ಲು, ಕಾಂಕ್ರಿಟ್ ಮನೆಗಳಿಂದ ಮತ್ತು ಮಡ್ಡು, ಹಾಸುಗಲ್ಲು, ಕಾಂಕ್ರಿಟ್ ರಸ್ತೆಗಳಿಂದ ಕೂಡಿದೆ. ೬ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗ್ರಂಥಾಲಯ, ಪ್ರಗತಿಕೃಷ್ಣಾ ಗ್ರಾಮೀಣ ಬ್ಯಾಂಕ್, ಅಂಚೆ ಕಚೇರಿ, ಆಯುರ್ವೇದ ಆಸ್ಪತ್ರೆ, ನ್ಯಾಯಬೆಲೆ ಅಂಗಡಿ, ದೂರಸಂಪರ್ಕ ವಿನಿಮಯ ಕೇಂದ್ರ, ಬಯಲು ರಂಗ ಮಂದಿರ, ಸಮುದಾಯ ಭವನ, ಸ್ತ್ರೀಶಕ್ತಿ ಸಂಘಗಳು, ಮುಸ್ಲೀಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳನ್ನು ಹೊಂದಿದೆ.

ಈ ಗ್ರಾಮದಲ್ಲಿ ಈಶ್ವರ, ಬಸವೇಶ್ವರ, ಆಂಜನೇಯ, ಊರಮ್ಮ, ಉಡಚಲಮ್ಮ, ಹುಲಿಗೆಮ್ಮ, ಬನದಮ್ಮ, ಗಂಗಮ್ಮ, ಇತ್ಯಾದಿ ದೇವಾಲಯಗಳಿವೆ. ಇತ್ತೀಚೆಗೆ ಅಂಬಿಗರ ಚೌಡಯ್ಯನ ಮಠವನ್ನು ಕಟ್ಟಲಾಗಿದೆ. ಒಂದು ಮಸೀದಿ ಇದೆ.

ಈ ಪಂಚಾಯತಿ ವ್ಯಾಪ್ತಿಯಲ್ಲಿ ಬನ್ನಿಗೋಳ, ಬಸರಕೋಡು, ಬಸರಕೋಡುತಾಂಡ, ಕೃಷ್ಣಾಪುರ, ಶೀಗನಹಳ್ಳಿ-೧, ಶೀಗನಹಳ್ಳಿ-೨ ಶೀಗನಹಳ್ಳಿ-೩ ಗ್ರಾಮಗಳಿವೆ.

೨.೮.೭.೩ ದಸಮಾಪುರ : ದಸಮಾಪುರ ಗ್ರಾಮಪಂಚಾಯತಿಯು ಹಗರಿಬೊಮ್ಮನಹಳ್ಳಿ ತಾಲೂಕು ಕೇಂದ್ರದಿಂದ ೧೧ ಕಿಲೋಮೀಟರ್ ದೂರದಲ್ಲಿದೆ. ಗ್ರಾಮಪಂಚಾಯತಿಯು ಕೋಗಳಿ ಹೋಬಳಿಗೆ ಸೇರಿದೆ.

ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬೋರಮಲನಗುಡ್ಡ, ಗುಡ್ಡದ ತಿಮ್ಮಪ್ಪ, ಯಂಕಲಗುಡ್ಡ, ಬೆಟ್ಟಮಲ್ಲಪ್ಪನ ಬುದಾಳಿ ಬೆಟ್ಟ, ಅಡ್ಡಬಂಡೆ, ಗುಗ್ಗರ್ ಬಂಡೆ, ಊರಬಂಡೆ, ರಾಗಿಮನೆ ಗುಡ್ಡ, ಗೊಟಗಲ್ಲು ಗುಡ್ಡ, ಜಲದೇವಗುಡ್ಡ ಹಾಗೂ ಗದ್ದಲಿಗುಡ್ಡ, ಕುರಾನ ಮರದೆ, ಅಟಗಲ್ಲು, ಬಿಳಿಕುಪ್ಪೆ,ಮುಂತಾದ ಹೆಸರಿನ ಕಣಶಿಲೆಯ ಗುಡ್ಡಗಳಿವೆ. ಈ ಪ್ರದೇಶದಲಿ ವಾರ್ಷಿಕ ಸರಾಸರಿ ಮಳೆ ೧೪-೨೦ ಸೆಂಟಿಮೀಟರ್. ೧೮-೨೦ ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗುವುದು.

ಈ ಪರಿಸರದಲ್ಲಿ ಕರಡಿ, ಮೊಲ, ಕಾಡುಹಂದಿ, ನರಿ, ತೋಳ, ಪುನಗಿನಬೆಕ್ಕು, ಬೆಳ್ಳಕ್ಕಿ, ವಿವಿಧ ಜಾತಿಯ ಗುಬ್ಬಿ, ಮಂಗಟ್ಟೆ ಹಕ್ಕಿ, ಹದ್ದು ಇತ್ಯಾದಿ ವನ್ಯಪ್ರಾಣಿ ಪಕ್ಷಿಗಳು, ವಿವಿಧ ಜಾತಿಯ ಹಾವುಗಳು ಕಂಡುಬರುತ್ತವೆ.

ಗ್ರಾಮದ ಉತ್ತರ ದಿಕ್ಕಿಗೆ ಹಿರೇಹಳ್ಳ, ದಕ್ಷಿಣ ದಿಕ್ಕಿಗೆ ಗಂಗಿಹಳ್ಳಗಳಿವೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಪೂರ್ವ ದಿಕ್ಕಿಗೆ ಗೌಡರ ಕೆರೆ ಮತ್ತು ಕನ್ನಕಟ್ಟೆ ಕೆರೆ ಎಂಬ ಎರಡು ಮಳೆಯಾಶ್ರಿತ ಕೆರೆಗಳಿವೆ. ಜೋಳ, ಹತ್ತಿ, ರೇಷ್ಮೆ, ಹತ್ತಿ, ಶೇಂಗಾ (ನೆಲಗಡಲೆ), ಮೆಕ್ಕೆಜೋಳ, ಸಜ್ಜೇ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ದಶಮಾಪುರ ಗ್ರಾಮ ಪಂಚಾಯತ್ ಕೇಂದ್ರವಾಗಿದೆ. ಗ್ರಾಮದ ಒಟ್ಟು ಭೂವಿಸ್ತೀರ್ಣ ೧೬೪೦.೫೮ ಹೆಕ್ಟೇರ್. ಗ್ರಾಮದಲ್ಲಿ ಹಿರೇಹಳ್ಳ, ಗಂಗಿಹಳ್ಳ ಇದ್ದು ಗೌಡರ ಕೆರೆ ಮತ್ತು ಕನ್ನಕಟ್ಟೆ ಕೆರೆ ಎಂಬ ಎರಡು ಮಳೆಯಾಶ್ರಿತ ಕೆರೆಗಳಿವೆ.

ಬೋರಮಲ್ಲಗುಡ್ಡ, ಗುಡ್ಡದ ತಿಮ್ಮಪ್ಪ, ಮನಿಗುಡ್ಡ, ರಾಗಿಮನೆ ಗುಡ್ಡ, ಗೊಟಗಲ್ಲು ಗುಡ್ಡ, ಜಲದೇವಗುಡ್ಡ, ಗದ್ದಲಿಗುಡ್ಡ, ಕುರಾನ ಮರದೆ, ಅಟಗಲ್ಲು, ಬಿಳಿಕುಪ್ಪೆ, ಮಠದ ಗುಡ್ಡಗಳಿವೆ.

ಈ ಪರಿಸರದಲ್ಲಿ ಕರಡಿ, ಮೊಲ, ಕಾಡುಹಂದಿ, ನರಿ, ತೋಳ, ಪುನಗಿನಬೆಕ್ಕು, ಬೆಳ್ಳಕ್ಕಿ, ವಿವಿಧ ಜಾತಿಯ ಗುಬ್ಬಿ, ಮಂಗಟ್ಟೆ ಹಕ್ಕಿ, ಹದ್ದು ಇತ್ಯಾದಿ ವನ್ಯಪ್ರಾಣಿ ಪಕ್ಷಿಗಳು, ವಿವಿಧ ಜಾತಿಯ

ಹಾವುಗಳು ಕಂಡುಬರುತ್ತವೆ. ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರನ್ನು ಗ್ರಾಮಕ್ಕೆ ಒದಗಿಸಲಾಗಿದೆ. ಸಾರ್ವಜನಿಕ ನಲ್ಲಿಗಳು ನೀರಿನ ಟ್ಯಾಂಕ್‌ಗಳನ್ನು ಜನರು ಅವಲಂಬಿಸಿದ್ದಾರೆ.

೨೦೧೧ರ ಜನಗಣತಿಯ ಪ್ರಕಾರ ೭೨೩ ಕುಟುಂಬಗಳು ಈ ಗ್ರಾಮದಲ್ಲಿ ವಾಸವಾಗಿವೆ. ಒಟ್ಟು ಜನಸಂಖ್ಯೆ ೩೮೦೬. ಅದರಲ್ಲಿ ಪರಿಶಿಷ್ಟ ಜಾತಿಯ ೪೯೯ ಮತ್ತು ಪರಿಶಿಷ್ಟ ಪಂಗಡದ ೧೭೪೭ ಜನ ದಾಖಲಾಗಿರುವರು. ಒಟ್ಟು ೨೦೩೮ ಸಾಕ್ಷರರಲ್ಲಿ ೧೧೮೧ ಪುರುಷರು ಮತ್ತು ೮೫೭ ಸ್ತ್ರೀಯರಿರುವರು.

ಈ ಗ್ರಾಮದಲ್ಲಿ ಅಗಸರು, ಅಕ್ಕಸಾಲಿಗ, ಕುಂಬಾರ, ಕಮ್ಮಾರ ಕೊರವರು ನಾಯಕ ಹರಿಜನ, ಜಂಗಮ, ವೇದರ, ಬೋವಿ, ಬಡಿಗೇರು ವೀರಶೈವ, ಬ್ರಾಹ್ಮಣ ಮುಂತಾದ ಅಲ್ಪಸಂಖ್ಯಾತ ಸಮುದಾಯಗಳಿವೆ. ಇತ್ಯಾದಿ ಸಮುದಾಯಗಳು ಸೌಹಾರ್ದಯುತವಾಗಿ ಗ್ರಾಮದಲ್ಲಿ ಬಾಳುತ್ತಿವೆ. ಸಮುದಾಯ ಕೇಂದ್ರಿತ ಓಣಿಗಗಳು ಕಾಣಸಿಗುತ್ತವೆ. ಕನ್ನಡ ಪ್ರಧಾನ ಭಾಷೆಯಾಗಿದ್ದು ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ.

ಗ್ರಾಮವು ಗುಡಿಸಲು, ಮಣ್ಣು, ಹೆಂಚು, ಕಲ್ಲು, ಕಾಂಕ್ರಿಟ್ ಮನೆಗಳಿಂದ ಮತ್ತು ಕಾಂಕ್ರಿಟ್ ರಸ್ತೆಗಳಿಂದ ಕೂಡಿದೆ. ೪ ಅಂಗನವಾಡಿ ಕೇಂದ್ರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಒಂದು ಸರಕಾರಿ ಪ್ರೌಢಶಾಲೆ, ಒಂದು ಸಾರ್ವಜನಿಕ ಗ್ರಂಥಾಲಯ, ರೈತ ಸೇವಾ ಸಂಘ, ಸ್ತ್ರೀ ಶಕ್ತಿ ಸಂಘ, ವಿನಾಯಕ ಜೈ ಕರ್ನಾಟಕ ಸಂಘ, ವಾಲ್ಮೀಕಿ ಸಂಘ, ಅಂಬೇಡ್ಕರ್ ಸಂಘ, ಕಾರ್ಮಿಕರ ಸಂಘ ಹಾಗೂ ಪಾಂಡುರಂಗ ರುಕ್ಮಿಣಿ ಸಂಘಗಳಿವೆ. ಮುಸ್ಲೀಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳನ್ನು ಹೊಂದಿದೆ. ಒಂದು ಬಯಲು ರಂಗಮಂದಿರವಿದ್ದು, ವಿಶೇಷ ದಿನಗಳಲ್ಲಿ ಇಲ್ಲಿ ನಾಟಕ ಪ್ರದರ್ಶನವಿರುತ್ತದೆ.

೨.೮.೭.೪ ಕೋಗಳಿ : ಕೋಗಳಿ ಗ್ರಾಮಪಂಚಾಯತಿಯು ಹಗರಿಬೊಮ್ಮನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ ದೂರದಲ್ಲಿದೆ. ಇಟಗಿಯಿಂದ ಕೊಟ್ಟೂರಿಗೆ ಹೋಗುವ ಜಿಲ್ಲಾ ಹೆದ್ದಾರಿಯಲ್ಲಿ ೫ ಕಿಲೋಮೀಟರ್ ದೂರದಲ್ಲಿ ಗ್ರಾಮಪಂಚಾಯತಿ ಕೇಂದ್ರವಿದೆ. ಕೋಗಳಿಯು ಹೋಬಳಿ ಕೇಂದ್ರವೂ ಹೌದು. ಮಳೆಯಾಶ್ರಿತ ಕೃಷಿಯನ್ನು ಅವಲಂಭಿಸಿದ ಪ್ರದೇಶ ಇದಾಗಿದೆ. ಚಿಕ್ಕ ಮರಡಿಗಳಿಂದ ಕೂಡಿದ ಪ್ರದೇಶ ಇದಾಗಿದೆ. ಗ್ರಾಮಪಂಚಾಯತಿಯು ಕೋಗಳಿ, ಸಮತು ಕೋಡಿಹಳ್ಳಿ, ಶ್ರೀರಾಮನಗರ ಗ್ರಾಮಗಳಿಂದ ಕೂಡಿದೆ. ಕೋಗಳಿಯು ಗ್ರಾಮಪಂಚಾಯತ್ ಕೇಂದ್ರವಾಗಿದೆ.

ಕ್ರಿ.ಶ. ಒಂಭತ್ತನೇ ಶತಮಾನದವನಾದ ಕನ್ನಡದ ಮೊದಲ ಗದ್ಯಕೃತಿಯಾದ ವಡ್ಡಾರಾಧನೆಯ ಕತೃವಾದ ಶಿವಕೋಟ್ಯಾಚಾರ್ಯನು ಇದೇ ಗ್ರಾಮಕ್ಕೆ ಸೇರಿದವನೆಂದು ಕನ್ನಡ ಸಾಹಿತ್ಯ ಚರಿತ್ರೆಕಾರರು ಗುರುತಿಸಿದ್ದಾರೆ.

ವಿಜಯನಗರ ಪೂರ್ವದಿಂದಲೂ ಪ್ರಸಿದ್ಧಿಯನ್ನು ಹೊಂದಿದ್ದ ಈ ಗ್ರಾಮವು ಕೋಗಳಿ-೫೦೦ ಎಂದೇ ಪ್ರಸಿದ್ಧಿಯನ್ನು ಹೊಂದಿದ್ದಿತು. ಕೋಗಳಿ ಪರಿಸರದ ಸುತ್ತಲ ೫೦೦ ಹಳ್ಳಿಗಳಿಗೆ ಆಡಳಿತ ಕೇಂದ್ರವಾಗಿ ಈ ಗ್ರಾಮವಿದ್ದುದರಿಂದಾಗಿಯೇ ಕೋಗಳಿ ನಾಡು, ಕೋಗಳಿ-೫೦೦ ಎಂದು ಶಾಸನಗಳಲ್ಲಿ ಉಲ್ಲೇಖಿತಗೊಂಡುದ್ದನ್ನು ಕಾಣುತ್ತೇವೆ.

ಕೋಗಳಿಯು ಸುತ್ತಲೂ ಮರಡಿಗಳಿಂದ ಕೂಡಿದ ದಿಬ್ಬವಿದ್ದು ಮಧ್ಯದ ತಗ್ಗಿನಲ್ಲಿ ಗ್ರಾಮವಿದೆ. ಕೆರೆಯೊಂದಿದೆ. ಕೋಗಳಿ ಹಳ್ಳವಿದೆ. ದನಕರುಗಳಿಗೆ ಕುಡಿಯುವ ನೀರನ್ನು ಕೆರೆ ಒದಗಿಸುತ್ತದೆ. ಹಳೆಯ ಕಾಲದ ತೆರೆದ ಮೂರು ಬಾವಿಗಳಿವೆ. ಎರಡು ಕೊಳವೆ ಬಾವಿಗಳಿವೆ. ಕುಡಿಯುವ ನೀರಿನ ಸಂಗ್ರಹಕ್ಕಾಗಿ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಸಾರ್ವಜನಿಕ ನಲ್ಲಿಯ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ.

ಗ್ರಾಮದ ಒಟ್ಟು ಭೂವಿಸ್ತೀರ್ಣ ೧,೯೮೦.೫೫ ಹೆಕ್ಟೆರ್. ೨೦೧೧ರ ಜನಗಣತಿಯ ಪ್ರಕಾರ ೭೭೯ ಕುಟುಂಬಗಳು ಈ ಗ್ರಾಮದಲ್ಲಿ ವಾಸವಾಗಿವೆ. ಒಟ್ಟು ಜನಸಂಖ್ಯೆ ೩೩೦೮. ಅದರಲ್ಲಿ ಪರಿಶಿಷ್ಟ ಜಾತಿಯ ೮೪೬ ಮತ್ತು ಪರಿಶಿಷ್ಟ ಪಂಗಡದ ೪೮೮ ಜನ ದಾಖಲಾಗಿರುವರು. ಒಟ್ಟು ೨೧೩೭ ಸಾಕ್ಷರರಲ್ಲಿ ೧೨೨೭ ಪುರುಷರು ಮತ್ತು ೯೧೦ ಸ್ತ್ರೀಯರಿರುವರು.

ಬೋವಿ, ಮಾದಿಗ, ನಾಯಕ, ಅಗಸ, ಬಡಿಗೇರ, ಹಡಪದ, ಕಮ್ಮಾರ, ಕುರುಬ, ಮುಸ್ಲೀಂ, ವೀರಶೈವ ಲಿಂಗಾಯತ ಇತ್ಯಾದಿ ಸಮುದಾಯಗಳು ಸೌಹಾರ್ದಯುತವಾಗಿ ಗ್ರಾಮದಲ್ಲಿ ಬಾಳುತ್ತಿವೆ. ಸಮುದಾಯ ಕೇಂದ್ರಿತ ಓಣಿಗಳು ಕಾಣಸಿಗುತ್ತವೆ. ಕನ್ನಡ ಪ್ರಧಾನ ಭಾಷೆಯಾಗಿದ್ದು ಉರ್ದು, ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ.

೬ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗ್ರಂಥಾಲಯ, ಅಂಚೆ ಕಚೇರಿ, ಆಯುರ್ವೇದ ಆಸ್ಪತ್ರೆ, ನ್ಯಾಯಬೆಲೆ ಅಂಗಡಿ, ದೂರಸಂಪರ್ಕ ವಿನಿಮಯ ಕೇಂದ್ರ, ಬಯಲು ರಂಗ ಮಂದಿರ, ಸಮುದಾಯ ಭವನ, ಸ್ತ್ರೀಶಕ್ತಿ ಸಂಘಗಳು, ಮುಸ್ಲೀಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳನ್ನು ಹೊಂದಿದೆ.

೨.೮.೭.೫ ಸೊನ್ನ : ಸೊನ್ನ ಗ್ರಾಮಪಂಚಾಯತಿಯು ಹಗರಿಬೊಮ್ಮನಹಳ್ಳಿ ತಾಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಬಯಲು ಪ್ರದೇಶದಿಂದ ಕೂಡಿದ ಈ ಪರಿಸರವು ಮಳೆಯಾಶ್ರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಕೆಂಪು ಭೂಮಿಯನ್ನು ಹೊಂದಿರುವ ಈ ಪರಿಸರದಲ್ಲಿ ಹಳ್ಳ, ಕೆರೆ, ಕುಂಟೆ ಗಳಿವೆ. ಜೋಳ, ಮೆಕ್ಕೆ ಜೋಳ, ಸೂರ್ಯಕಾಂತಿ, ನೆಲಗಡಲೆ, ಹತ್ತಿ, ತೊಗರಿ, ಹಲಸಂದೆ, ಹೆಸರು, ಉದ್ದು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಸೊನ್ನ, ಸಕ್ರಿಹಳ್ಳಿ ಉಲುವತ್ತಿ ಗ್ರಾಮಗಳು ಸೇರಿವೆ. ಸೊನ್ನವು ಹಗರಿಬೊಮ್ಮನಹಳ್ಳಿಯಿಂದ ಮೋರಗೇರಿಗೆ ಹೋಗುವ ಜಿಲ್ಲಾ ಹೆದ್ದಾರಿ ಮಾರ್ಗದಲ್ಲಿ ಬರುತ್ತದೆ.

ಸಕ್ರಿಹಳ್ಳಿಗೆ ಕಚ್ಚಾ ರಸ್ತೆ ಇದ್ದು ಸೊನ್ನದಿಂದ ೦.೨೫ ಕಿಲೋಮೀಟರ್ ಒಳದಾರಿಯಲ್ಲಿ ಸಾಗಬೇಕು. ಉಲವತ್ತಿಯು ಗ್ರಾಮಪಂಚಾಯತಿ ಕೇಂದ್ರದಿಂದ ೭ ಕಿಲೋಮೀಟರ್ ದೂರದಲ್ಲಿದ್ದು ಹೊಸಪೇಟೆ ಹರಿಹರ ರಾಜ್ಯ ಹೆದ್ದಾರಿಯಲ್ಲಿ ಬರುತ್ತದೆ.

ಗ್ರಾಮಪಂಚಾಯತಿಯು ಮೋರಗೇರಿ ಹೋಬಳಿಗೆ ಸೇರಿದೆ. ಸೊನ್ನ ಗ್ರಾಮವು ಗ್ರಾಮಪಂಚಾಯತಿ ಕೇಂದ್ರವಾಗಿದೆ. ಈ ಗ್ರಾಮದ ದೇವತೆಯಾದ ಸೊಲ್ಲಮ್ಮನಿಂದಾಗಿಯೇ ಗ್ರಾಮಕ್ಕೆ ಸೊನ್ನ ಎಂದು ಹೆಸರು ಬಂದಿರಬೇಕೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಹನ್ನೆರಡನೇ ಶತಮಾನದಲ್ಲಿದ್ದ ವಚನಕಾರ ಸಿದ್ದರಮನ ಸಾಧನಾ ಕೇಂದ್ರವಾದ ಮಹಾರಾಷ್ಟ್ರದ ಸೊಲ್ಲಾಪುರವನ್ನು ಹಿಂದೆ ಸೊನ್ನಲಿಗೆ ಎಂದು ಕರೆಯುತ್ತಿರುವುದಾಗಿ ಚರಿತ್ರೆಯ ಮೂಲಕ ತಿಳಿಯುತ್ತದೆ. ಸಿದ್ದರಾಮನನ್ನು ಸೊನ್ನಲಿಗೆ ಸಿದ್ದರಾಮನೆಂದು ಇಂದಿಗೂ ಕರೆಯಲಾಗುತ್ತದೆ. ಸೊಲ್ಲಾಪುರದ ಅಧಿದೇವತೆ ಸೊಲ್ಲಮ್ಮನಿಂದಾಗಿಯೇ ಸೊಲ್ಲಾಪುರ ಎಂದು ಹೆಸರು ಬಂದಿರುವುದಾಗಿ ತಿಳಿದುಬರುತ್ತದೆ. ಸೊಲ್ಲಾಪುರದ ಮೂಲ ಹೆಸರು ಸೊನ್ನಲಿಗೆ. ಇಲ್ಲಿಯೂ ಸಹ ಸೊಲ್ಲಾಪುರವೇ ಸೊನ್ನಾಪುರ> ಸೊನ್ನಾ>ಸೊನ್ನ ಆಗಿರುವ ಸಾಧ್ಯತೆ ಇದೆ. ತೆರೆದ ಬಾವಿ, ಕೊಳವೆ ಬಾವಿಗಳಿವೆ. ಸೊನ್ನದ ಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಮಳೆಯಾಧಾರಿತ ಕೃಷಿಯನ್ನು ಇಲ್ಲಿಯ ಜನ ಆಶ್ರಯಿಸಿದ್ದಾರೆ.

ಗ್ರಾಮದ ಒಟ್ಟು ಭೂವಿಸ್ತೀರ್ಣ ೨,೦೯೩.೫೦ ಹೆಕ್ಟೆರ್. ೨೦೧೧ರ ಜನಗಣತಿಯ ಪ್ರಕಾರ ೭೭೩ ಕುಟುಂಬಗಳು ಈ ಗ್ರಾಮದಲ್ಲಿ ವಾಸವಾಗಿವೆ. ಒಟ್ಟು ಜನಸಂಖ್ಯೆ ೩೮೩೭. ಅದರಲ್ಲಿ ಪರಿಶಿಷ್ಟ ಜಾತಿಯ ೬೪೩ ಮತ್ತು ಪರಿಶಿಷ್ಟ ಪಂಗಡದ ೩೪ ಜನ ದಾಖಲಾಗಿರುವರು. ಒಟ್ಟು ೨೧೮೨ ಸಾಕ್ಷರರಲ್ಲಿ ೧೨೨೦ ಪುರುಷರು ಮತ್ತು ೯೬೨ ಸ್ತ್ರೀಯರಿರುವರು.

ಬೋವಿ, ಮಾದಿಗ, ನಾಯಕ, ಅಗಸ, ಬಡಿಗೇರ, ಹಡಪದ, ಕುರುಬ, ಮುಸ್ಲೀಂ, ವೀರಶೈವ ಲಿಂಗಾಯತ ಇತ್ಯಾದಿ ಸಮುದಾಯಗಳು ಸೌಹಾರ್ದಯುತವಾಗಿ ಗ್ರಾಮದಲ್ಲಿ ಬಾಳುತ್ತಿವೆ. ಸಮುದಾಯ ಕೇಂದ್ರಿತ ಓಣಿಗಳು ಕಾಣಸಿಗುತ್ತವೆ. ಕನ್ನಡ ಪ್ರಧಾನ ಭಾಷೆಯಾಗಿದ್ದು ಉರ್ದು, ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುವವರೂ ಇದ್ದಾರೆ.

ಗ್ರಾಮವು ಗುಡಿಸಲು, ಮಣ್ಣು, ಹೆಂಚು, ಕಲ್ಲು, ಕಾಂಕ್ರಿಟ್ ಮನೆಗಳಿಂದ ಮತ್ತು ಮಡ್ಡು, ಹಾಸುಗಲ್ಲು, ಕಾಂಕ್ರಿಟ್ ರಸ್ತೆಗಳಿಂದ ಕೂಡಿದೆ. ೫ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗ್ರಂಥಾಲಯ, ಅಂಚೆ ಕಚೇರಿ, ಎ.ಎನ್.ಎಂ ಕೇಂದ್ರ, ನ್ಯಾಯಬೆಲೆ ಅಂಗಡಿ, ದೂರಸಂಪರ್ಕ ವಿನಿಮಯ ಕೇಂದ್ರ, ಬಯಲು ರಂಗ ಮಂದಿರ, ಸಮುದಾಯ ಭವನ, ಸ್ತ್ರೀಶಕ್ತಿ ಸಂಘಗಳು, ಮುಸ್ಲೀಂ ಮತ್ತು ಇತರರಿಗಾಗಿ ಪ್ರತ್ಯೇಕ ಸ್ಮಶಾನಗಳನ್ನು ಹೊಂದಿದೆ.

ಈ ಗ್ರಾಮದಲ್ಲಿ ಈಶ್ವರ, ಬಸವೇಶ್ವರ, ಆಂಜನೇಯ, ಸೊಲ್ಲಮ್ಮ, ಉಡಚಲಮ್ಮ, ಹುಲಿಗೆಮ್ಮ, ಕರಿಯಮ್ಮ ಇತ್ಯಾದಿ ದೇವಾಲಯಗಳಿವೆ. ಒಂದು ಮಸೀದಿ ಇದೆ. ಯುಗಾದಿ ಪಾಢ್ಯದಂದು ಸೊಲ್ಲಮ್ಮ ದೇವರ ರಥೋತ್ಸವ ಜರಗುತ್ತದೆ.

ಕೊನೆ ಟಿಪ್ಪಣಿಗಳು

೧ ಸಾವಿತ್ರಿ: ೨೦೦೨:೦೫

೨ ಬಳ್ಳಾರಿ ಜಿಲ್ಲಾ ಗೆಜೆಟಿಯರ: ೧೯೦೪:೪೫

೩ ಸೂರ್ಯನಾಥ ಕಾಮತ್ (ಸಂ) ಲೇಖನ: ರಾಮಸ್ವಾಮಿ ಎಸ್.ಆರ್; ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ, ೧೯೯೮:೧೯೫

೪ ಎಫಿಗ್ರಾಫಿಕಾ ಕರ್ನಾಟಕ: ೧೯೩:೮೩

೫ ಗೆಜಿಟೆಡ್ ಆಫ್ ಇಂಡಿಯಾ: ೧೯೭೨:೭೪

೬ ರುಮಾಲೆ, ಮೃತ್ಯಂಜಯ:೧೯೯೯:೪೯.

೭ ಸುರೇಶ್ ಕೆ.ಎಂ. (ಸಂ) ೨೦೦೩:೧೬೮

೬ ೨೦೧೧ರ ಜನಗಣತಿ ವರದಿ ಹಾಗೂ ಕ್ಷೇತ್ರಕಾರ್ಯದ ಮೂಲಕ ಅಂಕಿ-ಅಂಶಗಳನ್ನು ಪಡೆಯಲಾಗಿದೆ.

ಅಧ್ಯಾಯ ಮೂರು

ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣ ನಡೆದುಬಂದ ದಾರಿ

ಅಧ್ಯಾಯ ಮೂರು

ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣ: ನಡೆದುಬಂದ ದಾರಿ

ಭಾರತವು ಗ್ರಾಮಗಳಿಂದ ಕೂಡಿದೆ. ಭಾರತದ ಜೀವಾಳವೇ ಗ್ರಾಮಗಳು. ಈ ಗ್ರಾಮಗಳು ವಿವಿಧ ಜಾತಿ, ಮತ, ಅಂತಸ್ತಿನ ಶ್ರೇಣೀಕರಣದಿಂದ ಕೂಡಿದೆ. ಇದಕ್ಕೆ ಕರ್ನಾಟಕವೂ ಹೊರತಾದುದಲ್ಲ. ಒಟ್ಟಾರೆ ಬಹುಸಂಖ್ಯಾತ ಗ್ರಾಮಗಳು ಅಲ್ಪಸಂಖ್ಯಾತ ನಗರಗಳನ್ನು ಹೋಲಿಕೆ ಮಾಡಿದರೆ ಶೈಕ್ಷಣಿಕವಾಗಿ ಹಿಂದುಳಿದಿರುವುದು ಗ್ರಾಮೀಣ ಪ್ರದೇಶವೇ ಆಗಿದೆ. ಅದರಲ್ಲಿಯೂ ಪುರುಷರಿಗಿಂತ ಕಡಿಮೆ ಪ್ರಮಾಣದಲ್ಲಿ ಮಹಿಳಾ ಸಾಕ್ಷರರೇ ಕಂಡುಬರುವರು. ಜಾತಿ ಸಮುದಾಯಗಳಿಗೆ ಹೋಲಿಕೆ ಮಾಡಿದರೆ ಮೇಲ್ಜಾತಿಯ ಮಹಿಳೆಯರಿಗಿಂತ ಕೆಳ ಜಾತಿ, ಸಮುದಾಯದ ಮಹಿಳೆಯರು ಶೈಕ್ಷಣಿಕವಾಗಿ ಕೆಳಗಿರುವುದು ಕಂಡುಬರುತ್ತದೆ. ಮಕ್ಕಳು ದೇಶದ ಆಸ್ತಿ ಎಂದು ಭಾರತದ ೧೯೭೪ರಲ್ಲಿ ರಾಷ್ಟ್ರೀಯ ಮಕ್ಕಳ ನೀತಿಯ ಮೂಲಕ ಘೋಷಿಸುತ್ತಿರುವ ಸರ್ಕಾರವು ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಬದ್ಧತೆಯನ್ನು ಅಂತಾರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ದೃಢಪಡಿಸಿದೆ. ಇದನ್ನು ಆಧರಿಸಿ ೨೦೧೩ರ ರಾಷ್ಟ್ರೀಯ ಮಕ್ಕಳ ನೀತಿಯು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿ ರಚನಾತ್ಮಕ ಕೆಲಸಗಳಿಗೆ ಒತ್ತು ನೀಡಿ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ಮತ್ತು ಶಿಕ್ಷಣ ನೀಡುವುದು ದೇಶದ ಆದ್ಯ ಕರ್ತವ್ಯವೆಂದು ಪ್ರತಿಪಾದಿಸಿದೆ. ಅದರೆ ಸೇವ್ ದಿ ಚೈಲ್ಡ್ ಸ್ವಯಂ ಸೇವಾ ಸಂಸ್ಥೆಯ ವರದಿಯ ಪ್ರಕಾರ "ಭಾರತದಲ್ಲಿ ಮಕ್ಕಳ ಸ್ಥಿತಿ ಅತ್ಯಂತ ಹೀನಾಯವಾಗಿದೆ. ಅದು ಇತರ ದೇಶಗಳಿಗೆ ಹೋಲಿಕೆಯ ಪಟ್ಟಿಯಲ್ಲಿ ೧೧೨ನೇ ಸ್ಥಾನವನ್ನು ಪಡೆದಿದೆ"[೧] ಭಾರತದಲ್ಲಿ ಆರ್ಥಿಕಾಭಿವೃದ್ಧಿ ಸಾಧನೆಯಾಗಿದ್ದರೂ ಇದು ಬಡವರು ಮತ್ತು ಕಡುಬಡವರಿಗೆ ತಲುಪದೇ ಈ ವರ್ಗದ ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ ಎಂಬುದನ್ನು ತಿಳಿಸಿದೆ. ನಮ್ಮ ಸಂವಿಧಾನದ ಆಶಯದಂತೆ ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ಸಾಮಾಜಿಕ ನ್ಯಾಯ, ಸಮಾನ ಶಿಕ್ಷಣದ ಅವಕಾಶ ಮತ್ತು ಹಕ್ಕುಗಳನ್ನು ನೀಡಬೇಕು. ಆದರೆ ಭಾರತ ಸಂವಿಧಾನದ ಈ ಆಶಯ ಈಡೇರಲು ಸಾಧ್ಯವಾಗುತ್ತಿಲ್ಲ ಎನ್ನುವ ಭಾವನೆ ಉಂಟಾಗುತ್ತಿದೆ. ಸ್ವಾತಂತ್ರ್ಯಾಪೂರ್ವದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣ ಹೊಂದಲು ಜಾತಿಯನ್ನು ಆಧಾರವಾಗಿಸಿ ಕೊಳ್ಳಲಾಗುತ್ತಿತ್ತು. ವಿದೇಶೀಯರು

ಭಾರತದೊಳಗೆ ಪ್ರವೇಶಗೊಂಡ ತರುವಾಯ ಆಧುನಿಕ ಶಿಕ್ಷಣದ ಪ್ರಭಾವ ಸ್ಥಳೀಯರ ಮೇಲೆ ಉಂಟಾಯಿತು. ಯುರೋಪಿನ ಶಿಕ್ಷಣದ ಪ್ರಭಾವಕ್ಕೆ ಒಳಗಾದ ಪ್ರಜ್ಞಾವಂತರು ಇಲ್ಲಿಯೂ ಶಿಕ್ಷಣ ವ್ಯವಸ್ಥೆ ಬದಲಾಗಬೇಕು ಎಂದು ಆಪೇಕ್ಷಿಸಿದರು. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಜ್ಯೋತಿ ಬಾ ಫುಲೆಯವರು ಮಹಾರಾಷ್ಟ್ರದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನು ಉಂಟುಮಾಡಿದರು. ಸ್ವಾತಂತ್ರ್ಯಪೂರ್ವದಲ್ಲಿಯೇ ತಳಸಮುದಾಯಗಳು ಹಾಗೂ ಮಹಿಳೆಯರಿಗಾಗಿ ಶಾಲೆಗಳನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹೆಣ್ಣುಮಕ್ಕಳಿಗಾಗಿ ಶಾಲೆಯನ್ನು ಪ್ರಾರಂಭಿಸಿದಾಗ ಶಾಲೆಗೆ ಪ್ರವೇಶ ಪಡೆಯಲು ಮಹಿಳೆಯರು ಹಿಂಜರಿದರಂತೆ. ಅದಕ್ಕೆ ಕಾರಣಗಳನ್ನು ಅರಿತು ತಮ್ಮ ಹೆಂಡತಿಗೇ ಶಿಕ್ಷಣವನ್ನು ಕೊಡಿಸಿ ಹೆಣ್ಣುಮಕ್ಕಳ ಶಾಲೆಗೆ ತಮ್ಮ ಹೆಂಡತಿಯನ್ನೇ ಉಪಧ್ಯಾಯಳಾಗಿಸಿದರಂತೆ. ಆದರೆ ಸ್ವಾತಂತ್ರ್ಯಾನಂತರ ಶಿಕ್ಷಣ ವ್ಯವಸ್ಥೆಯು ಜಾತಿಯಾಧಾರಿತ ಶಿಕ್ಷಣ ವ್ಯವಸ್ಥೆಯಿಂದ ದೂರವುಳಿದರೂ ಅದು ಆಧಾರಿತವಾಗಿ ಬಂಡವಾಳಶಾಹಿಗಳ ಕೈಸೇರುವಂತಾಯಿತು. ಜಾಗತೀಕರಣದ ಪ್ರಭಾವದಿಂದ ಇಂಗ್ಲೀಷ್ ಮಾಧ್ಯಮವನ್ನು ತಮ್ಮ ಮಕ್ಕಳು ಕಲಿಯಬೇಕೆನ್ನುವ ಭ್ರಮೆಗೆ ಒಳಗಾದ ಮಧ್ಯಮ ವರ್ಗದವರನ್ನೇ ಗುರಿಯಾಗಿಸಿಕೊಂಡ ಬಂಡವಾಳಶಾಹಿಗಳು ನಾಯಿಕೊಡೆಗಳಂತೆ ಶಾಲೆಗಳನ್ನು ಪ್ರಾರಂಭಿಸಿದರು. ಮಾತೃಭಾಷಾ ಕಲಿಕೆ ಇತ್ಯಾದಿ ನಿರ್ಬಂಧಗಳನ್ನು ಸರ್ಕಾರ ವಿಧಿಸಿದರೂ ಅವನ್ನೆಲ್ಲಾ ಗಾಳಿಗೆ ತೂರಿ ಕೇವಲ ಹಣವನ್ನು ಮಾಡುವ ವ್ಯಾಪಾರಿ ಕೇಂದ್ರಗಳಾಗಿ ಶಾಲೆಗಳುಳಿದವು. ಹೀಗೆ ಅನಾರೋಗ್ಯಕರವಾದ ಬೆಳವಣಿಗೆಯಿಂದ ಸರ್ಕಾರಿ ಶಾಲೆಗಳು ಸೊರಗಿ ನಿಲ್ಲುವಂತಾಯಿತು.

ಯಾರು ಹೆಚ್ಚು ಹಣ ನೀಡುತ್ತಾರೊ ಅವರಿಗೆ ಹೆಚ್ಚು ಮೌಲ್ಯದ ಶಿಕ್ಷಣ ಎಂಬುವ ದ್ಯೇಯ ವಾಕ್ಯವನ್ನು ಗುರಿಯಾಗಿಸಿಕೊಂಡಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ವರ್ತಿಸುವಂತಾಯಿತು. ಪ್ರಾಯಶಃ ಸರ್ಕಾರ ಮತ್ತು ಅಧಿಕಾರ ವರ್ಗದ ನಿರ್ಲಕ್ಷ್ಯವೇ ಈ ರೀತಿಯ ಧೋರಣೆಗೆ ಪ್ರೇರಣೆ ನೀಡಿತೇನೋ ಎನಿಸುತ್ತದೆ. ಉಳ್ಳವರ ಪರವಾದ ಶೈಕ್ಷಣಿಕ ನೀತಿಗಳಿಂದಾಗಿ ಆರ್ಥಿಕ ಮತ್ತು ಸಾಮಾಜಿಕವಾಗಿ ದುರ್ಬಲವಾಗಿರುವ ತಳಸಮುದಾಯ ಹಾಗೂ ಬಡವರ್ಗದವರು ಇಂದಿಗೂ ಸಮಾನ ಶಿಕ್ಷಣವನ್ನು ಪಡೆಯಲಾಗದೇ ಮುಖ್ಯವಾಹಿನಿಯಿಂದ ಅಂಚಿಗೆ ಸರಿಯು ವಂತಾಗಿದೆ. ಅದರಲ್ಲೂ ಮಹಿಳೆಯರಂತೂ ಶೈಕ್ಷಣಿಕವಾಗಿ ಇನ್ನೂ ಕೆಳಗೆ ನೂಕಲ್ಪಟ್ಟಿರುವುದು ಕಂಡುಬರುತ್ತಿದೆ. ಸಾಮಾಜಿಕ ಹಾಗೂ ಇತರ ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಾನತೆಯನ್ನು ಸಾಧಿಸಲು ಏಕರೂಪದ ಶಿಕ್ಷಣ ವ್ಯವಸ್ಥೆಯೊಂದೇ ಪ್ರಬಲ ಅಸ್ತ್ರವಾಗಬಲ್ಲದು. ಸಮಾನ ಶಿಕ್ಷಣದ ಕುರಿತಾದ ಎಲ್ಲಾ ನೀತಿ ಆಯೋಗಗಳ ಸಲಹೆಗಳನ್ನು ನಿರ್ಲಕ್ಷಿಸಿ ಸರ್ಕಾರ ವಿದ್ಯೆಯೆಂಬ ಮೂಲಭೂತ ಹಕ್ಕನ್ನು ಖಾಸಗಿಯವರ ಕೈಯಲ್ಲಿ ಒತ್ತೆಯಿಟ್ಟಿದೆ ಎನಿಸುತ್ತದೆ. ಆ ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ತೊಲಗಿಸಬೇಕಾದ ಸರ್ಕಾರವು ಶಿಕ್ಷಣದಂತಹ ಮೂಲಭೂತ ಸೌಲಭ್ಯಗಳಲ್ಲಿ ಅಸಮಾನತೆ ಸೃಷ್ಟಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ಸಮಗ್ರ ಸಮಾನ ಶಾಲಾ ವ್ಯವಸ್ಥೆಯುಳ್ಳ ರಾಷ್ಟ್ರೀಯ ಶಿಕ್ಷಣನೀತಿಯೊಂದನ್ನು ಜಾರಿಗೆ ತರಲೇಬೇಕಾದ ಅಗತ್ಯವಿದೆ. ಕೇಂದ್ರ ಸರ್ಕಾರದ ಯೋಜನೆಯಂತೆ ೩-೬ ವಯೋಮಾನದೊಳಗಿನ ಮಕ್ಕಳ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ನೀಡುವ ಕಾರ್ಯವನ್ನು ಅಂಗನವಾಡಿ ಕೇಂದ್ರಗಳಿಗೆ ನೀಡಲಾಗಿದೆ.

ಆದರೆ ಅಂಗನವಾಡಿ ಕಾರ್ಯಕರ್ತರಿಗೆ ಕೇವಲ ಮಕ್ಕಳ ಜವಾಬ್ದಾರಿಯನ್ನು ಮಾತ್ರ ನೀಡದೆ ಬಾಣಂತಿ, ಬಸಿರೆ, ಸ್ತ್ರೀಶಕ್ತಿ ಸಂಘಗಳ ರಚನೆ, ಕ್ಷೇತ್ರದ ವಿವಿಧ ಗಣತಿ ಕಾರ್ಯಗಳಿಗೂ ಬಳಸಿಕೊಳ್ಳಲಾಗುತ್ತದೆ. ಅಂಗನವಾಡಿ ಕೇಂದ್ರಗಳೆಂದರೆ ಕೇವಲ ಬಡಮಕ್ಕಳಿಗೆ ಅಲ್ಪಸ್ವಲ್ಪ ಆಹಾರ ನೀಡುವ ಕೇಂದ್ರಗಳಾಗಿ ಮಾತ್ರ ಗುರುತಿಸಿಕೊಳ್ಳುವಂತಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳೇ ಇರುತ್ತಾರೆಂಬುದು ಗಮನಾರ್ಹ. ಜೊತೆಗೆ ಅಂಗನವಾಡಿ ಕೇಂದ್ರಗಳು ೩-೬ ವರ್ಷದ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನೀಡಬೇಕೆಂಬ ನಿರ್ದೇಶನವನ್ನು ಸರ್ಕಾರ ತಂದಿದೆಯಾದರೂ ಬೇರೆ ಬೇರೆ ವಯೋಮಾನಕ್ಕೆ ತಕ್ಕಂತೆ ಶಿಸ್ತುಬದ್ಧ ಸೂಚಿತ ನಮೂನೆಯ ಪಠ್ಯವಾಗಲಿ, ಪ್ರತ್ಯೇಕ ಕೊಠಡಿಯಾಗಲಿ, ತರಬೇತಾದ ಬೋಧನಾ ಸಿಬ್ಬಂದಿಯಾಗಲಿ ಇಲ್ಲ. ಅಂಗನವಾಡಿ ಕಾರ್ಯಕರ್ತರಿಗೆ ಸರಿಯಾದ ಸೇವಾ ಭದ್ರತೆಯೂ ಇರದೆ ಕೇವಲ ಕ್ರೋಢೀಕೃತ ವೇತನವನ್ನು ಪಡೆಯುವ ದಿನಗೂಲಿಗಳಂತೆ ಪರಿಗಣಿಸುತ್ತಿರುವುದು ವಿಷಾಧಕರ ವಿಚಾರವಾಗಿದೆ.

ಮಕ್ಕಳ ಪೋಷಣಾ ವ್ಯವಸ್ಥೆಯಾಗಿ ಆರೋಗ್ಯ ಇಲಾಖೆಯಡಿ ದಾಖಲಾಗುತ್ತದೆಯೇ ಹೊರತು ಶೈಕ್ಷಣಿಕ ವ್ಯವಸ್ಥೆಯಾಗಿ ಸರ್ಕಾರದಲ್ಲಿ ದಾಖಲಾಗುವುದೇ ಇಲ್ಲ. ಹೀಗಾಗಿ ಅದೊಂದು ಪಾಲಿಸುವ, ಪೋಷಿಸುವ ಕೇಂದ್ರವಾಗಿಯಷ್ಟೇ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸು ವಂತಾಗಿವೆ. ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆಯಂಬುದು ಅಂಗನವಾಡಿ ಕೇಂದ್ರಗಳಿಂದಲೇ ಪ್ರಾರಂಭವಾಗಿವೆಯೇನೋ ಎನಿಸುತ್ತದೆ.

ಇಂಗ್ಲೀಷ್ ಮಾಧ್ಯಮವೆಂದು ಹಣ ವಸೂಲು ಮಾಡುವ ಖಾಸಗಿ ಶಿಕ್ಷಣ ಸಂಸ್ಥೆಗಳು ಆರು ವರ್ಷದೊಳಗಿನ ಮಕ್ಕಳಿಗಾಗಿ ಬೇಬಿ ಕ್ಲಾಸ್, ಲೋಯರ್ ಕಿಂಡರ್ ಗಾರ್ಟನ್, ಹೈಯರ್ ಕಿಂಡರ್ ಗಾರ್ಟನ್ ತರಗತಿಗಳನ್ನು ಪ್ರಾರಂಭಿಸಿವೆ. ಈ ತರಗತಿಗಳಿಗಾಗಿ ತಮ್ಮದೇ ಆದ ಪಠ್ಯಕ್ರಮಗಳನ್ನು ರೂಪಿಸಿ ಜನಸಾಮಾನ್ಯರನ್ನು ಮೋಸಗೊಳಿಸುತ್ತವೆ. ವಿಪರ್ಯಾಸವೇನೆಂದರೆ ಖಾಸಗಿಯಲ್ಲಿ ಕಲಿಯುತ್ತಿರುವ ಈ ೩-೬ ವರ್ಷಗಳ ಮಕ್ಕಳು ಸರ್ಕಾರದಲ್ಲಿ ಎಲ್ಲಿಯೂ ದಾಖಲಾಗುವುದಿಲ್ಲ. ಬೀದಿ ಬದಿಯಲ್ಲಿ ತರಕಾರಿ ವ್ಯಾಪಾರ ಮಾಡಲು ಪರವಾನಗಿ ತೆಗೆದುಕೊಳ್ಳಬೇಕಿರುವ ಈ ಕಾಲದಲ್ಲಿ ಬಹುಸಂಖ್ಯಾತ ಎಳೆಯ ಮಕ್ಕಳಿಗೆ ಪೂರ್ವ ಪ್ರಾಥಮಿಕ ಹಂತದ ಶಿಕ್ಷಣ ನೀಡುತ್ತಿರುವ ಈ ಖಾಸಗಿ ಶೈಕ್ಷಣಿಕ ಗುತ್ತಿಗೆದಾರರು ಸರ್ಕಾರದ ಯಾವುದೇ ಇಲಾಖೆಯಡಿಯಲ್ಲಿ ನೋಂದಣಿ ಯಾಗುವ ಅವಶ್ಯಕತೆಯಿಲ್ಲ. ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಜಾರಿಯಾದ ನಂತರ ಇತ್ತೀಚೆಗೆ ದಾಖಲೀಕರಣದ ಬಗ್ಗೆ ಸಣ್ಣ ಪ್ರಯತ್ನಗಳಾಗುತ್ತಿವೆಯಾದರೂ ಯಾವ ಕಠಿಣ ಕ್ರಮವನ್ನೂ ಕೈಗೊಂಡಿಲ್ಲ. ಯಾವುದೇ ಒಪ್ಪಿಗೆಯನ್ನು ಪಡೆಯದೇ ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಬೇರೆ ಬೇರೆ ಮಾದರಿ ಶಿಕ್ಷಣ ಕ್ರಮದ ಇಂತಹ ಆಂಗ್ಲ ಮಾಧ್ಯಮದ ಖಾಸಗಿ ಪೂರ್ವ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಳ್ಳುತ್ತಿದ್ದರೂ ಕೇಳುವವರೇ ಇಲ್ಲ. ಇಲ್ಲಿ ಕಲಿಯುತ್ತಿರುವ ಲಕ್ಷಾಂತರ ಮಕ್ಕಳ ಶೈಕ್ಷಣಿಕ ಕಾಳಜಿಯ ಕುರಿತಾಗಲಿ ಮತ್ತು ಅವುಗಳಿಗೆ ಮಾರ್ಗಸೂಚಿಯನ್ನು ನೀಡುವ ಬಗೆಗಾಗಲಿ ಸರ್ಕಾರ

ಲೋಚಿಸಿಲ್ಲವೆಂದೇ ಕಾಣುತ್ತದೆ. ಹೀಗಾಗಿ ಇತ್ತ ಖಾಸಗಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿರುವ ಅಥವಾ ಸರ್ಕಾರದ ಅಂಗನವಾಡಿಗಳಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದಂತೆ ಇರುವ ಮಕ್ಕಳ ಕುರಿತು ಸರ್ಕಾರಕ್ಕೆ ಯಾವುದೇ ಜವಾಬ್ದಾರಿ ಕಾಳಜಿಗಳಿಲ್ಲ ವೆಂಬುದಾಗಿ ಜನಸಾಮಾನ್ಯರು ತಿಳಿದಿರುವರು. ಪೂರ್ವಪ್ರಾಥಮಿಕವನ್ನು ಕಿಂಡರ್ ಗಾರ್ಟನ್ ಮಾದರಿಯ ಶಾಲೆಗಳಲ್ಲಿ ಕಲಿಸುವ ಪೋಷಕರು ಸಹಜವಾಗಿಯೇ ತಮ್ಮ ಮಕ್ಕಳನ್ನು ವ್ಯಾಪಾರಿ ಮನೋವೃತ್ತಿಯ ಆಂಗ್ಲ ಮಾಧ್ಯಮದ ಹೆಸರಿನಲ್ಲಿ ನಡೆಯುತ್ತಿರುವ ಖಾಸಗಿ ಶಾಲೆಗಳಿಗೇ ಕಳಿಸಲು ಮುಂದಾಗುವರು. ಸರ್ಕಾರಿ ಶಾಲೆಗಳು ವರ್ಷದಿಂದ ವರ್ಷಕ್ಕೆ ಬಹುಸಂಖ್ಯೆಯಲ್ಲಿ ಮುಚ್ಚಿಹೋಗುತ್ತಿದ್ದರೂ ಸರ್ಕಾರ ಮಾತ್ರ ಜಾಣ ಕಿವುಡುತನ ಪ್ರದರ್ಶಿಸುತ್ತಾ, ಸರ್ಕಾರಿ ಶಾಲೆಗೆ ಮಕ್ಕಳೇ ಬರುತ್ತಿಲ್ಲವೆಂದು ಅಲವತ್ತುಕೊಳ್ಳುತ್ತಾ ಗುಟ್ಟಾಗಿ ಖಾಸಗಿ ಶೈಕ್ಷಣಿಕ ವ್ಯವಸ್ಥೆಯನ್ನು ತಾನೇ ಕೊಬ್ಬಿಸುತ್ತಾ ತನ್ನ ತಲೆಯ ಮೇಲೆಯೇ ಚಪ್ಪಡಿ ಎಳೆದುಕೊಳ್ಳುತ್ತಿದೆ.

ಏಕರೂಪದ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತಾಗಬೇಕು ಮತ್ತು ಶಿಕ್ಷಣವನ್ನು ಪೂರ್ಣವಾಗಿ ರಾಷ್ಟ್ರೀಕರಣಗೊಳಿಸುವ ನಿಟ್ಟಿನಲ್ಲಿ ಹೆಜ್ಜೆಯಿಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರವು ಪ್ರಯತ್ನಿಸಬೇಕಾಗಿದೆ. "ಭಾರತದಲ್ಲಿ ಹಲವು ಭಾಷೆಗಳಿರುವುದು ಸಮಸ್ಯೆಯಲ್ಲ. ನಮ್ಮ ಭಾಷೆಯಲ್ಲಿಯೇ ಎಲ್ಲ ಶಿಕ್ಷಣ ಪಡೆಯಬೇಕೆನ್ನುವ ಮನೋಭಾವ ಉನ್ನತ ಮಟ್ಟದಲ್ಲಿ ಇಲ್ಲದಿರುವುದೇ ಸಮಸ್ಯೆಯಾಗಿದೆ"[೨]ಈ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಿಲ್ಲ ವೆಂದಲ್ಲ. ಆದರೆ ಆ ಪ್ರಯತ್ನ ಸಫಲವಾಗದ ರೀತಿಯಲ್ಲಿ ಬಂಡವಾಳಶಾಹಿಗಳು ನೋಡಿ ಕೊಳ್ಳುತ್ತಿರುವರು. ೧೯೯೨ರಲ್ಲಿ ವೀರಪ್ಪ ಮೊಯಿಲಿಯವರು ಮಂತ್ರಿಯಾಗಿದ್ದಾಗ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಪ್ರಾಥಮಿಕ ಹಂತದ ಶಾಲೆಗಳನ್ನು ಯಾವ ಸಂಸ್ಥೆಯಾದರೂ ಸರ್ಕಾರದ ಪೂರ್ವಾನುಮತಿಯಿಲ್ಲದೆ ಪ್ರಾರಂಭಿಸಬಹುದು ಎನ್ನುವ ಆದೇಶವನ್ನು ಹೊರಡಿಸ ಲಾಯಿತು. ಇದೇ ಆದೇಶವನ್ನು ಅಸ್ತ್ರವಾಗಿಸಿ ಕೊಂಡು ಕನ್ನಡ ಮಾಧ್ಯಮ ಶಾಲೆಗಳು ನಾಯಿಕೊಡೆಗಳಂತೆ ಪ್ರಾರಂಭಗೊಂಡವು. ಆದರೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ನೀಡಬೇಕೆಂಬ ಆದೇಶವನ್ನು ಮಾತ್ರ ಬಹುತೇಕ ಶಿಕ್ಷಣ ಸಂಸ್ಥೆಗಳು ಪಾಲಿಸಲೇ ಇಲ್ಲ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವುದಾಗಿ ಹೇಳಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡತೊಡಗಿದವು. ಈ ನಿಟ್ಟಿನಲ್ಲಿ ಕನ್ನಡ ಪರ ಹೋರಾಟ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಿ ಸರ್ಕಾರದ ಮೇಲೆ ಒತ್ತಡ ಹೇರಿದವು. ಈ ಕಾರಣಕ್ಕಾಗಿಯೇ ಸರ್ಕಾರವು ಪ್ರಾಥಮಿಕ ಹಂತದ ಶಿಕ್ಷಣವನ್ನು ಯಾವ ಮಾಧ್ಯಮದಲ್ಲಿ ನೀಡಬೇಕು ಎನ್ನುವ ಕುರಿತು ಸಮಿತಿಯೊಂದನ್ನು ರಚಿಸಿತು. ಸಮಿತಿಯು ಪ್ರಾಥಮಿಕ ಹಂತದ ಶಿಕ್ಷಣವನ್ನು ಕಡ್ಡಾಯವಾಗಿ ಮಾತೃ ಭಾಷೆಯಲ್ಲಿಯೇ ನೀಡಬೇಕು ಎಂದು ಸೂಚಿಸಿತು. ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿ ಸರ್ಕಾರವೂ ರಾಜ್ಯಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕು ಎನ್ನುವ ಆದೇಶವನ್ನು ಹೊರಡಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿತು. ಆದರೆ ವ್ಯಾಪಾರೀಕರಣ ಬುದ್ದಿಯ ಶಿಕ್ಷಣ ಸಂಸ್ಥೆಗಳು ಒಗ್ಗಟ್ಟಾಗಿ ಸರ್ಕಾರದ ವಿರುದ್ಧ ನ್ಯಾಯಾಲಯದ ಮೆಟ್ಟಿಲನ್ನು ಏರಿದವು. ನ್ಯಾಯಾಲಯವು ಮಗು ಯಾವ ಮಾಧ್ಯಮದಲ್ಲಿ ಕಲಿಯಬೇಕು ಎನ್ನುವ ನಿರ್ಣಯವನ್ನು ಮಗುವಿನ ಪಾಲಕರೇ ನಿರ್ಣಯಿಸುವುದು. ಅದರ ಮಧ್ಯ

ಸರ್ಕಾರ ತಲೆಹಾಕುವಂತಿಲ್ಲ. ಹಾಗೆಯೇ ಶಿಕ್ಷಣ ಸಂಸ್ಥೆಗಳ ಬೇಡಿಕೆಗೆ ಅನುಗುಣವಾಗಿ ಅವರು ಕೇಳಿದ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸಲು ಸರ್ಕಾರವು ಪರವಾನಿಗೆಯನ್ನು ನೀಡಬೇಕು ಎನ್ನುವ ಸೂಚನೆಯನ್ನು ನೀಡಿತು. ನ್ಯಾಯಾಲಯದ ಆದೇಶವನ್ನು ಪಾಲಿಸಲೇ ಬೇಕೆನ್ನುವ ಅಸಾಹಯಕ ಸ್ಥಿತಿಗೆ ಸರ್ಕಾರ ತಲುಪಿತು. ಇತ್ತೀಚೆಗೆ ಶಿಕ್ಷಣ ಮಾಧ್ಯಮ ಬದಲಿಸಿ ಕೊಳ್ಳಲು ಆಪೇಕ್ಷಿಸುವ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಶುಲ್ಕ ವಿಧಿಸಿ ಸರ್ಕಾರದ ಶಿಕ್ಷಣ ಇಲಾಖೆಯು ಪರವಾನಿಗೆಯನ್ನೂ ನೀಡಿತು. ಅಷ್ಟೇ ಅಲ್ಲ, ಖಾಸಗಿಯವರೊಂದಿಗೆ ಸ್ಪರ್ಧಿಸಲು ಸಾಧ್ಯವಾಗದೇ ಮುರಾರ್ಜಿ ದೇಸಾಯಿ ಮುಂತಾದ ವಸತಿ ಶಾಲೆಗಳಲ್ಲಿ ಮಾತ್ರವಲ್ಲದೆ ಇತರೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿಯೂ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಸರ್ಕಾರ ಮುಂದುವರೆಯಿತು. ಈ ನಿಟ್ಟಿನ ನಿರ್ಧಾರದ ಕುರಿತು ರಾಜ್ಯದ ಭಾಷಾ ಹೋರಾಟ ಸಂಘಟನೆಗಳು ಇಂದಿಗೂ ಅಸಮಧಾನ ವ್ಯಕ್ತಪಡಿಸುತ್ತಲೇ ಇವೆ. ಸರ್ಕಾರವು ಪ್ರೌಢ ಹಂತದವರೆಗೂ ಕಡ್ಡಾಯವಾಗಿ ರಾಜ್ಯ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎನ್ನುವ ಮಂತ್ರವನ್ನು ಜಪಿಸುತ್ತಲೇ ಇದೆ. ಪ್ರಾಯಶಃ ರಾಜಕಾರಣಿಗಳ ಇಚ್ಛಾ ಶಕ್ತಿಯ ಕೊರತೆ ಯಿಂದಾಗಿಯೇ ರಾಜ್ಯ ಭಾಷಾ ಮಾಧ್ಯಮದ ಶಿಕ್ಷಣ ನೀತಿ ಜಾರಿಯಾಗಲು ಸಾಧ್ಯವಾಗುತ್ತಿಲ್ಲವೆನಿಸುತ್ತದೆ. ನ್ಯಾಯಾಂಗವನ್ನು ಮೀರಿ ನಡೆಯುವಂತಿಲ್ಲ ಎಂದು ಹೇಳಲಾಗುವುದಾದರೂ ಅದರಾಚೆಗೂ ಸುಗ್ರಿವಾಜ್ಞೆಯಂತಹ ಆದೇಶದ ಮೂಲಕ ರಾಜ್ಯ ಭಾಷಾ ನೀತಿಯನ್ನು ಸರ್ಕಾರವು ಕಾಪಾಡ ಬಹುದಾಗಿತ್ತು. ಆದರೆ ಕೇವಲ ಮುಂದಿನ ಚುನಾವಣೆಯಲ್ಲಿ ಎಷ್ಟು ಮತಗಳು ಬೀಳುತ್ತವೆ ಎನ್ನುವುದರ ಕಡೆಗೆ ಮಾತ್ರ ಲಕ್ಷ್ಯವಿರುವ ರಾಜಕಾರಣಿಗಳಿಗೆ ನಮ್ಮ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಶಿಕ್ಷಣದ ಕುರಿತು ಕಾಳಜಿ ಇಲ್ಲದವರಂತೆ ವರ್ತಿಸುತ್ತಿರುವುದು ಮಾತ್ರ ಅಷ್ಟೇ ಸತ್ಯ.

ಕೊನೆ ಟಿಪ್ಪಣಿಗಳು

೧ ಸೇವ್ ದಿ ಚೈಲ್ಡ್ ಸ್ವಯಂ ಸೇವಾ ಸಂಸ್ಥೆಯ ವರದಿ: ೨೦೧೨:೩೨೪

೨ ಬರಗೂರು ರಾಮಚಂದ್ರಪ್ಪ: ೨೦೧೬:೬೪

ಅಧ್ಯಾಯ ನಾಲ್ಕು

ನಾಯಕ ಸಮುದಾಯದ ಮಹಿಳೆಯ ಶೈಕ್ಷಣಿಕ ಸಮಸ್ಯೆಗಳು

೪.೧. ಶಾಲೆಯಿಂದ ಹೊರಗುಳಿದ ೬-೧೪ ವಯೋಮಾನದ ಮಕ್ಕಳ ವಿವರ

೪.೨. ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ

೪.೩. ಪರಿಶಿಷ್ಟ ಪಂಗಡದ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾ ಅಂತರ

೪.೪. ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ಗ್ರಾಮಪಂಚಾಯತಿವಾರು ಶೈಕ್ಷಣಿಕ ವಿವರ

ಅಧ್ಯಾಯ ನಾಲ್ಕು

ನಾಯಕ ಸಮುದಾಯದ ಮಹಿಳೆಯ ಶೈಕ್ಷಣಿಕ ಸಮಸ್ಯೆಗಳು

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಪಂಗಡಗಳ ಸಂಖ್ಯೆ ಐವತ್ತಿದೆ. ಆದರೆ ಈ ಐವತ್ತು ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಐವತ್ತು ಸಾಮುದಾಯಗಳಲ್ಲಿ ನಲವತ್ತೆಂಟರಷ್ಟು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು. ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಪಂಗಡದಲ್ಲಿರುವ ನಾಯಕ ಸಮುದಾಯದಂತಹ ಸಮುದಾಯಗಳು ಮಾತ್ರ ಇಂದು

ಶಿಕ್ಷಣದಲ್ಲಿ ಅಲ್ಪ ಮಟ್ಟಿಗೆ ಮುಂದಿವೆ. ಇಂದು ಸಾರ್ವತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಪ್ರಗತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರರ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಅಂದರೆ ಇಂದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಇದರಲ್ಲಿಯೇ ಅಲ್ಪ ಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾವ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಹತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂದೇ ಇದರ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತದಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

ನೀರಾವರಿ ಪ್ರದೇಶವಾಗಿದ್ದರೂ ಶಿಕ್ಷಣದಲ್ಲಿ ಜಿಲ್ಲೆಯಲ್ಲಿಯೇ ಹಿಂದುಳಿದಿರುವ ತಾಲೂಕು ಸಿರುಗುಪ್ಪವಾಗಿದೆ. ಇಲ್ಲಿ ಶಿಕ್ಷಣಕ್ಕಿಂತ ಹೆಚ್ಚಾಗಿ ಪಾಲಕರಿಗೆ ತಮ್ಮ ನಿತ್ಯ ಜೀವನದ ಬದುಕೇ ಮುಖ್ಯವಾಗುತ್ತದೆ. ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಕೂಲಿ ಕಾರ್ಮಿಕರು ಸಿಗುವುದು ತುಂಬಾ ಕಷ್ಟ ಸಾಧ್ಯದ ಕೆಲಸ. ಅಕಸ್ಮಾತ್ ಕೂಲಿ ಕಾರ್ಮಿಕರು ದೊರೆತರೂ ಅವರ ಕೂಲಿ ಅತೀ ವಿಪರೀತವಾಗಿರುತ್ತದೆ. ಹೀಗಾಗಿ ಕೂಲಿ ಕಾರ್ಮಿಕರ ಕೊರತೆಯನ್ನು ಸರಿದೂಗಿಸಲು ಮನೆಯ ಮಕ್ಕಳನ್ನೇ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚು. ಎರಡನೇದಾಗಿ ಸರ್ಕಾರಿ

ಹುದ್ದೆಯನ್ನು ಗಿಟ್ಟಿಸುವುದಕ್ಕಾಗಿ ವಿದ್ಯಾಭ್ಯಾಸ ನಡೆಸಬೇಕು ಎಂಬ ಮನೋಧರ್ಮ ಭಾರತೀಯರದು. ಆದರೆ ಕನಿಷ್ಟ ಹತ್ತು ಎಕರೆಗಿಂತ ಮೇಲ್ಪಟ್ಟು ಭೂಮಿಯನ್ನು ಹೊಂದಿದ ರೈತರ ಪ್ರಮಾಣವೇ ಈ ತಾಲೂಕಿನಲ್ಲಿ ಹೆಚ್ಚಾಗಿದೆ. ಅಧಿಕ ಭೂಮಿಯನ್ನು ಹೊಂದಿದ ಮೇಲ್ಜಾತಿಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಅವಶ್ಯಕವೆಂದು ಭಾವಿಸುವುದೇ ಇಲ್ಲ. ಹೀಗಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದಕ್ಕಿಂತ ತಮ್ಮ ತಾತ್ಕಲಿಕ ಅನಿವಾರ್ಯತೆ ಕಳೆದರೆ ಸಾಕು ಎಂಬ ಭಾವನೆ ಇಲ್ಲಿಯ ಮೇಲ್ಜಾತಿಯ ರೈತರದ್ದಾಗಿದ್ದರೆ ಕೆಳಜಾತಿಯ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಹಚ್ಚಿದರೆ ತಮ್ಮ ಕುಟುಂಬಕ್ಕೆ ಹೆಚ್ಚಿನ ಆದಾಯ ದೊರೆಕುತ್ತದೆ ಎಂಬ ಆಶಾಭಾವನೆಯಿಂದಾಗಿ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಕಳಿಸಿದರೂ ಅದು ತುಂಬಾ ಅಪರೂಪವೆಂದೇ ಹೇಳಬೇಕು. ಅಕಸ್ಮಾತ್ ಮಧ್ಯಾಹ್ನದ ಊಟ, ಉಚಿತ ಪಠ್ಯಪುಸ್ತಕ ಇತ್ಯಾದಿ ಆಮಿಷಗಳನ್ನು ಸರ್ಕಾರ ನೀಡಿದರೂ, ಅದು ಕೇವಲ ತಾತ್ಕಲಿಕವೆಂಬ ಭಾವನೆ ಹಿರಿಯರದ್ದು, ಇನ್ನು ಶಾಲೆಯಲ್ಲಿನ ಸ್ಥಿತಿ ಹೀಗಿದೆ, ಸರ್ಕಾರದ ವಿಚಿತ್ರವಾದ ನೀತಿಗಳಿಂದ ಪಾರಾಗಲು ಮತ್ತು ಅಲ್ಪ ಆದಾಯದ ದೃಷ್ಟಿಯಿಂದ ಶಾಲಾ ಶಿಕ್ಷಕರು ಹಾಜರಾಗದ ಗೈರು ಹಾಜರಾದ ಮಕ್ಕಳನ್ನು ಸಹ ಶಾಲೆಗೆ ಕಡ್ಡಾಯವಾಗಿ ಬರುತ್ತಾರೆಂದು ಸುಳ್ಳು ದಾಖಲೆಗಳನ್ನು ನೀಡುವುದೇ ಹೆಚ್ಚು, ಹೀಗಾಗಿ ತಳ ಸಾಮುದಾಯದ ಎಷ್ಟೋ ಮಕ್ಕಳು ಸರ್ಕಾರಿ ದಾಖಾಲೆಗಳ ಪ್ರಕಾರ ಯೋಜನೆಗಳ ಪ್ರಾಯೋಜಿಕತ್ವ ಪಡೆದರೂ ವಾಸ್ತವವಾಗಿ ಆ ಯೋಜನೆಗಳ ಲಾಭದಿಂದ ಅವರು ದೂರವೇ ಉಳಿದಿರುತ್ತಾರೆ. ಈ ಸತ್ಯ ಪ್ರಾಯಶಃ ಕ್ಷೇತ್ರಕಾರ್ಯಕ್ಕೆ ಹೋಗದೇ ಇದ್ದರೆ ತಿಳಿಯುತ್ತಲೇ ಇರಲಿಲ್ಲ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಶಾಲೆಗೆ ಹೋಗಬೇಕಾದ ಎಷ್ಟೋ ಮಕ್ಕಳು ಶಾಲೆಯಿಂದ ಹೊರಗುಳಿದುರುವುದನ್ನು ಕಾಣುವಂತಾಯಿತು. ಇದು ಏಕೆ ಹೀಗೆ ಎಂದು ಪ್ರಶ್ನಿಸಿದರೆ ಬದುಕಿನ ಅನಿವಾರ್ಯತೆಯಂದೇ ಪಾಲಕರು ಉತ್ತರ ಹೇಳಿದರು.

ಇನ್ನು ಕೂಡ್ಲಿಗಿಯಂತಹ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕಿನಲ್ಲಿನ ಚಿತ್ರಣ ಇದಕ್ಕಿಂತಲೂ ತುಂಬಾ ಭಿನ್ನವಾದುದಾಗಿದೆ. ಇಲ್ಲಿ ಸಿರಗುಪ್ಪ, ಹೊಸಪೇಟೆಗಳಿಗೆ ಇರವಂತಹ ನೀರಾವರಿ ಹೊಂದಿದ ಕೃಷಿ ಭೂಮಿ ಇಲ್ಲವೆಂದೇ ಹೇಳಬಹುದು. ಸ್ಥಿತಿವಂತರಾದ ಕೆಲವು ಮೇಲ್ಜಾತಿ ಕುಟುಂಬಗಳು ಮಾತ್ರ ನೀರಾವರಿಗಾಗಿ ತೆರೆದ ಬಾವಿ ಅಥವಾ ಕೊಳವೆ ಬಾವಿಗಳನ್ನು ತೋಡಿಸಿಕೊಂಡು ಕೃಷಿಯಲ್ಲಿ ತೊಡಗಿರುವುದನ್ನು ಕಾಣಬಹುದು. ಆದರೆ ಆ ಬಾವಿಗಳ ನೀರಿನ ಪ್ರಮಾಣ ತುಂಬಾ ಅಲ್ಪವೆಂದೇ ಹೇಳಬಹುದು. ಅದರಲ್ಲೂ ವೈಜ್ಞಾನಿಕ ರೀತಿಯ ಹನಿ ನೀರಾವರಿ ಅಥವಾ ತುಂತುರು ನೀರಾವರಿ ಪದ್ದತಿಯನ್ನು ಇಲ್ಲಿಯ ರೈತರು ಅಳವಡಿಸಿಕೊಂಡಿರುವುದು ಅಪರೂಪವೆಂದೇ ಹೇಳಬಹುದು. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೦ ರಷ್ಟು ಕುಟುಂಬಗಳು ಮಾತ್ರ ಭೂಮಿ ಹೊಂದಿವೆ. ಇದರಲ್ಲಿ ನೀರಾವರಿ ಅಳವಡಿಸಿಕೊಂಡ ರೈತರ ಪ್ರಮಾಣ ಶೇಕಡ ಎರಡರಷ್ಟಿದ್ದರೆ ನೀರಾವರಿ ಅಳವಡಿಸಿಕೊಳ್ಳದ ಮಳೆಯಾಧಾರಿತ ಒಣಬೇಸಾಯವನ್ನೇ ಅನುಸರಿರುತ್ತಿರುವ ರೈತರ ಪ್ರಮಾಣ ಶೇಕಡ ೪೮ ರಷ್ಟಿದೆ. ಇನ್ನುಳಿದ ಶೇಕಡ ೫೦ ರಷ್ಟು ಜನ

ಕೂಲಿ ಕಾರ್ಮಿಕರಾಗಿ ಉಳಿದಿರುವುದು ಕ್ಷೇತ್ರಕಾರ್ಯದ ಮೂಲಕ ಅರಿಯಲಾಗಿದೆ. ಕೆಲವು ಬಂಡವಾಳಶಾಹಿ ಜನರು ಕೂಡ್ಲಿಗಿ ಸುತ್ತಮುತ್ತ ಸುಲಭ ಬೆಲೆಯಲ್ಲಿ ಭೂಮಿ ದೊರೆಯುತ್ತವೆಂಬ ಒಂದೇ ಕಾರಣಕ್ಕೆ ಭೂಮಿಯನ್ನು ಕೊಳ್ಳುವುದರಲ್ಲಿ ತೊಡಗಿದ್ದಾರೆ. ಹೀಗಾಗಿ ಅಲ್ಪಮಟ್ಟಿಗಿನ ಭೂಮಿಯನ್ನು ಹೊಂದಿದ್ದ ರೈತರಿಗೆ ಕೃಷಿ ಭೂಮಿ ಇಲ್ಲವಾಗಿ ಹೋಗಿರುವುದು ಕಂಡುಬರುತ್ತದೆ. ಸಿರುಗುಪ್ಪ, ಕೂಡ್ಲಿಗಿ ತಾಲೂಕುಗಳ ಸ್ಥಿತಿ ಈ ರೀತಿಯದ್ದಾಗಿದ್ದರೆ ಬಳ್ಳಾರಿ, ಹೊಸಪೇಟೆ, ಸಂಡೂರು ಹಾಗೂ ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಇವುಗಳಿಗಿಂತಲೂ ಭಿನ್ನ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ. ಹೊಸಪೇಟೆ ಬಹುತೇಕ ನೀರಾವರಿಯನ್ನು ಹೊಂದಿದ ಪ್ರದೇಶವನ್ನು ಹೆಚ್ಚಾಗಿ ಹೊಂದಿದೆ, ಸಾಕ್ಷರತ ಪ್ರಮಾಣದಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನ ಹೊಸಪೇಟೆ ತಾಲೂಕಿಗೆ ಸಲ್ಲುತ್ತದೆ. ಆದರೆ ವಾಸ್ತವದ ಸ್ಥಿತಿ ಏನೆಂದರೆ ಈ ತಾಲೂಕಿನಲ್ಲಿ ಬಂಡವಾಳಶಾಹಿಗಳ ಪ್ರಮಾಣ ಅಂದಾಜು ಶೇಕಡ ಎರಡರಷ್ಟಿದ್ದರೆ ಕೂಲಿ ಕಾರ್ಮಿಕರ ಪ್ರಮಾಣ ಶೇಕಡ ೭೫ ರಷ್ಟಿದೆ. ಇನ್ನುಳಿದ ಶೇಕಡ ೧೮ ರಷ್ಟು ಸಣ್ಣ ಹಿಡುವಳಿದಾರರು ಕಂಡುಬರುತ್ತಾರೆ. ಇವರಲ್ಲದೆ ಇನ್ನುಳಿದ ಶೇಕಡ ಐದರಷ್ಟು ಜನ ಹೊಟ್ಟೆ ಪಾಡಿಗಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುವವರು ಇದ್ದಾರೆ. ಶೇಕಡ ೭೫ ರಷ್ಟಿರುವ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುತ್ತಾದರೂ ಆ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗುವುದಿಲ್ಲ. ಸಾಮಾನ್ಯವಾಗಿ ಶಾಲೆಗೆ ಹೋಗುವ ಕೂಲಿಕಾರ್ಮಿಕರ ಮಕ್ಕಳು ೮–೧೦ ವರ್ಷದವರಾದರೆ ಸಾಕು ಶಾಲೆಯಿಂದ ಹೊರಗುಳಿದುಬಿಡುತ್ತಾರೆ. ಪ್ರಾಯಶಃ ಕೂಲಿಕಾರ್ಮಿಕರು ತಮ್ಮೊಂದಿಗೆ ಕೆಲಸ ನಿರ್ವಹಿಸಲು ತಮ್ಮ ಮಕ್ಕಳನ್ನು ಜೊತೆಗೆ ಸೇರಿಸಿಕೊಂಡು ಬಿಡುತ್ತಾರೆ. ಇನ್ನು ಬಹುತೇಕ ಹುಡುಗಿಯರು ತಮ್ಮ ಮನೆಯ ಸಣ್ಣ ಮಕ್ಕಳನ್ನು ಪಾಲಿಸಲು ಅಥವಾ ಮನೆಕೆಲಸ ನಿರ್ವಹಿಸುವುದಕ್ಕಾಗಿ ಶಾಲೆಯಿಂದ ಹೊರಗುಳಿಯುತ್ತಾರೆ. ಇದು ಕೇವಲ ಹೊಸಪೇಟೆ ತಾಲೂಕೊಂದರ ಸಮಸ್ಯೆಯಲ್ಲ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಈ ರೀತಿಯ ಸಮಸ್ಯೆ ಕಂಡುಬರುತ್ತದೆ. ಇನ್ನು

ಹಗರಿಬೊಮ್ಮನಹಳ್ಳಿ ತಾಲೂಕು ಬಹುತೇಕ ಮಳೆಯಾಧಾರಿತ ಕೃಷಿಯನ್ನೇ ನೆಚ್ಚಿಕೊಂಡಿರುವ ತಾಲೂಕಾಗಿದೆ. ಹೊಳೆಯ ದಂಡೆಯ ಭೂಮಿಗಳಲ್ಲಿ ಕೆಲವು ಮಾತ್ರ ಏತ ನೀರಾವರಿ ಇಲ್ಲವೆ ಪಂಪ್ ಸೆಟ್‌ಗಳಿಂದಾಗಿ ಅಲ್ಪಮಟ್ಟಿಗೆ ನೀರಾವರಿ ಸೌಲಭ್ಯವನ್ನು ಪಡೆದಿವೆಯಾದರೂ ತಾಲೂಕಿನ ಒಳಪ್ರದೇಶದಲ್ಲಿರುವ ಬಹುತೇಕ ಭೂಮಿಗಳು ನೀರಾವರಿ ಸೌಲಭ್ಯದಿಂದ ವಂಚಿತಗೊಂಡಿವೆ. ಬಳ್ಳಾರಿ ಜಿಲ್ಲೆಯ ಇತರ ತಾಲೂಕುಗಳು ಅನುಭವಿಸುವ ಹಲವಾರು ಸಮಸ್ಯೆಗಳನ್ನು ಈ ತಾಲೂಕು ಸಹ ಅನುಭವಿಸುತ್ತಿದೆ. ಆದರೆ ಈ ತಾಲೂಕು ಸಾಕ್ಷರತ ಪ್ರಮಾಣದಲ್ಲಿ ಅಷ್ಟು ಹಿಂದುಳಿದಿಲ್ಲ. ಒಟ್ಟಾರೆಯಾಗಿ ನೋಡಿದರೆ ಬಹುತೇಕ ಮೇಲ್ಜಾತಿಗಳು ಶಿಕ್ಷಣದ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡಿವೆಯಾದರೂ, ತಳ ಸಮುದಾಯಗಳು ಇಂದಿಗೂ ಶಿಕ್ಷಣದ ಪೂರ್ಣ ಲಾಭ ಪಡೆಯುವಲ್ಲಿ ಸೋತಿವೆಯಂದೇ ಹೇಳಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಹುತೇಕ

ಪರಿಶಿಷ್ಟ ಪಂಗಡದ ಪುರುಷ ಮಕ್ಕಳು ಇಂದು ಶೇಕಡ ೮೦ ರಷ್ಟು ಶಾಲೆಗೆ ಹೋಗುತ್ತಿವೆಯಾದರೂ ಅದು ಉನ್ನತ ಶಿಕ್ಷಣಕ್ಕೆ ಏರಿದಂತೆಲ್ಲಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತ ಸಾಗುತ್ತದೆ. ಅದರಲ್ಲೂ ಉನ್ನತ ಶಿಕ್ಷಣಕ್ಕೆ ಹೋಗುವ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಪ್ರಮಾಣವಂತೂ ಶೇಕಡ ೧ ರಷ್ಟು ಇಲ್ಲವೆಂದರೆ ಆಶ್ಚರ್ಯವಾಗುತ್ತದೆ. ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫ರ ಸಮೀಕ್ಷೆ ಪ್ರಕಾರ "ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ ಇಲ್ಲವೆ ಹಾಜರಾಗುವುದಿಲ್ಲ. ಇದರಿಂದ ಮುಂದೆ ಮಕ್ಕಳು ಅನಕ್ಷರಸ್ಥರಾಗಿ ಉಳಿದುಬಿಡುತ್ತಾರೆ. ಇದಲ್ಲದೆ ವಿವಿಧ ಹಂತಗಳಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ. ಶಿಕ್ಷಣದ ಮೊದಲ ಊರುಗೋಲೇ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ ಇತರ ಸಾಮಾಜಿಕ ಗುಂಪುಗಳ ಸಾಧನೆಯ ಉತ್ತಮವಾಗಿದೆ"[೧] ಅತ್ಯಧಿಕ ಪರಿಶಿಷ್ಟ ಪಂಗಡಗಳನ್ನು ಹೊಂದಿರುವ ಬಳ್ಳಾರಿ, ರಾಯಚೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಶೈಕ್ಷಣಿಕ ಪಂಗಡದ ಸರಾಸರಿ ಮಟ್ಟ ಕೆಳಮಟ್ಟದಲ್ಲಿದೆ. ರಾಯಚೂರು ಶೇಕಡ ೫.೨೧ ಬಳ್ಳಾರಿ ಶೇಕಡ ೭೬.೪೭ರಷ್ಟಿದೆ. ಇದು ಕೇವಲ ದಾಖಲಾತಿ ಪ್ರಮಾಣ ಮಾತ್ರ, ಆದರೆ ಗಮನಿಸಬೇಕಾದ ಅಂಶವೇನೆಂದರೆ ಪರಿಶಿಷ್ಟ ಪಂಗಡದ ಮಕ್ಕಳು ಅತ್ಯಂತ ಕಡಿಮೆ ಅವಧಿಯನ್ನು ಶಾಲೆಯಲ್ಲಿ ಕಳೆಯುತ್ತಿದ್ದಾರೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ರಾಜ್ಯಮಟ್ಟದಲ್ಲಿ ಸರಾಸರಿ ಶೇಕಡ ೧.೫೪ರಷ್ಟಿದ್ದರೆ, ಇದು ಪರಿಶಿಷ್ಟ ಪಂಗಡದ ಮಕ್ಕಳಲ್ಲಿ ಶೇಕಡ ೨.೪೨ರಷ್ಟಿದೆ. ಅದರಲ್ಲೂ ಎಲ್ಲಾ ಜಾತಿ ವರ್ಗಗಳಿಗಿಂತಲೂ ಶಾಲೆಯಿಂದ ಹೊರಗುಳಿದ ಬಾಲಕಿಯರಲ್ಲಿ ಪರಿಶಿಷ್ಟ ಪಂಗಡದ ಬಾಲಕಿಯರ ಪ್ರಮಾಣವೇ(ಶೇಕಡ ೨.೬೭) ಅಧಿಕವಾಗಿದೆ.

೪.೧. ಶಾಲೆಯಿಂದ ಹೊರಗುಳಿದ ೬-೧೪ ವಯೋಮಾನದ ಮಕ್ಕಳ ವಿವರ

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯-೩೫ ವಯೋಮಾನದೊಳಗಿನ ಜನರ ಮಾಹಿತಿಯನ್ನು ಪಡೆದಿದೆ. ಈ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವುಗಳಾವುವೆಂದರೆ ಕ್ರಮವಾಗಿ

೧. ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯನ್ನು ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೋಷಣೆಗಾಗಿ ಶಾಲೆಯನ್ನು ತೋರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು, ಮುಂತಾದವುಗಳಾಗಿವೆ.

"ಪ್ರೌಢ ಶಿಕ್ಷಣದಲ್ಲಿಯ ದಾಖಲಾತಿ ಪ್ರಮಾಣವು ಪ್ರಾಥಮಿಕ ಹಂತಕ್ಕಿಂತಲೂ ಕಡಿಮೆಯಾಗಿದೆ.

ಹಾಗೇ ಉನ್ನತ ಶಿಕ್ಷಣ ಹಂತದಲ್ಲಿ ಈ ಪ್ರಮಾಣ ಇನ್ನು ಕುಗ್ಗುತ್ತದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲೊಮಾ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು ೨೦೦೦ ದಲ್ಲಿ ಶೇಕಡ ೦.೧ ರಷ್ಟು ಇದ್ದು ೨೦೦೨-೦೩ರ ಹೊತ್ತಿಗೆ ಅದು ಶೇಕಡ ೧.೭ರಷ್ಟು ಏರಿಕೆ ಕಂಡಿದೆ. ಡಿಪ್ಲೊಮಾ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿಯು ಕನಿಷ್ಟ ಶೇಕಡ ೦.೭ರಷ್ಟು ಕಂಡುಬಂದಿದೆ"[೨] ಅಂದರೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಪರಿಶಿಷ್ಟ ಪಂಗಡಗಳು ಸೋತಿವೆ ಎಂದೇ ಇದರರ್ಥ.

ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿ ನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಪಂಗಡದ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಲು ಜನಸಂಖ್ಯಾಶಾಸ್ತ್ರಜ್ಞರೆಲ್ಲ ಶಿಫಾರಸ್ಸು ಮಾಡುವುದು ಜನತೆಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಬೇಕು. ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಾಕ್ಷರತೆಯು ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದೇ ಹೇಳುತ್ತಾರೆ. ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿನ ವೈಫಲ್ಯಗಳ ಕುರಿತು ಆಶೀಶ್ ಬೋಸ್‌ರವರು ಈ ಕೆಳಗಿನ ಕಾರಣಗಳನ್ನು ನೀಡುತ್ತಾರೆ.

೧. ಶೀಘ್ರವಾಗಿ ಅನಕ್ಷರತೆಯನ್ನು ತೊಲಗಿಸುವಲ್ಲಿ ಇರುವ ಭಾರತೀಯರ ವೈಫಲ್ಯ

೨. ಜನಸಾಮಾನ್ಯರ ಕನಿಷ್ಟ ಜೀವನಾವಶ್ಯಕತೆಯನ್ನು ಪೂರೈಸುವಲ್ಲಿ ಇರುವ ಕೊರತೆ

೩. ಸಮಾಜದಲ್ಲಿ ಅನಕ್ಷರತೆಯು ವ್ಯಾಪಕವಾಗಿರುವುದರಿಂದ ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣದ ಮಹತ್ವವನ್ನು ತಿಳಿಸಿಕೊಡುವುದರಲ್ಲಿನ ವೈಫಲ್ಯ.

ಬೋಸ್‌ರವರು ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಿದಲ್ಲಿ ಮಾತ್ರ ಜನಸಂಖ್ಯೆಯ ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಒತ್ತಿಹೇಳುತ್ತಾರೆ.

'ಸಾಕ್ಷರತೆಯಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದೆ. ರಾಜ್ಯದ ಸಾಕ್ಷರತೆಯ ಪ್ರಮಾಣವೂ ರಾಷ್ಟ್ರದ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೆ ಪ್ರಾದೇಶಿಕ ಸ್ವರೂಪ ಮತ್ತು ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಅದರ ಸಾಧನೆ ಹೇಳಿಕೊಳ್ಳುವಂತಿಲ್ಲ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ ಶೇ ೭೦ಕ್ಕಿಂತ ಕಡಿಮೆ ಇದೆ. ಕರ್ನಾಟಕವು ತನ್ನ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಿಕೊಳ್ಳುವುದರಲ್ಲಿ ವಿಫಲವಿರುವುದಕ್ಕೆ ಸಾಕ್ಷರತೆಯ ಪ್ರಾದೇಶಿಕ ಸ್ವರೂಪವು ನಿದರ್ಶನವಾಗಿದೆ.[೩] ಈ ಮಾತುಗಳು ಸಮುದಾಯಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿರುವ ಅನುಸೂಚಿತ ಪರಿಶಿಷ್ಟ ಪಂಗಡಗಳ ಸಂಖ್ಯೆಯು ೫೦ರಷ್ಟಿದೆ. ಈ ೫೦ ಸಮುದಾಯಗಳ ಒಟ್ಟು ಸಾಕ್ಷರತಾ ಪ್ರಮಾಣವನ್ನು ಒಟ್ಟಾಗಿ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವೆಂದು

ಪರಿಗಣಿಸಲಾಗುತ್ತದೆ. ವಾಸ್ತವವಾಗಿ ಈ ೫೦ ಸಮುದಾಯಗಳಲ್ಲಿ ಕೆಲವೇ ಕೆಲವು ಸಮುದಾಯಗಳು ಸಾಕ್ಷರತೆಯನ್ನು ಪಡೆಯುವಲ್ಲಿ ಪೂರ್ಣವಾಗಿ ಯಶಸ್ಸನ್ನು ಸಾಧಿಸಿವೆ ಎಂದು ಹೇಳಲಾಗದಿದ್ದರೂ ಸ್ವಲ್ಪಮಟ್ಟಿಗಾದರೂ ಅವು ಸಾಕ್ಷರತೆಯ ಅಂಚನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಆದರೆ ಬಹುತೇಕ ಪರಿಶಿಷ್ಟ ಪಂಗಡದ ಅಲ್ಪ ಜನಸಂಖ್ಯಾತ ಸಮುದಾಯಗಳು ಸಾಕ್ಷರತೆಯ ಅಂಚನ್ನು ತಲುಪಲೂ ಸಾಧ್ಯವಾಗದ ಸ್ಥಿತಿಯಲ್ಲಿವೆ.

ಅಸ್ಪೃಶ್ಯತೆ ಎಂಬುದು ಭಾರತಕ್ಕೆ ಅಂಟಿದ ಕಳಂಕವೇ ಸರಿ. ಅಸ್ಪೃಶ್ಯತೆಯ ಆಚರಣೆ ಸಾಮಾಜಿಕ ಪಿಡುಗಾಗಿದೆ. ಭಾರತದ ಅಸ್ಪೃಶ್ಯತೆಗೂ ಹಾಗೂ ಬಡತನಕ್ಕೂ ನಂಟಿದೆ. ಅದೇ ರೀತಿಯಾಗಿ ಅಸ್ಪೃಶ್ಯತೆಗೂ ಮತ್ತು ಅನಕ್ಷರತೆಗೂ ನಂಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದಲ್ಲಿ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿರಲು ಜಾತಿಯಾಧಾರಿತ ಏಣಿ ಶ್ರೇಣಿಗಳೇ ಕಾರಣವೆಂಬುದನ್ನು ಮರೆಯಲಾಗದು. ರಾಜ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ, ವಿಭಾಗದಿಂದ ವಿಭಾಗಕ್ಕೆ ಸಾಕ್ಷರತೆಯ ಪ್ರಮಾಣದಲ್ಲಿ ಅಸಮತೋಲನವಿದೆ. ಪ್ರಾಯಶಃ ಈ ರೀತಿಯ ಅಸಮತೋಲನಕ್ಕೆ ಬಡತನ ಎಷ್ಟು ಕಾರಣವೋ ಅಸ್ಪೃಶ್ಯತೆಯೂ ಅಷ್ಟೇ ಕಾರಣವಾಗಿದೆ.

ಕೋಷ್ಟಕ: ೪.೧. ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ (ಶೇಕಡವಾರುಗಳಲ್ಲಿ)

ವರ್ಷಗಳು	ಪುರುಷರು	ಮಹಿಳೆಯರು	ಒಟ್ಟು
೧೯೫೧	–	–	೨೦.೬೦
೧೯೬೧	೩೬.೨೦	೧೪.೨೦	೨೫.೪೦
೧೯೭೧	೪೧.೬೦	೨೧.೦೦	೩೧.೫೦
೧೯೮೧	೪೮.೮೦	೨೭.೭೦	೩೮.೫೦
೧೯೯೧	೬೭.೩೦	೪೪.೩೦	೫೬.೦೦
೨೦೦೧	೭೬.೧೦	೫೬.೦೭	೬೬.೬೪
೨೦೧೧	೮೨.೮೫	೬೮.೧೩	೭೫.೬೦

ಮೂಲ: ಸೆನ್ಸಸ್ ಆಫ್ ಇಂಡಿಯಾ ೨೦೧೧, ತಾತ್ಪೂರ್ತಿಕ ಜನಸಂಖ್ಯಾ ಮೊತ್ತ, ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್, ಕರ್ನಾಟಕ, ಭಾರತ ಸರ್ಕಾರ, ಪು. ೨೮.

ಟಿಪ್ಪಣಿ: ೧೯೫೧, ೧೯೬೧, ೧೯೭೧ ಈ ಮೂರರ ಸಾಕ್ಷರತಾ ಪ್ರಮಾಣವು ಜನಸಂಖ್ಯೆಯ ಐದು ವರ್ಷಕ್ಕೆ ಮೇಲ್ಪಟ್ಟವರಿಗೆ ಸಂಬಂಧಿಸಿದ್ದರೆ ೧೯೮೧ರ ನಂತರದ ಸಾಕ್ಷರತೆಯು ಏಳು ವರ್ಷಕ್ಕೆ ಮೇಲ್ಪಟ್ಟವರಿಗೆ ಸಂಬಂಧಿಸಿದೆ.

೪.೨. ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ

ಕರ್ನಾಟಕದ ಸಾಕ್ಷರತೆಯ ಕುರಿತು ಒಂದು ಹಿನ್ನೋಟವನ್ನು ಬೀರಿದರೆ ಸಾಕ್ಷರತೆಯ ಪ್ರಮಾಣ ದಶಕದಿಂದ ದಶಕಕ್ಕೆ ಹೇಗೆ ವೃದ್ಧಿಗೊಳ್ಳುತ್ತಾ ಸಾಗಿದೆಯೆಂಬುದು ಅರ್ಥವಾಗುತ್ತದೆ. ಭಾರತದ ಜನತೆಯನ್ನು ಸಾಕ್ಷರರಾಗಿಸಲು ಹಿಂದಿನಿಂದಲೂ ಹತ್ತು ಹಲವು ಯೋಜನೆಗಳನ್ನು ಸರ್ಕಾರವು ರೂಪಿಸುತ್ತಲೇ ಬಂದಿವೆ. ಈ ಪ್ರಯೋಗಗಳಿಗೆ ಕರ್ನಾಟಕ ಹೊರತಾಗಿಲ್ಲ. ಭಾರತ ಹಮ್ಮಿಕೊಂಡ ಹಲವು ಕಾರ್ಯಕ್ರಮಗಳು ಭಾರತದ ಜನತೆಯನ್ನು ಸಾಕ್ಷರರಾಗಿಸಲು ಬಹುತೇಕ ಯಶಸ್ವಿಯಾಗಿವೆಯೆಂದೇ ಹೇಳಬಹುದು. ಇದಕ್ಕೆ ಉತ್ತಮ ಉದಾಹರಣೆ ಕರ್ನಾಟಕದ ಸಾಕ್ಷರರ ಪ್ರಮಾಣವನ್ನೇ ಗಮನಿಸಬಹುದು. ೧೯೫೧ರಲ್ಲಿ ಕರ್ನಾಟಕದ ಸಾಕ್ಷರತೆಯ ಪ್ರಮಾಣ ಕೇವಲ ಶೇ ೨೦.೬೦ ಮಾತ್ರವಿದೆ. ಅಂದರೆ ಶೇ ೭೯.೪೦ರಷ್ಟು ಜನ ಅನಕ್ಷರರಾಗಿಯೇ ಉಳಿದಿದ್ದರು. ೧೯೬೧ರಲ್ಲಿ ಈ ಪ್ರಮಾಣವು ಶೇ ೨೫.೪೦ರಷ್ಟಾಗಿದೆ. ಇದರಲ್ಲಿ ಪುರುಷರ ಪ್ರಮಾಣ ಶೇ ೩೯.೨೦ ಇದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ ೧೪.೨೦ ಮಾತ್ರವಿದೆ. ೧೯೫೧ಕ್ಕಿಂತ ೧೯೬೧ರ ಸಾಕ್ಷರತಾ ಸಾಧನೆ ಶೇ ೦೫.೬೦ರಷ್ಟು ವೃದ್ದಿಯಾಗಿದೆ. ೧೯೭೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೩೧.೫೦ರಷ್ಟಿದೆ. ಇದರಲ್ಲಿ ಪುರುಷರು ಶೇ ೪೧.೬೦ರಷ್ಟು ಸಾಕ್ಷರರಾಗಿದ್ದಾರೆ. ಮಹಿಳೆಯರು ಶೇ ೨೧.೦೦ರಷ್ಟು ಸಾಕ್ಷರರಾಗಿದ್ದಾರೆ. ೧೯೭೧ರ ಸಾಕ್ಷರತೆಯ ಪ್ರಮಾಣದಲ್ಲಿ ಶೇ ೬.೧೦ರಷ್ಟು ಸಾಧನೆಯಾಗಿದೆ.

೧೯೮೧ರ ಸಾಕ್ಷರತಾ ಪ್ರಮಾಣವು ಶೇ ೩೮.೫೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಶೇ ೪೮.೮೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಶೇ ೨೭.೭೦ರಷ್ಟಿದೆ. ೧೯೭೧ಕ್ಕಿಂತ ೧೯೮೧ರಲ್ಲಿ ಶೇ ೦೭ರಷ್ಟು ವೃದ್ಧಿಯಾಗಿದೆ. ೧೯೯೧ರಲ್ಲಿಯ ಸಾಕ್ಷರತೆಯ ಪ್ರಮಾಣ ಶೇ ೫೬.೦೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣ ಶೇ ೬೭.೩೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ ೪೪.೩೦ರಷ್ಟಿದೆ. ೧೯೯೧ರ ಸಾಕ್ಷರತೆಯಲ್ಲಿ ಶೇ ೧೭.೫೦ರಷ್ಟು ವೃದ್ಧಿಯಾಗಿದೆ.

೨೦೦೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೬೬.೬೪ರಷ್ಟಿದೆ. ಇದರಲ್ಲಿ ಪುರುಷರು ಶೇ ೭೬.೧೦ ಹಾಗೂ ಮಹಿಳೆಯರು ಶೇ ೫೬.೧೭ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ೧೦.೬೪ರಷ್ಟು ವೃದ್ಧಿಯಾಗಿದೆ.

೨೦೧೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ ೭೫.೬೦ರಷ್ಟಿದೆ. ಇದರಲ್ಲಿ ಪುರುಷರು ಶೇ ೮೨.೮೫ ಹಾಗೂ ಮಹಿಳೆಯರು ಶೇ ೭೫.೬೦ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ೮.೯೬ರಷ್ಟಿದೆ.

೪.೩. ಪರಿಶಿಷ್ಟ ಪಂಗಡದ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾ ಅಂತರ

೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣವು ಶೇ ೬೭.೪೪ರಷ್ಟಿದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೫೭.೪೫ ಇದ್ದರೆ ಪುರುಷರ

ಸಾಕ್ಷರತಾ ಪ್ರಮಾಣ ಶೇ ೭೬.೨೯ರಷ್ಟಿದೆ. ರಾಜ್ಯದ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು ಶೇ ೫೨.೯೦ ಇದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೪೧.೭೦ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ ೬೩.೮೦ರಷ್ಟಿದೆ. ಅಂದರೆ ಸಾಮಾನ್ಯ ಸಾಕ್ಷರತೆಗೂ ಪರಿಶಿಷ್ಟ ಪಂಗಡಗಳ ಸಾಕ್ಷರತೆಗೂ ಇರುವ ಅಂತರ ಒಟ್ಟು –೧೪.೧೪ರಷ್ಟಿದೆ. ಮಹಿಳೆಯರ ಅಂತರ ಶೇ–೧೫.೭೫, ಪುರುಷರ ಅಂತರ ಶೇ–೧೨.೪೯ರಷ್ಟಿದೆ.

೨೦೧೧ರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣವು ೪೦,೩೪೦,೯೬೫ ಇದೆ ಇದರಲ್ಲಿ ಪುರುಷರ ಸಂಖ್ಯೆಯು ೨೨೫೦೮೩೮೧ ಇದ್ದರೆ ಮಹಿಳೆಯರ ಸಂಖ್ಯೆಯು ೧೭೮೩೨೫೮೪ ಇದೆ.

ಕರ್ನಾಟಕದ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಲಾಗಿ ೨೦೦೧ ಹಾಗೂ ೨೦೧೧ರಲ್ಲಾದ ಶೇಕಡವಾರು ಬೆಳವಣಿಗೆಯು ಈ ಕೆಳಗಿನಂತಿದೆ. ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿರುವ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಕ್ಷರತೆಯ ಪ್ರಮಾಣವು ವೃದ್ಧಿಗೊಂಡಿರುವ ಅಂಶ ಕಂಡುಬರುತ್ತದೆ. ಬೆಳಗಾವಿಯ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿ ಶೇ ೯.೭೩ರಷ್ಟು ಸಾಕ್ಷರತೆಯ ಪ್ರಮಾಣವು ವೃದ್ಧಿಯಾಗಿದೆ. ಅದೇ ರೀತಿ ಬಾಗಲಕೋಟೆಯ ಸಾಕ್ಷರತಾ ಪ್ರಮಾಣ ಶೇ ೧೨.೦೯ರಷ್ಟು ಬೆಳವಣಿಗೆಯಾಗಿದೆ. ಬಿಜಾಪುರದ ಸಾಕ್ಷರತಾ ಪ್ರಮಾಣವು ಶೇ ೧೦.೧೯ ಅಭಿವೃದ್ಧಿಗೊಂಡಿದೆ. ಬೀದರಿನ ಸಾಕ್ಷರತಾ ಪ್ರಮಾಣ ಶೇ ೧೦.೭೬ ವೃದ್ಧಿಗೊಂಡಿದೆ. ರಾಯಚೂರಿನ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೧೧.೬೫ರಷ್ಟು ಅಭಿವೃದ್ಧಿಗೊಂಡಿದೆ.

ಕೊಪ್ಪಳದ ಸಾಕ್ಷರತಾ ಪ್ರಮಾಣ ಶೇ ೧೩.೧೮ರಷ್ಟು ಬೆಳವಣಿಗೆಗೊಂಡಿದೆ. ಗದಗದ ಸಾಕ್ಷರತಾ ಪ್ರಮಾಣ ಶೇ ೯.೦೭ ರಷ್ಟಿದೆ. ಧಾರವಾಡದ ಸಾಕ್ಷರತಾ ಪ್ರಮಾಣ ಶೇ ೮.೬೯ ವೃದ್ಧಿಗೊಂಡಿದೆ. ಉತ್ತರ ಕನ್ನಡದ ಸಾಕ್ಷರತಾ ಪ್ರಮಾಣ ಶೇ ೭.೪೩ ಬೆಳವಣಿಗೆಯಾಗಿದೆ. ಹಾವೇರಿಯಲ್ಲಿ ಇದು ಶೇ ೯.೮೧ ರಷ್ಟು ಅಭಿವೃದ್ದಿಗೊಂಡಿದೆ. ಬಳ್ಳಾರಿಯ ಸಾಕ್ಷರತಾ ಪ್ರಮಾಣ ಶೇ ೧೦.೪೫ರಷ್ಟು ವೃದ್ಧಿಗೊಂಡಿದೆ. ಚಿತ್ರದುರ್ಗದ ಸಾಕ್ಷರತಾ ಪ್ರಮಾಣ ಶೇ ೯.೩೭ರಷ್ಟು ಅಭಿವೃದ್ಧಿಗೊಂಡಿದೆ. ದಾವಣಗೆರೆಯ ಸಾಕ್ಷರತಾ ಪ್ರಮಾಣ ಶೇ ೮.೬೭ರಷ್ಟು ವೃದ್ಧಿಗೊಂಡಿದೆ. ಶಿವಮೊಗ್ಗದ ಸಾಕ್ಷರತಾ ಪ್ರಮಾಣ ಶೇ ೫.೯೮ರಷ್ಟಿದೆ. ಉಡುಪಿಯ ಸಾಕ್ಷರತಾ ಪ್ರಮಾಣ ಶೇ ೫.೦೪ರಷ್ಟು ಬೆಳವಣಿಗೆಯಾಗಿದೆ. ಚಿಕ್ಕಮಗಳೂರಿನ ಸಾಕ್ಷರತಾ ಪ್ರಮಾಣ ಶೇ ೭.೦೪ ಬೆಳವಣಿಯಾಗಿದೆ. ತುಮಕೂರಿನ ಸಾಕ್ಷರತಾ ಪ್ರಮಾಣ ಶೇ ೭.೩೧ರಷ್ಟು ಅಭಿವೃದ್ಧಿಯಾಗಿದೆ. ಬೆಂಗಳೂರು ನಗರದ ಸಾಕ್ಷರತಾ ಪ್ರಮಾಣ ಶೇ ೫.೫೨ ರಷ್ಟು ವೃದ್ಧಿಯಾಗಿದೆ. ಮಂಡ್ಯದ ಸಾಕ್ಷರತಾ ಪ್ರಮಾಣ ಶೇ ೭.೦೯ ರಷ್ಟು ಬೆಳವಣಿಗೆಯಾಗಿದೆ. ಹಾಸನದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೭.೨೬ರಷ್ಟು ಅಭಿವೃದ್ಧಿಗೊಂಡಿದೆ. ದಕ್ಷಿಣ ಕನ್ನಡದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೫.೨೭ರಷ್ಟು ವೃದ್ಧಿಗೊಂಡಿದೆ. ಕೊಡಗಿನ ಸಾಕ್ಷರತಾ ಪ್ರಮಾಣ ಶೇ ೪.೫೩ರಷ್ಟು ವೃದ್ಧಿಸಿದೆ. ಮೈಸೂರಿನ ಸಾಕ್ಷರತಾ ಪ್ರಮಾಣ ಶೇ ೯.೦೮

ರಷ್ಟು ಅಭಿವೃದ್ಧಿಗೊಂಡಿದೆ. ಚಾಮರಾಜನಗರದ ಸಾಕ್ಷರತಾ ಪ್ರಮಾಣ ಶೇ ೧೦.೨೫ರಷ್ಟು ಬೆಳವಣಿಗೆ ಕಂಡಿದೆ. ಗುಲ್ಬರ್ಗಾದ ಸಾಕ್ಷರತಾ ಪ್ರಮಾಣ ಶೇ ೧೧.೩೧ ರಷ್ಟು ವೃದ್ಧಿಯಾಗಿದೆ. ಯಾದಗಿರಿಯ ಸಾಕ್ಷರತಾ ಪ್ರಮಾಣ ಶೇ ೧೨.೪೬ ರಷ್ಟು ಬೆಳವಣಿಗೆಯಾಗಿದೆ. ಕೋಲಾರದ ಸಾಕ್ಷರತಾ ಪ್ರಮಾಣ ಶೇ ೮.೪೯ ವೃದ್ಧಿಯಾಗಿದೆ. ಚಿಕ್ಕಬಳ್ಳಾಪುರದ ಸಾಕ್ಷರತಾ ಪ್ರಮಾಣ ಶೇ ೧೦.೮೪ ವೃದ್ಧಿಯಾಗಿದೆ. ಬೆಂಗಳೂರು ಗ್ರಾಮಾಂತರದ ಸಾಕ್ಷರತಾ ಪ್ರಮಾಣ ಶೇ ೮.೭೦ ವೃದ್ಧಿಯಾಗಿ ದೆ. ರಾಮನಗರದ ಸಾಕ್ಷರತಾ ಪ್ರಮಾಣ ಶೇ ೧೪.೮೯ರಷ್ಟು ವೃದ್ಧಿಗೊಂಡಿದೆ. ಕರ್ನಾಟಕದ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ ೬೬.೬೪ ಇದ್ದರೆ ೨೦೧೧ರಲ್ಲಿ ಶೇ ೭೫.೬೦ ಇದೆ. ಅಂದರೆ ಕರ್ನಾಟಕದ ಸಾಕ್ಷರತೆಯ ಒಟ್ಟು ವೃದ್ಧಿಯು ಒಂದು ದಶಕದಲ್ಲಿ ಶೇ ೮.೯೬ರಷ್ಟಿದೆ.

೨೦೦೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿದ್ದ ಜಿಲ್ಲೆಯು ದಕ್ಷಿಣ ಕನ್ನಡ(ಶೇ. ೮೩.೩೫)ವಾಗಿದೆ. ಸಾಕ್ಷರತೆಯಲ್ಲಿ ಹಿಂದುಳಿದಿದ್ದ ಜಿಲ್ಲೆಯು ಯಾದಗಿರಿ(ಶೇ ೩೯.೯೦) ಆಗಿದೆ. ೨೦೧೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವುದು ದಕ್ಷಿಣ ಕನ್ನಡ(ಶೇ. ೮೮.೬೨)ವಾಗಿದೆ. ಯಾದಗಿರಿಯು ಹಿಂದುಳಿದ ಜಿಲ್ಲೆ (ಶೇ ೫೨.೩೬) ಆಗಿದೆ. ಆದರೆ ೨೦೦೧ಕ್ಕೂ ಹಾಗೂ ೨೦೧೧ಕ್ಕೂ ಯಾದಗಿರಿಯ ಸಾಕ್ಷರತೆಯಲ್ಲಿರುವ ಅಂತರವು ಶೇ೧೨.೪೬ರಷ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆಯ ಅಂತರವು ೨೦೦೧ಕ್ಕಿಂತ ೨೦೧೧ಕ್ಕೆ ೫.೨೭ರಷ್ಟಿದೆ.

ಕೋಷ್ಟಕ: ೪.೨. ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧–೨೦೧೧

(ಶೇಕಡವಾರುಗಳಲ್ಲಿ)

ವಿಭಾಗ	ಪುರುಷರ	*ಸಾ.ಪ್ರ	ಮಹಿಳೆ	*ಸಾ.ಪ್ರ	ಒಟ್ಟು	*ಸಾ.ಪ್ರ
	೨೦೦೧	೨೦೧೧	೨೦೦೧	೨೦೧೧	೨೦೦೧	೨೦೧೧
ಬೆಂಗಳೂರು	೮೦.೩೦	೮೭.೦೪	೬೩.೯೮	೭೩.೮೫	೭೨..೩೭	೮೦.೨೧
ಮೈಸೂರು	೭೬.೬೨	೮೨.೬೯	೬೧.೩೧	೭೦.೩೯	೬೮.೯೨	೭೬.೫೦
ದ.ಕನ್ನಡ	೭೯.೦೩	೮೫.೧೪	೬೩.೦೨	೭೨.೬೯	೭೧.೧೫	೭೮.೯೯
ಬೆಳಗಾವಿ	೭೬.೩೭	೮೩.೨೨	೫೩.೪೮	೬೫.೯೨	೬೫.೧೪	೭೪.೬೯
ಗುಲ್ಬರ್ಗಾ	೬೫.೮೭	೭೪.೮೯	೪೧.೦೭	೫೪.೭೬	೫೩.೬೪	೬೪.೯೩
ಉ.ಕನ್ನಡ	೭೨.೦೧	೭೯.೬೫	೪೮.೩೦	೬೧.೧೨	೬೦.೩೫	೭೦.೫೧
ಕರ್ನಾಟಕ	**೭೬.೦೧**	**೮೨.೮೬**	**೫೬.೮೭**	**೬೭.೮೭**	**೬೬.೬೪**	**೭೫.೪೬**

*ಸಾ.ಪ್ರ: ಸಾಕ್ಷರತಾ ಪ್ರಮಾಣ

ಕರ್ನಾಟಕದ ಒಟ್ಟು ಸಾಕ್ಷರತೆಯ ೨೦೦೧ ಹಾಗೂ ೨೦೧೧ರ ಶೈಕ್ಷಣಿಕ ಅಂತರವು ೮.೯೬ ಇದೆ ಈ ಅಂತರವು ವಿಭಾಗಾವಾರು ಬೆಂಗಳೂರು ವಿಭಾಗದಲ್ಲಿ ೭.೮೪, ಮೈಸೂರು ವಿಭಾಗದಲ್ಲಿ ೭.೫೮, ದಕ್ಷಿಣ ಕನ್ನಡ ವಿಭಾಗದಲ್ಲಿ ೭.೮೪, ಬೆಳಗಾವಿ ವಿಭಾಗದಲ್ಲಿ ೯.೫೫, ಗುಲ್ಬರ್ಗಾ ವಿಭಾಗದಲ್ಲಿ ೧೧.೨೯, ಉತ್ತರ ಕನ್ನಡ ವಿಭಾಗದಲ್ಲಿ ೧೦.೧೬ರಷ್ಟಿದೆ

ಕೋಷ್ಟಕ: ೪.೩. ೨೦೧೧ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

ಕ್ರಸಂ	ವಿವರಗಳು	ಪುರುಷರು	ಮಹಿಳೆಯರು	ಒಟ್ಟು
೦೧.	ರಾಜ್ಯದ ಸಾಕ್ಷರತೆ ಪ್ರಮಾಣ	೮೨.೪೭	೬೮.೦೮	೭೫.೩೬
೦೨.	ಪ.ಪಂ ಸಾಕ್ಷರತೆ ಪ್ರಮಾಣ	೬.೮೯	೭.೦೨	೬.೯೫

ಆಧಾರ: ಜನಗಣತಿ ವರದಿ, ಭಾರತ ಸರ್ಕಾರ

೨೦೦೧ರ ಸಾಕ್ಷರತೆಯ ಮಾಹಿತಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ ೬೭.೦೪ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇ ೭೬.೨೯ ಇದ್ದರೆ ಮಹಿಳೆಯರ ಪ್ರಮಾಣವು ಶೇ ೫೭.೪೫ರಷ್ಟಿದೆ.

೨೦೧೧ರ ಜನಗಣತಿ ವರದಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ೭೫.೩೬ ಇದೆ. ಇದರಲ್ಲಿ ಪುರುಷರು ೮೨.೪೭ ಹಾಗೂ ಮಹಿಳೆಯರು ೬೮.೦೮ರಷ್ಟಿರುವರು. ಪರಿಶಿಷ್ಟ ಪಂಗಡದ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೬.೯೫ ಇದೆ. ಇದರಲ್ಲಿ ಪುರುಷರು ೬.೮೯ ಹಾಗೂ ಮಹಿಳೆಯರು ೭.೦೨ರಷ್ಟಿರುವರು. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆಯಿದೆ. ಆದರೆ ಆಶ್ಚರ್ಯವೆಂದರೆ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ.

ಕೋಷ್ಟಕ: ೪.೪. ೨೦೧೧ರ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

ಕ್ರಸಂ	ವಿವರಗಳು	ಪುರುಷರು	ಮಹಿಳೆಯರು	ಒಟ್ಟು
೧	ಬಳ್ಳಾರಿ ಜಿಲ್ಲೆಯ ಸಾಕ್ಷರತೆ ಪ್ರಮಾಣ	೭೬.೬೪	೫೮.೦೯	೬೭.೪೩
೨	ಬಳ್ಳಾರಿ ಜಿಲ್ಲೆಯ ಪ.ಪಂ ಸಾಕ್ಷರತೆ ಪ್ರಮಾಣ	೧೮.೨೩	೧೮.೫೯	೧೮.೪೧
೩	ಅಂತರ	**೫೮.೪೧**	**೩೯.೫೦**	**೪೯.೦೨**

ಆಧಾರ: ಬಳ್ಳಾರಿ ಜಿಲ್ಲಾ ಜನಗಣತಿ ಕೈಪಿಡಿ, ಕರ್ನಾಟಕ ಸರ್ಕಾರ

೨೦೧೧ರ ಜನಗಣತಿ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೭.೪೩ ಇದೆ. ಇದರಲ್ಲಿ ಪುರುಷರು ೭೬.೬೪ ಹಾಗೂ ಮಹಿಳೆಯರು ೫೮.೦೯ ರಷ್ಟಿರುವರು. ಅಂದರೆ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಕಡಿಮೆ ಇದೆ.

ಪರಿಶಿಷ್ಟ ಪಂಗಡದ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೧೮.೪೧ ಇದೆ. ಇದರಲ್ಲಿ ಪುರುಷರು ೧೮.೨೩ ಹಾಗೂ ಮಹಿಳೆಯರು ೧೮.೫೯ ರಷ್ಟಿರುವರು. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣ ಕಡಿಮೆಯಿದೆ. ಆದರೆ ಆಶ್ಚರ್ಯವೆಂದರೆ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ.

ಕೋಷ್ಟಕ: ೪.೫. ಸಮೀಕ್ಷೆಗೆ ಒಳಪಡಿಸಿದ ನಾಯಕ ಸಮುದಾಯದಲ್ಲಿ ಸಾಕ್ಷರತೆಗೆ ಅರ್ಹವಾದವರ ಒಟ್ಟು ಪ್ರಮಾಣ

ಕ್ರಸಂ	ಒಟ್ಟು ಜನಸಂಖ್ಯೆ	ಸಾಕ್ಷರತೆಗೆ ಅರ್ಹವಾದವರು	ಸಾಕ್ಷರತೆಗೆ ಅರ್ಹವಾಗದವರು
	ಗಂಡು ಹೆಣ್ಣು ಒಟ್ಟು	ಗಂಡು ಹೆಣ್ಣು ಒಟ್ಟು	ಗಂಡು ಹೆಣ್ಣು ಒಟ್ಟು
೦೧	३೬೮೧ ३೪३೮ ೭೧೧೯	೨೯೮೫ ೨೮೨३ ೫೮೦೮	೬೯೬ ೬೧೫ ೧३೧೧

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೧೪೦೦. ಅವುಗಳ ಒಟ್ಟು ಜನಸಂಖ್ಯೆ ೭೧೧೯. ಇದರಲ್ಲಿ ಪುರುಷರು ३೬೮೧, ಮಹಿಳೆಯರು ३೪३೮. ಯಾವುದೇ ಶಾಲೆಯಲ್ಲಿ ಮಗು ದಾಖಲಾಗಲು ಕನಿಷ್ಟ ೬ ವರ್ಷದ ಮಗುವಾಗಿರಬೇಕು ಎನ್ನುವ ನಿಯಮವಿದೆ. ಹೀಗಾಗಿ ೦-೬ ವಯೋಮಾನದ ಮಕ್ಕಳು ಶಾಲೆಗೆ ಹೋಗಲು ಅಸಮರ್ಥರೆಂದೇ ಪರಿಗಣಿಸಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸಮೀಕ್ಷಿಸಿದ ಕುಟುಂಬಗಳಲ್ಲಿ ೦-೬ ವಯೋಮಾನದ ಮಕ್ಕಳು ಒಟ್ಟು ೧३೧೧. ಇದರಲ್ಲಿ ಗಂಡು ೬೯೬, ಹೆಣ್ಣು ೬೧೫ ಇವೆ. ಈ ಮಕ್ಕಳನ್ನು ಸಾಕ್ಷರತೆಗೆ ಅರ್ಹರಾದವರಲ್ಲ ಎಂದು ಪರಿಗಣಿಸಲಾಗಿದೆ. ಸಮೀಕ್ಷೆಗೆ ಒಳಪಡಿಸಿದ ಒಟ್ಟು ಕುಟುಂಬಗಳಲ್ಲಿ ೦-೬ ವಯೋಮಾನದ ಮಕ್ಕಳ ಹೊರತಾಗಿ ಇರುವ ಜನಸಂಖ್ಯೆ ಒಟ್ಟು ೫೮೦೮. ಇದರಲ್ಲಿ ಪುರುಷರು ೨೯೮೫ ಹಾಗೂ ಮಹಿಳೆಯರು ೨೮೨३ ಜನರಿರುವರು. ಇವರನ್ನು ಸಾಕ್ಷರತೆಗೆ ಅರ್ಹವಾದವರೆಂದು ಪರಿಗಣಿಸಲಾಗಿದೆ.

ಕೋಷ್ಟಕ: ೪.೬. ಸಮೀಕ್ಷೆಗೆ ಒಳಪಡಿಸಿದ ತಾಲೂಕುವಾರು ಸಾಕ್ಷರತೆ ಹೊಂದಿದ ಹಾಗೂ ಸಾಕ್ಷರತೆ ಹೊಂದದವರ ವಿವರ

ಕ್ರಸಂ	ತಾಲೂಕು	ಒಟ್ಟು ಜನಸಂಖ್ಯೆ			ಸಾಕ್ಷರತೆ ಹೊಂದಿದವರು			ಸಾಕ್ಷರತೆ ಹೊಂದದವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ಬಳ್ಳಾರಿ	೫೪೨	೫೦೧	೧೦೪೩	೩೮೪	೩೬೧	೭೪೫	೧೫೮	೧೪೦	೨೯೮
೦೨	ಕೂಡ್ಲಿಗಿ	೫೩೨	೪೮೮	೧೦೨೦	೩೩೯	೩೩೯	೬೭೮	೧೯೩	೧೪೯	೩೪೨
೦೩	ಹಡಗಲಿ	೫೧೨	೪೯೦	೧೦೦೨	೪೪೨	೩೫೨	೭೯೪	೭೦	೧೩೮	೨೦೮
೦೪	ಹಬೊ.ಹಳ್ಳಿ	೫೨೧	೪೯೭	೧೦೧೮	೩೯೩	೩೬೮	೭೬೧	೧೧೯	೧೨೯	೨೪೮
೦೫	ಹೊಸಪೇಟೆ	೫೩೪	೪೮೫	೧೦೧೯	೪೩೨	೩೬೮	೮೦೦	೧೦೨	೧೧೭	೨೧೯
೦೬	ಸಿರಗುಪ್ಪ	೫೧೬	೪೮೬	೧೦೦೨	೩೮೯	೩೨೯	೭೧೮	೧೨೭	೧೪೭	೨೭೪
೦೭	ಸಂಡೂರು	೫೨೪	೪೯೧	೧೦೧೫	೩೯೩	೩೬೮	೭೬೧	ಸ	೧೨೩	೨೫೪
೦೮	ಒಟ್ಟು	೩೬೮೧	೩೪೩೮	೭೧೧೯	೨೭೭೨	೨೪೯೫	೫೨೬೭	೯೦೦	೯೪೩	೧೮೪೩

ಬಳ್ಳಾರಿ ತಾಲೂಕಿನಲ್ಲಿ ಒಟ್ಟು ಏಳು ತಾಲೂಕುಗಳಿವೆ. ಪ್ರತಿ ತಾಲೂಕಿನಲ್ಲಿ ನಾಯಕ ಸಮುದಾಯದ ಆಯ್ದ ಕುಟುಂಬಗಳನ್ನು ಸಮೀಕ್ಷಿಸಲಾಗಿ ತಿಳಿದುಬಂದ ಸಾಕ್ಷರತೆಯ ಪ್ರಮಾಣ ಈ ಕೆಳಗಿನಂತಿದೆ.

ಬಳ್ಳಾರಿ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೪೩ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೭೪೫ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೩೮೪ ಹಾಗೂ ಮಹಿಳೆಯರು ೩೬೧ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೯೮, ಇದರಲ್ಲಿ ೧೫೮ ಪುರುಷ ಹಾಗೂ ೧೪೦ ಮಹಿಳೆಯರಿರುವರು.

ಕೂಡ್ಲಿಗಿ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೨೦ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೬೭೮ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೩೩೯ ಹಾಗೂ ಮಹಿಳೆಯರು ೩೩೯ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೩೪೨, ಇದರಲ್ಲಿ ೧೯೩ ಪುರುಷ ಹಾಗೂ ೧೪೯ ಮಹಿಳೆಯರಿರುವರು.

ಹಡಗಲಿ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೦೨ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೭೯೪ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೪೪೨ ಹಾಗೂ ಮಹಿಳೆಯರು ೩೫೨ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೦೮, ಇದರಲ್ಲಿ ೭೦ ಪುರುಷ ಹಾಗೂ ೧೩೮ ಮಹಿಳೆಯರಿರುವರು.

ಹಗರಿಬೊಮ್ಮನಹಳ್ಳಿ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೮ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೭೬೧ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೩೯೩ ಹಾಗೂ ಮಹಿಳೆಯರು ೩೬೮ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೪೮, ಇದರಲ್ಲಿ ೧೧೯ ಪುರುಷ ಹಾಗೂ ೧೨೯ ಮಹಿಳೆಯರಿರುವರು.


ಹೊಸಪೇಟೆ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೯ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೮೦೦ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೪೩೨ ಹಾಗೂ ಮಹಿಳೆಯರು ೩೬೮ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೧೯, ಇದರಲ್ಲಿ ೧೦೨ ಪುರುಷ ಹಾಗೂ ೧೧೭ ಮಹಿಳೆಯರಿರುವರು.

ಸಿರಗುಪ್ಪ ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೦೨ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೭೨೮ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೩೮೯ ಹಾಗೂ ಮಹಿಳೆಯರು ೩೩೯ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೭೪, ಇದರಲ್ಲಿ ೧೨೭ ಪುರುಷ ಹಾಗೂ ೧೪೭ ಮಹಿಳೆಯರಿರುವರು.

ಸಂಡೂರು ತಾಲೂಕಿನ ಐದು ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೨೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೫ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೭೬೧ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೩೯೩ ಹಾಗೂ ಮಹಿಳೆಯರು ೩೬೮ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೨೫೪, ಇದರಲ್ಲಿ ೧೩೧ ಪುರುಷ ಹಾಗೂ ೧೨೩ ಮಹಿಳೆಯರಿರುವರು.

ಬಳ್ಳಾರಿಯ ಏಳು ತಾಲೂಕಿನ ೩೫ ಗ್ರಾಮಪಂಚಾಯತಿಗಳಲ್ಲಿ ಸಮೀಕ್ಷಿಸಿದ ಒಟ್ಟು ಕುಟುಂಬಗಳು ೧೪೦೦. ಈ ಕುಟುಂಬಗಳ ಒಟ್ಟು ಜನಸಂಖ್ಯೆಯು ೭೧೧೯ ಇದೆ. ಇದರಲ್ಲಿ ಸಾಕ್ಷರತೆ ಹೊಂದಿದವರು ಒಟ್ಟು ೫೨೬೭ ಜನರಿರುವರು. ಸಾಕ್ಷರತೆಯನ್ನು ಹೊಂದಿದ ಪುರುಷರು ೨೭೭೨ ಹಾಗೂ ಮಹಿಳೆಯರು ೨೪೯೫ ಜನರಿರುವರು. ಸಾಕ್ಷರತೆಯನ್ನು ಹೊಂದದೇ ಇರುವವರು ಒಟ್ಟು ೧೮೪೩, ಇದರಲ್ಲಿ ೯೦೦ ಪುರುಷ ಹಾಗೂ ೯೪೩ ಮಹಿಳೆಯರಿರುವರು.

ಸಮೀಕ್ಷೆಗೆ ಒಳಪಟ್ಟ ಕುಟುಂಬಗಳ ಸಾಕ್ಷರರ ಪ್ರಮಾಣ



ಶೇಕಡವಾರುಗಳಲ್ಲಿ ಹೇಳುವುದಾದರೆ ಸಮೀಕ್ಷೆ ಮಾಡಿದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೭೩.೯೮ ಸಾಕ್ಷರರಿರುವರು. ಶೇಕಡ ೨೬.೦೨ ಜನರು ಸಾಕ್ಷರತೆಯನ್ನು ಹೊಂದಲು ಸಾಧ್ಯವಾಗಿರುವುದಿಲ್ಲ.



ಕೋಷ್ಟಕ: ೪.೭. ೦೬–೧೪ ವಯೋಮಾನದ ನಾಯಕ ಸಮುದಾಯದ ಶಾಲೆಗೆ ಹೋಗುತ್ತಿರುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ವಿವರ

ಕ್ರಸಂ	ತಾಲೂಕು	ಶಾಲೆಗೆ ಹೋಗುತ್ತಿರುವ ಮಕ್ಕಳು			ಶಾಲೆಯಿಂದ ಹೊರಗುಳಿದ ಮಕ್ಕಳು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ಬಳ್ಳಾರಿ	೧೧೫	೧೩೦	೨೪೫	೦೯	೦೮	೧೭
೦೨	ಕೂಡ್ಲಿಗಿ	೧೧೩	೧೧೪	೨೨೭	೧೧	೧೦	೨೧
೦೩	ಹಡಗಲಿ	೧೦೮	೧೧೫	೨೨೩	೧೩	೧೧	೨೪
೦೪	ಹಬೊ.ಹಳ್ಳಿ	೧೧೯	೧೨೦	೨೩೯	೧೬	೧೪	೩೦
೦೫	ಹೊಸಪೇಟೆ	೧೧೪	೧೧೭	೨೩೧	೧೬	೧೫	೩೧
೦೬	ಸಿರಗುಪ್ಪ	೧೧೬	೧೧೮	೨೩೪	೧೮	೧೯	೩೭
೦೭	ಸಂಡೂರು	೯೮	೧೦೪	೨೦೨	೧೨	೧೦	೨೨
	ಒಟ್ಟು	**೭೮೩**	**೮೧೮**	**೧೬೦೧**	**೯೫**	**೮೭**	**೧೮೨**

ಬಳ್ಳಾರಿ ಜಿಲ್ಲೆಯ ಸಮೀಕ್ಷೆಗೆ ಒಳಪಡಿಸಿದ ನಾಯಕ ಸಮುದಾಯದ ೦–೧೪ರ ವಯೋಮಾನದ ತಾಲೂಕುವಾರು ಮಕ್ಕಳು ಶಾಲೆಗೆ ಹೋಗುತ್ತಿರುವ ಸಂಖ್ಯೆಯನ್ನು ಇಲ್ಲಿ ಗಮನಿಸಲಾಗಿದೆ. ಬಳ್ಳಾರಿಯಲ್ಲಿ ಒಟ್ಟು ಮಕ್ಕಳಲ್ಲಿ ಶಾಲೆಗೆ ಹೋಗುತ್ತಿರುವ ಗಂಡು ಮಕ್ಕಳು ೧೧೫ ಇವೆ. ಹೆಣ್ಣುಮಕ್ಕಳು ೦೯ ಇವೆ. ಆದರೆ ನಾನಾ ಕಾರಣಗಳಿಗಾಗಿ ಶಾಲೆಯಿಂದ ಒಟ್ಟು ೧೭ ಮಕ್ಕಳು ಹೊರಗಿವೆ. ಇದರಲ್ಲಿ ೯ ಗಂಡು ಹಾಗೂ ೮ ಹೆಣ್ಣುಮಕ್ಕಳಾಗಿವೆ.

ಕೂಡ್ಲಿಗಿಯಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೨೭ ಇವೆ. ಇದರಲ್ಲಿ ಗಂಡು ಮಕ್ಕಳು ೧೧೩ ಹಾಗೂ ಹೆಣ್ಣುಮಕ್ಕಳು ೧೧೪ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೨೧ ಇವೆ. ಇದರಲ್ಲಿ ಗಂಡು ಮಕ್ಕಳು ೧೧ ಹಾಗೂ ಹೆಣ್ಣುಮಕ್ಕಳು ೧೦ ಇವೆ.

ಹಡಗಲಿಯಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೨೩ ಇವೆ. ಇದರಲ್ಲಿ ಗಂಡು ಮಕ್ಕಳು ೧೦೮ ಹಾಗೂ ಹೆಣ್ಣುಮಕ್ಕಳು ೧೧೫ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೨೪ ಇವೆ. ಇದರಲ್ಲಿ ಗಂಡು ಮಕ್ಕಳು ೧೩ ಹಾಗೂ ಹೆಣ್ಣುಮಕ್ಕಳು ೧೧ ಇವೆ.

ಹಗರಿಬೊಮ್ಮನಹಳ್ಳಿಯಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೩೯ ಇವೆ. ಇದರಲ್ಲಿ ಗಂಡು ಮಕ್ಕಳು ೧೧೯ ಹಾಗೂ ಹೆಣ್ಣುಮಕ್ಕಳು ೧೨೦ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೩೦ ಇವೆ. ಇದರಲ್ಲಿ ಗಂಡು ಮಕ್ಕಳು ೧೬ ಹಾಗೂ ಹೆಣ್ಣುಮಕ್ಕಳು ೧೪ ಇವೆ.


ಹೊಸಪೇಟೆಯಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೩೧ ಇವೆ. ಇದರಲ್ಲಿ ಗಂಡು ಮಕ್ಕಳು ೧೧೪ ಹಾಗೂ ಹೆಣ್ಣುಮಕ್ಕಳು ೧೧೭ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೩೧ ಇವೆ. ಇದರಲ್ಲಿ ಗಂಡು ಮಕ್ಕಳು ೧೬ ಹಾಗೂ ಹೆಣ್ಣುಮಕ್ಕಳು ೧೫ ಇವೆ.

ಸಿರಗುಪ್ಪದಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೩೪ ಇವೆ. ಇದರಲ್ಲಿ ಗಂಡು ಮಕ್ಕಳು ೧೧೬ ಹಾಗೂ ಹೆಣ್ಣುಮಕ್ಕಳು ೧೧೮ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೩೭ ಇವೆ. ಇದರಲ್ಲಿ ಗಂಡು ಮಕ್ಕಳು ೧೮ ಹಾಗೂ ಹೆಣ್ಣುಮಕ್ಕಳು ೧೯ ಇವೆ.

ಸಂಡೂರಿನಲ್ಲಿ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೨೦೨ ಇವೆ. ಇದರಲ್ಲಿ ಗಂಡು ಮಕ್ಕಳು ೯೮ ಹಾಗೂ ಹೆಣ್ಣುಮಕ್ಕಳು ೧೦೪ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೨೨ ಇವೆ. ಇದರಲ್ಲಿ ಗಂಡು ಮಕ್ಕಳು ೧೨ ಹಾಗೂ ಹೆಣ್ಣುಮಕ್ಕಳು ೧೦ ಇವೆ.

ಸಮೀಕ್ಷೆಗೆ ಒಳಪಡಿಸಿದ ಬಳ್ಳಾರಿ ಜಿಲ್ಲೆಯ ನಾಯಕ ಸಮುದಾಯದ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೬೦೧ ಇವೆ. ಇದರಲ್ಲಿ ಗಂಡು ಮಕ್ಕಳು ೭೮೩ ಹಾಗೂ ಹೆಣ್ಣುಮಕ್ಕಳು ೮೧೮ ಇವೆ. ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೧೮೨ ಇವೆ. ಇದರಲ್ಲಿ ಗಂಡು ಮಕ್ಕಳು ೯೫ ಹಾಗೂ ಹೆಣ್ಣುಮಕ್ಕಳು ೮೭ ಇವೆ.

೬-೧೪ರ ವಯೋಮಾನದೊಳಗಿನ ಮಕ್ಕಳು ಶಾಲೆಗೆ ಹೋಗುತ್ತಿರುವ ಪ್ರಮಾಣ



ಶೇಕಡವಾರುಗಳಲ್ಲಿ ಹೇಳುವುದಾದರೆ ಸಮೀಕ್ಷೆ ಮಾಡಿದ ೦-೧೪ರ ಒಳಗಿನ ವಯೋಮಾನದ ನಾಯಕ ಸಮುದಾಯದ ಒಟ್ಟು ಮಕ್ಕಳಲ್ಲಿ ಶೇಕಡ ೮೯.೭೯ ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿವೆ. ಶೇಕಡ ೧೦.೨೧ ಮಕ್ಕಳು ಶಾಲೆಯಿಂದ ಹೊರಗಿವೆ. ಶಾಲೆಗೆ ಹೋಗುತ್ತಿರುವ ಗಂಡುಮಕ್ಕಳು ಶೇಕಡ ೪೮.೯೦ ಹಾಗೂ ಶೇಕಡ ೫೧.೧೦ ಹೆಣ್ಣುಮಕ್ಕಳಿರುವರು. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಪ್ರಮಾಣದಲ್ಲಿ ಹೆಣ್ಣುಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿರುವುದು ತಿಳಿದುಬಂದಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳ ಪಾಲಕರ ಬಡತನ, ಅಲೆಮಾರಿತನ, ನೆಲೆಸಿದ ಪರಿಸರಗಳು ಈ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿರಬೇಕು. ಸಿರಗುಪ್ಪ, ಹೊಸಪೇಟೆಯಂತಹ ತಾಲೂಕುಗಳಲ್ಲಿ ನೀರಾವರಿ ಕೃಷಿಯೇ ಮಕ್ಕಳ ವಿದ್ಯಾಭ್ಯಾಸಕ್ಕೆ ಕುತ್ತನ್ನು ತಂದಿದೆಯಂದರೆ ತಪ್ಪಾಗಲಾರದು. ಪ್ರಾಯಶಃ ಕೂಲಿಕಾರ್ಮಿಕರ ಸಮಸ್ಯೆ ಹಾಗೂ ಪರರನ್ನು ಕರೆದುಕೊಂಡುಹೋದರೆ ಹೆಚ್ಚಿನ ಕೂಲಿಯನ್ನು ಸಂದಾಯ ಮಾಡಬೇಕೆಂಬ ಕಾರಣಕ್ಕಾಗಿಯೇ ಮಕ್ಕಳನ್ನು ಶಾಲೆಬಿಡಿಸಿ ತಮ್ಮ ಕೃಷಿಭೂಮಿಯ ಕೆಲಸಕ್ಕಾಗಿ ಇಲ್ಲವೆ ಹೆಚ್ಚಿನ ಕೂಲಿ ಸಿಗುತ್ತದೆ ಎಂಬ ಕಾರಣಕ್ಕಾಗಿ ಬೇರೆಯವರಲ್ಲಿ ಕೂಲಿಗೆ ಕರೆದುಕೊಂಡು ಹೋಗುವ ಮೂಲಕ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿದೆ. ಇನ್ನುಳಿದ ತಾಲೂಕುಗಳಾದ ಕೂಡ್ಲಿಗಿ, ಹಡಗಲಿ, ಬಳ್ಳಾರಿ, ಸಂಡೂರು, ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ವಲಸೆ ಸಮಸ್ಯೆ ಇದೆ. ಆದರೆ ಆಶ್ಚರ್ಯವೆಂದರೆ ಬಹುತೇಕ ಎಲ್ಲಾ ತಾಲೂಕು ಗಳಲ್ಲಿಯೂ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶಾಲೆಯೊಳಗಿರುವುದು ಕಂಡುಬರುತ್ತದೆ.

೪.೪. ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ಗ್ರಾಮಪಂಚಾಯತಿವಾರು ಶೈಕ್ಷಣಿಕ ವಿವರ

ಕೋಷ್ಟಕ: ೪.೮. ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಲಿಂಗವಾರು ಶೈಕ್ಷಣಿಕ ಪ್ರಮಾಣ

ಶೈಕ್ಷಣಿಕ ಹಂತ	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೩೯೯	೪೪೦	೮೩೯
ಮಾಧ್ಯಮಿಕ	೩೮೪	೩೭೮	೭೬೨
ಪ್ರೌಢಶಾಲೆ	೩೭೫	೨೧೯	೫೯೪
ಡಿಪ್ಲೋಮಾ	೨೦	೨	೨೨
ಪದವಿ ಪೂರ್ವ	೧೩೬	೭೩	೨೦೯
ಪದವಿ	೧೯೭	೫೧	೨೪೮
ಸ್ನಾತ ಕೋತ್ತರ	೧೫	೬	೨೧
ಇತರೆ	೩	೧	೪
ಒಟ್ಟು	೧೫೪೯	೧೧೭೦	೨೭೧೯

೧ ರಿಂದ ೫ನೇ ತರಗತಿಯವರೆಗೆ ಪ್ರಾಥಮಿಕ ತರಗತಿಗಳು ಎಂದು ಪರಿಗಣಿಸಲಾಗಿದೆ. ಹಾಗೆಯೇ ೬ ರಿಂದ ೮ನೇ ತರಗತಿವರೆಗೆ ಮಧ್ಯಮಿಕವೆಂದೂ ೯ರಿಂದ ೧೦ನೇ (ಪಿಯುಸಿ) ಪ್ರೌಢ ಹಾಗೂ ಪಿಯುಸಿ ಶಿಕ್ಷಣವೆಂದು ಪರಿಗಣಿಸಲಾಗಿದೆ. ಅದರಾಚೆಗೆ ಪದವಿ, ಸ್ನಾತಕೋತ್ತರಗಳೆಂದು ಪರಿಗಣಿಸಲಾಗಿದ್ದು ಇತರೆ ತರಗತಿಗಳೆಂದರೆ ಇಂಜಿನೇರಿಂಗ್ ಮೆಡಿಕಲ್ ಮುಂತಾದ ಉನ್ನತ ತಾಂತ್ರಿಕ ಶಿಕ್ಷಣವೆಂದು ಪರಿಗಣಿಸಲಾಗಿದೆ

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಸಮೀಕ್ಷೆ ಮಾಡಲಾದ ನಾಯಕ ಸಮುದಾಯದ ಮಕ್ಕಳಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು ಒಟ್ಟು ೮೩೯ ಇವೆ. ಇದರಲ್ಲಿ ಗಂಡುಮಕ್ಕಳು ೩೯೯ ಹಾಗೂ ಹೆಣ್ಣುಮಕ್ಕಳು ೪೪೦ ಇವೆ. ಹಾಗೆಯೇ ಮಾಧ್ಯಮಿಕ ತರಗತಿಗಳಲ್ಲಿ ಒಟ್ಟು ೭೬೨ ಮಕ್ಕಳಿವೆ. ಇದರಲ್ಲಿ ಗಂಡು ೩೮೪ ಹಾಗೂ ಹೆಣ್ಣು ೩೭೫ ಇವೆ. ಪ್ರೌಢಶಾಲೆಯಲ್ಲಿ ೮ರಿಂದ ೧೦ನೇ ತರಗತಿಯವರೆಗೆ ಓದುವ ಮಕ್ಕಳು ೫೯೪ ಇವೆ. ಇದರಲ್ಲಿ ಗಂಡು ೩೭೫ ಹಾಗೂ ಹೆಣ್ಣು ೨೧೯ ಇವೆ.

ಪ್ರೌಢ ಶಿಕ್ಷಣದ ತರುವಾಯ ನೇರವಾಗಿ ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮುಂತಾದ ಡಿಪ್ಲಮೋ ತರಗತಿಗಳಲ್ಲಿ ಕಲಿಯುವ ಮಕ್ಕಳು ಒಟ್ಟು ೨೨ ಇವೆ. ಇದರಲ್ಲಿ ಗಂಡುಮಕ್ಕಳು ೨೦ ಇದ್ದರೆ ಹೆಣ್ಣುಮಕ್ಕಳು ಕೇವಲ ಎರಡಿವೆ. ಪದವಿಪೂರ್ವದಲ್ಲಿಯೂ ೧೩೬ ಗಂಡುಮಕ್ಕಳು ಹಾಗೂ ೭೩ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿರುವರು. ಬಿಎ, ಬಿಕಾಂ, ಬಿಎಸ್ಸಿ ಮುಂತಾದ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ೨೪೮ ಜನರಿರುವರು. ಇದರಲ್ಲಿ ೧೯೭ ಪುರುಷರು ಹಾಗೂ ೫೧ ಮಹಿಳೆಯರು ವ್ಯಾಸಂಗ ಮಾಡುವರು. ಸ್ನಾತಕೋತ್ತರ ತರಗತಿಗಳಲ್ಲಿ ಕೇವಲ ೫೧ ಜನರು ಮಾತ್ರ ಓದುತ್ತಿರುವರು. ೧೫ ಜನ ಓದುತ್ತಿದ್ದರೆ ಮಹಿಳೆಯರು ಕೇವಲ ಆರು ವಿದ್ಯಾರ್ಥಿನಿಯರು ಮಾತ್ರ ಇರುವರು. ಇತರೆ ತಾಂತ್ರಿಕ ಶಿಕ್ಷಣ ಪಡೆಯುವವರು ಪುರುಷ ೩ ಹಾಗೂ ಮಹಿಳೆ ಒಬ್ಬರು ಮಾತ್ರ ಇರುವರು. ಒಟ್ಟಾರೆಯಾಗಿ ಸಮಿಕ್ಷೆ ಮಾಡಿದ ಕುಟುಂಬಗಳಲ್ಲಿ ೨೬೯೯ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ನರತವಾಗಿರುವರು. ಇದರಲ್ಲಿ ಪುರುಷರು ೧೫೨೯ ಹಾಗೂ ಮಹಿಳೆಯರು ೧೧೭೦ ಜನರಿರುವರು. ಅಂದರೆ ಒಟ್ಟಾರೆಯಾಗಿ ನೋಡಿದರೆ ಶೇಕಡ ೫೬.೬೫ ರಷ್ಟು ಪುರುಷರು ಹಾಗೂ ೪೩.೩೫ರಷ್ಟು ಮಹಿಳೆಯರು ವ್ಯಾಸಂಗ ಮಾಡುತ್ತಿರುವರು.

ಪ್ರಾಥಮಿಕ ಹಂತದಿಂದ ನೋಡುತ್ತಾ ಬಂದರೆ ಪ್ರಾಥಮಿಕ, ಮಾಧ್ಯಮಿಕ ತರಗತಿಗಳಲ್ಲಿ ಮಹಿಳೆಯರು ಪುರುಷರಿಗಿಂತ ಮುಂದಿದ್ದಾರೆ. ಆದರೆ ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಮಹಿಳೆಯರ ಪ್ರಮಾಣ ಕಡಿಮೆಯಾಗಿದೆ ಎಂಬುದು ಸಮಿಕ್ಷೆಯ ಮೂಲಕ ತಿಳಿದುಬಂದಿದೆ.

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳ ಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ

ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮ ಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಅದರಲ್ಲೂ ಹೆಣ್ಣುಮಕ್ಕಳು ಮೇಲಿನ ಹಂತಕ್ಕೆ ಹೋದಂತೆಲ್ಲಾ ಶಿಕ್ಷಣದಿಂದ ದೂರವುಳಿಯುವುದೇಕೆ ಎಂಬುದನ್ನು ನೋಡಿದಾಗ ಮಕ್ಕಳು ಶಿಕ್ಷಣದಿಂದ ದೂರವುಳಿಯಲು ಆರ್ಥಿಕ ಕಾರಣಗಳಷ್ಟೇ ಮುಖ್ಯವಾಗಿ ಸಾಮಾಜಿಕ ಕಾರಣಗಳೂ ಇವೆಯಂಬುದು ಸ್ಪಷ್ಟವಾಗುತ್ತದೆ.

ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರ ಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು, ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ದಲಿತರಲ್ಲಿಯೇ ದಲಿತರೆಂದು ಪರಿಗಣಿತವಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮಸ್ಥೈರ್ಯವನ್ನು

ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮೀಸಲಾತಿಯೆಂಬುದಿದ್ದರೂ ಸಾರ್ವಜನಿಕ ವಲಯದಲ್ಲಿ ಮುಂಚೂಣಿಯಲ್ಲಿರುವವರು ಮೇಲ್ಜಾತಿಯವರಾಗಿದ್ದಾರೆ. ಅದರಲ್ಲೂ ಪುರುಷರೇ ಹೆಚ್ಚಿನ ಪ್ರಮಾಣ ದಲ್ಲಿರುವರು. ಮಹಿಳೆಯರು ಪ್ರಾರಂಭಿಕ ಹಂತದಲ್ಲಿ ಮುಂದಿರುವಂತೆ ಕಂಡುಬಂದರೂ ಅದು ಮೇಲೆಹೋದಂತೆಲ್ಲಾ ನಿಧಾನವಾಗಿ ಹಿಂದುಳಿಯುತ್ತಾ ಸಾಗುವುದನ್ನು ಈ ಅಧ್ಯಯನ ಮೂಲಕ ಕಂಡುಕೊಳ್ಳಲಾಗಿದೆ.

ಮುಖ್ಯವಾಗಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸ ಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ. ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದಿಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳೆಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು, ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

ಮೈನೆರೆಯುವ ಪೂರ್ವದಲ್ಲಿಯೇ ಅಥವಾ ಮೈನೆರೆದ ಒಂದೆರಡು ವರ್ಷಗಳಲ್ಲಿಯೇ ವಿವಾಹದ ಸಂಕೋಲೆಗೆ ಒಳಗಾಗುವ ಮಹಿಳೆಯರಿಗೆ ಶಿಕ್ಷಣವೆಂಬುದು ಕನಸಿನ ಮಾತೇ ಆಗಿದೆ.

ಕೊನೆ ಟಿಪ್ಪಣಿಗಳು

೧. ಮಾನವ ಅಭಿವೃದ್ಧಿ ವರದಿ, ೨೦೦೫:೨೫೮

೨ ಅದೇ: ೨೦೦೫:೨೬೯

೩. ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು.

೪. ಚಂದ್ರಶೇಖರ್ ಟಿ.ಆರ್: ೨೦೧೨:೫೯

೫. ಸೆನ್ಸಸ್ ಆಫ್ ಇಂಡಿಯಾ ೨೦೧೧:೨೮

೬. ಜನಗಣತಿ ವರದಿ, ೨೦೧೨:೧೩೪

ಅಧ್ಯಾಯ ಐದು

ಪರಿಶಿಷ್ಟ ವರ್ಗದ ನಾಯಕ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

೫.೧. ಸಾಮಾಜಿಕ ಸ್ಥಿತಿಗತಿ

೫.೨. ಆರ್ಥಿಕ ಸ್ಥಿತಿಗತಿ

೫.೩. ಜನಸಂಖ್ಯೆಯ ವಿವರ

೫.೪. ಲಿಂಗವಾರು ವಯೋಗುಂಪು ಪ್ರಮಾಣ

೫.೫. ಕಾಯಕಾರ್ಹ ಹಾಗೂ ಕಾಯಕಾರ್ಹರಲ್ಲದ ಗುಂಪಿನ ವಿವರ

೫.೬. ನೀರಾವರಿ ಹಾಗೂ ಒಣ ಬೇಸಾಯವನ್ನವಲಂಭಿಸಿದ ಕುಟುಂಬಗಳು

೫.೭. ಮಳೆಯಾಶ್ರಿತ ಕೃಷಿ ಭೂಮಿ ಹೊಂದಿದವರು

೫.೮. ವಸತಿ

೫.೯. ಕರ್ನಾಟಕದ ಪರಿಶಿಷ್ಟ ಪಂಗಡದ ಕುಟುಂಬಗಳು ಶೌಚಾಲಯ ಸೌಲಭ್ಯ

೫.೧೦. ಶೌಚಾಲಯವನ್ನು ಇತರ ಕಾರ್ಯಗಳಿಗಾಗಿ ಬಳಸಿಕೊಳ್ಳುವವರ ವಿವರ

ಅಧ್ಯಾಯ ಐದು

ಪರಿಶಿಷ್ಟ ವರ್ಗದ ನಾಯಕ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

ಶಿಕ್ಷಣವನ್ನು ಅನುತ್ಪಾದಕ ಆದಾಯವೆಂದು ಕರೆಯಲಾಗುತ್ತದೆ. ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ, ಬಾ ಬಾಲೆ ಶಾಲೆಗೆ ಇತ್ಯಾದಿ ಗೋಡೆ ಬರಹಗಳ ಮೂಲಕ ಹೆಣ್ಣನ್ನು ಶಿಕ್ಷಣದತ್ತ ಸೆಳೆಯುವ ಪ್ರಯತ್ನ ಮಾಡಲಾಗುತ್ತದೆ. ಆದರೆ ಯಾವುದೇ ಸ್ಲೋಗನ್‌ಗಳು, ಗೋಡೆಬರಹಗಳು ಮಾತ್ರದಿಂದಲೇ ಮಹಿಳೆ ಶಿಕ್ಷಣ ಪಡೆಯಲು ಸಾಧ್ಯವಿಲ್ಲ. ಒಂದು ಕುಟುಂಬದ ಮಹಿಳೆ ಶಿಕ್ಷಣ ಪಡೆಯಲು ಸಾಧ್ಯವಾಗದೇ ಇರುವುದಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳೂ ಇವೆ. ಶಿಕ್ಷಣಕ್ಕೆ ತೊಡರುಗಾಲಾಗುವ ಅಥವಾ ಪೂರಕವಾಗುವ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ಅರಿಯಬೇಕೆನ್ನುವ ಉದ್ದೇಶದಿಂದ ಈ ಅಧ್ಯಾಯದಲ್ಲಿ ಬೇಡ ಬುಡಕಟ್ಟಿನ ಸಾಮಾಜಿಕ ಆರ್ಥಿಕ ರಾಜಕೀಯ ಸ್ಥಿತಿಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಭಾರತದಲ್ಲಿನ ಬೇಡ ಬುಡಕಟ್ಟು ಹಿಂದೊಮ್ಮೆ ಅತಿ ಉತ್ತಮ ಸ್ಥಿತಿಯ ಜೀವನ ನಡೆಸಿದ ಉದಾಹರಣೆಗಳಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಬೇಡ ನಾಯಕರು ಪಾಳೆಯಗಾರರಾಗಿ, ಚಿಕ್ಕ ಚಿಕ್ಕ ರಾಜ್ಯಗಳ ಅರಸರಾಗಿ, ಸೈನಿಕರಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಉದಾಹರಣೆಗೆ ಚಿತ್ರದುರ್ಗದ ಪಾಳೆಯಗಾರರು, ಕಂಪಿಲರಾಯ ಮತ್ತು ಅವನ ವಂಶಸ್ಥರು, ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕ, ಹರಪನಹಳ್ಳಿಯ ಪಾಳೆಯಗಾರರು, ಉಚ್ಚಂಗಿ ದುರ್ಗದ ಪಾಳೆಯಗಾರರು ಮುಂತಾದವರನ್ನು ಹೆಸರಿಸಬಹುದು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರವಹಿಸಿದ ಬೇಡ ನಾಯಕರು ಆ ಸಾಮ್ರಾಜ್ಯದ ಸೈನಿಕರಾಗಿ ಕಾರ್ಯನಿರ್ವಹಿಸಿದ ಕುರುಹುಗಳು ಇಂದಿಗೂ ಹಂಪೆ ಸುತ್ತಮುತ್ತಲ ಪ್ರದೇಶದಲ್ಲಿ ಕಂಡುಬರುತ್ತದೆ. ಕೂಡ್ಲಿಗಿಯ ಹಾಗೂ ಕಮಲಾಪುರದ ಮತ್ತು ಹೊಸಪೇಟೆಯ ಏಳು ಕೇರಿಯ ನಾಯಕ ಸಮುದಾಯದ ಜನ ಹಿಂದೆ ವಿಜಯನಗರ ಅರಸರ ಸೈನಿಕರಾಗಿ ಕಾರ್ಯ

ನಿರ್ವಹಿಸಿದವರು. ಈ ರೀತಿ ವೀರತ್ವವನ್ನೇ ಮೆರೆದ ಈ ಸಮುದಾಯವು ಬ್ರಿಟಿಷರ ಆಡಳಿತ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಗುರುತಿಸಲ್ಪಟ್ಟಿತು. ಸ್ವಾತಂತ್ರ್ಯ ಚಳುವಳಿಗೆ ಕಾರಣವಾಗುವ ರೀತಿಯ ಹಲಗಲಿ ಬೇಡರ ಸಶಸ್ತ್ರನೀತಿ ವಿರುದ್ಧದ ಹೋರಾಟ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ ಮುಂತಾದವರ ನಾಯಕತ್ವದಲ್ಲಿ ನಡೆಯುತಿದ್ದ ಹೋರಾಟವನ್ನು ಹತ್ತಿಕ್ಕಲು ಈ ಸಮುದಾಯದ ಮೇಲೆ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಬ್ರಿಟೀಷ್ ಸರ್ಕಾರ ಜಾರಿಗೆ ತಂದಿತು. ಹೀಗಾಗಿ ೧೯೦೧ರಿಂದ ೧೯೧೧ರೊಳಗೆ ಬ್ರಿಟಿಷರು ಕರ್ನಾಟಕದಲ್ಲಿ ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿದ ಸಮುದಾಯಗಳಲ್ಲಿ ಬೇಡ ಬುಡಕಟ್ಟು ಸಮುದಾಯವೂ ಸೇರಿದೆ. ಬೇಡನಾಯಕರ ಮುಖ್ಯ ಕಸುಬಾದ ಬೇಟೆಗಾರಿಕೆಗೆ ಬ್ರಿಟೀಷರ ಸಶಸ್ತ್ರ ಕಾಯ್ದೆ ಅಡ್ಡಿಯಾಯಿತು. ಇದರಿಂದ ಅವರ ಸ್ವಾವಲಂಬನೆಯ ಬದುಕಿಗೆ ಮಾರಕವಾದ ಈ ನೀತಿಯಿಂದಾಗಿ ಜೀವನ ಮಾರ್ಗದ ದಿಕ್ಕೇ ಬದಲಾಯಿತು. ಮೂಲ ಕಸುಬಿನಿಂದ ವಂಚಿತವಾದ ಈ ಸಮುದಾಯ ಜೀವನ ನಿರ್ವಹಣೆಗಾಗಿ ಚಿಕ್ಕ ಪುಟ್ಟ ಅಪರಾಧಗಳನ್ನು ಮಾಡಿರುವುದು ಸಹಜವಾಗಿರಬಹುದು. ಆದರೆ ಅದನ್ನೇ ದೊಡ್ಡ ಅಪರಾಧವೆಂದು ಬ್ರಿಟಿಷ್ ಸರ್ಕಾರ ಭಾವಿಸಿತು.

ಬ್ರಿಟಿಷ್‌ರಿಂದ ಭಾರತ ಸ್ವಾತಂತ್ರ್ಯಗೊಂಡ ತರುವಾಯ ಭಾರತದ ಮೊದಲ ಪ್ರಧಾನಿಗಳಾದ ಜವಹರಲಾಲ್ ನೆಹರೂರವರು ೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ಅವುಗಳ ಕಾನೂನಿನಿಂದ ಪಾರು ಮಾಡುವ ಉದ್ದೇಶದಿಂದ ಅಪರಾಧಿ ಬುಡಕಟ್ಟುಗಳನ್ನೆಲ್ಲಾ ವಿಮುಕ್ತ ಬುಡಕಟ್ಟುಗಳೆಂದು ಘೋಷಿಸಿದರು. ಬಹುಸಂಖ್ಯಾತರಾಗಿದ್ದ ನಾಯಕ ಸಮುದಾಯವು ಜನರೊಂದಿಗೆ ಬೆರೆತು ಕೃಷಿ ಕೂಲಿ, ಕೃಷಿ ಮುಂತಾದ ಕೆಲಸಗಳನ್ನು ಮಾಡುವುದರ ಮೂಲಕ ತನಗೊದಗಿದ ಅಲ್ಪ-ಸ್ವಲ್ಪ ಕಷ್ಟದಿಂದ ಪಾರಾಯಿತು.

೫.೧. ಸಾಮಾಜಿಕ ಸ್ಥಿತಿಗತಿ

ಬೇಡ ಸಮುದಾಯವು ತುಂಬಾ ಸ್ವಾಭಿಮಾನದ ಬದುಕನ್ನು ಬದುಕುವಂತಹ ಸಮುದಾಯ ವಾಗಿದೆ. ಮುಖ್ಯವಾಗಿ ಬುಡಕಟ್ಟುಗಳು ತಮ್ಮದೇ ಆದ ಗುಂಪುಗಳನ್ನು ರಚಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತವೆ. ಇವುಗಳದೇ ಆದ ಕಟ್ಟಿಮನೆ ಪದ್ಧತಿ, ಜಾತಿ ಪಂಚಾಯಿತ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ಬುಡಕಟ್ಟು ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯ ದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಬುಡಕಟ್ಟಿಗೂ ಅವರದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಸಚೇತನವಾದಿಗಳಾದ ಬುಡಕಟ್ಟುಗಳು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ. ಎಷ್ಟೋ ಬುಡಕಟ್ಟು ಸಮುದಾಯಗಳು ಸಮುದಾಯದೊಳಗೇ ಒಳಪಂಗಡಗಳನ್ನು ಒಳಗೊಂಡಿವೆ. ಬೇಡ ನಾಯಕರಲ್ಲಿಯೇ ಊರುಬೇಡ,

ಮ್ಯಾಸಬೇಡ, ಮೊಂಡಬೇಡ, ಕಂಚಬೇಡ, ಬುಟ್ಟಿನಾಯಕ ಇತ್ಯಾದಿ ಪಂಗಡಗಳಿವೆ. ಕಂಚಬೇಡರು ಮೈಸೂರು ಸೀಮೆಯ ಬಿಳಿಗಿರಿ ರಂಗನ ಬೆಟ್ಟ ಹಾಗೂ ಮೈಸೂರು ತಮಿಳುನಾಡಿನ ಗಡಿ ಪ್ರದೇಶಗಳಲ್ಲಿರುವುದಾಗಿ ತಿಳಿದುಬರುತ್ತದೆ. ಅದೇ ರೀತಿ ಓಡುಗ ಎಂಬ ನಾಯಕ ಪಂಗಡದವರು ಎಚ್ ಡಿ ಕೋಟೆ ಪ್ರದೇಶದಲ್ಲಿರುವರು. ಆದರೆ ಬುಟ್ಟಿ ಬೇಡರು ಅಥವಾ ಬುಟ್ಟಿನಾಯಕರು ಎಲ್ಲಿರುವರೆಂದು ಯಾವ ಪ್ರದೇಶದಲ್ಲಿರುವರು ಎಂಬುದು ತಿಳಿದುಬರುತ್ತಿಲ್ಲ. ಕಂಚೋಬಳ, ಪೆನ್ನೋಬಳ ದೈವಗಳ ಪೂಜಾರಿಗಳು ತಾವೇ ಬುಟ್ಟಿನಾಯಕರೆಂದು ಹೇಳಿಕೊಳ್ಳುವರು. ತಾವು ಪೆಟ್ಟಿಗೆ ಅಥವಾ ಪುಟ್ಟಿ ದೇವರುಗಳನ್ನು ಹೊತ್ತುಕೊಂಡು ತಮ್ಮ ದೇವರ ಕಿಲಾರಿ ದನಗಳೊಂದಿಗೆ ಊರೂರು ಸುತ್ತುತ್ತಿದ್ದುದರಿಂದಾಗಿ ತಮಗೆ ಬುಟ್ಟಿನಾಯಕರೆಂದು ಕರೆಯುವರು ಎಂದು ಹೇಳುತ್ತಾರೆ. ಆದರೆ ಈ ಪೂಜಾರಿಗಳು ಬಹುತೇಕ ಮ್ಯಾಸನಾಯಕ ಸಮುದಾಯಕ್ಕೆ ಸೇರಿದವರು. ಮ್ಯಾಸನಾಯಕರೊಂದಿಗೇ ಹೆಣ್ಣುಗಂಡು ಕೊಡುವ ತೆಗೆದುಕೊಳ್ಳುವ ರೂಢಿ ಇರಿಸಿಕೊಂಡಿರುವರು. ಅಂದರೆ ಮ್ಯಾಸಬೇಡರೊಂದಿಗೆ ರಕ್ತ ಸಂಬಂಧವನ್ನು ಹೊಂದಿದ್ದಾರೆ. ಆದರೆ ಅಲ್ಪ ಸಂಖ್ಯಾತರಾದ ಕಂಚನಾಯಕರು ಹಾಗೂ ಬೇಡ ನಾಯಕ, ಮ್ಯಾಸ ನಾಯಕರೊಂದಿಗೆ ರಕ್ತಸಂಬಂಧವನ್ನು ಬೆಸೆದುಕೊಳ್ಳದೆ ಪ್ರತ್ಯೇಕವಾಗಿ ಉಳಿದಿರುವರು. ತಾವೂ ಸಹ ನಾಯಕ ಸಮುದಾಯದವರಾದರೂ ಇತರ ಬೇಡ ನಾಯಕರೊಂದಿಗೆ ಸಂಬಂಧ ಹೆಣೆದುಕೊಳ್ಳದಿರುವುದಕ್ಕೆ ಕಂಚ ನಾಯಕರು ಎರಡು ಕಾರಣಗಳನ್ನು ನೀಡುವರು. ಒಂದು ತಾವು ಕಾಡಿನಲ್ಲಿ ನೆಲೆಸಿರುವವರು. ನಾಡಿನಲ್ಲಿ ನೆಲೆಸಿರುವ ನಾಯಕರು ತಮಗಿಂತ ಕೆಳ ಶ್ರೇಣಿಯಲ್ಲಿರುವವರು. ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಸೆದುಕೊಂಡರೆ ತಮ್ಮೊಂದಿಗೆ ಸದಾ ಇರುವ ದೈವಗಳು ಸಿಟ್ಟಾಗಿ ದೂರ ಹೋಗಿಬಿಡುತ್ತವೆ ಎಂಬುದು ಸಮುದಾಯದವರ ಹೇಳಿಕೆ. ಹೀಗೆ ಒಂದೇ ಸಮುದಾಯದ ಹೆಸರು ಹೇಳಿಕೊಂಡರೂ ಒಂದೇ ಕುಟುಂಬದ ಸದಸ್ಯರಾಗಲು ಮಾತ್ರ ಸಾಧ್ಯವಿಲ್ಲ ಎನ್ನುತ್ತಾರೆ. ಈ ಸಮುದಾಯಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಕರಕರ ಮೊಂಡರು ಇನ್ನೂ ದೈಹಿಕವಾಗಿ ಬುಡಕಟ್ಟು ಲಕ್ಷಣಗಳನ್ನು ಉಳಿಸಿ ಕೊಂಡಿರುವರು. ಸ್ವಲ್ಪ ಚಪ್ಪಟೆಯಾದ ಮೂಗು ಮಧ್ಯಮ ಗಾತ್ರದ ದೇಹವನ್ನು ಹೊಂದಿರುವರು. ಇಂದಿಗೂ ಈ ಸಮುದಾಯ ಅಲೆಮಾರಿತನದಿಂದ ದೂರವುಳಿಯಲು ಸಾಧ್ಯವಾಗಿಲ್ಲ. ಊರ ನಾಯಕರು ದನ, ಹಂದಿ, ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಆದರೆ ಮ್ಯಾಸ ನಾಯಕರು ಕುರಿ, ಕಾಡು ಹಂದಿ, ದನ ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಹಾಗೇ ಈಚಲು ಹೆಂಡ, ಈಚಲು ಚಾಪೆ, ಈಚಲು ಹಣ್ಣು ಯಾವುದನ್ನೂ ಇವರು ಬಳಸುವುದಿಲ್ಲ. ಕೋಳಿ ಮತ್ತು ಈಚಲು ಪದಾರ್ಥಗಳನ್ನು ಬಳಸಿದರೆ ಅಂಥವರನ್ನು ಕುಲದಿಂದ ಹೊರಗಿಡುವ ಪದ್ಧತಿ ಇವರಲ್ಲಿದೆ.

ಕಾಡುಗೊಲ್ಲರಂತೆ ಮ್ಯಾಸನಾಯಕರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆದರೆ ಕರಕರ ಮೊಂಡರು ಇಂದಿಗೂ ಅಲೆಮಾರಿಗಳಾಗಿಯೇ ಜೀವನ ನಿರ್ವಹಣೆ ಮಾಡುತ್ತಾರೆ ಮತ್ತು ಬಿಕ್ಷಾಟನೆಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡಿದ್ದಾರೆ. ಅದೇ ರೀತಿ ಡುಂಗ್ರಿಗರಾಸಿಯ ಮತ್ತು ಹಕ್ಕಿಪಿಕ್ಕಿ ಸಮುದಾಯಗಳು ಸಹ ಅಲೆಮಾರಿ ಸಮುದಾಯಗಳಾಗಿಯೇ ಉಳಿದಿವೆ.

ಮ್ಯಾಸಬೇಡರು ಮತ್ತು ಊರ ಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಬೆಡಗುಗಳಲ್ಲಿಯೂ ಬಹುತೇಕ ಹೋಲಿಕೆ ಇದೆ.

ಊರ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಅತ್ತಿಕಂಭ, ಆಲಗಂಭ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಆದರೆ ಮ್ಯಾಸ ನಾಯಕರು ಹೆಣ್ಣಿನ ಮನೆ ಮುಂದೆ ಮದುವೆ ಮಾಡುತ್ತಾರೆ. ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸ ನಾಯಕರು ತಮ್ಮ ಹಟ್ಟಿಗಳಲ್ಲಿಯೇ ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ.

ಮ್ಯಾಸ ನಾಯಕರಲ್ಲಿ ಮಂಡಲರು ಮತ್ತು ಮಲ್ಲಿನಾಯಕರು ಎಂಬ ಎರಡು ಪಂಗಡಗಳಿವೆ. ಈ ರೀತಿಯ ಪಂಗಡಗಳು ಊರ ನಾಯಕರಲ್ಲಿ ಕಂಡುಬರುವುದಿಲ್ಲ. ಈ ಎರಡು ಪಂಗಡಗಳು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ತಿಳಿಸುತ್ತಾರೆ. ಈ ಎರಡು ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಊರ ನಾಯಕರಲ್ಲಿ ನೆಲ್ಲಬಾಮುಡ್ಲು, ಎನುಮಲೋರು, ಡೋಣಮಂಡ್ಲು, ಬೋಸುರಲು, ನಶೆನೋರು, ಮುನ್ನೋಲ್ಲೋರು, ಗಟ್ಟಿಮತ್ಯೇರು, ಕುಂಬ್ರೇಲು, ಕಾದುಗಡ್ಲೇರು, ಎತ್ತಿನೋರು, ದಡ್ಡಿದಾಸರಿಗಳು, ಪಾಲಜ್ಜಿಗಳು, ಗಾಡವುಲು, ಪುವ್ವಲೋರು, ಓಬನಾಯಕರು, ಪಟ್ಟಪಲ್ಲಾರು, ಭಾನೋರ್, ಬೋನಳ್ಳಿಯೋರ್, ಚಿನ್ನನಾಯ್ಕಲು, ಪಾಮಲ್ಲೇರು, ರಾಯಬೋರ್, ಬಡಸಲೋರ್ ಮುಂತಾದ ಬೆಡಗುಗಳು ಕಂಡುಬರುತ್ತವೆ.

ಮ್ಯಾಸನಾಯಕರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡುಬರುತ್ತವೆ.

ಮಲ್ಲಿನಾಯಕ ಬೆಡಗಿನಲ್ಲಿ ಈಶ್ವರೋರು, ಎನುಮನಲೋರ್, ಓಬನಾಯಕರು, ಕಾಟಮಲ್ಲರ್, ಚೆನ್ನಕಾದನೋರ್, ಪೆದ್ಧನಾಯಕರು, ಕೇರುಲೋರ್, ಮೇಸಲೋರ್, ಎಡೇಲೋರು ಎಂಬ ಉಪ ಬೆಡಗುಗಳಿವೆ.

ಯರಮಂಚ ನಾಯಕರಲ್ಲಿ ಅಚ್ಚಪುವೇರ್, ಕರೇನೋರ್, ನಲಗಟೇರ್, ಯರಗೋಟಿಯೇರ್, ಯರಗಟ್ಲಾರ್, ಎಡೇಲರ್ ಎಂದಿವೆ.

ಮಂದಾಲರಲ್ಲಿ ಕಾಮಗೇತಿ, ಗಾದ್ರಿಪಾಲ, ಬುಲ್ಲೋಡರ್, ಸಾಕಲೋರು ಎಂದಿವೆ.

ಮಂಡ್ಲೋರಲ್ಲಿ ಜರಕಡ್ಲು ಪಾಮುಡ್ಲು, ನಲ್ಲ ಪಾಮುಡ್ಲು, ಪೂಜಾರಳ್ಳಿ ಪಾಮುಡ್ಲು, ಯರಪಾಲಮುಡ್ಲುಗಳು ಎಂದಿವೆ.

ದಾಸರಲ್ಲಿ ಗುಗ್ರಿದಾಸರು, ಗೊಡಗು ದಾಸರು, ಬೋಡ ದಾಸರು, ದಡ್ಡಿ ದಾಸರು ಎಂಬ ಉಪಬೆಡಗುಗಳು ಕಂಡುಬರುತ್ತವೆ.

ಇದೇ ರೀತಿ ಹಕ್ಕಿಪಿಕ್ಕಿಗಳು ಸಹ ಸಚೇತನವಾದಿಗಳು. ಇವರು ಗುಂಪುಗುಂಪಾಗಿ ವಾಸಮಾಡುತ್ತಾರೆ. ಮತ್ತು ಅಲೆಮಾರಿಗಳಾಗಿದ್ದಾರೆ. ಇವರ ವಿವಾಹ ಕ್ರಮ, ಕುಲಪಂಚಾಯ್ತಿ ಎಲ್ಲವೂ ವಿಶೇಷತೆಯಿಂದ ಕೂಡಿವೆ. ಇವರನ್ನು ಪಾರ್ಧಿಗಳೆಂದು ಸಹ ಕರೆಯುತ್ತಾರೆ. ಇವರಲ್ಲಿ ಮುಖ್ಯವಾಗಿ ಸಾವಂತಿಯೂ, ಖೋಡಿಯಾರ್, ಈಖೋತಿಯಾ, ಪಿಂಪಳಾಜ್, ಕೂರ್‌ಭಿಯಾ, ಆರ್‌ಖ್ಡಿತಿಯಾ ಎಂಬ ಬೆಡಗುಗಳು ಕಂಡುಬರುತ್ತವೆ(ಶಿಕಾರಿರಾಮು:೨೦೦೮:೧೬). ಮೇಧ ಹಾಗೂ ಡುಂಗ್ರಿಗರಾಸಿಯಾದಲ್ಲಿಯೂ ಇದೇ ರೀತಿ ಹಲವಾರು ಬೆಡಗುಗಳನ್ನು ಕಾಣಬಹುದು. ಒಟ್ಟಾರೆಯಾಗಿ ಈ ಎಲ್ಲಾ ಬುಡಕಟ್ಟು ಸಮುದಾಯ ಗಳು ವಿಜಾತಿ ಬೆಡಗುಗಳಲ್ಲಿಯೇ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತವೆ.

೩.೧.೧. ಮಹಿಳೆಯರ ಸಾಮಾಜಿಕ ಸ್ಥಿತಿಗತಿ

ಬಹುತೇಕ ಬುಡಕಟ್ಟುಗಳು ಮೂಲತಃ ಸಚೇತನವಾದಿಗಳು ಮತ್ತು ಮಾತೃ ದೇವತಾರಾಧನೆಯನ್ನು ಒಳಗೊಂಡವುಗಳು. ಮಾತೃದೇವತಾರಾಧನೆಯೆಂಬುದು ಈ ಸಮುದಾಯಗಳ ಬದುಕಿನ ರೀತಿಯನ್ನು ತಿಳಿಸುತ್ತವೆ. ಪ್ರಾಯಶಃ ಈ ಸಮುದಾಯಗಳೆಲ್ಲವೂ ಮಾತೃಪ್ರಧಾನ ಕುಟುಂಬಗಳಾಗಿದ್ದವು. ಹೆಣ್ಣಿಗೆ ವಿಶೇಷವಾದ ಸ್ಥಾನವನ್ನು ಈ ಸಮುದಾಯಗಳು ಹೊಂದಿದ್ದವು. ಆದರೆ ಕಾಲಾಂತರದಲ್ಲಿ ಹೆಣ್ಣಿನ ಸ್ಥಾನವನ್ನು ಪುರುಷ ಆಕ್ರಮಿಸಿದನು. ಇಂದು ಬಹುತೇಕವಾಗಿ ಕರ್ನಾಟಕದ ಎಲ್ಲಾ ಬುಡಕಟ್ಟುಗಳಲ್ಲಿ ಪುರುಷ ಪ್ರಾಧಾನ್ಯತೆ ಎದ್ದು ಕಾಣುತ್ತದೆ.

ಕೂಲಿ ಕಾರ್ಮಿಕ ಪದ್ಧತಿಯನ್ನು ಮತ್ತು ಭಿಕ್ಷಾಟನೆಯನ್ನು ಅನುಸರಿಸುವ ಬುಡಕಟ್ಟುಗಳಲ್ಲಿ ಹೆಣ್ಣು ಗಂಡುಗಳಲ್ಲಿ ಸಮಾನತೆ ಕಂಡುಬರುತ್ತದೆಯಾದರೂ ಜಾತಿ ಪಂಚಾಯ್ತಿಯಂತಹ ಸಂದರ್ಭಗಳಲ್ಲಿ ಪುರುಷರೇ ಪ್ರಧಾನ ಪಾತ್ರವಹಿಸುತ್ತಾರೆ. ಮೇಲ್ಜಾತಿಗಳಂತೆ ಹೆಣ್ಣನ್ನು ಕೀಳಾಗಿ ಕಾಣುವ ಪದ್ಧತಿ ಬುಡಕಟ್ಟು ಸಮುದಾಯಗಳಲ್ಲಿ ಇಲ್ಲವಾದರೂ ಮಹಿಳೆ ಪುರುಷರಿಗಿಂತ ಕಡಿಮೆ ಎಂಬ ಭಾವನೆ ಅವರಲ್ಲಿರುವುದು ಕಂಡುಬರುತ್ತದೆ. ಇಂದಿಗೂ ಪುರುಷರು ಮನೆಯ ಹೊರಗಡೆ ಬೇಟೆ ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿದರೆ ಹೆಣ್ಣು ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುವವ ಳಾಗಿರುತ್ತಾಳೆ. ಆದರೆ ಶೀಲತ್ವಕ್ಕೆ ಬುಡಕಟ್ಟು ಸಮುದಾಯಗಳು ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತವೆ.

ಹೀಗಾಗಿಯೇ ಬಹುತೇಕ ಬುಡಕಟ್ಟುಗಳಲ್ಲಿ ಮಹಿಳೆ ಲೈಂಗಿಕ ವ್ಯಭಿಚಾರದಲ್ಲಿ ತೊಡಗುವುದಿಲ್ಲ. ಪುರುಷನೂ ಕೂಡ ಲೈಂಗಿಕ ವ್ಯಭಿಚಾರದಿಂದ ದೂರವುಳಿದಿರುತ್ತಾನೆ. ಅಕಸ್ಮಾತ್ ಅವರು ಲೈಂಗಿಕ ವ್ಯಭಿಚಾರದಲ್ಲಿ ತೊಡಗಿದ ಬಗ್ಗೆ ದೈವಕ್ಕೆ ತಿಳಿದುಬಂದರೆ ಅಂಥವರನ್ನು ಜಾತಿಯಿಂದ ಬಹಿಷ್ಕರಿಸುತ್ತಾರೆ ಮತ್ತು ಕಠಿಣ ಶಿಕ್ಷೆಗಳಿಗೆ ಒಳಪಡಿಸುತ್ತಾರೆ. ಬಹುತೇಕ ಬುಡಕಟ್ಟುಗಳು ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಯಿಂದ ದೂರವುಳಿದಿವೆ.

ಆದರೆ ನಾಯಕ ಸಮುದಾಯಗಳಲ್ಲಿ ಕರಕರ ಮೊಂಡರ ಹೊರತಾಗಿ ಮ್ಯಾಸನಾಯಕ ಮತ್ತು ಊರ ನಾಯಕರಲ್ಲಿ ದೇವದಾಸಿ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿ ಒಂದರ್ಥದಲ್ಲಿ ಬುಡಕಟ್ಟು ನಿಯಮಗಳಿಗೆ ವಿರುದ್ಧವಾದುದಾಗಿದೆ. ಪ್ರಾಯಶಃ ಮಧ್ಯಕಾಲೀನ ಕರ್ನಾಟಕದ ರಾಜರ ಆಡಳಿತ ಸಂದರ್ಭದಲ್ಲಿ ನಾಯಕ ಸಮುದಾಯದಲ್ಲಿ ಇಂತಹ ಅನಿಷ್ಟ ಆಚರಣೆ ಪ್ರವೇಶ ಪಡೆದಿರಬೇಕು. ಹಿಂದೆ ರಾಜರ ಸೇವಕರಾಗಿ, ಸೈನಿಕರಾಗಿ ನಾಯಕ ಪುರುಷರು ರಾಜ ಮಹಾರಾಜರ ಸೇವೆ ಮಾಡಿದರೆ ಅವರ ಕುಟುಂಬದ ಮಹಿಳೆಯರು ದೇವರ ಸೇವೆಯ ಹೆಸರಿನಲ್ಲಿ ರಾಜಮಹಾರಾಜರ ಲೈಂಗಿಕ ಅಭಿಲಾಷೆಯನ್ನು ತೀರಿಸುವವಳಾಗಿ ಕಾರ್ಯನಿರ್ವಹಿಸುತ್ತಿದ್ದಳೆನಿಸುತ್ತದೆ. ಈ ಅನಿಷ್ಟ ಪದ್ಧತಿ ದೇವರ ಹೆಸರಿನಲ್ಲಿ ಇಂದಿಗೂ ಜಾರಿಯಲ್ಲಿರುವುದು ಕಂಡುಬರುತ್ತದೆ. ಇವರ ಈ ಪದ್ಧತಿಗೆ ಹುಲಿಗೆಮ್ಮ, ಯಲ್ಲಮ್ಮ, ತುಳಜಾ ಭವಾನಿ, ಅಂಬಾ ಜೋಗಾಯಿ, ಗುತ್ಯಮ್ಮನಂತಹ ದೈವಗಳು ನೆರವಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕೂಡ್ಲಿಗಿ, ಕಮಲಾಪುರ, ಹೊಸಪೇಟೆ, ಬಳ್ಳಾರಿಯಂತಹ ಊರುಗಳಲ್ಲಿ ದೇವದಾಸಿ ಹೆಸರಿನಲ್ಲಿ ಜೀವನ ನಿರ್ವಹಣೆ ಮಾಡುವ ನಾಯಕ ಸಮುದಾಯದ ಮಹಿಳೆಯರನ್ನು ಕಾಣಬಹುದು. ಸಾಮಾಜಿಕವಾಗಿ ಅವಮಾನಕರವಾದ ಈ ಅನಿಷ್ಟ ಪದ್ಧತಿಯಿಂದಾಗಿ ಮಹಿಳೆಯರು ಅನುಭವಿಸುವ ನೋವು ಯಾತನೆಗಳು ಎಂಥವು ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ದೇವದಾಸಿ ಪದ್ಧತಿ ಅಳವಡಿಸಿಕೊಂಡ ಏಕೈಕ ಕಾರಣಕ್ಕಾಗಿ ಈ ನಾಯಕ ಸಮುದಾಯದ ಬಹುತೇಕ ಮಹಿಳೆಯರು ಸಾಮಾಜಿಕವಾಗಿ ತುಂಬಾ ಅಪಮಾನಕಾರಿ ಜೀವನ ನಿರ್ವಹಿಸಬೇಕಾದಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ವಿದ್ಯಾಭ್ಯಾಸ ನಡೆಸಿ ಶಿಕ್ಷಿತರಾದ ಹೊಸ ತಲೆಮಾರಿನ ಹುಡುಗಿಯರು ಈ ಅನಿಷ್ಟ ಪದ್ಧತಿಯಿಂದ ದೂರವಾಗುತ್ತಿರುವುದು ಸಂತೋಷದ ವಿಚಾರ.

ಇದರಾಚೆಗೆ ವಿವಾಹಿತ ನಾಯಕ ಸಮುದಾಯದ ಮಹಿಳೆಯರಲ್ಲಿ ಬಹುತೇಕರು ಅವಿದ್ಯಾವಂತರಾದುದರಿಂದ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲವಾಗಿದೆ. ಹೀಗಾಗಿ ಪುರುಷಶಾಹಿ ವ್ಯವಸ್ಥೆಯ ಅಡಿಯಾಳಾಗಿ ಮಹಿಳೆ ಬದುಕಬೇಕಾದ ಅನಿವಾರ್ಯತೆ ಇದೆ.

ಸಾಮಾಜಿಕವಾಗಿ ತುಂಬಾ ಕೀಳಾಗಿ ಕಾಣಲಾಗುವ ನಾಯಕ ಸಮುದಾಯದ ಮಹಿಳೆಗೆ ಇನ್ನೂ ಸಾಮಾಜಿಕವಾಗಿ ಸ್ವಾತಂತ್ರ್ಯ ಸಿಗಬೇಕಾದ ಕಾಲ ದೂರವಿದೆ ಎಂದೆನಿಸುತ್ತದೆ.

೫.೨. ಆರ್ಥಿಕ ಸ್ಥಿತಿಗತಿ

ಕರ್ನಾಟಕದ ಬುಡಕಟ್ಟುಗಳಲ್ಲಿ ಎರಡು ವಿಧದ ಬುಡಕಟ್ಟು ಸಮುದಾಯಗಳನ್ನು ಕಾಣಬಹುದು. ಅವುಗಳನ್ನು ಮುಖ್ಯವಾಗಿ ಕಾಡುವಾಸಿ ಬುಡಕಟ್ಟುಗಳು ಮತ್ತು ಬಯಲುಪ್ರದೇಶ ವಾಸಿ ಬುಡಕಟ್ಟುಗಳೆಂದು ವಿಭಾಗಿಸಬಹುದು. ಪಶ್ಚಿಮ ಘಟ್ಟ, ಕೊಡಗು, ಬಿಳಿಗಿರಿ ರಂಗನಬೆಟ್ಟ, ಮಲೆ ಮಹಾದೇಶ್ವರ ಬೆಟ್ಟದ ಕಾಡುಗಳ ಅಂಚಿಗೆ ಅಥವಾ ಕಾಡೊಳಗೆ ನೆಲೆಸಿರುವ ಬುಡಕಟ್ಟುಗಳು ಬಹುತೇಕ ಇಂದಿಗೂ ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ಕೃಷಿ, ವನಸ್ಪತಿಗಳ ಸಂಗ್ರಹಣೆ ಮತ್ತು ಮಾರಾಟಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಆದರೆ ಬಯಲು ಸೀಮೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂದು ಪಶುಪಾಲನೆ ಮತ್ತು ಸಣ್ಣ ಹಿಡುವಳಿಯ ಬೇಸಾಯ ಕ್ರಮವನ್ನೇ ಹೆಚ್ಚಾಗಿ ಅವಲಂಬಿಸಿವೆ. ಇದರಲ್ಲಿ ಪ್ರಮುಖವಾಗಿ ಗುರುತಿಸ ಬಹುದಾದ ಸಮುದಾಯವೆಂದರೆ ಬೇಡ ನಾಯಕ ಸಮುದಾಯ. ಈ ಸಮುದಾಯ ಇಂದಿಗೂ ಪಶುಪಾಲನೆ, ಸಣ್ಣ ಹಿಡುವಳಿಯ ಕೃಷಿ, ಕೃಷಿ ಕೂಲಿ ಮುಂತಾದ ಕೆಲಸಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಅಲ್ಪಸ್ವಲ್ಪ ಕೃಷಿ ಭೂಮಿಗಳನ್ನು ಹೊಂದಿರುವ ಕುಟುಂಬಗಳು ನಾಯಕ ಸಮುದಾಯಗಳಲ್ಲಿರುವವಾದರೂ ಬಹುತೇಕ ಕುಟುಂಬಗಳು ಕೂಲಿ ಕೆಲಸವನ್ನೇ ಅವಲಂಭಿಸಿವೆ ಎಂಬುದು ಸತ್ಯ.

೫.೨.೧ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಕೆಲಸಗಾರರ ವಿಂಗಡಣೆ– ೨೦೦೧ (ಶೇಕಡವಾರುಗಳಲ್ಲಿ)



ಮುಖ್ಯವಾಗಿ ಬಳ್ಳಾರಿಯಲ್ಲಿಯ ಡುಂಗ್ರಿ ಗರಾಸಿಯಾ, ಮತ್ತು ಹಕ್ಕಿ ಪಿಕ್ಕಿ, ಮೇಧಾ ಸಮುದಾಯಗಳು ಭೂ ಹಿಡುವಳಿಯಿಂದ ದೂರವೇ ಉಳಿದಿವೆ. ಈ ಸಮುದಾಯಗಳೆಲ್ಲಾ ತಮ್ಮ ಕೈ ಕಸುಬನ್ನೇ



ನಂಬಿ ಜೀವನ ನಡೆಸುತ್ತಿವೆ. ಆದರೆ ನಾಯಕ ಸಮುದಾಯ ಮಾತ್ರ ಅಲ್ಪ ಸ್ವಲ್ಪ ಕೃಷಿ ಭೂಮಿಯನ್ನೇ ನಂಬಿ ಜೀವನ ನಿರ್ವಹಣೆ ಮಾಡುತ್ತಿದೆ. ಅದರಾಚೆಗೆ ಕೆಲವು ಜನ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡವಾರುಗಳಲ್ಲಿ ನೀಡಲಾಗಿದೆ. ೨೦೧೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಸಂಖ್ಯೆಯು **೧೧,೧೬,೮೮೦** ರಷ್ಟಿದೆ. ಇದರಲ್ಲಿ ಪುರುಷರು **೭,೦೩,೨೫೮** ಮಹಿಳೆಯರು **೪,೧೩,೬೨೨** ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಕೆಲಸಗಾರರ ಕುರಿತು ಶೇಕಡವಾರುಗಳಲ್ಲಿ ಹೇಳುವುದಾದರೆ ಕೆಲಸಗಾರರಲ್ಲಿ ಪುರುಷರು ಶೇಕಡ ೬೦ರಷ್ಟಿದ್ದರೆ ಮಹಿಳೆಯರು ಶೇಕಡ ೪೦ ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡ ೫೭.೬೦ ಹಾಗೂ ಮಹಿಳೆಯರು ಶೇಕಡ ೪೫.೩೦ರಷ್ಟಿದ್ದಾರೆ. ಹಾಗೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡ ೫೨.೬೦ ಹಾಗೂ ಮಹಿಳೆಯರು ಶೇಕಡ ೨೧.೯೦ರಷ್ಟಿದ್ದಾರೆ.

'೦' ವಯೋಮಾನದಿಂದ ೧೮ ವರ್ಷದವರೆಗಿನ ಮತ್ತು ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ಕೆಲಸಗಾರರೆಂದು ಪರಿಗಣಿಸಿರುವುದಿಲ್ಲ. ಹೀಗಾಗಿ ಇಂತಹ ಕೆಲಸಗಾರರಲ್ಲದವರ ಒಟ್ಟು ಪ್ರಮಾಣ ಶೇಕಡ ೫೦.೬ರಷ್ಟಿದೆ.

ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಮುಖ್ಯಕೆಲಸಗಾರರು ಶೇಕಡ ೭೬.೪೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೮೯.೧೦ರಷ್ಟಿದೆ.

ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡ ೨೩.೬೦ ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೧೦.೯೦ರಷ್ಟಿದೆ.

೫.೨.೨ ಭೂ ಹಿಡುವಳಿ

"ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ

ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ. ಅವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದೆ"[೧] ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೭.೬ರಷ್ಟು ಸಾಗುವಳಿದಾರರಿದ್ದಾರೆ. ಶೇಕಡ ೧೧.೮೬ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡ ೪.೭೦ರಷ್ಟು ಗೃಹಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡ ೫೮.೮೦ ರಷ್ಟು ಮಹಿಳೆಯರು ಗೃಹ ಸಂಬಂದಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡ ೫೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

"ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡ ೫೭.೩೯ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೭೪.೩೫ ರಷ್ಟು ಒಣಭೂಮಿಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿ ಭೂಮಿಯು ಶೇಕಡ ೨೧ ರಷ್ಟು ಮಾತ್ರವಾಗಿದೆ"[೨]

೨೦೦೧ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೩೦.೯ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡ ೧೯.೪ ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿದಾರರಿದ್ದಾರೆ ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

ಕೋಷ್ಟಕ ೫.೨.೫. ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡವಾರು ವಿವರ



ಕೃಪೆ: ೨೦೦೧ರ ಕೃಷಿ ಗಣತಿ



ಆದರೆ ಮದ್ಯಮ (ಶೇಕಡ ೭.೯) ಮತ್ತು ದೊಡ್ಡ ಹಿಡುವಳಿಗಳ (ಶೇಕಡ ೧.೦) ಪ್ರಮಾಣ ಕಡಿಮೆ ಇದೆ(ಮೇಲಿನ ಕೋಷ್ಟಕ ನೋಡಿ).

ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ.

ವರಮಾನದ ವಿಚಾರವಾಗಿ ತಿಳಿಸಬಹುದೇನೆಂದರೆ ೧೯೯೯-೨೦೦೦ ಅಂಕಿ ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸಮಾಡುವುದು. (ಶೇಕಡ ೯.೭) ಸಾಗುವಳಿ (ಶೇಕಡ ೭.೭) ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು (ಶೇಕಡ ೧೧.೪) ಅವರ ವರಮಾನದ ಮೂಲಗಳಾಗಿವೆ.

ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲದ ವಿವರ



ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ ೪.೭೬೮ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ ೪೦ ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡ ೨೫ ರಷ್ಟಾಗಿದೆ



ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚ ರೂ ೪೯೯ ಆಗಿದ್ದರೆ ಇತರರ ತಲಾವಾರು ವೆಚ್ಚ ರೂ ೫೦೦ ಆಗಿದೆ. ಇತರರ ಮಾಸಿಕ ತಲಾವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲಾವಾರು ವೆಚ್ಚವು ಅತ್ಯಂತ ಕಡಿಮೆಯಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚವು ರೂ ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲಾವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಪರಿಶಿಷ್ಟ ಪಂಗಡದವರು ನೆಚ್ಚಿಕೊಂಡಿರುಬೇಕಾಗುತ್ತದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಂತಹ ಬಿರು ಬಿಸಿಲ ನಾಡಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟುಗಳಲ್ಲಿ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಗೋವಾ, ಹೈದರಾಬಾದು ಮುಂತಾದ ಕಡೆ ವಲಸೆ ಹೋಗುತ್ತಾರೆ. ಬಹುತೇಕ ಈ ರೀತಿ ವಲಸೆ ಹೋಗುವ ಅನಿವಾರ್ಯತೆ ಇರುವುದರಿಂದ ಇವರ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗಲು ಸಾಧ್ಯವಾಗುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿರುವ ಏಳು ತಾಲೂಕುಗಳಲ್ಲಿ ಬಳ್ಳಾರಿ, ಸಿರುಗುಪ್ಪ, ಸಂಡೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಹಡಗಲಿ ತಾಲೂಕುಗಳಲ್ಲಿ ಒಣಬೇಸಾಯವನ್ನು ಅವಲಂಬಿಸಿದ ಗ್ರಾಮೀಣ ಪರಿಶಿಷ್ಟ ಪಂಗಡದವರು ಗೋವಾ, ಚಿಕ್ಕಮಗಳೂರು ಮುಂತಾದ ಕಡೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವುದು ಸಹಜ. ಈ ರೀತಿ ವಲಸೆ ಹೋದವರು ಮರಳಿ ತಮ್ಮ ಗ್ರಾಮಗಳಿಗೆ ಮರಳುವುದು ಮಳೆಗಾಲಕ್ಕೆ.

ಪ್ರಸ್ತುತ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿರುವ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಮಹಿಳೆಯರ ಆರ್ಥಿಕ ಸ್ಥಿತಿ-ಗತಿಗಳನ್ನು ಇಲ್ಲಿ ಗಮನಿಸಲಾಗಿದೆ.

ಮುಖ್ಯವಾಗಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಬಹುತೇಕ ಮಹಿಳಾ ಸದಸ್ಯರ ಹೆಸರಿನಲ್ಲಿ ಕೆಲವು ಕಡೆ ಭೂ ಹಿಡುವಳಿ ಇರುವುದಾದರೂ ಅವೆಲ್ಲವೂ ಮಳೆಯಾಶ್ರಯನ್ನೇ

ಅವಲಂಭಿಸಿದ ತುಂಡುಭೂಮಿಗಳಾಗಿವೆ. ಪ್ರಾಯಶಃ ದೇವದಾಸಿ ಪದ್ಧತಿಯನ್ನು ಅನುಸರಿಸಿದ ಕುಟುಂಬದ ಮಹಿಳೆಯರಿಗೆ ಆ ಕುಟುಂಬದ ಪುರುಷರಿಗೆ ಹಂಚುವಂತೆಯೇ ಭೂಮಿ ಇತ್ಯಾದಿ ಆಸ್ತಿ ಹಂಚುವುದರಿಂದಾಗಿ ಅಂತಹ ಮಹಿಳೆಯರು ಅಲ್ಪ ಸ್ವಲ್ಪ ಕೃಷಿ ಭೂಮಿ ಹೊಂದಿರುತ್ತಾರೆ. ಆದರೆ ಅದರಾಚೆಗೆ ಬಹುತೇಕ ನಾಯಕ ಸಮುದಾಯದ ಮಹಿಳೆಯರು ಯಾವುದೇ ರೀತಿಯ ಸ್ವತ್ತನ್ನು ಹೊಂದದೇ ಇರುವುದು ಕಂಡು ಬರುತ್ತದೆ.

೫.೩. ಜನಸಂಖ್ಯೆಯ ವಿವರ

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿರುವ ನಾಯಕ ಸಮುದಾಯದ ಕುಟುಂಬಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ತಾಲೂಕಿಗೆ ಐದು ಗ್ರಾಮಪಂಚಾಯತಿಗಳಂತೆ ಆಯ್ಕೆಮಾಡಿಕೊಂಡು ಆ ಗ್ರಾಮಪಂಚಾಯತಿಯೊಳಗೆ ಪ್ರತಿ ಪಂಚಾಯತಿಗೆ ೪೦ ಕುಟುಂಬಗಳಂತೆ ತಾಲೂಕಿಗೆ ಒಟ್ಟು ೨೦೦ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಅಂದರೆ ಏಳು ತಾಲೂಕುಗಳ ಮಧ್ಯದಲ್ಲಿ ೩೫ ಗ್ರಾಮಪಂಚಾಯತಿಗಳನ್ನೂ ಅದರಲ್ಲಿರುವ ೧೪೦೦ ನಾಯಕ ಸಮುದಾಯದ ಕುಟುಂಬಗಳನ್ನೂ ಸಮೀಕ್ಷಿಸಲಾಗಿದೆ. ಜಿಲ್ಲೆಯ ಪ್ರತಿ ತಾಲೂಕಿನ ಸಮೀಕ್ಷೆಗೊಳಪಡಿಸಿದ ಐದು ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೫.೧. ಬಳ್ಳಾರಿ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ.	ಗ್ರಾಮ ಪಂಚಾಯತ್‌ಗಳು	ಕುಟುಂಬಗಳು	ಜನಸಂಖ್ಯೆ			ಲಿಂಗಾನುಪಾತ	ಕುಟುಂಬ ಗಾತ್ರ
			ಗಂಡು	ಹೆಣ್ಣು	ಒಟ್ಟು		
೧	ಎತ್ತಿನಬೂದಿಹಾಳ್	೪೦	೯೯	೯೫	೧೯೪	೯೫೯	೪.೮೫
೨	ಏಳುಬೆಂಚಿ	೪೦	೧೧೩	೧೦೧	೨೧೪	೮೯೩	೫.೩೫
೩	ಓರ್ವಾಯಿ	೪೦	೧೦೬	೯೭	೨೦೩	೯೧೫	೫.೦೮
೪	ಶಂಕರಬಂಡೆ	೪೦	೧೨೫	೧೧೬	೨೪೧	೯೨೮	೬.೦೩
೫	ಬೆಳಗಾಲ್	೪೦	೯೯	೯೨	೧೯೧	೯೨೯	೪.೭೮
ಬಳ್ಳಾರಿ		೨೦೦	೫೪೨	೫೦೧	೧೦೪೩	೯೨೪	೫.೨೨

ಬಳ್ಳಾರಿ ತಾಲೂಕಿನ ಎತ್ತಿನಬೂದಿಹಾಳು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೪ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೫ ಜನರಿರುವರು.

ಏಳುಬೆಂಚಿಯ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೧೪ ಇದೆ. ಇದರಲ್ಲಿ ಪುರುಷರು ೧೧೩ ಹಾಗೂ ಮಹಿಳೆಯರು ೧೦೧ ಜನರಿರುವರು.

ಓರ್ವಾಯಿಯ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೩ ಇದೆ. ಇದರಲ್ಲಿ ಪುರುಷರು ೧೦೬ ಹಾಗೂ ಮಹಿಳೆಯರು ೯೭ ಜನರಿರುವರು.

ಶಂಕರಬಂಡೆಯ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೪೧ ಇದೆ. ಇದರಲ್ಲಿ ಪುರುಷರು ೧೨೫ ಹಾಗೂ ಮಹಿಳೆಯರು ೧೧೬ ಜನರಿರುವರು.

ಬೆಳಗಲ್ಲು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೧ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೨ ಜನರಿರುವರು.

ಬಳ್ಳಾರಿ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೪೩ ಇದೆ. ಇದರಲ್ಲಿ ಪುರುಷರು ೫೪೨ ಹಾಗೂ ಮಹಿಳೆಯರು ೫೦೧ ಜನರಿರುವರು

ಕೋಷ್ಟಕ ೫.೨. ಕೂಡ್ಲಿಗಿ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನು ಪಾತ	ಕುಟುಂಬದ ಗಾತ್ರ
೧	ಕಂದಗಲ್ಲ	೪೦	೧೦೩	೯೨	೧೯೫	೮೯೩	೪.೮೭೫
೨	ಜುಮ್ಮೊಬನಹಳ್ಳಿ	೪೦	೧೦೬	೯೯	೨೦೫	೯೩೪	೫.೧೨೫
೩	ಪೂಜಾರಹಳ್ಳಿ	೪೦	೧೧೫	೧೦೫	೨೨೦	೯೧೩	೫.೫
೪	ಮೊರಬ	೪೦	೧೧೩	೧೦೭	೨೨೦	೯೪೬	೫.೫
೫	ಜರಮಲಿ	೪೦	೯೫	೮೫	೧೮೦	೮೯೪	೪.೫
ಕೂಡ್ಲಿಗಿ		೨೦೦	೫೩೨	೪೮೮	೧೦೨೦	೯೧೭	೫.೧

ಕೂಡ್ಲಿಗಿ ತಾಲೂಕಿನ ಕಂದಗಲ್ಲು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೫ ಇದೆ. ಇದರಲ್ಲಿ ಪುರುಷರು ೧೦೩ ಹಾಗೂ ಮಹಿಳೆಯರು ೯೨ ಜನರಿರುವರು.

ಜುಮ್ಮೊಬನಹಳ್ಳಿಯ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೫ ಇದೆ. ಇದರಲ್ಲಿ ಪುರುಷರು ೧೦೬ ಹಾಗೂ ಮಹಿಳೆಯರು ೯೯ ಜನರಿರುವರು.

ಪೂಜಾರಹಳ್ಳಿಯ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೦ ಇದೆ. ಇದರಲ್ಲಿ ಪುರುಷರು ೧೧೫ ಹಾಗೂ ಮಹಿಳೆಯರು ೧೦೫ ಜನರಿರುವರು.

ಮೊರಬ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೦ ಇದೆ. ಇದರಲ್ಲಿ ಪುರುಷರು ೧೧೩ ಹಾಗೂ ಮಹಿಳೆಯರು ೧೦೭ ಜನರಿರುವರು.

ಜರ್ಮಲಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೮೦ ಇದೆ. ಇದರಲ್ಲಿ ಪುರುಷರು ೯೫ ಹಾಗೂ ಮಹಿಳೆಯರು ೮೫ ಜನರಿರುವರು.

ಕೂಡ್ಲಿಗಿ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೨೦ ಇದೆ. ಇದರಲ್ಲಿ ಪುರುಷರು ೫೩೨ ಹಾಗೂ ಮಹಿಳೆಯರು ೪೮೮ ಜನರಿರುವರು.

ಕೋಷ್ಟಕ ೫.೩. ಹಡಗಲಿ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನು ಪಾತ	ಕುಟುಂಬದ ಗಾತ್ರ
೧	ದಾಸನಹಳ್ಳಿ	೪೦	೯೯	೯೪	೧೯೩	೯೪೯	೪.೮೨೫
೨	ತುಂಬಿನಕೇರೆ	೪೦	೧೦೪	೧೦೧	೨೦೫	೯೭೧	೫.೧೨೫
೩	ಮಹಾಜನದಹಳ್ಳಿ	೪೦	೧೦೦	೯೫	೧೯೫	೯೫೦	೪.೮೭೫
೪	ನೌವುಲಿ	೪೦	೯೫	೮೯	೧೮೪	೯೩೬	೪.೬
೫	ಮುದೇನೂರು	೪೦	೧೧೪	೧೧೧	೨೨೫	೯೭೩	೫.೬೨೫
	ಹಡಗಲಿ	೨೦೦	೫೧೨	೪೯೦	೧೦೦೨	೯೫೭	೫.೦೧

ಹಡಗಲಿ ತಾಲೂಕಿನ ದಾಸನಹಳ್ಳಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೩ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೪ ಜನರಿರುವರು.

ತುಂಬಿನಕೆರೆ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೫ ಇದೆ. ಇದರಲ್ಲಿ ಪುರುಷರು ೧೦೪ ಹಾಗೂ ಮಹಿಳೆಯರು ೧೦೧ ಜನರಿರುವರು.

ಮಹಾಜನದಹಳ್ಳಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೫ ಇದೆ. ಇದರಲ್ಲಿ ಪುರುಷರು ೧೦೦ ಹಾಗೂ ಮಹಿಳೆಯರು ೯೫ ಜನರಿರುವರು.

ನೌಲಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೮೪ ಇದೆ. ಇದರಲ್ಲಿ ಪುರುಷರು ೯೫ ಹಾಗೂ ಮಹಿಳೆಯರು ೮೯ ಜನರಿರುವರು.

ಮುದೇನೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೫ ಇದೆ. ಇದರಲ್ಲಿ ಪುರುಷರು ೧೧೪ ಹಾಗೂ ಮಹಿಳೆಯರು ೧೧೧ ಜನರಿರುವರು.

ಹಡಗಲಿ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೦೨ ಇದೆ. ಇದರಲ್ಲಿ ಪುರುಷರು ೫೧೨ ಹಾಗೂ ಮಹಿಳೆಯರು ೪೯೦ ಜನರಿರುವರು.

ಕೋಷ್ಟಕ ೫.೪. ಹಗರಿಬೊಮ್ಮನಹಳ್ಳಿ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನುಪಾತ	ಕುಟುಂಬದ ಗಾತ್ರ
೧	ಅಲಬೂರು	೪೦	೧೧೧	೧೦೩	೨೧೪	೮೧೩.೬	೫.೩೫
೨	ಕೊಗಳಿ	೪೦	೧೦೫	೧೦೧	೨೦೬	೭೯೧.೩	೫.೧೫
೩	ದಾಸಪುರ	೪೦	೧೦೨	೧೦೧	೨೦೩	೮೨೮.೮	೫.೦೭೫
೪	ಬನ್ನಿಗೊಳ್	೪೦	೯೩	೮೬	೧೭೯	೯೨೪.೭	೪.೪೭೫
೫	ಸೊನ್ನ	೪೦	೧೧೦	೧೦೬	೨೧೬	೮೭೮.೩	೫.೪
ಹಗರಿಬೊಮ್ಮನಹಳ್ಳಿ		೨೦೦	೫೨೧	೪೯೭	೧೦೧೮	೮೪೪.೨	೫.೦೯

ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೧೪ ಇದೆ. ಇದರಲ್ಲಿ ಪುರುಷರು ೧೧೧ ಹಾಗೂ ಮಹಿಳೆಯರು ೧೦೩ ಜನರಿರುವರು.

ಕೋಗಳಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೬ ಇದೆ. ಇದರಲ್ಲಿ ಪುರುಷರು ೧೦೫ ಹಾಗೂ ಮಹಿಳೆಯರು ೧೦೧ ಜನರಿರುವರು.

ದಾಸಾಪುರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೩ ಇದೆ. ಇದರಲ್ಲಿ ಪುರುಷರು ೧೦೨ ಹಾಗೂ ಮಹಿಳೆಯರು ೧೦೧ ಜನರಿರುವರು.

ಬನ್ನಿಗೋಳ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೭೯ ಇದೆ. ಇದರಲ್ಲಿ ಪುರುಷರು ೯೩ ಹಾಗೂ ಮಹಿಳೆಯರು ೮೬ ಜನರಿರುವರು

ಸೊನ್ನ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೧೬ ಇದೆ. ಇದರಲ್ಲಿ ಪುರುಷರು ೧೧೦ ಹಾಗೂ ಮಹಿಳೆಯರು ೧೦೬ ಜನರಿರುವರು

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೮ ಇದೆ. ಇದರಲ್ಲಿ ಪುರುಷರು ೫೨೧ ಹಾಗೂ ಮಹಿಳೆಯರು ೪೯೭ ಜನರಿರುವರು.

ಕೋಷ್ಟಕ ೫.೫. ಹೊಸಪೇಟೆ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನುಪಾತ	ಕುಟುಂಬದ ಗಾತ್ರ
೧	ಚಿಲಕನಹಟ್ಟಿ	೪೦	೧೧೧	೯೯	೨೧೦	೮೯೧	೫.೨೫
೨	ಡಣಾಯಕನಕೆರೆ	೪೦	೯೯	೯೪	೧೯೩	೯೪೯	೪.೮೨೫
೩	ಗಾದಿಗನೂರು	೪೦	೧೦೯	೯೬	೨೦೫	೮೮೦	೫.೧೨೫
೪	ಮುದ್ದಾಪುರ ನಂ.೧೦	೪೦	೧೦೦	೯೩	೧೯೩	೯೩೦	೪.೮೨೫
೫	ನಾಗಲಪುರ	೪೦	೧೧೫	೧೦೩	೨೧೮	೮೯೫	೫.೪೫
ಹೊಸಪೇಟೆ		೨೦೦	೫೩೪	೪೮೫	೧೦೧೯	೯೦೮	೫.೦೯೫

ಹೊಸಪೇಟೆ ತಾಲೂಕಿನ ಚಿಲಕನಹಟ್ಟಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೧೦ ಇದೆ. ಇದರಲ್ಲಿ ಪುರುಷರು ೧೧೧ ಹಾಗೂ ಮಹಿಳೆಯರು ೯೯ ಜನರಿರುವರು.

ಡಣಾಯಕನಕೆರೆ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೩ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೪ ಜನರಿರುವರು.

ಗಾದಿಗನೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೫ ಇದೆ. ಇದರಲ್ಲಿ ಪುರುಷರು ೧೦೯ ಹಾಗೂ ಮಹಿಳೆಯರು ೯೬ ಜನರಿರುವರು.

ಮುದ್ದಾಪುರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೩ ಇದೆ. ಇದರಲ್ಲಿ ಪುರುಷರು ೧೦೦ ಹಾಗೂ ಮಹಿಳೆಯರು ೯೩ ಜನರಿರುವರು

ನಾಗಲಾಪುರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೧೮ ಇದೆ. ಇದರಲ್ಲಿ ಪುರುಷರು ೧೧೫ ಹಾಗೂ ಮಹಿಳೆಯರು ೧೦೩ ಜನರಿರುವರು

ಹೊಸಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೯ ಇದೆ. ಇದರಲ್ಲಿ ಪುರುಷರು ೫೩೪ ಹಾಗೂ ಮಹಿಳೆಯರು ೪೮೫ ಜನರಿರುವರು.

ಕೋಷ್ಟಕ ೫.೬. ಸಿರಗುಪ್ಪ ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನು ಪಾತ	ಕುಟುಂಬದ ಗಾತ್ರ
೧	ಹಚ್ಚೋಳ್ಳಿ	೪೦	೧೦೫	೯೯	೨೦೪	೭೦೦	೫.೧
೨	ಶ್ಯಾನವಾಸಪುರ	೪೦	೯೯	೯೪	೧೯೩	೮೯೨	೪.೮೨೫
೩	ಉತ್ತನೂರು	೪೦	೧೧೫	೧೦೫	೨೨೦	೭೪೬	೫.೫
೪	ಮುದ್ದಟನೂರು	೪೦	೯೮	೯೩	೧೯೧	೮೭೩	೪.೭೭೫
೫	ಮಣ್ಣುರುಸೂಗುರು	೪೦	೯೯	೯೫	೧೯೪	೮೪೮	೪.೮೫
ಸಿರಗುಪ್ಪ		೨೦೦	೫೧೬	೪೮೬	೧೦೦೨	೮೦೫.೪	೫.೦೧

ಸಿರಗುಪ್ಪ ತಾಲೂಕಿನ ಹಚ್ಚೊಳ್ಳಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೪ ಇದೆ. ಇದರಲ್ಲಿ ಪುರುಷರು ೧೦೫ ಹಾಗೂ ಮಹಿಳೆಯರು ೯೯ ಜನರಿರುವರು.

ಶ್ಯಾನವಾಸಪುರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೩ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೪ ಜನರಿರುವರು.

ಉತ್ತನೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೦ ಇದೆ. ಇದರಲ್ಲಿ ಪುರುಷರು ೧೧೫ ಹಾಗೂ ಮಹಿಳೆಯರು ೧೦೫ ಜನರಿರುವರು.

ಮುದ್ದಟನೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೯೧ ಇದೆ. ಇದರಲ್ಲಿ ಪುರುಷರು ೯೮ ಹಾಗೂ ಮಹಿಳೆಯರು ೯೩ ಜನರಿರುವರು.

ಮಣ್ಣೂರು ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೯೫ ಇದೆ. ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೯೫ ಜನರಿರುವರು.

ಸಿರಗುಪ್ಪ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೦೨ ಇದೆ. ಇದರಲ್ಲಿ ಪುರುಷರು ೫೧೬ ಹಾಗೂ ಮಹಿಳೆಯರು ೪೮೬ ಜನರಿರುವರು.

ಕೋಷ್ಟಕ ೫.೭. ಸಂಡೂರು ತಾಲೂಕಿನ ಸಮೀಕ್ಷೆಗೊಳಪಡಿಸಿದ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಜನಸಂಖ್ಯೆಯ ವಿವರ

ಕ್ರಸಂ	ಗ್ರಾಮ ಪಂಚಾಯತಿ	ಕುಟುಂಬ	ಗಂಡು	ಹೆಣ್ಣು	ಒಟ್ಟು	ಲಿಂಗಾನುಪಾತ	ಕುಟುಂಬದ ಗಾತ್ರ
೧	ಯಶವಂತನಗರ	೪೦	೧೧೫	೧೦೯	೨೨೪	೯೪೭	೫.೬
೨	ಮೆಟ್ರಿಕಿ	೪೦	೧೦೬	೧೦೦	೨೦೬	೯೪೩	೫.೧೫
೩	ತಾರನಗರ	೪೦	೯೫	೮೭	೧೮೨	೯೧೫	೪.೫೫
೪	ದರೋಜಿ	೪೦	೯೨	೮೭	೧೭೯	೯೪೫	೪.೪೭೫
೫	ವಿಠ್ಠಲಾಪುರ	೪೦	೧೧೬	೧೦೮	೨೨೪	೯೩೧	೫.೬
ಸಂಡೂರು		೧೬೦	೫೨೪	೪೯೧	೧೦೧೫	೯೩೭	೪.೯೪೪

ಸಂಡೂರು ತಾಲೂಕಿನ ಯಶವಂತನಗರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೪ ಇದೆ. ಇದರಲ್ಲಿ ಪುರುಷರು ೧೧೫ ಹಾಗೂ ಮಹಿಳೆಯರು ೧೦೯ ಜನರಿರುವರು.

ಮೆಟ್ರಿಕಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೦೬ ಇದೆ. ಇದರಲ್ಲಿ ಪುರುಷರು ೧೦೬ ಹಾಗೂ ಮಹಿಳೆಯರು ೧೦೦ ಜನರಿರುವರು.

ತಾರಾನಗರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೮೨ ಇದೆ. ಇದರಲ್ಲಿ ಪುರುಷರು ೯೫ ಹಾಗೂ ಮಹಿಳೆಯರು ೮೭ ಜನರಿರುವರು.

ದರೋಜಿ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೨೨೪ ಇದೆ. ಇದರಲ್ಲಿ ಪುರುಷರು ೧೧೬ ಹಾಗೂ ಮಹಿಳೆಯರು ೧೦೮ ಜನರಿರುವರು.

ವಿಠ್ಠಲಾಪುರ ಗ್ರಾಮಪಂಚಾಯತಿಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೪೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೮ ಇದೆ. ಇದರಲ್ಲಿ ಪುರುಷರು ೧೧೬ ಹಾಗೂ ಮಹಿಳೆಯರು ೧೦೮ ಜನರಿರುವರು.


ಸಂಡೂರು ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ೨೦೦ ಕುಟುಂಬಗಳ ಒಟ್ಟು ಜನಸಂಖ್ಯೆಯು ೧೦೧೫ ಇದೆ. ಇದರಲ್ಲಿ ಪುರುಷರು ೫೨೪ ಹಾಗೂ ಮಹಿಳೆಯರು ೪೯೧ ಜನರಿರುವರು.

ಕೋಷ್ಟಕ ೫.೮. ಸಮೀಕ್ಷೆಗೊಳಪಡಿಸಿದ ಏಳು ತಾಲೂಕಿನ ನಾಯಕ ಸಮುದಾಯದ ಒಟ್ಟು ಜನಸಂಖ್ಯೆಯ ವಿವರ

ಕ್ರಸಂ	ತಾಲೂಕು	ಗ್ರಾಮ ಪಂಚಾಯತಿ	ಕುಟುಂಬ ಹಾಗೂ ಜನಸಂಖ್ಯೆ			
			ಕುಟುಂಬ	ಗಂಡು	ಹೆಣ್ಣು	ಒಟ್ಟು
೧	ಬಳ್ಳಾರಿ	೫	೨೦೦	೫೪೨	೫೦೧	೧೦೪೩
೨	ಕೂಡ್ಲಿಗಿ	೫	೨೦೦	೫೩೨	೪೮೮	೧೦೨೦
೩	ಹಡಗಲಿ	೫	೨೦೦	೫೧೨	೪೯೦	೧೦೦೨
೪	ಹಗರಿಬೊಮ್ಮನಹಳ್ಳಿ	೫	೨೦೦	೫೨೧	೪೯೭	೧೦೧೮
೫	ಹೊಸಪೇಟೆ	೫	೨೦೦	೫೩೪	೪೮೫	೧೦೧೯
೬	ಸಿರಗುಪ್ಪ	೫	೨೦೦	೫೧೬	೪೮೬	೧೦೦೨
೭	ಸಂಡೂರು	೫	೨೦೦	೫೨೪	೪೯೧	೧೦೧೫
ಒಟ್ಟು		೩೫	೧೪೦೦	೩೬೮೧	೩೪೩೮	೭೧೧೯

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳ ೩೫ ಗ್ರಾಮಪಂಚಾಯತಿಯಲ್ಲಿ ಪಂಚಾಯತಿಗೆ ೪೦ ಕುಟುಂಬಗಳಂತೆ ಒಟ್ಟು ೧೪೦೦ ಕುಟುಂಬಗಳನ್ನು ಸಮೀಕ್ಷಿಸಲಾಗಿದೆ. ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳ ಒಟ್ಟು ಜನಸಂಖ್ಯೆಯು ೭೧೧೯ ಇದೆ. ಇದರಲ್ಲಿ ಪುರುಷರು ೩೬೮೧ ಹಾಗೂ ಮಹಿಳೆಯರು ೩೪೩೮ ಜನರಿರುವರು.


ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ಒಟ್ಟು ಜನಸಂಖ್ಯೆಯ ವಿವರ



೫.೪ ಲಿಂಗವಾರು ವಯೋಗುಂಪು ಪ್ರಮಾಣ

ಕೋಷ್ಟಕ ೫.೯. ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ತಾಲೂಕುವಾರು ವಯೋಗುಂಪಿನ ವಿವರ

ವಯೋಗುಂಪು	ಗಂಡು	ಹೆಣ್ಣು	ಒಟ್ಟು
೦-೬	೬೯೬	೬೧೫	೧೩೧೧
೬-೧೮	೯೮೮	೮೯೮	೧೮೮೬
೧೮-೪೦	೧೪೬೩	೧೪೭೫	೨೯೩೮
೪೦-೬೦	೪೫೦	೩೮೫	೮೩೫
೬೦+ರಮೇಲ್ಪಟ್ಟ	೮೪	೬೫	೧೪೯
ಒಟ್ಟು	೩೬೮೧	೩೪೩೮	೭೧೧೯




ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ಕುಟುಂಬಗಳಲ್ಲಿ ಇರುವ ಒಟ್ಟು ಜನಸಂಖ್ಯೆಯು ೭೧೧೯. ಇದರಲ್ಲಿ ೦-೬ರ ವಯೋಮಾನದೊಳಗಿರುವ ಒಟ್ಟು ಮಕ್ಕಳು ೧೩೧೧, ಇದರಲ್ಲಿ ಗಂಡು ೬೯೬ ಹಾಗೂ ಹೆಣ್ಣು ೬೧೫ ಮಕ್ಕಳಿವೆ. ೬-೧೮ರ ಒಳಗಿನ ಮಕ್ಕಳು ಒಟ್ಟು ೧೮೮೬ ಇವೆ. ಇದರಲ್ಲಿ ಗಂಡು ೯೮೮ ಹಾಗೂ ಹೆಣ್ಣು ೮೯೮ಜನರಿರುವರು.

೧೮-೪೦ರ ಒಳಗಿನ ವಯೋಮಾನದವರು ಒಟ್ಟು ೨೯೩೮ ಜನರಿರುವರು. ಇದರಲ್ಲಿ ೧೪೬೩ ಪುರುಷರೂ ಹಾಗೂ ೧೪೭೫ ಮಹಿಳೆಯರಿರುವರು. ೪೦-೬೦ರೊಳಗಿನ ವಯೋಮಾನದವರು ೮೩೫ ಜನರಿರುವರು. ಇದರಲ್ಲಿ ೪೫೦ ಪುರುಷರೂ ಹಾಗೂ ೩೮೫ ಮಹಿಳೆಯರು ಇರುವರು. ೬೦ ವರ್ಷಗಳನ್ನು ಮೀರಿದ ವೃದ್ಧರು ಒಟ್ಟು ೧೪೯ ಜನರಿರುವರು. ಇದರಲ್ಲಿ ೮೪ ಪುರುಷರೂ ಹಾಗೂ ೬೫ ಮಹಿಳೆಯರಿರುವರು

೫.೫ ಕಾಯಕಾರ್ಹ ಹಾಗೂ ಕಾಯಕಾರ್ಹರಲ್ಲದ ಗುಂಪಿನ ವಿವರ

ಕ್ರಸಂ	ಕಾಯಕಾರ್ಹರು			ಕಾಯಕಾರ್ಹರಲ್ಲದವರು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	೧೯೧೩	೧೮೬೦	೩೭೭೩	೧೭೬೮	೧೫೭೮	೩೩೪೬



ಜಿಲ್ಲೆಯ ಏಳು ತಾಲೂಕುಗಳಲ್ಲಿ ಸಮೀಕ್ಷೆ ನಡೆಸಿದ ನಾಯಕ ಸಮುದಾಯದ ಒಟ್ಟು ೧೪೦೦ ಕುಟುಂಬಗಳಲ್ಲಿ ೦-೧೮ರ ಒಳಗಿನ ವಯೋಮಾನದವರನ್ನು ಹಾಗೂ ೬೦ ವರ್ಷ ಮೇಲ್ಪಟ್ಟ ವಯೋಮಾನದವರನ್ನು ಕಾಯಕಾರ್ಹವಲ್ಲದ ಗುಂಪೆಂದೇ ಪರಿಗಣಿಸಲಾಗುತ್ತದೆ. ೦-೬ ಹಾಗೂ ೬-೧೮ರ ವಯೋಮಾನದ ಮಕ್ಕಳು ಯಾವುದೇ ದುಡಿಮೆಯಲ್ಲಿ ತೊಡಗುವುದನ್ನೂ ಹಾಗೂ



ದುಡಿಮೆಗೆ ನೂಕುವುದನ್ನು ಬಾಲ ಕಾರ್ಮಿಕ ಕಾಯ್ದೆ ಅಪರಾಧವೆಂದೇ ಪರಿಗಣಿಸಲಾಗುತ್ತದೆ. ಹಾಗೆಯೇ ಭಾರತದಲ್ಲಿ ನಿವೃತ್ತಿಯ ವಯಸ್ಸನ್ನು ೬೦ ವರ್ಷಗಳೆಂದು ಪರಿಗಣಿಸಲಾಗುತ್ತದೆ. ಹೀಗಾಗಿ ಈ ಎರಡೂ ಗುಂಪುಗಳನ್ನು ಕಾಯಕಾರ್ಹವಲ್ಲದ ಗುಂಪೆಂದು ಪರಿಗಣಿಸಲಾಗುತ್ತದೆ. ಇಂತಹ ಕಾಯಕಾರ್ಹವಲ್ಲದವರು ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ಒಟ್ಟು ೩೩೪೬ ಜನರಿರುವರು. ಇದರಲ್ಲಿ ಗಂಡು ೧೭೬೮ ಹಾಗೂ ಹೆಣ್ಣು ೧೫೭೮ ಜನರಿರುವರು.

ಇನ್ನೂ ಕಾಯಕಾರ್ಹರ ಗುಂಪಿನಲ್ಲಿ ಒಟ್ಟು ೩೭೭೩ ಜನರಿರುವರು. ಇದರಲ್ಲಿ ಪುರುಷರು ೧೯೧೩ ಹಾಗೂ ಮಹಿಳೆಯರು ೧೮೬೦ ಜನರಿರುವರು.

ಕೋಷ್ಟಕ ೫.೧೦. ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ತಾಲೂಕುವಾರು ಕಾಯಕಸ್ಥರ ಪ್ರಮಾಣ

ಕ್ರಸಂ.	ತಾಲೂಕುಗಳು	ಕುಟುಂಬಗಳು	ಕಾಯಕಾರ್ಹರು			ಕಾಯಕನಿರತರು		
			ಗ	ಹೆ	ಒ	ಗ	ಹೆ	ಒ
೧	ಬಳ್ಳಾರಿ	೨೦೦	೩೦೮	೨೯೪	೬೦೨	೩೧೮	೩೦೧	೬೧೯
೨	ಕೂಡ್ಲಿಗಿ	೨೦೦	೩೧೭	೨೯೧	೬೦೮	೩೨೭	೩೦೧	೬೨೮
೩	ಹೂವಿನಹಡಗಲಿ	೨೦೦	೨೫೩	೨೯೯	೫೫೨	೨೬೩	೩೦೨	೫೬೫
೪	ಹಗರಿಬೊಮ್ಮನಹಳ್ಳಿ	೨೦೦	೨೭೪	೨೬೭	೫೪೧	೨೮೩	೨೭೭	೫೬೦
೫	ಹೊಸಪೇಟೆ	೨೦೦	೨೮೨	೨೬೦	೫೪೨	೨೯೧	೨೭೦	೫೬೧
೬	ಸಿರುಗುಪ್ಪ	೨೦೦	೨೭೬	೨೬೬	೫೪೨	೨೮೮	೨೭೬	೫೬೪
೭	ಸಂಡೂರು	೨೦೦	೨೦೩	೧೮೩	೩೮೬	೨೧೩	೧೯೨	೪೦೫
ಒಟ್ಟು		೧೪೦೦	೧೯೧೩	೧೮೬೦	೩೭೭೩	೧೯೮೩	೧೯೧೯	೩೯೦೨

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳನ್ನು ಸಮೀಕ್ಷಿಸಿದಾಗ ಪ್ರತಿ ತಾಲೂಕಿನಲ್ಲಿ ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳಲ್ಲಿ ವಿವಿಧ ವೃತ್ತಿಯಲ್ಲಿ ನಿರತರಾದವರು ಕಂಡುಬಂದರು. ಇಲ್ಲಿ ಕಾಯಕಾರ್ಹರಿಗಿಂತ ಕಾಯಕದಲ್ಲಿ ತೊಡಗಿದವರೇ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಬಳ್ಳಾರಿಯು ನಾಯಕ ಸಮುದಾಯವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ. ಈ ತಾಲೂಕಿನಲ್ಲಿ ೨೦೦ ಕುಟುಂಬಗಳನ್ನು ಸಮೀಕ್ಷಿಸಿದೆ. ಇದರಲ್ಲಿ ಕಾಯಕಾರ್ಹರು ಒಟ್ಟು ೬೦೨ ಜನರಿರುವರು. ಇದರಲ್ಲಿ ಪುರುಷರು ೩೦೮ ಹಾಗೂ ಮಹಿಳೆಯರು ೨೯೪ ಜನರಿರುವರು. ಆದರೆ ಕಾಯಕನಿರತರು ೬೧೯ ಜನರಿರುವರು. ಇದರಲ್ಲಿ ಪುರುಷರು ೩೧೮ ಹಾಗೂ ಮಹಿಳೆಯರು ೩೦೧ರಷ್ಟಿದ್ದಾರೆ. ಅಂದರೆ ಕಾಯಕಾರ್ಹರಿಗಿಂತ ಕಾಯಕನಿರತರು ೧೭ ಜನರು ಹೆಚ್ಚಿನ ಪ್ರಮಾಣದಲ್ಲಿರುವರು. ಕೂಡ್ಲಿಗಿಯಲ್ಲಿ ಕಾಯಕಾರ್ಹರು ಒಟ್ಟು ೬೦೮ ಜನರಿರುವರು. ಆದರೆ ಕಾಯಕ ನಿರತರು ೬೨೮ ಜನರಿರುವರು. ಇದರಲ್ಲಿ ೩೨೭ ಪುರುಷ ಹಾಗೂ ೩೦೧ ಮಹಿಳೆಯರಿರುವರು. ಹಡಗಲಿಯಲ್ಲಿ ಕಾಯಕಾರ್ಹರು ಒಟ್ಟು ೫೫೨ ಜನರಿರುವರು. ಇದರಲ್ಲಿ ಪುರುಷರು ೨೫೩ ಹಾಗೂ ಮಹಿಳೆಯರು ೨೯೯

ಜನರಿರುವರು. ಆದರೆ ಕಾಯಕನಿರತರು ೫೬೫ ಜನರಿರುವರು. ಅಂದರೆ ಕಾಯಕಾರ್ಹರಿಗಿಂತ ೧೩ ಜನ ಹೆಚ್ಚು ಕಾಯಕನಿರತರಾಗಿದ್ದಾರೆ.

ಹಗರಿಬೊಮ್ಮನಹಳ್ಳಿಯಲ್ಲಿ ೫೪೧ ಕಾಯಕಾರ್ಹರಿರುವರು. ಆದರೆ ಕಾಯಕನಿರತರು ೫೬೦ ಜನರಿರುವರು. ಇದರಲ್ಲಿ ಪುರುಷರು ೨೮೩ ಹಾಗೂ ಮಹಿಳೆಯರು ೨೭೭ ಜನರಿರುವರು.


ಹೊಸಪೇಟೆ ತಾಲೂಕಿನಲ್ಲಿ ಕಾಯಕಾರ್ಹರು ೫೪೨ ಜನರಿರುವರು. ಆದರೆ ಕಾಯಕನಿರತರು ೫೬೪ ಜನರಿದ್ದಾರೆ. ಇದರಲ್ಲಿ ಪುರುಷರು ೨೯೧ ಹಾಗೂ ಮಹಿಳೆಯರು ೨೭೦ ಜನರಿದ್ದಾರೆ. ಸಿರಗುಪ್ಪ ತಾಲೂಕಿನಲ್ಲಿ ೫೪೨ ಕಾಯಕಾರ್ಹರಿದ್ದಾರೆ. ಆದರೆ ಕಾಯಕನಿರತರು ೫೬೪ ಜನರಿದ್ದಾರೆ. ಇದರಲ್ಲಿ ಪುರುಷರು ೨೮೮ ಹಾಗೂ ಮಹಿಳೆಯರು ೨೭೬ ಜನರಿದ್ದಾರೆ.

ಸಿರಗುಪ್ಪ ತಾಲೂಕಿನಲ್ಲಿ ಕಾಯಕಾರ್ಹರು ೫೪೨ ಜನರಿದ್ದಾರೆ. ಆದರೆ ಕಾಯಕಾರ್ಹರು ೫೬೪ ಜನರಿರುವರು. ಇದರಲ್ಲಿ ಪುರುಷರು ೨೮೮ ಹಾಗೂ ಮಹಿಳೆ ೨೭೬ ಜನರಿರುವರು.

ಸಂಡೂರು ತಾಲೂಕಿನಲ್ಲಿ ಕಾಯಕಾರ್ಹರು ೩೮೬ ಜನರಿರುವರು. ಕಾಯಕನಿರತರು ೪೦೫ ಜನರಿರುವರು. ಇದರಲ್ಲಿ ಪುರುಷರು ೨೧೩ ಹಾಗೂ ಮಹಿಳೆಯರು ೧೯೨ ಜನರಿರುವರು.

ಏಳು ತಾಲೂಕಗಳನ್ನೊಳಗೊಂಡು ಇರುವ ಒಟ್ಟು ಕಾಯಕಾರ್ಹರು ೩೭೭೩ ಜನರಿದ್ದಾರೆ. ಇದರಲ್ಲಿ ಪುರುಷರು ೧೯೧೩ ಹಾಗೂ ಮಹಿಳೆಯರು ೧೮೬೦ ಜನರಿರುವರು. ಕಾಯಕನಿರತರು ಒಟ್ಟು ೩೯೦೨ ಜನರಿರುವರು. ವಿವಿಧ ವೃತ್ತಿಯನ್ನ ಅನುಸರಿಸುವ ಪುರುಷರು ೧೯೮೩ ಹಾಗೂ ಮಹಿಳೆಯರು ೧೯೧೯ ಜನರಿರುವರು.

ಕಾಯಕಾರ್ಹರು ಹಾಗೂ ಕಾಯಕನಿರತರ ಪ್ರಮಾಣ



ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೨.೯ರಷ್ಟು ಕಾಯಕಾರ್ಹರಿರುವರು. ಕಾಯಕನಿರತರು ಶೇಕಡ ೫೪.೮೧ರಷ್ಟಿರುವರು. ಶೇಕಡ ೧.೮೨ರಷ್ಟು ಜನರು ಕಾಯಕಾರ್ಹರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ.

ಕೋಷ್ಟಕ ೫.೧೧. ಭೂ ಹಿಡುವಳಿ ಹೊಂದಿದ ಪರಿಶಿಷ್ಟ ಪಂಗಡದ ತಾಲೂಕುವಾರು ನಾಯಕ ಸಮುದಾಯದ ಸದಸ್ಯರ ವಿವರ

ಕ್ರಸಂ	ತಾಲೂಕು	ಕುಟುಂಬ	ಭೂಮಿ ಹೊಂದಿದವರು			ಭೂಮಿ ಹೊಂದದವರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬಳ್ಳಾರಿ	೨೦೦	೭೪	೧೪	೮೮	೧೪	೯೮	೧೧೨
೨	ಕೂಡ್ಲಿಗಿ	೨೦೦	೭೯	೧೫	೯೪	೭	೯೯	೧೦೬
೩	ಹಡಗಲಿ	೨೦೦	೫೨	೧೦	೬೮	೩	೧೨೯	೧೩೨
೪	ಹಗರಿಬೊಮ್ಮನಹಳ್ಳಿ	೨೦೦	೬೭	೧೧	೭೮	೯	೧೧೨	೧೨೨
೫	ಹೊಸಪೇಟೆ	೨೦೦	೮೯	೧೬	೧೦೫	೬	೮೯	೯೫
೬	ಸಿರುಗುಪ್ಪ	೨೦೦	೬೦	೯	೬೯	೫	೧೨೬	೧೩೧
೭	ಸಂಡೂರು	೨೦೦	೮೯	೧೦	೯೯	೯	೯೨	೧೦೧
ಒಟ್ಟು		೧೪೦೦	೫೧೦	೮೫	೬೦೧	೫೩	೭೪೫	೭೯೯

ಭಾರತೀಯ ಮನೋಭಾವದಲ್ಲಿ ಸಾಮಾನ್ಯವಾಗಿ ಸ್ಥಿತಿವಂತರು ಎಂಬುದನ್ನು ಪರಿಗಣಿಸಲು ಸ್ಥಿರಾಸ್ಥಿಯಾಗಿ ಭೂಮಿಯಷ್ಟಿದೆ ಎಂಬ ಮಾನದಂಡವನ್ನೇ ಬಳಸಲಾಗುತ್ತದೆ. ವ್ಯವಹಾರಿಕವಾಗಿ ಎಷ್ಟೇ ಸಂಪಾದಿಸಿದರೂ ಭೂಮಿ ಇರದವನು ಅತಂತ್ರನೆಂದೇ ತಿಳಿಯುತ್ತಾರೆ. ಈ ಎಲ್ಲಾ ಕಾರಣಕ್ಕಾಗಿ ಪ್ರತಿಯೊಬ್ಬ ಭಾರತೀಯನೂ ಸ್ಥಿರಾಸ್ಥಿಯಾಗಿ ಕೃಷಿ ಭೂಮಿಯನ್ನಿರಿಸಿಕೊಳ್ಳಲು ಆಪೇಕ್ಷೆ ಪಡುತ್ತಾನೆ. ಆದರೆ ಭೂಮಿಯಿರುವವರೆಲ್ಲಾ ಶ್ರೀಮಂತರಲ್ಲ. ಯುರೋಪಿಯನ್ನರಂತೆ ನೂರಾರು ಎಕರೆಯ ಒಡೆಯರಾಗುವುದೂ ಕನಸಿನ ಮಾತೆ. ಇಲ್ಲೇನಿದ್ದರೂ ತುಂಡುಭೂಮಿಗೇ ಸಂತೃಪ್ತಿಯನ್ನು ಹೊಂದಬೇಕಾಗುತ್ತದೆ. ಆದರೆ ತುಂಡು ಭೂಮಿಯೂ ಇರದ ಎಷ್ಟೋ ಕುಟುಂಬಗಳು ಈ ಸಮಾಜದಲ್ಲಿವೆ. ಅದರಲ್ಲೂ ಪುರುಷರನ್ನೇ ಆಶ್ರಯಿಸಿದ ಮಹಿಳೆಯರಿಗೆ ಸ್ಥಿರಾಸ್ಥಿಯಾಗಿ ಭೂಮಿ ಇತ್ಯಾದಿಗಳು ಇರುವುದೇ ಅಪರೂಪ. ಅಕಸ್ಮಾತ್ ಮಹಿಳೆಯರ ಹೆಸರಿನಲ್ಲಿ ಭೂಮಿಯ ಪಟ್ಟಾ ಇದ್ದರೂ ಅದರ ಪೂರ್ಣ ಬಳಕೆಯನ್ನು ಹಾಗೂ ನಿರ್ವಹಣೆಯು ಪುರುಷನ ಹಿಡಿತದಲ್ಲಿಯೇ ಇರುತ್ತದೆ. ಇಲ್ಲಿ ಪ್ರತಿ ಗ್ರಾಮಪಂಚಾಯತಿವಾರು ನಾಯಕ ಸಮುದಾಯದ ಮಹಿಳೆಯರಿಗಿರುವ ಭೂಹಿಡುವಳಿಯ ವಿವರಗಳನ್ನು ನೋಡಲಾಗಿದೆ.

ಅಧ್ಯಯನದ ಸಮೀಕ್ಷೆಗಾಗಿ ಪ್ರತಿ ತಾಲೂಕಿಗೆ ೨೦೦ ಕುಟುಂಗಳಂತೆ ಏಳು ತಾಲೂಕುಗಳಿಂದ ೧೪೦೦ ಕುಟುಂಬಗಳನ್ನು ಸಮೀಕ್ಷಿಸಲಾಗಿದೆ.

ಬಳ್ಳಾರಿ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೮೮ ಕುಟುಂಬಗಳಾಗಿವೆ. ಇದರಲ್ಲಿ ೭೪ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೪ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೧೨ ಇವೆ.

ಕೂಡ್ಲಿಗಿ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೯೪ ಕುಟುಂಬಗಳಾಗಿವೆ. ಇದರಲ್ಲಿ ೭೯ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೫ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೦೬ ಇವೆ.

ಹಡಗಲಿ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೬೮ ಕುಟುಂಬಗಳಾಗಿವೆ. ಇದರಲ್ಲಿ ೫೨ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೦ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೩೨ ಇವೆ.


ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೭೮ ಕುಟುಂಬಗಳಾಗಿವೆ. ಇದರಲ್ಲಿ ೬೭ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೧ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೨೨ ಇವೆ.

ಹೊಸಪೇಟೆ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೧೦೫ ಕುಟುಂಬಗಳಾಗಿವೆ. ಇದರಲ್ಲಿ ೮೯ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೬ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೯೫ ಇವೆ.

ಸಿರಗುಪ್ಪ ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೬೯ ಕುಟುಂಬಗಳಾಗಿವೆ. ಇದರಲ್ಲಿ ೬೦ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೦೯ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೩೧ ಇವೆ.

ಸಂಡೂರು ತಾಲೂಕಿನಲ್ಲಿ ನಾಯಕ ಸಮುದಾಯದ ೨೦೦ ಕುಟುಂಬಗಳಿಗೆ ಒಟ್ಟು ಭೂಮಿ ಹೊಂದಿರುವುದು ೯೯ ಕುಟುಂಬಗಳಾಗಿವೆ. ಇದರಲ್ಲಿ ೮೯ ಕುಟುಂಬಗಳು ಪುರುಷರ ಹೆಸರಿನಲ್ಲಿ ಭೂಮಿಯ ಪಟ್ಟಾ ಹೊಂದಿವೆ. ಕೇವಲ ೧೦ ಕುಟುಂಬಗಳಲ್ಲಿ ಮಾತ್ರ ಮಹಿಳೆಯರ ಹೆಸರಿನಲ್ಲಿ ಪಟ್ಟಾ ಇದೆ. ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೧೦೧ ಇವೆ.

ಭೂಹಿಡುವಳಿ ಹೊಂದಿದ ಹಾಗೂ ಭೂಹಿಡುವಳಿ ಇರದ ಕುಟುಂಬಗಳ ವಿವರ



ಜಿಲ್ಲೆಯಲ್ಲಿ ಸಮೀಕ್ಷಿಸಿದ ನಾಯಕ ಸಮುದಾಯದ ಒಟ್ಟು ಕುಟುಂಬಗಳು ೧೪೦೦, ಅದರಲ್ಲಿ ಒಟ್ಟು ಭೂಮಿ ಹೊಂದಿರುವ ಕುಟುಂಬಗಳು ೬೦೧, ಪುರುಷರ ಹೆಸರಲ್ಲಿ ಪಟ್ಟಾ ಇರುವುದು ೫೧೦ ಕುಟುಂಬಗಳು. ಮಹಿಳೆಯರ ಹೆಸರಲ್ಲಿ ಪಟ್ಟಾ ಇರುವುದು ಕೇವಲ ೮೫ ಕುಟುಂಬಗಳು. ಇದರಲ್ಲಿ ಆದರೆ ಯಾವುದೇ ರೀತಿಯ ಭೂಮಿ ಹೊಂದದ ಕುಟುಂಬಗಳು ೭೯೯ ಇವೆ. ಶೇಕಡವಾರುಗಳಲ್ಲಿ ಶೇಕಡ ೪೨ ಕುಟುಂಬಗಳಿಗೆ ಭೂಹಿಡುವಳಿ ಇದೆ. ಇನ್ನು ಶೇಕಡ ೫೮ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ.



೫.೬ ನೀರಾವರಿ ಹಾಗೂ ಒಣ ಬೇಸಾಯವನ್ನವಲಂಭಿಸಿದ ಕುಟುಂಬಗಳು

ಕ್ರಸಂ	ತಾಲೂಕು	ಕುಟುಂಬ	ನೀರಾವರಿ ಭೂಮಿ				ಮಳೆಯಾಶ್ರಿತ ಭೂಮಿ			
			೧೦–೨೫	೦೫–೧೦	೨–೨.೫	೨ರ ಒಳಗೆ	೧೦–೨೫	೦೫–೧೦	೨–೨.೫	೨ರ ಒಳಗೆ
೧	ಬಳ್ಳಾರಿ	೮೮	–	೫	೮	೧೧	–	೧೬	೩೮	೧೦
೨	ಕೂಡ್ಲಿಗಿ	೯೪	–	–	–	–	–	೪೩	೨೮	೨೩
೩	ಹಡಗಲಿ	೬೮	–	–	೫	೪	–	೩೨	೧೮	೯
೪	ಹಗರಿಬೊಮ್ಮನಹಳ್ಳಿ	೭೮	–	–	–	೫	–	೧೩	೩೬	೨೪
೫	ಹೊಸಪೇಟೆ	೧೦೫	–	–	೮	೧೧	–	೨೨	೩೨	೩೨
೬	ಸಿರುಗುಪ್ಪ	೬೯	–	೨	೭	೧೦	–	೧೫	೧೧	೨೪
೭	ಸಂಡೂರು	೯೯	–	–	–	೪	–	೯	೧೮	೬೮
	ಒಟ್ಟು	೬೦೧	–	೭	೨೮	೪೫	–	೧೫೦	೧೮೧	೧೯೦


ನೀರಾವರಿ ಕೃಷಿ ಭೂಮಿ ಹೊಂದಿದ ಕುಟುಂಬಗಳು(ಎಕರೆಗಳಲ್ಲಿ)

ಬಳ್ಳಾರಿ ತಾಲೂಕಿನ ಏಳು ತಾಲೂಕುಗಳನ್ನು ಸಮೀಕ್ಷಿಸಲಾಗಿ ಕೃಷಿ ಭೂಮಿ ಹೊಂದಿದ ಒಟ್ಟು ಕುಟುಂಬಗಳು ೬೦೧ ಇವೆ. ಇದರಲ್ಲಿ ನೀರಾವರಿಯಾಧಾರಿತ ಕೃಷಿ ಭೂಮಿ ಹೊಂದಿದ ಕುಟುಂಬಗಳು ಕೇವಲ ೮೦ ಇವೆ. ಅದರಲ್ಲೂ ೧೦ ಎಕರೆ ಮೇಲ್ಪಟ್ಟು ೨೫ ಎಕರೆ ಹೊಂದಿರುವ ಕುಟುಂಬಗಳು ಒಂದೂ ದೊರೆಯುವುದಿಲ್ಲ. ೫ ರಿಂದ ೧೦ ಎಕರೆಗಳ ಒಳಗೆ ಭೂಮಿ ಹೊಂದಿರುವ ಕುಟುಂಬಗಳು ಕೇವಲ ಏಳು ಇವೆ. ಅದು ಬಳ್ಳಾರಿಯಲ್ಲಿ ೫ ಹಾಗೂ ಸಿರುಗುಪ್ಪದಲ್ಲಿ ೨ ಮಾತ್ರ ಇವೆ.

ಎರಡು ಎಕರೆ ಮೇಲ್ಪಟ್ಟು ೫ ಎಕರೆಯೊಳಗಿನ ಕೃಷಿ ಭೂಮಿ ಹೊಂದಿದ ಕುಟುಂಬಗಳು ೨೮ ಇವೆ. ಬಳ್ಳಾರಿಯಲ್ಲಿ ಶಂಕರಬಂಡೆಯಲ್ಲಿ ಕಾಲುವೆ ನೀರನ್ನು ಬಳಸಿ ಕೃಷಿ ಮಾಡುವರು, ಹಡಗಲಿಯಲ್ಲಿ ಸಿಂಗಟಾಲೂರು ಏತ ನೀರಾವರಿಯ ಲಾಭವನ್ನು ರೈತರು ಹೊಂದಿದ್ದಾರೆ. ಹೊಸಪೇಟೆ, ಸಿರಗುಪ್ಪದ ರೈತರೂ ನೀರಾವರಿ ಸೌಲಭ್ಯ ಪಡೆದಿರುವರು. ಸಂಡೂರಿನ ರೈತರು ಕೆರೆ ನೀರನ್ನು ಅವಲಂಭಿಸಿದ್ದಾರೆ.

ಇದರಾಚೆ ಎರಡು ಎಕರೆ ಒಳಗಿನ ತುಂಡುಭೂಮಿಯನ್ನು ಹೊಂದಿದ ರೈತರ ಪ್ರಮಾಣವೇ ಹೆಚ್ಚಿದೆ. ಇಂತಹ ೪೫ ಕುಟುಂಬಗಳು ಕೂಡ್ಲಿಗಿಯ ಹೊರತಾಗಿ ಎಲ್ಲಾ ತಾಲೂಕುಗಳಲ್ಲಿಯೂ ಇರುವವರು. ಶೇಕಡವಾರುಗಳಲ್ಲಿ ಹೇಳುವುದಾದರೆ ೫-೧೦ ಎಕರೆಯೊಳಗಿನ ನೀರಾವರಿ ಕೃಷಿಭೂಮಿ ಹೊಂದಿದವರು ಶೇಕಡ ೧.೧೬ರಷ್ಟಿದ್ದಾರೆ. ೨ರ ಮೇಲ್ಪಟ್ಟು ೫ ಎಕರೆಯಷ್ಟು ಭೂಮಿಯನ್ನು ಹೊಂದಿದ ಕುಟುಂಬಗಳು ಶೇಕಡ ೪.೬೫ರಷ್ಟಿದ್ದಾರೆ. ಎರಡು ಎಕರೆಯೊಳಗೆ ಇರುವ ತುಂಡು ಭೂಮಿಯನ್ನು ಹೊಂದಿದ ಕುಟುಂಬಗಳು ಶೇಕಡ ೭.೪೮ರಷ್ಟಿರುವರು.

ಸಮೀಕ್ಷೆಗೆ ಒಳಪಟ್ಟ ನಾಯಕ ಸಮುದಾಯದ
ಕೃಷಿ ಭೂಮಿ ಹೊಂದಿರುವ ಕುಟುಂಬಗಳ ವಿವರ





೫.೭ ಮಳೆಯಾಶ್ರಿತ ಕೃಷಿ ಭೂಮಿ ಹೊಂದಿದವರು

ಕೇವಲ ಮಳೆಯನ್ನೇ ನಂಬಿ ಕೃಷಿ ಮಾಡುವ ರೈತರ ಪಾಲು ಭಾರತದಲ್ಲಿ ಅತ್ಯಧಿಕವಾಗಿರುವರು. ಅದಕ್ಕೆ ಕರ್ನಾಟಕವಾಗಲಿ, ಅದರಲ್ಲಿರುವ ಬಳ್ಳಾರಿಯಾಗಲಿ ಹೊರತಾಗಿಲ್ಲ. ನಾಯಕ ಸಮುದಾಯದ ಕುಟುಂಬಗಳು ಬಹುತೇಕ ಕೃಷಿ ಮತ್ತು ಕೃಷಿ ಅವಲಂಭಿತ ಚಟುವಟಿಕೆಗಳಲ್ಲಿಯೇ ತೊಡಗಿವೆ. ಮಳೆಯಾಶ್ರಿತ ಕೃಷಿ ಭೂಮಿಯಲ್ಲಿಯೂ ತುಂಡುಭೂಮಿ ಹೊಂದಿದವರ ಪಾಲು ಹೆಚ್ಚಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಮಳೆಯಾಶ್ರಿತ ಭೂಮಿಯಲ್ಲಿಯೂ ೧೦ ರಿಂದ ೨೫ ಎಕರೆಯಷ್ಟು ಭೂಮಿ ಹೊಂದಿದ ಒಂದು ಕುಟುಂಬವೂ ಸಮೀಕ್ಷೆಯಲ್ಲಿ ದೊರೆಯಲಿಲ್ಲ. ಆದರೆ ೫–೧೦ ಎಕರೆಯೊಳಗಿರುವ ಕುಟುಂಬಗಳು ೧೫೦ ಇವೆ. ೨ ರಿಂದ ೫ ಎಕರೆಯೊಳಗಿನ ಕೃಷಿ ಭೂಮಿ ಹೊಂದಿದವರು ೧೮೧ ಜನರಿರುವರು. ೨ ಎಕರೆಯೊಳಗಿನ ತುಂಡು ಭೂಮಿ ಹೊಂದಿದವರು ೧೯೦ ಜನರಿರುವರು. ಶೇಕಡವಾರುಗಳಲ್ಲಿ ಹೇಳುವುದಾದರೆ ೫–೧೦ ಎಕರೆ ಭೂಮಿ ಹೊಂದಿದವರು ಶೇಕಡ ೨೪.೯೫, ೨ರಿಂದ ೫ ಎಕರೆ ಹೊಂದಿದವರು ಶೇಕಡ ೩೦.೧೨, ಎರಡು ಎಕರೆಯೊಳಗಿನ ಭೂಮಿ ಹೊಂದಿದವರು ಶೇಕಡ ೩೧.೬೧ರಷ್ಟಿರುವುದು ಸಮೀಕ್ಷೆಯಿಂದ ತಿಳಿದುಬಂದಿತು.

ಕೋಷ್ಟಕ ೫.೧೩. ಕೃಷಿ ಹೊರತಾದ ವಿವಿಧ ವೃತ್ತಿಗಳಲ್ಲಿ ತೊಡಗಿರುವ ನಾಯಕ ಸಮುದಾಯದವರ ವಿವರ

ಕ್ರ.ಸಂ.	ತಾಲೂಕುಗಳು	ಕುಟುಂಬಗಳು	ಕಾಯಕನಿರತರು		
			ಗಂಡು	ಹೆಣ್ಣು	ಒಟ್ಟು
೧	ಬಳ್ಳಾರಿ	೨೦೦	೩೧೮	೩೦೧	೬೧೯
೨	ಕೂಡ್ಲಿಗಿ	೨೦೦	೩೨೭	೩೦೧	೬೨೮
೩	ಹೂವಿನಹಡಗಲಿ	೨೦೦	೨೬೩	೩೦೨	೫೬೫
೪	ಹಗರಿಬೊಮ್ಮನಹಳ್ಳಿ	೨೦೦	೨೮೩	೨೭೭	೫೬೦
೫	ಹೊಸಪೇಟೆ	೨೦೦	೨೯೧	೨೭೦	೫೬೧
೬	ಸಿರುಗುಪ್ಪ	೨೦೦	೨೮೮	೨೭೬	೫೬೪
೭	ಸಂಡೂರು	೨೦೦	೨೧೩	೧೯೨	೪೦೫
ಒಟ್ಟು		೧೪೦೦	೧೯೮೩	೧೯೧೯	೩೯೦೨

ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳಲ್ಲಿ ಕೃಷಿಕ ಕುಟುಂಬಗಳು ೭೯೯ ಇವೆ. ಬಹುತೇಕ ಆ ಕುಟುಂಬಗಳ ಗಾತ್ರಕ್ಕೆ ಹೋಲಿಸಿದರೆ ಅವರಿಗಿರುವ ಕೃಷಿ ಭೂಮಿ ಆ ಕುಟುಂಬಗಳ ವಾರ್ಷಿಕ ಜೀವನಕ್ಕೆ ಅವಶ್ಯವಾದಷ್ಟು ಆದಾಯವನ್ನು ತರಲಾರವು. ಬಹುತೇಕ ಎಲ್ಲಾ ಕೃಷಿ ಕುಟುಂಬಗಳು ಕೃಷಿಯ ಹೊರತಾಗಿ ಕೃಷಿಕೂಲಗಳಾಗಿಯೇ ಜೀವನ ನಡೆಸುತ್ತಾರೆ

ಪುರುಷರು ಹಮಾಲಿ, ಆಟೋರಿಕ್ಷಾ, ಇತರೆ ಕೂಲಿ ಕೆಲಸಗಳಿಗೆ ಹೋಗುತ್ತಾರೆ. ಮಹಿಳೆಯರು ಕೃಷಿ ಕೂಲಿ ಹಾಗೂ ತರಕಾರಿ ಮಾರಾಟ ಮಾಡಿ ಜೀವನ ಸಾಗಿಸುತ್ತಿರುವರು. ಬಹುತೇಕ ಮಹಿಳೆಯರು ತಾವೇನು ಕೆಲಸ ಮಾಡುತ್ತೇವೆ ಎಂದು ತಿಳಿಸಲೇ ನಾಚಿಕೊಳ್ಳುತ್ತಿದ್ದರು. ಸಮೀಕ್ಷೆಯ ಸಂದರ್ಭದಲ್ಲಿ ತಾವೇನು ಕೆಲಸ ಮಾಡುತ್ತೀರಿ ಎಂದು ಪ್ರಶ್ನಿಸಿದರೆ ಮನೆಯಲ್ಲಿರುತ್ತೇವೆ ಎಂದೇ ತಿಳಿಸುತ್ತಿದ್ದರಾಗಲಿ ತಾವು ಇಂತಹ ಕೆಲಸ ಮಾಡುತ್ತೇವೆ ಎಂದು ಹೇಳಲು ಸಂಕೋಚಪಡುತ್ತಿದ್ದರು.

ಹೊಸಪೇಟೆ ಹಾಗೂ ಸಿರಗುಪ್ಪ ಹೊರತಾಗಿ ಇತರ ಐದು ತಾಲೂಕುಗಳಲ್ಲಿಯೂ ವಲಸೆ ಸಮಸ್ಯೆ ಇದೆ. ಮಳೆಗಾಲದ ಹೊರತಾಗಿ ಬೇರೆ ದಿನಗಳಲ್ಲಿ ಮಂಗಳೂರು, ಬೆಂಗಳೂರು, ಗೋವಾ ಇತ್ಯಾದಿ ಕಡೆ ಕೂಲಿಯನ್ನರಸಿ ವಲಸೆ ಹೋಗುತ್ತಾರೆ. ಬಹುತೇಕ ಕುಟುಂಬಗಳು ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಕಾಫಿ ಎಸ್ಟೇಟುಗಳಲ್ಲಿ ಕೂಲಿ ಮಾಡಲು ಹೋಗುತ್ತಿರುವರಾದರೂ ಇತ್ತೀಚೆಗೆ ಅಲ್ಲಿಯೂ ಅಸಮರ್ಪಕ ಮಳೆಯಿಂದಾಗಿ ಕೆಲಸ ಕಡಿಮೆಯಾಗಿದೆ. ಹೀಗಾಗಿ ಹೆಚ್ಚು ಕೂಲಿ ಸಿಗುವ ನಗರಗಳಿಗೆ ವಲಸೆ ಹೋಗುವುದೇ ಹೆಚ್ಚಾಗಿದೆ ಎಂದು ತಿಳಿಸಿದರು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಕಾಯಕಾರ್ಹರಿಗಿಂತ ಕಾಯಕನಿರತರ ಪ್ರಮಾಣ ಹೆಚ್ಚಿದೆ. ಎಲ್ಲಿ ಬಡತನದ ಪ್ರಮಾಣ ಹೆಚ್ಚಿರುವುದೋ ಅಲ್ಲಿ ಕಾಯಕ ನಿರತರ ಪ್ರಮಾಣವೂ ಹೆಚ್ಚಾಗಿರುತ್ತದೆ. ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೂಲಿನಾಲಿ ಮಾಡುವುದು ಕಂಡುಬರುತ್ತದೆ. ಮಹಿಳೆಯರು ತಾವೇನು ಕೆಲಸ ಮಾಡದೆ ಗೃಹಕೃತ್ಯದಲ್ಲಿ ತೊಡಗುತ್ತೇವೆಂದು ಹೇಳಿದರೂ ಅದರಾಚೆಗೆ ಕೂಲಿ, ತರಕಾರಿ ಮಾರುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿರುವುದು ಕಂಡುಬರುವುದು.


೫.೮. ವಸತಿ

ಕೋಷ್ಟಕ ೫.೧೪. ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ (ಶೇಕಡವಾರುಗಳಲ್ಲಿ)

ಶಾಶ್ವತ	ಅರೆ ಶಾಶ್ವತ	ತಾತ್ಕಾಲಿಕ
೬೬.೯	೨೩.೧	೧೦.೦

ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡಗಳಲ್ಲಿ ಈ ಹಿಂದೆ ಶಾಶ್ವತ ಮನೆಗಳು ಕಂಡು ಬರುವುದು ಅತ್ಯಲ್ಪವಾಗಿತ್ತು. ಕೇವಲ ಹುಲ್ಲಿನ ಗುಡಿಸಲು, ತಾಳೆಗರಿ ಗುಡಿಸಲುಗಳ ಪ್ರಮಾಣವೇ ಶೇಕಡ ತೊಂಭತ್ತ ರಷ್ಟಿದ್ದಿತು.

ಆದರೆ ಇತ್ತೀಚಿನ ಎರಡು ದಶಕಗಳೀಚೆಗೆ ಸರ್ಕಾರ ಕೊಡಮಾಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮುಂತಾದ ವಸತಿ ಯೋಜನೆಗಳ ಲಾಭ ಪಡೆದ ಪರಿಶಿಷ್ಟ ಪಂಗಡಗಳು ತಮ್ಮ ಹುಲ್ಲು ಮನೆಯ ಬದಲಾಗಿ ಶಾಶ್ವತವಾದ ಮನೆಗಳನ್ನು ಕಾಣುವಂತಾಗಿದೆ.



ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸಬಲರಾದವರು ಸರ್ಕಾರದ ಯೋಜನೆಗಳ ಗೊಡವೆಗೆ ಹೋಗದೆ ಸ್ವತಂತ್ರವಾಗಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ಉಂಟು. ಒಟ್ಟಾರೆಯಾಗಿ ಪಕ್ಕಾ (ಶಾಶ್ವತ) ಮನೆಗಳನ್ನು ಹೊಂದಿದ ಪರಿಶಿಷ್ಟ ಪಂಗಡಗಳ ಪ್ರಮಾಣ ಶೇಕಡ ೬೬.೯ರಷ್ಟಿದೆ. ಅರೆ ಶಾಶ್ವತ ಅಂದರೆ ಕೆಳ ಭಾಗವೆಲ್ಲಾ ಕಲ್ಲು ಅಥವಾ ಇಟ್ಟಿಗೆ ಗೋಡೆಗಳನ್ನು ನಿರ್ಮಿಸಿಕೊಂಡಿದ್ದು ಮೇಲ್ಭಾಗದಲ್ಲಿ ಹುಲ್ಲು ಮುಂತಾದ ತಾತ್ಕಾಲಿವಾದ ಮೇಲು ಹೊದಿಕೆ ಹೊಂದಿದ ಮನೆಗಳ ಪ್ರಮಾಣ ಶೇಕಡ ೧೧.೮ ರಷ್ಟಿದೆ. ಇನ್ನೂ ತಾತ್ಕಾಲಿಕವಾದ ಗುಡಿಸಲು ರಚಿಸಿಕೊಂಡು ಜೀವಿಸುವ ಪರಿಶಿಷ್ಟ ಪಂಗಡಗಳಿದ್ದು ಬಹುತೇಕ ಅವು ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಾಗಿವೆ. ಇಂತಹ ಸಮುದಾಯಗಳ ಮನೆಗಳು ಶೇಕಡ ೧೦.೦ರಷ್ಟಿವೆ.(ಮಾನವಾಭಿವೃದ್ಧಿ ವರದಿ; ೨೦೦೫; ೨೦೫)

ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದಗಳನ್ನು ಗಮನಿಸಿದರೆ ಸರ್ಕಾರದ ವಸತಿ ಯೋಜನೆಗಳ ಲಾಭ ಪಡೆದು ಇದ್ದುದರಲ್ಲಿಯೇ ಸಂಪೂರ್ಣವಾಗಿ ಇಲ್ಲದಿದ್ದರೂ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಿಕೊಳ್ಳಲು ಯಶಸ್ವಿಯಾಗಿದ್ದಾರೆ. ಬಳ್ಳಾರಿಯ ಏಳು ತಾಲೂಕಿನಿಂದ ೧೪೦೦ ಕುಟುಂಬಗಳನ್ನು ಸಮೀಕ್ಷಿಸಲಾಗಿ ಕಂಡುಬಂದ ವಸತಿ ವಿವರಗಳು ಈ ಕೆಳಗಿನಂತಿವೆ.

೫.೧೫. ಸಮೀಕ್ಷೆಗೊಳಪಡಿಸಿದ ನಾಯಕ ಸಮುದಾಯದ ತಾಲೂಕುವಾರು ಮನೆಗಳ ಸ್ವರೂಪದ ವಿವರ

ಕ್ರಸಂ.	ತಾಲೂಕುಗಳು	ಕುಟುಂಬಗಳು	ಮನೆಗಳ ಸ್ವರೂಪ					
			ಕಾಂಕ್ರೀಟ್	ಮಣ್ಣು	ಕಲ್ಲು	ಹೆಂಚಿನ	ಗುಡಿಸಲು	ಸರ್ಕಾರದ ಯೋಜನೆ
೧	ಬಳ್ಳಾರಿ	೨೦೦	೧೫	೮೦	೫೦	೧	೧	೫೩
೨	ಕೂಡ್ಲಿಗಿ	೨೦೦	೧೨	೬೬	೩೪	೧೫	೮	೧೧೯
೩	ಹಡಗಲಿ	೨೦೦	೧೨	೬೮	೪೩	೨೨	೫	೧೪೦
೪	ಹಗರಿಬೊಮ್ಮನಹಳ್ಳಿ	೨೦೦	೧೩	೫೯	೪೫	೧೮	೩	೬೨
೫	ಹೊಸಪೇಟೆ	೨೦೦	೧೭	೫೪	೫೧	೮	೮	೬೨
೬	ಸಿರುಗುಪ್ಪ	೨೦೦	೧೬	೫೧	೫೫	೬	೬	೬೬
೭	ಸಂಡೂರು	೨೦೦	೯	೪೩	೪೮	೩೨	೭	೬೧
ಒಟ್ಟು		೧೪೦೦	೯೪	೪೨೧	೩೨೬	೧೦೨	೩೮	೫೬೩



ಸಮೀಕ್ಷೆಗೊಳಪಡಿಸಿದ ಬಳ್ಳಾರಿ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೪ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೮೦ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೫೦ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ಒಂದು ಕುಟುಂಬ ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೫೩ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಕೂಡ್ಲಿಗಿ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೨ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೬೬ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೩೪ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೧೫ ಕುಟುಂಬ ಹೆಂಚಿನ ಮನೆ ಹೊಂದಿವೆ. ಎಂಟು ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೧೧೯ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಹಡಗಲಿ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೨ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೬೮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೪೩ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೨೨ ಕುಟುಂಬ ಹೆಂಚಿನ ಮನೆ ಹೊಂದಿವೆ. ಐದು ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೧೪೦ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿ ಕೊಂಡಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೩ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೫೯ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೪೫ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೧೮ ಕುಟುಂಬ ಹೆಂಚಿನ ಮನೆ ಹೊಂದಿವೆ. ಮೂರು ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೬೨ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಹೊಸಪೇಟೆ ತಾಲೂಕಿನ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೭ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೫೪ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೫೧ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೮ ಕುಟುಂಬ ಹೆಂಚಿನ ಮನೆ ಹೊಂದಿವೆ. ೮ ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೬೨ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಸಿರುಗುಪ್ಪ ತಾಲೂಕಿನ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೧೬ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೫೧ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೫೫ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೬ ಕುಟುಂಬ ಹೆಂಚಿನ ಮನೆ ಹೊಂದಿವೆ. ೬ ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೬೬ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಸಂಡೂರು ತಾಲೂಕಿನ ತಾಲೂಕಿನ ೨೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೦೯ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೪೩ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೪೮ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೩೨ ಕುಟುಂಬ ಹೆಂಚಿನ ಮನೆ ಹೊಂದಿವೆ. ೭ ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೬೧ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿ ಕೊಂಡಿದ್ದಾರೆ.

ಜಿಲ್ಲೆಯ ಏಳೂ ತಾಲೂಕಿನ ಸಮೀಕ್ಷೆಗೆ ಒಳಪಡಿಸಿದ ಒಟ್ಟು ೧೪೦೦ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಒಟ್ಟು ಕುಟುಂಬಗಳ ಪೈಕಿ ೯೪ ಕುಟುಂಬಗಳು ಸಣ್ಣ ಪ್ರಮಾಣದ ಕಾಂಕ್ರಿಟ್ ಮನೆಗಳನ್ನು ಹೊಂದಿವೆ. ಇನ್ನುಳಿದ ೪೨೧ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿವೆ. ಇನ್ನುಳಿದ ೩೨೬ ಕುಟುಂಬದವರು ಮಣ್ಣಿನ ಮನೆಗಳನ್ನು ಹೊಂದಿರುವುದಾಗಿ ತಿಳಿಸುತ್ತಾರೆ. ೧೦೨ ಕುಟುಂಬ ಹೆಂಚಿನ ಮನೆ ಹೊಂದಿವೆ. ೩೮ ಕುಟುಂಬಗಳು ಮಾತ್ರ ಗುಡಿಸಲನ್ನು ಹೊಂದಿದೆ. ಇನ್ನುಳಿದ ೫೬೩ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.


ಶೇಕಡ ೬.೭೧ ಕಾಂಕ್ರೀಟ್ ಮನೆ, ಶೇಕಡ ೩೦.೦೭ ಕುಟುಂಬಗಳು ಪಿತ್ರಾರ್ಜಿತ ಮನೆಗಳು ಹೊಂದಿರುವರು. ಶೇಕಡ ೨೩. ೨೮ ಕುಟುಂಬಗಳು ಮಣ್ಣಿನ ಮನೆ, ಶೇಕಡ ೭.೨೮ ಕುಟುಂಬಗಳು ಹೆಂಚಿನ ಮನೆ ಹಾಗೂ ಶೇಕಡ ೨.೭೧ ಕುಟುಂಬಗಳು ಗುಡಿಸಲನ್ನು ಆಶ್ರಯಿಸಿವೆ. ಇನ್ನುಳಿದ ಶೇಕಡ ೪೦.೨೧ ಕುಟುಂಬಗಳು ಸರ್ಕಾರದ ಯೋಜನೆಯಡಿ ಬರುವ ಮನೆಗಳನ್ನು ಉಪಯೋಗಿಸುತ್ತಿರುವರು.

೫.೯ ಕರ್ನಾಟಕದ ಪರಿಶಿಷ್ಟ ಪಂಗಡದ ಕುಟುಂಬಗಳು ಶೌಚಾಲಯ ಸೌಲಭ್ಯ ಪಡೆದ ವಿವರ

ಕರ್ನಾಟಕದ ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಲ್ಲಿ ಶೇಕಡ ೪೦ ರಷ್ಟು ಸಮುದಾಯಗಳು ಗುಂಪುಗಳಾಗಿ ಪ್ರತ್ಯೇಕವಾಗಿ ಕಾಡಿನ ಮಧ್ಯಕ್ಕೋ ಅಥವಾ ಜನ ಸಮುದಾಯದಿಂದ ದೂರವಾಗಿಯೋ ಜೀವಿಸುತ್ತಿವೆ. ಇನ್ನುಳಿದ ಶೇಕಡ ೧೦ ರಷ್ಟು ಸಮುದಾಯಗಳು ಮಾತ್ರ ಜನ ಸಮುದಾಯದೊಂದಿಗೆ ಬೆರೆತು ಜೀವನ ಸಾಗಿಸುತ್ತಿವೆ. ಬಹುತೇಕವಾಗಿ ಕಾಡಿನಲ್ಲಿ ಅಥವಾ ಕಾಡಿನಂಚಿಗೆ ಹೊಂದಿಕೊಂಡು ನೆಲೆಸಿರುವ ಪರಿಶಿಷ್ಟ ಪಂಗಡಗಳು ಪ್ರತ್ಯೇಕವಾದ ಶೌಚಾಲಯಗಳನ್ನು ಆಪೇಕ್ಷಿಸದೆ ಬಯಲನ್ನೇ ಶೌಚ ಕಾರ್ಯಕ್ಕಾಗಿ ಬಳಸುತ್ತಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳ ಸ್ಥಿತಿಯೇನೂ ಇದಕ್ಕಿಂತ ಭಿನ್ನವಾಗಿಲ್ಲ. ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಪರಿಶಿಷ್ಟ ಪಂಗಡಗಳು ಇತರರಂತೆ ಶೌಚಕ್ಕಾಗಿ ಬಯಲನ್ನೇ ಆಶ್ರಯಿಸಿರಬೇಕಾದ ಅನಿವಾರ್ಯತೆ ಇದೆ.

ಕರ್ನಾಟಕದ ಪರಿಶಿಷ್ಟ ಪಂಗಡಗಳು ಯಾವ ಸ್ವರೂಪದ ಶೌಚಾಲಯಗಳನ್ನು ಎಷ್ಟರಮಟ್ಟಿಗೆ ಬಳಸುತ್ತಿವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಪರಿಶಿಷ್ಟ ಪಂಗಡಗಳ ಶೌಚಾಲಯ ಸ್ವರೂಪದ ವಿವರ



"ಬಹುತೇಕ ನಗರ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಪಂಗಡಗಳು ಮನೆಯ ಆವರಣದೊಳಗೆ ಶೌಚಾಲಯಗಳನ್ನು ಹೊಂದಿದ್ದು ಅವುಗಳ ಪ್ರಮಾಣವು ಶೇಕಡ ೮.೩೫ರಷ್ಟಿದೆ. ಅದೇ ರೀತಿ ಹೆಚ್ಚಾಗಿ ಸ್ವಲ್ಪ ಸ್ಥಿತಿವಂತರಾದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡಗಳು ಮನೆಯ ಆವರಣದ ಹೊರಗೆ ಶೌಚಾಲಯಗಳನ್ನು ಹೊಂದಿದ್ದು ಅವುಗಳ ಪ್ರಮಾಣ ಶೇಕಡ ೯.೩೩ರಷ್ಟಿದೆ. ಇವು ಬಹುತೇಕ ಗುಂಡಿ ಶೌಚಾಲಯಗಳಾಗಿವೆ. ಆದರೆ ಇಲ್ಲಿ ನೀರನ್ನು ಹೊರಗಿನಿಂದಲೇ ಒಯ್ಯ ಬೇಕಾಗಿರುತ್ತದೆ. ನೀರಿನ ಸೌಲಭ್ಯ ಹೊಂದಿರುವ ಶೌಚಾಲಯಗಳ ಪ್ರಮಾಣ ಶೇಕಡ ೭.೯ರಷ್ಟಿದ್ದರೆ, ಇತರ ಸ್ವರೂಪದ ಶೌಚಾಲಯಗಳು ಶೇಕಡ ೩.೬ರಷ್ಟಿವೆ. ಆದರೆ ಶೇಕಡ ೭೯.೭ರಷ್ಟು ಪರಿಶಿಷ್ಟ ಪಂಗಡಗಳು ಇಂದಿಗೂ ಬಯಲನ್ನೇ ಶೌಚಕ್ಕೆ ಬಳಸುತ್ತಿರುವುದು ಕಂಡುಬರುತ್ತದೆ"[೪]

೫.೧೧. ಶೌಚಾಲಯವನ್ನು ಇತರ ಕಾರ್ಯಗಳಿಗಾಗಿ ಬಳಸಿಕೊಳ್ಳುವವರ ವಿವರ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೭ ತಾಲೂಕುಗಳ ೩೫ ಗ್ರಾಮ ಪಂಚಾಯ್ತಿ ಪರಿಶಿಷ್ಟ ಪಂಗಡದ ಸಮೀಕ್ಷಿಸಿದ ೧೪೦೦ ಮನೆಗಳಲ್ಲಿ ಶೌಚಾಲಯದ ಸ್ಥಿತಿಯನ್ನು ಸಹ ಗಮನಿಸಲಾಯಿತು. ಸ್ವಚ್ಛ ಭಾರತ ಯೋಜನೆಯಡಿ ಪ್ರತಿ ಪಂಚಾಯತಿಯಲ್ಲಿಯೂ ಶೌಚಾಲಯ ನಿರ್ಮಿಸಲು ಸಹಾಯ ಧನ ನೀಡಲಾಗುತ್ತಿದೆ. ಆ ಪ್ರಕಾರ ಶೇಕಡ ೭೦ರಷ್ಟು ಕುಟುಂಬಗಳು ಶೌಚಾಲಯ ಗಳನ್ನೇನೋ ನಿರ್ಮಿಸಿಕೊಂಡಿವೆ. ಇನ್ನೂ ಶೇಕಡ ೩೦ರಷ್ಟು ಕುಟುಂಬಗಳು ಶೌಚಾಲಯವನ್ನು ನಿರ್ಮಿಸಲು ಹಿಂದೇಟು ಹಾಕುತ್ತಿವೆ. ನೀವೇಕೆ ಇಂದಿಗೂ ಶೌಚಾಲಯ ನಿರ್ಮಿಸಿಕೊಳ್ಳುತ್ತಿಲ್ಲವೆಂದು ಕೇಳಿದರೆ ಪಂಚಾಯತಿಯವರು ನೀಡುವ ರೂ ೧೨೦೦೦/– ಶೌಚಾಲಯ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಅದರ ಮೇಲೆ ನಾವೂ ಹಣತೊಡಗಿಸಬೇಕು. ಅಷ್ಟು ಹಣ ನಮ್ಮಲ್ಲಿಲ್ಲ ಎನ್ನುವ ಪ್ರತ್ರಿಕ್ರಿಯೆ ಬಂದಿತು. ಶೌಚಾಲಯ ನಿರ್ಮಿಸಿದ ಮನೆಗಳೂ ಸಹ ಶೌಚಕಾರ್ಯಕ್ಕೆ ಶೌಚಾಲಯಗಳನ್ನು ಬಳಸುವುದು ಹಳ್ಳಿಗಾಡಿನಲ್ಲಿ ಅಪರೂಪವಾಗಿದೆ. ಇಂದಿಗೂ ಶೌಚಕಾರ್ಯಕ್ಕೆ ಬಯಲನ್ನೇ ಆಶ್ರಯಿಸಿದವರ ಪ್ರಮಾಣ ಹೆಚ್ಚು. ಬಯಲು ಶೌಚಾಲಯವನ್ನು ಪುರುಷರು ಹೆಚ್ಚು ಅನುಸರಿಸುತ್ತಿದ್ದಾರೆಂದೂ, ಮಹಿಳೆಯರು ಪ್ರತ್ಯೇಕ ಶೌಚಾಲಯಗಳ ಲಾಭ ತಮಗಾಗುತ್ತಿದೆಯಂಬ ಅಭಿಪ್ರಾಯವು ವ್ಯಕ್ತವಾಯಿತು.


ಪರಿಶಿಷ್ಟ ಪಂಗಡಗಳ ಕುಡಿಯುವ ನೀರಿನ ಸೌಲಭ್ಯ

"ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಶೇಕಡ ೫೩.೭ ರಷ್ಟು ಕುಟುಂಬಗಳಿಗೆ ನಲ್ಲಿ ನೀರೇ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ. (ಎಲ್ಲಾ ಕುಟುಂಬಗಳಲ್ಲಿ ಅದು ಶೇಕಡ ೫೮.೩೯ ರಷ್ಟು ಆಗಿದೆ) ಪರಿಶಿಷ್ಟ ಜಾತಿಯವರಿಗೆ ಅವರ ಮನೆಯ ಆವರಣದೊಳಗೆ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುವ ಪ್ರಮಾಣ ಶೇ ೧೨.೬ ಆಗಿದ್ದರೆ, ಪರಿಶಿಷ್ಟ ಪಂಗಡಗಳಿಗೆ ದೊರೆಯುವ ಪ್ರಮಾಣ ಶೇಕಡ ೧೨.೭ ಆಗಿದೆ. ಆದರೆ ಇತರೆ ಎಲ್ಲಾ ಕುಟುಂಬಗಳಿಗೆ

ಶೇಕಡ ೨೪.೧ ರಷ್ಟು ಕುಟುಂಬಗಳಿಗೆ ಅವರ ಮನೆಯ ಆವರಣ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುತ್ತದ”[೫]

೨೦೦೧ರ ಜನಗಣತಿ ವರದಿಯ ಪ್ರಕಾರ ಪರಿಶಿಷ್ಟ ಪಂಗಡಗಳು ನೆಲೆಸಿರುವ ಗ್ರಾಮಗಳ ಪೈಕಿ ಶೇಕಡ ೮೯ ರಷ್ಟು ಗ್ರಾಮಗಳು ಕೈ ಪಂಪು ಸಹಿತ ಕೊಳವೆ ಬಾವಿಗಳು, ಕಿರುನೀರು ಸರಬರಾಜು ಯೋಜನೆ ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳ ಮೂಲಕ ಕುಡಿಯುವ ನೀರಿನ ಸೌಕರ್ಯ ಹೊಂದಿದೆ. ನಾಲ್ಕರಲ್ಲಿ ಮೂರು ಗ್ರಾಮಗಳು ಎಲ್ಲಾ ಋತುಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸೌಕರ್ಯವನ್ನು ಹೊಂದಿವೆ. ಅದಕ್ಕೆ ಸಂಬಂಧಿಸಿದ ಮಾಹಿತಿ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳಿಗೆ ಕುಡಿಯುವ ನೀರಿನ ಸೌಕರ್ಯದ ವಿಧಗಳು (ಶೇಕಡವಾರುಗಳಲ್ಲಿ)



“ಪರಿಶಿಷ್ಟ ಪಂಗಡಗಳ ಕಾಲೋನಿಯೊಳಗೆ ಅಥವಾ ಅದಕ್ಕೆ ಹತ್ತಿರದಲ್ಲಿ ಕೈ ಪಂಪು ಸಹಿತ ಕೊಳವೆ ಬಾವಿಗಳನ್ನು ಹೊಂದಿದ್ದು ಅಂತಹ ಕೊಳವೆ ಬಾವಿಗಳಿಂದ ಶೇಕಡ ೬೫.೮೪ ರಷ್ಟು ಕುಟುಂಬಗಳು ಬಳಕೆಗೆ ಮತ್ತು ಕುಡಿಯುವುದಕ್ಕೆ ನೀರನ್ನು ಪಡೆಯುತ್ತವೆ, ಅದೇ ರೀತಿ ಗ್ರಾಮ ಪಂಚಾಯಿತಿಗಳ ನಿರ್ವಹಣೆಯಲ್ಲಿ ನಡೆಯುತ್ತಿರುವ ಕಿರು ನೀರು ಯೋಜನೆಯಡಿ ಶೇಕಡ ೫೩.೪೨ ರಷ್ಟು ಪರಿಶಿಷ್ಟ ಪಂಗಡಗಳು ಕುಡಿಯುವ ನೀರನ್ನು ಪಡೆದರೆ ಇನ್ನು ಶೇಕಡ ೫೮.೩೯ ರಷ್ಟು ಕುಟುಂಬಗಳು ಕೊಳವೆ ನೀರನ್ನು ಬಳಸುತ್ತವೆ. ಇನ್ನು ಕಾಡಿನ ಮಧ್ಯ ಜೀವಿಸುತ್ತಿರುವ ಕೆಲವು ಪರಿಶಿಷ್ಟ ಪಂಗಡ ಬುಡಕಟ್ಟುಗಳಲ್ಲಿ ಶೇಕಡ ೪.೩೫ ರಷ್ಟು ಜನ ನದಿಯ ಮೂಲದಿಂದ ಕುಡಿಯುವ ನೀರನ್ನು ಪಡೆದರೆ ಗ್ರಾಮೀಣ ಪ್ರದೇಶದಲ್ಲಿ ಬದುಕುವ ಪರಿಶಿಷ್ಟ ಪಂಗಡಗಳು ಶೇಕಡ



೧೫.೫೩ ರಷ್ಟು ತೆರೆದ ಬಾವಿಯಿಂದ ನೀರನ್ನು ಪಡೆಯುತ್ತವೆ. ಅದೇ ರೀತಿ ಹಳ್ಳ, ಒರತೆ, ಜರಿ ಮುಂತಾದವುಗಳಿಂದ ಕುಡಿಯುವ ನೀರಿನ ಸೌಲತ್ತನ್ನು ಪಡೆಯುತ್ತಿರುವವರಲ್ಲಿ ಶೇಕಡ ೪.೯೭ ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ[೫೬]

೫.೧೧. ನಾಯಕ ಸಮುದಾಯದ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯಗಳ ಕುರಿತ ವಿವರ

ಪ್ರಸ್ತುತ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಎಷ್ಟು ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯಗಳನ್ನು ಸಮರ್ಪಕವಾಗಿ ಹೊಂದಿವೆ ಎಂದು ನೋಡಲಾಗಿ ಕಂಡು ಬಂದ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗದದಿಂದ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಾಮಗಳಲ್ಲಿ ಅಲ್ಲಲ್ಲಿ ಸಾರ್ವಜನಿಕ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯಡಿ ನೀರನ್ನು ಕೊಳವೆ/ನಲ್ಲಿ ಮೂಲಕ ಸರಬರಾಜು ಮಾಡಲಾಗುತ್ತಿದ್ದರೂ ಎಷ್ಟೋ ಪರಿಶಿಷ್ಟ ಸಮುದಾಯ ಮತ್ತು ಪರಿಶಿಷ್ಟ ಪಂಗಡಗಳಿಗೆ ಆ ಯೋಜನೆಗಳು ಇಂದಿಗೂ ತಲುಪುತ್ತಿಲ್ಲ. ಬಹುಶಃ ಇದಕ್ಕೆ ಮೇಲ್ಜಾಜಿಗಳ ರಾಜಕಾರಣ ಒಂದು ರೀತಿಯಲ್ಲಿ ಕಾರಣವಾದರೆ ಇನ್ನೊಂದು ರೀತಿಯ ಕಾರಣವೆಂದರೆ ತಳ ಸಮುದಾಯಗಳಿಗೆ ತಮ್ಮ ಮೂಲಭೂತ ಅವಶ್ಯಕತೆಗಳ ಕುರಿತಾಗಿ ಸರಿಯಾದ ತಿಳುವಳಿಕೆ ಇಲ್ಲದೇ ಇರುವುದೂ ಕಾರಣವಾಗಿದೆ. ಎಷ್ಟೋ ಗ್ರಾಮಗಳಲ್ಲಿ ತಳ ಸಮುದಾಯಗಳು ಬಾವಿಕಟ್ಟೆ ಹತ್ತುವಂತಿಲ್ಲ. ಮೇಲ್ಜಾತಿಗಳು ಬಳಸುವ ಕೊಳವೆ ಬಾವಿಗಳನ್ನು ಮುಟ್ಟದಂತಹ ಸ್ಥಿತಿ ಇದೆ. ಇಂದಿಗೂ ಎಷ್ಟೋ ಗ್ರಾಮಗಳಲ್ಲಿ ತಳ ಜಾತಿಗಳ ಕೊಡಗಳಿಗೆ ಮೇಲ್ಜಾತಿಯವರು ಕೃಪೆದೋರಿ ನೀರನ್ನು ಹಾಕಿದರೆ ಮಾತ್ರ ತಳ ಜಾತಿಗಳಿಗೆ ಕುಡಿಯುವ ನೀರು ಲಭ್ಯ, ಇಲ್ಲದಿದ್ದರೆ ಕುಡಿಯುವ ನೀರೇ ಅಂದು ಅ ಸಮುದಾಯಗಳಿಗೆ ಇಲ್ಲ ಎನ್ನುವಂತಹ ಸ್ಥಿತಿ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕಿರುನೀರು ಸರಬರಾಜು ಯೋಜನೆಯಡಿ ನೀರು ಪೂರೈಕೆಯಾರೂ ಸಹ ಆ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕಾರಣ ಅ ನೀರನ್ನು ಶುದ್ಧೀಕರಿಸುವ ಕಾರ್ಯವನ್ನು ಮಾಡುವುದೇ ಇಲ್ಲ. ಅವರ ಅರ್ಥದಲ್ಲಿ ನೀರನ್ನು ಶುದ್ಧೀಕರಿಸುವುದು ಎಂದರೆ ವರ್ಷದಲ್ಲಿ ಒಂದೆರಡು ಬಾರಿ ಬ್ಲೀಚಿಂಗ್ ಪುಡಿಯನ್ನು ನೀರಿಗೆ ಸೇರಿಸುವುದು. ಇಷ್ಟಾದರೆ ಶುದ್ಧೀಕರಣ ಪೂರ್ಣಗೊಂಡಂತೆ ಎಂದು ಆಡಳಿತ ವ್ಯವಸ್ಥೆ ಭಾವಿಸುತ್ತದೆ.

ಕರ್ನಾಟಕದ ಶೇಕಡ ೮೦ರಷ್ಟು ಗ್ರಾಮಗಳಲ್ಲಿ ಇಂದು ಪ್ಲೋರೈಡ್‌ಯುಕ್ತ ನೀರಿನ ಸರಬರಾಜಿ ನಿಂದಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದನ್ನು ನಾವು ಸುದ್ದಿ ಮಾಧ್ಯಮಗಳ ಮೂಲಕ ಅರಿತೇ ಇದ್ದೇವೆ. ಇದಕ್ಕೆ ಬಳ್ಳಾರಿ ಜಿಲ್ಲೆಯ ಗ್ರಾಮಗಳು ಹೊರತಾಗಿಲ್ಲ. ಇಂದು ಬಳ್ಳಾರಿ ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಪ್ಲೋರೈಡ್‌ಯುಕ್ತ ನೀರು ಕಂಡು ಬರುತ್ತಿದೆ. ಆಶ್ಚರ್ಯವಾಗುವ

ವಿಚಾರವೆಂದರೆ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಗ್ರಾಮ ಪಂಚಾಯ್ತಿಗಳಲ್ಲಿ ಇಂದಿಗೂ ಸಹಿತ ಕುಡಿಯುವ ನೀರನ್ನು ಶುದ್ಧೀಕರಿಸಿ ಸರಬರಾಜು ಮಾಡಲಾಗುತ್ತಿಲ್ಲ. ಕರ್ನಾಟಕದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರ ಹಿತಾಸಕ್ತಿಯಿಂದಾಗಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಎಲ್ಲಾ ಗ್ರಾಮಪಂಚಾಯತಿ ಗಳಲ್ಲಿಯೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಲಾಗಿದೆ. ಕೇವಲ ೨ ರೂಪಾಯಿಗೆ ಇಲ್ಲವೇ ೫ ರೂಪಾಯಿಗೆ ೨೦ ಲೀಟರ್ ನೀರನ್ನು ಕೊಡಲಾಗುತ್ತಿದೆಯಾದರೂ ಎಷ್ಟೋ ಕುಟುಂಬಗಳು ಕುಡಿಯುವ ನೀರಿನ ಘಟಕ ದೂರವಾಗುತ್ತಿದೆ ಎಂಬ ಕಾರಣ ನೀಡಿಯೇ ಶುದ್ಧವಾದ ಕುಡಿಯುವ ನೀರನ್ನು ತರುವುದಿಲ್ಲ. ಸಮೀಕ್ಷಿಸಿದ ೧೪೦೦ ಕುಟುಂಬಗಳಲ್ಲಿ ಶೇಕಡ ೪೮ ಕುಟುಂಬಗಳು ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರನ್ನು ತಂದು ಉಪಯೋಗಿಸಿಕೊಳ್ಳುತ್ತಿವೆ. ಆದರೆ ಶೇಕಡ ೫೨ರಷ್ಟು ಕುಟುಂಬಗಳು ಶುದ್ಧ ಕುಡಿಯುವ ನೀರಿನ ಘಟಕದ ನೀರನ್ನು ಬಳಕೆ ಮಾಡದೆ ಮನೆಯ ಹತ್ತಿರದಲ್ಲಿ ದೊರೆಯುವ ನೀರನ್ನೇ ಕುಡಿಯಲು ಯೋಗ್ಯವಲ್ಲದಿದ್ದರೂ ಬಳಸುತ್ತಿರುವುದು ಕಂಡುಬರುತ್ತಿದೆ.

ರಾಜಕೀಯ ಸ್ಥಿತಿಗತಿ

ಪ್ರತಿಯೊಬ್ಬ ವ್ಯಕ್ತಿಗೂ ಈ ವ್ಯವಸ್ಥೆಯಲ್ಲಿ ನಾಗರೀಕನಾಗಿ ಬಾಳುವ ಹಕ್ಕನ್ನು ಸಂವಿಧಾನವು ಕಲ್ಪಿಸಿದೆ. ಆ ಪ್ರಕಾರ ಭಾರತೀಯನಾದ ಪ್ರತಿಯೊಬ್ಬ ಪ್ರಜೆಗೂ ಮತ ಚಲಾಯಿಸುವ ಹಕ್ಕಿರುವಂತೆಯೇ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಹಕ್ಕೂ ಇದೆ. ಹಾಗಾಗಿ ಬಹುತೇಕ ಎಲ್ಲಾ ಮನುಷ್ಯನಿಗೂ ಅಧಿಕಾರದ ಆಸೆ ಇದ್ದೇ ಇರುತ್ತದೆ. ಆದರೆ ಅವಕಾಶಗಳು ಕೂಡಿ ಬರಬೇಕಷ್ಟೆ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುತೇಕವಾಗಿ ಅಧಿಕಾರವನ್ನು ಹೊಂದುವವರು ಬಂಡವಾಳಶಾಹಿಗಳಾಗಿ ಇರುತ್ತಾರೆ. ಪ್ರಜಾಪ್ರಭುತ್ವದ ದೊಡ್ಡ ಲೋಪದೋಷವೆಂದರೆ ಇದೇ ಆಗಿದೆ. ಅದರಲ್ಲೂ ಭಾರತದಂತಹ ಜಾತಿ ವ್ಯವಸ್ಥೆಯಿಂದ ಕೂಡಿದ ದೇಶದಲ್ಲಿ ಬಂಡವಾಳದಷ್ಟೇ ಪ್ರಬಲವಾದುದು ಜಾತಿಯಾಗಿದೆ. ಜಾತಿ ಮತ್ತು ಹಣ ಈ ಎರಡೇ ಕೊನೆಗೆ ಅಧಿಕಾರ ಪಾಲುಗಾರಿಕೆಯ ನಿರ್ಣಾಯಕ ಶಕ್ತಿ ಗಳಾಗುತ್ತವೆ. ಹೀಗಾಗಿ ಈ ದೇಶದಲ್ಲಿ ಬಂಡವಾಳಶಾಹಿಗಳು ಮತ್ತು ಮೇಲ್ಜಾತಿಗಳು ತಮ್ಮನ್ನು ಮೀರಿಸುವವರು ಯಾರೂ ಇಲ್ಲ ಎನ್ನುವಂತೆ ಮೆರೆದಾಡುತ್ತವೆ. "ಪ್ರಾಯಶಃ ಸಂವಿಧಾನದಲ್ಲಿ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಸದೇ ಹೋಗಿದ್ದಲ್ಲಿ ತಳ ಸಮುದಾಯಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಾಗಿತ್ತು. ಲೋಹಿಯಾ ರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ ಜಾತಿಗಳಿಗೂ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ."[೭] ತಳ ಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಯಲು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ.

ರಾಜಕೀಯವಾಗಿ ಬಲಾಢ್ಯರಾದ ವ್ಯಕ್ತಿಗಳು ಇಂದು ಬಳ್ಳಾರಿಯಲ್ಲಿ ಕಂಡು ಬರುತ್ತಿದ್ದಾರೆ. ಕರ್ನಾಟಕದ ರಾಜಕೀಯ ಕೇಂದ್ರಸ್ಥಾನ ಬಳ್ಳಾರಿ ಎಂಬಂತೆ ಬಿಂಬಿತವಾಗುತ್ತಿದೆ. ಗಣಿ ವ್ಯವಹಾರ ಮತ್ತು ಕರ್ನಾಟಕ ರಾಜಕೀಯಕ್ಕೆ ಪ್ರಸ್ತುತ ನೇರ ಸಂಬಂಧವಿದೆ ಎಂಬುದು ರಾಜಕೀಯ ವಿಶ್ಲೇಷಕರ ವಾದವಾಗಿದೆ. ಬಳ್ಳಾರಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿದೆ. ಹೀಗಾಗಿ ಇಲ್ಲಿ ನೆಲೆಸಿರುವ ಆಂಧ್ರದ ಬಂಡವಾಳಶಾಹಿಗಳು ಸ್ಥಳೀಯ ರಾಜಕಾರಣದ ಜೊತೆಗೆ ರಾಜ್ಯ ರಾಜಕಾರಣದಲ್ಲೂ ನೇರವಾಗಿ ಇಲ್ಲವೆ ಪರೋಕ್ಷವಾಗಿ ಮೂಗು ತೂರಿಸುವುದು ಸಹಜ. ಬಳ್ಳಾರಿ, ಕುರುಗೋಡು, ಕಂಪ್ಲಿ ಮುಂತಾದ ಕಡೆ ಆಂಧ್ರದವರೇ ಮುಖ್ಯವಾಗಿ ರಾಜಕೀಯದಲ್ಲಿ ಕಂಡು ಬರುತ್ತಾರೆ. ಅದರಾಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವ ಲಿಂಗಾಯುತ, ಕುರುಬ, ನಾಯಕ ಮುಂತಾದ ಸಮುದಾಯಗಳು ಯಾವುದಾದರೊಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತಾರೆ. ಆದರೆ ಬ್ರಾಹ್ಮಣ ವರ್ಗ ಮಾತ್ರ ಗೆದ್ದೆತ್ತಿನ ಬಾಲದ ಕಡೆ ತಾವೆಂಬಂತೆ ತಟಸ್ಥವಾಗಿ ಉಳಿದಂತೆ ತೋರಿಸುತ್ತಲೇ ಒಳಗೊಳಗೇ ರಾಜಕೀಯ ಮಾಡುವುದು ಕಂಡುಬರುತ್ತದೆ.

ಮುಖ್ಯವಾಗಿ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದ ಪರಿಶಿಷ್ಟ ಪಂಗಡದ ಎಮ್.ಎಲ್.ಎ ಗಳನ್ನು ನೀಡಿದ ಮೊದಲ ಜಿಲ್ಲೆ ಬಳ್ಳಾರಿ ಎಂದರೆ ತಪ್ಪಾಗಲಾರದು. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಡಿ ನಾಯಕ ಸಮುದಾಯದ ವ್ಯಕ್ತಿಗಳೇ ಆಯ್ಕೆಯಾಗುತ್ತಾ ಬರುತ್ತಿರುವರು. ಆದೇ ರೀತಿ ಇವರ ಸಹೋದರರಾದ ಶ್ರೀ ರಾಮುಲು ಕ್ಯಾಬಿನೆಟ್ ದರ್ಜೆಯ ಆರೋಗ್ಯ ಸಚಿವರಾಗಿದ್ದಾರೆ. ತರುವಾಯ ಕೂಡ್ಲಿಗಿ ಕ್ಷೇತ್ರದಿಂದ ನಾಗೇಂದ್ರ, ಸಿರುಗುಪ್ಪ ಕ್ಷೇತ್ರದಿಂದ ಸೋಮಲಿಂಗಪ್ಪ ಕಂಪ್ಲಿ ಕ್ಷೇತ್ರದಿಂದ ಸುರೇಶಬಾಬು, ಸಂಡೂರು ಕ್ಷೇತ್ರದಿಂದ ತುಕಾರಾಂ, ಹೀಗೆ ಪರಿಶಿಷ್ಟ ಪಂಗಡದ ನಾಯಕ ಸಮುದಾಯದಿಂದ ಒಟ್ಟು ಐದು ಜನ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಐದು ಎಂ ಎಲ್ ಎ ಮತ್ತು ಒಬ್ಬ ಎಂ. ಪಿ ಒಟ್ಟು ಆರು ಜನ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಸದಸ್ಯರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾಗಿದ್ದಾರೆ. ಮೇಲ್ವರ್ಗದವರೇ ಪ್ರಬಲವಾಗಿರುವ ಜಿಲ್ಲೆಯಲ್ಲಿ ತಳವರ್ಗದ 'ನಾಯಕ' ಸಮುದಾಯದ ಜನ ಗೆಲುವು ಸಾಧಿಸುವುದು ಸಾಮಾನ್ಯ ವಿಚಾರವಲ್ಲ. ಆದರೆ ಇಲ್ಲಿನ ಸ್ಥಳಗಳಿಗೆ ಮೀಸಲಾತಿ ಕಡ್ಡಾಯವಾಗಿದ್ದುದರಿಂದ ಅವರು ಅನಿವಾರ್ಯವಾಗಿ ಗೆಲ್ಲುವಂತಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ನಾಯಕ ಸಮುದಾಯದ ಹೊರತಾಗಿ ಹಕ್ಕಿಪಿಕ್ಕಿ, ಮೇಧ, ಡುಂಗ್ರಿ ಗರಾಸಿಯ ಸಮುದಾಯಗಳು ಇದ್ದರೂ ಅವುಗಳು ತೀರಾ ಅಲ್ಪ ಸಂಖ್ಯಾತ ಪರಿಶಿಷ್ಟ ಪಂಗಡ ಸಮುದಾಯಗಳಾಗಿವೆ. ಹೀಗಾಗಿ ಈ ಸಮುದಾಯಗಳು ಇಂದಿಗೂ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ.

ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿ ತನ್ನ ಕೋಮಿಗೆ ಸೇರಿದವರ ಜನಸಂಖ್ಯೆ ಆ ಕ್ಷೇತ್ರದಲ್ಲಿ ಎಷ್ಟು ಎಂದು ಸ್ಪಷ್ಟವಾಗಿ ಸೂಚಿಸಬೇಕು. ಆ ವ್ಯಕ್ತಿಗೆ ಚುನಾವಣೆಗೆ ಅಭ್ಯರ್ಥಿಯಾಗಿಸಲು ಆ ಒಂದು ಅಂಶವನ್ನು ಪ್ರತಿಯೊಂದು ಪಕ್ಷಗಳು ಪರಿಗಣಿಸುತ್ತವೆ.

ಒಬ್ಬ ವ್ಯಕ್ತಿ ಚುನಾವಣೆಗೆ ನಿಲ್ಲಲು ಗಮನಿಸುವ ಅತೀ ಮುಖ್ಯ ಅಂಶಗಳು ಈ ಕೆಳಗಿನಂತಿವೆ

೧. ಅಭ್ಯರ್ಥಿ ಯಾವ ಜಾತಿ/ಕೋಮಿಗೆ ಸೇರಿದ್ದಾನೆ. ಮತ್ತು ಅವನು ನಿಲ್ಲುವ ಕ್ಷೇತ್ರದಲ್ಲಿ ಮತ ನೀಡುವವರಲ್ಲಿ ಅಭ್ಯರ್ಥಿಯ ಜಾತಿ/ಕೋಮಿಗೆ ಸೇರಿದ ಒಟ್ಟು ಜನಸಂಖ್ಯೆ ಎಷ್ಟಿದೆ.

೨. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನು ಆರ್ಥಿಕವಾಗಿ ಎಷ್ಟು ಸಬಲತೆಯನ್ನು ಹೊಂದಿದ್ದಾನೆ. ಮತ್ತು ಚುನಾವಣೆಯಲ್ಲಿ ಆತ ಹಣ ಎಷ್ಟು ವೆಚ್ಚ ಮಾಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ ಮತ್ತು ಆ ವ್ಯಕ್ತಿ ಎಷ್ಟು ಪಾರ್ಟಿಫಂಡ್ ನೀಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಆ ಚುನಾವಣೆಗೆ ಸ್ಪರ್ಧಿಸಲು ನೈತಿಕವಾಗಿ ಎಷ್ಟು ಯೋಗ್ಯ ಎಂದು ನೋಡುವುದಿಲ್ಲ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಜನ ಸಾಮಾನ್ಯರಿಗೆ ನ್ಯಾಯ ಒದಗಿಸಬಲ್ಲಷ್ಟು ಹೊಣೆಗಾರಿಕೆ ಹೊರಬಲ್ಲನೆ ಮತ್ತು ನೈತಿಕ ಯೋಗ್ಯತೆ ಇರುವವನೆ ಎಂಬುದನ್ನು ಗಮನಿಸುವುದಿಲ್ಲ.

ಚುನಾವಣಾ ಅಭ್ಯರ್ಥಿ ಶಿಕ್ಷಣ ಪಡೆದವನೆ ಅಥವಾ ಅಲ್ಲವೆ, ಶಿಕ್ಷಣ ಪಡೆದಿದ್ದರೆ ಅವನು ಎಷ್ಟು ಶಿಕ್ಷಣ ಪಡೆದಿದ್ದಾನೆ ಮುಂತಾಗಿ ಯಾವುದನ್ನೂ ಗಮನಿಸುವುದಿಲ್ಲ.

ಚುನಾವಣಾ ಸ್ವರೂಪವೇ ಬದಲಾಗುತ್ತಿದೆ. ವ್ಯಕ್ತಿಯ ಶಿಕ್ಷಣಕ್ಕಿಂತ ಜಾತಿ ನೋಡಿ, ಚುನಾವಣೆಗೆ ನಿಂತ ಅಭ್ಯರ್ಥಿಯ ಆರ್ಥಿಕ ಬಲದ ಮೇಲೆಯೇ ಚುನಾವಣೆಗಳು ನಡೆಯುವುದು. ತೀರಾ ಅಧ್ವಾನದ ಫಲಿತಾಂಶಗಳು ಚುನಾವಣಾ ವಿಚಾರದಲ್ಲಿ ಹೊರಬೀಳುತ್ತವೆ. ಬಹುತೇಕವಾಗಿ ಈ ದೇಶದಲ್ಲಿ ನಡೆಯುವ ಎಲ್ಲಾ ಸ್ವರೂಪದ ಚುನಾವಣೆಗಳು ಚುನಾವಣಾ ನೀತಿಯನ್ನು ಮುರಿದೇ ಚುನಾವಣೆ ನಡೆಸುತ್ತವೆ ಎಂಬುದನ್ನು ಗಮನಿಸಬಹುದಾಗಿದೆ. ಹಣ, ಹೆಂಡ, ಸೀರೆ, ಇತ್ಯಾದಿ ಚಿಕ್ಕ ಪುಟ್ಟ ಆಸೆಗಳನ್ನು ಮತದಾರನಲ್ಲಿ ತುಂಬಿ ಚುನಾವಣೆಯಲ್ಲಿ ಗೆಲ್ಲುವವರ ಪ್ರಮಾಣವೇ ಹೆಚ್ಚು. ಇಂತಹ ಆಮಿಷಗಳಿಗೆ ಬೇಗ ಒಳಗಾಗುವರು ಮಹಿಳೆಯರು. ಆನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರೇ ಚುನಾವಣಾ ಫಲಿತಾಂಶಗಳ ನಿರ್ಣಾಯಕ ಶಕ್ತಿಗಳಾಗಿವೆ. ಇಂದು ಪ್ರತಿಯೊಂದು ಪಂಚಾಯತಿಯಲ್ಲಿಯೂ ಪರಿಶಿಷ್ಟ ಪಂಗಡದ ಮೀಸಲಾತಿ ಸ್ಥಾನಗಳಿವೆ. ಇದರಲ್ಲಿ ಮಹಿಳಾ ಸದಸ್ಯರೂ ಇರುವರು. ಬಹುತೇಕ ಇವರೆಲ್ಲಾ ನಾಯಕ ಸಮುದಾಯಕ್ಕೆ ಸೇರಿದವರೇ ಆಗಿರುವರು. ನಾಯಕ ಸಮುದಾಯಕ್ಕೆ ಸೇರಿದ ಪಂಚಾಯತಿ ಸದಸ್ಯರಾದರೂ ಅವರು ತಮ್ಮ ಸಮುದಾಯದ ಮಹಿಳೆಯರಿಗೂ ಸಹಾಯ ಮಾಡಲಾಗದ ಅಸಾಹಾಯಕ ಸ್ಥಿತಿಯನ್ನು ಹೊಂದಿರುವರು.

ಭಾರತ ಪ್ರಜಾಪ್ರಭುತ್ವವಾದೀ ರಾಷ್ಟ್ರ. ಇಲ್ಲಿ ಹುಟ್ಟಿರುವ ಪ್ರತಿಯೊಬ್ಬರಿಗೂ ಈ ರಾಷ್ಟ್ರದ ಮೇಲೆ ಸಮಾನವಾದ ಹಕ್ಕಿದೆ. ಇದು ಭಾರತದ ಸಂವಿಧಾನದ ಆಶಯವೂ ಆಗಿದೆ. ಇಲ್ಲಿಯ ಪ್ರತಿಯೊಬ್ಬ ಪ್ರಜೆಯೂ ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕು ಮತ್ತು ಮನುಷ್ಯ ಮನುಷ್ಯರ ನಡುವಿನ ಕಂದಕಗಳನ್ನು ಮುಚ್ಚುವುದನ್ನೇ ಉದ್ದೇಶವಾಗಿರಿಸಿಕೊಂಡಿರುವ ಸರ್ಕಾರವು ಅದನ್ನು ಸಕ್ರಿಯವಾಗಿ ಜಾರಿಗೆ ತರಲು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಸ್ತ್ರವಾಗಿ ಬಳಸಿಕೊಂಡಿದೆ. ಪಂಚಾಯತ್‌ರಾಜ್ ವ್ಯವಸ್ಥೆ ಈ ನಿಟ್ಟಿನಲ್ಲಿ ಸಂಪೂರ್ಣವಾಗಿ ಪ್ರತಿಫಲವನ್ನು ಕೊಡದೇ ಹೋದರೂ ಪ್ರಾಯಶಃ ಅಲ್ಪಮಟ್ಟಿಗಾದರೂ ಜನತೆಯನ್ನು ತಲುಪಲು ಮತ್ತು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ಸಾಫಲ್ಯವಾಗಿದೆ ಎಂದೆನಿಸುತ್ತದೆ.

ಸಾಮಾಜಿಕವಾಗಿ ಏಣಿಶ್ರೇಣಿಗಳನ್ನು ಒಳಗೊಂಡಿರುವ ನಮ್ಮ ಗ್ರಾಮೀಣ ಸಮುದಾಯಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಜಮೀನ್ದಾರಿ ಪಾಳೆಯಗಾರಿಕೆಯ ಅಡಿಯಾಳಾಗಿ ಬಿಡುವ ಅಪಾಯವನ್ನು ಕುರಿತಂತೆ ಬಹಳ ಹಿಂದೆಯೇ ಅಂಬೇಡ್ಕರರವರು ಅಭಿಪ್ರಾಯ ಪಟ್ಟಿದ್ದರು. ಇಂದು ಪಂಚಾಯತ್‌ರಾಜ್ ಸಂಸ್ಥೆಗಳು ಅಂತಹ ಅಪಾಯದ ಹಂತವನ್ನು ದಾಟಿ ಬಂದಿರುವ ಬಗ್ಗೆ ನಿದರ್ಶನಗಳು ಸಿಗುತ್ತವೆ. ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಗ್ರಾಮೀಣ ಮಟ್ಟದಲ್ಲಿ ಜಮೀನ್ದಾರಿ ಪಾಳೆಯಗಾರಿಕೆಯನ್ನು ಮಟ್ಟ ಹಾಕಬಹುದೆಂಬ ಸಂಗತಿಯನ್ನು ಕೇರಳ ಮಾದರಿಯು ನಮಗೆ ತೋರಿಸಿಕೊಡುತ್ತದೆ. "ಜಮೀನ್ದಾರಿ ಪದ್ಧತಿಗಳನ್ನು ಬಗ್ಗುಬಡಿಯುವ ಸಾಧನಗಳಾಗಿ ಪಂಚಾಯತ್‌ರಾಜ್ ಸಂಸ್ಥೆಗಳು ಇಂದು ಒಂದು ಬಗೆಯ ದಲಿತೀಕರಣಕ್ಕೆ ಮತ್ತು ಮಹಿಳೀಕರಣಕ್ಕೆ ಒಳಗಾಗಿವೆ. ಅಲ್ಲಿ ಹಿಂದುಳಿದ ವರ್ಗಗಳಿಗೆ ತಮ್ಮ ವಾರ್ಷಿಕ ಬಜೆಟ್ಟಿನಲ್ಲಿ ಇಂತಿಷ್ಟು ಹಣ ನೀಡಬೇಕೆಂಬ ನಿಯಮವೂ ಇದೆ. ಈ ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿಯ ಸೂತ್ರ ಅಳವಡಿಸಲಾಗಿದೆ. ಈ ಎಲ್ಲಾ ಬಗೆಯ ಸೌಲತ್ತುಗಳಿಂದ ಅಂಚಿನಲ್ಲಿರುವ ತಳ ಸಮುದಾಯಗಳಿಗೆ ಎಷ್ಟರಮಟ್ಟಿಗೆ ಅಧಿಕಾರ ದೊರೆಕಿದೆ, ಅದರ ಫಲಗಳು ಎಷ್ಟರಮಟ್ಟಿಗೆ ಪ್ರಾಪ್ತವಾಗಿವೆ ಎಂಬುದು ಬೇರೆಯೇ ಪ್ರಶ್ನೆ"[೮] ಆದರೆ ಮೀಸಲಾತಿ ನೀತಿಯಿಂದಾಗಿ ಅಧಿಕಾರವನ್ನು ಅನುಭವಿಸುವ ಮತ್ತು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಷ್ಟರ ಮಟ್ಟಿಗಾದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಅವಕಾಶ ದೊರೆತಿರುವುದು ಶ್ಲಾಘನೀಯ ವಿಚಾರ. ಅದರಲ್ಲಿಯೂ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿಯೇ ಉಳಿದಿರುವ ಮಹಿಳೆಯರಿಗೆ ಇಂದು ಅಧಿಕಾರದ ಗದ್ದುಗೆ ಏರಲು ಅವಕಾಶ ದೊರಕಿದಂತಾಗಿದೆ.

೫.೧೧. ಪರಿಶಿಷ್ಟ ವರ್ಗದ ಮಹಿಳೆಯರ ಪಾಲ್ಗೊಳ್ಳುವಿಕೆ

ಸಮಾನತೆ ತತ್ವದಡಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಯ ಉಗಮ ಉಪಯುಕ್ತವಾಗಿ ಬಳಕೆಯಾಗುತ್ತಿದೆ. ಹಿಂದೆ ಕೇವಲ ಮೇಲ್ಜಾತಿ ಮತ್ತು ಬಂಡವಾಳಶಾಹಿಗಳಿಗೆ ಮಾತ್ರ ಸೀಮಿತವಾಗಿದ್ದ ಅಧಿಕಾರದ ಗದ್ದುಗೆಯು ಇಂದು ಮೀಸಲಾತಿಯ ಪರಿಣಾಮವಾಗಿ ತಳಸಮುದಾಯಗಳಿಗೆಲ್ಲಾ

ದೊರೆಯುತ್ತಿರುವುದು ಸಂವಿಧಾನಿಕ ವ್ಯವಸ್ಥೆಯ ಹಿರಿಮೆ ಎಂದೇ ತಿಳಿಯಬಹುದು. ಆದರೆ ಪೂರ್ವದಿಂದಲೂ ಸಾಮಾಜಿಕ ಬದುಕಿನಲ್ಲಿ ತನ್ನ ಕಬಂಧಬಾಹುವಿನ ಹಿಡಿತವನ್ನು ಹೊಂದಿದ ಯಜಮಾನಶಾಹಿ ಮತ್ತು ಊಳಿಗಮಾನ್ಯ ಶಾಹಿ ಹಾಗೂ ಬಂಡವಾಳ ಶಾಹಿಯಂತಹ ಅನಿಷ್ಟಗಳು ಇಂದಿಗೂ ಸಾಮಾಜಿಕ ಬದುಕಿನ ಮೇಲೆ ತಮ್ಮ ಕರಿನೆರಳನ್ನು ಚಲ್ಲುತ್ತಲೇ ಸಾಗಿವೆ. ಅಂಥವುಗಳ ಕರಿನೆರಳು ಸಹ ಸಾಮಾನ್ಯ ಜನರ ಬಳಿ ಸುಳಿಯದಂತೆ ನಿಯಂತ್ರಿಸುತ್ತಿರುವ ಶಕ್ತಿ ಮಾತ್ರ ಮೀಸಲಾತಿ ಎಂದರೆ ಸುಳ್ಳಾಗಲಾರದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂತಹ ಯಜಮಾನಶಾಹಿ ಯಂತಹ ಶಕ್ತಿಗಳು ಇಂದು ಭೌತಿಕವಾಗಿ ತಳಸಮುದಾಯಗಳಿಂದ ದೂರ ಸರಿದಂತೆ ತೋರಿದರೂ ಸಹ ಆಂತರಿಕವಾಗಿ ಇವು ತಳಸಮುದಾಯಗಳ ಮೇಲೆ ಸವಾರಿ ಮಾಡುತ್ತಲೇ ಇವೆ. ಪ್ರಭುತ್ವವನ್ನೇ ತಮ್ಮ ಹಿಡಿತದಲ್ಲಿರಿಸಿಕೊಂಡಿರುವ ಈ ಶಕ್ತಿಗಳು ದಲಿತ ಸಮುದಾಯಕ್ಕೆ ಅದರಲ್ಲೂ ಮಹಿಳೆಯರಿಗೆ ಸಾಂಪ್ರದಾಯಿಕ ದಾಸ್ಯದಡಿಯಲ್ಲಿ ಇಂದಿಗೂ ತಮ್ಮ ಗುಲಾಮರಾಗಿ ಮಾಡಿಕೊಳ್ಳುವಂತಹ ಕುತಂತ್ರ ಅನೂಚಾನವಾಗಿ ನಡೆಯುತ್ತಲೇ ಇದೆ ಎಂಬುದನ್ನು ಗಮನಿಸಬಹುದು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಾಮಾಜಿಕ ಜೀವನದಿಂದ ದೂರವುಳಿದು ಸದಾ ಶೋಷಣೆ, ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರಗಳಿಗೆ ಬಲಿಯಾಗಿರುವ ದಲಿತ ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಯಂತೂ ಅತ್ಯಂತ ನಿರಾಶಾದಾಯಕವಾಗಿದೆ. ಜಾತಿ ಹಾಗೂ ಲಿಂಗ ತಾರತಮ್ಯಗಳಿಂದಾಗಿ ಮಹಿಳೆ ತೀರಾ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಲೇ ಬಂದಿದ್ದಾಳೆ. ಇಂತಹ ಮಹಿಳೆಯ ವರ್ತಮಾನದ ರಾಜಕೀಯ ಸ್ಥಿತಿಯನ್ನು, ಆಕೆಯ ಒತ್ತಡ, ತಲ್ಲಣಗಳನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ರಾಜಕಾರಣವೆಂಬುದು ಕೇವಲ ಮೇಲ್ವರ್ಗ ಅದರಲ್ಲೂ ಪುರುಷಶಾಹಿಯಾಗಿಯೇ ಉಳಿದಿರುವುದನ್ನು ಕಾಣಬಹುದು. ರಾಜಕಾರಣದಲ್ಲಿ ಮಹಿಳೆಯ ಸಹಭಾಗಿತ್ವ ಇರುವುದಾದರೂ ಅದು ಕೇವಲ ಪುರುಷವರ್ಗದ ನಿರ್ದೇಶನದಂತೆ ಮಾತ್ರ ನಡೆಯುತ್ತದೆ. ಪೂರ್ವಗ್ರಹಗಳೇ ಅವಳ ಸಕ್ರಿಯ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ವಿವಿಧ ಬಗೆಯಲ್ಲಿ ತೊಡಕಾಗಿ ಪರಿಣಮಿಸಿದೆ. ಅಖಂಡ ಸಾಮಾಜಿಕ ವ್ಯವಸ್ಥೆಯ ಅಧಿಪತಿಯಾಗಿರುವ ಪುರುಷನು ತನ್ನ ಉಳಿವಿಗಾಗಿಯೇ ಧರ್ಮ, ಕಾನೂನು, ಶಾಸ್ತ್ರಗಳನ್ನು ತುಂಬಾ ಜಾಣತನದಿಂದ ಬಳಸಿಕೊಂಡಿರುವುದನ್ನು ಇತಿಹಾಸ ದುದ್ದಕ್ಕೂ ಗಮನಿಸಬಹುದಾಗಿದೆ. ಆ ಕಾರಣದಿಂದಲೇ ಮಹಿಳೆ ಗೃಹಬಂಧಿಯಾಗಿರುವುದು. ಅಡುಗೆಯ ಮನೆಯೇ ಅವಳಿಗೆ ಸೂಕ್ತ ಜಾಗ, ಅದರಾಚೆಗೆ ಅವಳು ಯಾವುದೇ ಲೋಕದ ಕಲ್ಪನೆಯನ್ನು ಮಾಡಿಕೊಳ್ಳಬಾರದೆಂಬ ನಿಯಮಗಳು ಜಾರಿಯಲ್ಲಿರುವವು. ಹೀಗೆ ಮೂಲೆಗುಂಪಾದ ಮಹಿಳಾ ಸಮುದಾಯದಿಂದ ಮಾನವ ಸಂಪನ್ಮೂಲದಲ್ಲಿ ತುಂಬಾ ದೊಡ್ಡ ನಷ್ಟವಾಗಿರುವುದನ್ನು ಅರ್ಥಶಾಸ್ತ್ರಜ್ಞರೇ

ಒಪ್ಪಿಕೊಳ್ಳುತ್ತಾರೆ. ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಭಾಗವಹಿಸುವಿಕೆಯಲ್ಲಿ ಮಹಿಳೆಯನ್ನು ಹೊರಗಿಟ್ಟು ನೋಡಲು ಸಾಧ್ಯವೇ ಇಲ್ಲ.

ಆದ್ದರಿಂದಲೇ "ಅಭಿವೃದ್ಧಿಯ ಗತಿಶೀಲತೆಯನ್ನು ನಾವು ಒಂದು ವಿಮರ್ಶಾತ್ಮಕವಾದ ನೆಲೆಗಟ್ಟಿನಲ್ಲಿ ಲಿಂಗ ನಿರಪೇಕ್ಷೆ, ಲಿಂಗ ಸಮಾನತೆ ತತ್ವದಡಿಯಲ್ಲಿ ಪರಿಭಾವಿಸಿಕೊಳ್ಳಬೇಕಾಗಿದೆ. ಅಭಿವೃದ್ಧಿಯ ಫಲಗಳು ಲಿಂಗಬೇಧವೆನಿಸದೆ ಎಲ್ಲರಿಗೂ ಒದಗುತ್ತವೆ ಎಂಬ ನಂಬಿಕೆಯೂ ಅಭಿವೃದ್ಧಿಯ ಸಾಂಪ್ರದಾಯಿಕ ಸಂಕಥನದಲ್ಲಿ ಗಟ್ಟಿಯಾಗಿ ನೆಲೆಯೂರಿದೆ"[೯] ಇಂತಹ ನಂಬಿಕೆಗಳೇ ವ್ಯಾಪಕವಾಗಿ ನೆಲೆಯೂರಿರುವುದರಿಂದ ಅಭಿವೃದ್ಧಿಗೆ ಸಂಬಂಧಿಸಿದ ನೀತಿ ನಿರೂಪಣೆಗಳು ಸಹ ಲಿಂಗ ನಿರಪೇಕ್ಷ ನೆಲೆಯಲ್ಲಿಯೇ ರೂಪು ತಾಳುತ್ತಲೇ ಬಂದಿವೆ.

ಪ್ರಸ್ತುತ ಪರಿಶಿಷ್ಟ ವರ್ಗದ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಸಬಲೀಕರಣದ ಹಿನ್ನೆಲೆಯಲ್ಲಿ ಸಮಸ್ತ ಬುಡಕಟ್ಟು ಮಹಿಳೆಯರ ಸಮುದಾಯ ಚಟುವಟಿಕೆಯನ್ನು ಅರಿಯಲು ಇಲ್ಲಿ ಪ್ರಯತ್ನಿಸಲಾಗಿದೆ. ಶೋಷಣೆ, ತಿರಸ್ಕಾರ ಮುಂತಾದ ಅವಮಾನಗಳನ್ನು ಸಾಮಾಜಿಕ ಜೀವನದಲ್ಲಿ ಅನುಭವಿಸಬೇಕಾದ ಅನಿವಾರ್ಯತೆಗಳನ್ನು ಅರಿಯುವುದರೊಂದಿಗೆ ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ಸ್ವರೂಪವನ್ನು ಅರಿಯುವುದು ಇಂದಿನ ತುರ್ತಾಗಿದೆ. "ವೈಚಾರಿಕತೆಯ ನಡುಗೆಯಲ್ಲಿ ತಳಸಮುದಾಯಗಳ ಮಹಿಳೆಯರನ್ನು ಮೂರನೇ ದರ್ಜೆಯ ಪ್ರಜೆಯಾಗಿ ತೂಗುವ ಇತರ ಮುಂದುವರೆದ ಸಮುದಾಯದ ಮಹಿಳೆಯರು ತಮ್ಮಲ್ಲಿಯ ಏಣಿ ಶ್ರೇಣಿಗಳನ್ನು ಅರಿಯಬೇಕಾಗಿದೆ.

ತಳ ಸಮುದಾಯದ ಮಹಿಳೆಯರಿಗೆ ಸಂವಿಧಾನಿಕವಾಗಿ ಸ್ವಾತಂತ್ರ್ಯ, ಸಮಾನ ಅಧಿಕಾರ, ಅವಕಾಶಗಳನ್ನು ಕೊಟ್ಟಿದ್ದೇವೆ ಎಂದೇ ಬಹಿರಂಗವಾಗಿ ತೋರಿಸುತ್ತಾ ಬರಲಾಗುತ್ತಿದೆ. ವಾಸ್ತವವಾಗಿ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಪ್ರಸ್ತುತ ಸಂದರ್ಭದಲ್ಲಿಯೂ ಇದೆ ಎಂಬುದನ್ನು ಬಹುತೇಕ ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ, ಸಾಮಾಜಿಕ ಜೀವನದ ಮೂಲಕ ಅರಿಯ ಬಹುದಾಗಿದೆ. "ಕಾಗದದ ಮೇಲೆ ಕಾನೂನಿದ್ದರೆ ಸಮಾಜದ ಒಳಗೆ ಮನುವಿನ ಧೋರಣೆ ಜೀವಂತವಾಗಿದೆ."[೧೦] ಇಂತಹ ವಿಷಮ ಪರಿಸ್ಥಿತಿಯಲ್ಲಿ ತಳಸಮುದಾಯದ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರು ಸಂವಿಧಾನಿಕವಾಗಿ ರಾಜಕೀಯ ಅಧಿಕಾರವನ್ನು ಸಮಾನತೆಯ ನೆಲೆಯಲ್ಲಿ ಪಡೆದಿದ್ದರೂ ಸಹ ಅದನ್ನು ಚಲಾಯಿಸು ವಿಕೆಯಲ್ಲಿ ಆಕೆ ಅನುಭವಿಸುತ್ತಿರುವ ತೊಡಕುಗಳ ಕುರಿತು ಇಲ್ಲಿ ನೋಡಲಾಗಿದೆ.

೫.೧೧. ಪಾಲ್ಗೊಳ್ಳುವಿಕೆಯ ಸ್ವರೂಪ

ಪಾಲ್ಗೊಳ್ಳುವಿಕೆ ಎಂಬುದು ಸಾಮಾಜಿಕವಾಗಿ ಸಮಗ್ರ ಬದುಕನ್ನು ಅವರು ನಿರ್ವಹಿಸುವ ಕಾರ್ಯ, ಸಮಸ್ಯೆ, ಸವಾಲುಗಳನ್ನು ಅದು ಒಳಗೊಂಡಿರುತ್ತದೆ. ಸಾಮಾಜಿಕ ಜೀವನದಲ್ಲಿ ವ್ಯಕ್ತಿಗಳು ಅಳವಡಿಸಿಕೊಂಡಿರುವಂತಹ ಹಲವಾರು ಮಹತ್ವದ ಮೌಲ್ಯಗಳು ಇದರ ಮೂಲಕವೇ ಕಾಣಬಹು

ದಾಗಿದೆ. ಅಲ್ಲದೆ ವ್ಯವಸ್ಥೆಯಲ್ಲಿನ ವೈಪರೀತ್ಯಗಳನ್ನು, ಲಿಂಗಸಂಬಂಧಿ ಆಯಾಮಗಳನ್ನು ಅರಿಯುವುದು ಸಹ ಪ್ರತಿನಿಧೀಕರಣದಲ್ಲಿ ಬರುತ್ತದೆ. ಇಲ್ಲಿ ಸಮುದಾಯಗಳನ್ನು ಅರಿಯುವುದು ಸಹ ಪ್ರತಿನಿಧೀಕರಣ ಒಳಗೊಂಡಿದೆ."[೧೧] ರಾಜಕೀಯದಲ್ಲಿ ಬುಡಕಟ್ಟು ಮಹಿಳೆಯರ ಪಾಲ್ಗೊಳ್ಳುವಿಕೆ ಎನ್ನುವಾಗ ರಾಜಕೀಯ ಸಂಸ್ಥೆಯಲ್ಲಿನ ಹಲವು ಮಜಲುಗಳನ್ನು ಗಮನಿಸುವುದೇ ಆಗಿರುತ್ತದೆ.

ಉದಾಹರಣೆಗೆ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಒಬ್ಬ ಮಹಿಳೆ ರಾಷ್ಟ್ರಪತಿಯಾದಳು ಎಂದಾಕ್ಷಣ ಇಡೀ ಮಹಿಳಾ ಸಮುದಾಯವೇ ಅಲ್ಲಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಮುಖ್ಯವಾಗಿ ರಾಷ್ಟ್ರಪತಿಯಾದ ಮಹಿಳೆ ಯಾವ ಜಾತಿ, ವರ್ಗ, ಸಮುದಾಯಕ್ಕೆ ಸೇರಿದವಳು ಎಂಬುದೂ ಇಲ್ಲಿ ಮುಖ್ಯವಾಗುತ್ತದೆ. ಇಡೀ ರಾಷ್ಟ್ರವನ್ನು ಪ್ರತಿನಿಧಿಸುವ ಮಹಿಳಾ ರಾಷ್ಟ್ರಪತಿ ಇಡೀ ಮಹಿಳಾ ಸಮುದಾಯವನ್ನು ಪ್ರತಿನಿಧಿಸಲಾರಳು. ಈ ರೀತಿಯ ವೈರುಧ್ಯಗಳ ನಡುವೆ ರಾಜಕೀಯ ಕ್ಷೇತ್ರದಲ್ಲಿನ ಮಹಿಳೆಯರ ಸಹಭಾಗಿತ್ವದ ಕುರಿತ ಸಾಫಲ್ಯ, ವೈಫಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಅನಾದಿ ಕಾಲದಿಂದಲೂ ಮಹಿಳೆ ತುಳಿತಕ್ಕೆ ಒಳಗಾಗಿರುವುದಕ್ಕೆ ಹಲವಾರು ನಿದರ್ಶನಗಳು ಕಂಡುಬರುತ್ತವೆ. ಇಂದಿಗೂ ಅದರಲ್ಲಿ ಅಂತಹ ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ.

ಪುರುಷಶಾಹಿ ಹಿಡಿತದಿಂದ ಪಾರಾಗುವುದು ಅಷ್ಟು ಸುಲಭ ಸಾಧ್ಯದ ವಿಷಯವಲ್ಲ. ಇಂತಹ ಪುರುಷಶಾಹಿ ಹಿಡಿತದಲ್ಲಿ ಮಹಿಳೆಗೆ ರಾಜಕೀಯವು ಹತ್ತಿರದಲ್ಲಿರುವಂತೆ ಕಂಡರೂ ಅದು ಅವಳಿಂದ ಅನತಿ ದೂರದಲ್ಲಿಯೇ ಇರುತ್ತದೆ. ಸಾಮಾಜಿಕ ಕ್ಷೇತ್ರದ ಅತ್ಯುನ್ನತ ಸಂಸ್ಥೆಯಾಗಿರುವ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ರಾಜಕೀಯ ಪರಿಭಾಷೆಯನ್ನು ಅರಿಯುವ ಪ್ರಯತ್ನ ಸದ್ಯದ ತುರ್ತಾಗಿದೆ. ಮಹಿಳೆಯ ಸಾಮಾಜಿಕ ಜೀವನದಲ್ಲಿ ಬೀಡುಬಿಟ್ಟಿರುವ ಕೆಲವು ಸಾಮಾನ್ಯೀಕರಿಸಿದ ಸಂಗತಿಗಳು ಸದಾ ಅವಳನ್ನು ನಿಯಂತ್ರಿಸುತ್ತಲೇ ಇರುತ್ತವೆ. ವಾಸ್ತವವಾಗಿ ಸಮಾಜ ನಿಂತಿರುವುದೇ ಇಂತಹ ಮೌಲ್ಯಗಳ ಮೇಲೆ ಎಂದರೆ ತಪ್ಪಾಗಲಾರದು.

ಬುಡಕಟ್ಟು ಮಹಿಳೆ ದಲಿತ ಮಹಿಳೆಯಂತೆ ಸಮಾಜದ ಅತ್ಯಂತ ಕಟ್ಟಕಡೆಯ ಮಹಿಳೆಯಾಗಿ ನಿಲ್ಲುತ್ತಾಳೆ. ವೈಯಕ್ತಿಕ ಬದುಕಿನಲ್ಲಿ ಅಂತಹ ನಿರ್ಬಂಧಗಳು ಆಕೆಗಿಲ್ಲ ಎಂದು ಮೇಲ್ನೋಟಕ್ಕೆ ಎನಿಸಿದರೂ ಸಾಮಾಜಿಕ ಜೀವನದಲ್ಲಿ ಪ್ರತಿಯೊಂದು ಬಗೆಯಲ್ಲಿಯೂ ಅವಳು ನಿಯಂತ್ರಣ, ತುಳಿತ, ಅಲಕ್ಷ್ಯ, ತಿರಸ್ಕಾರಗಳಿಗೆ ಒಳಗಾಗುತ್ತಲೇ ಬಂದಿದ್ದಾಳೆ. ಸಾಮಾಜಿಕ ವ್ಯವಸ್ಥೆಯ ನಿಯಂತ್ರಕ ಶಕ್ತಿಗಳಾಗಿರುವ ಊಳಿಗಮಾನ್ಯಶಾಹಿ, ಪುರೋಹಿತಶಾಹಿ, ಹಾಗೂ ಬಂಡವಾಳಶಾಹಿ ಮತ್ತು ಯಜಮಾನ್ಯಶಾಹಿಗಳಂತಹ ಪ್ರಭುತ್ವಗಳು ಅವಳ ರಾಜಕಾರಣದ ಕುರಿತು ಹೊಂದಿರ ಬಹುದಾದ ಆಲೋಚನೆ ಕ್ರಮ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ರಾಜಕೀಯವಾಗಿ ಮೇಲ್ವರ್ಗದ ಮಹಿಳೆಯ ಪಾಲ್ಗೊಳ್ಳುವಿಕೆಗೂ ಮತ್ತು ತಳವರ್ಗದ ಮಹಿಳೆಯರ ಪಾಲ್ಗೊಳ್ಳುವಿಕೆಯ ನಡುವೆ ಇರುವ ಅಂತರ ಯಾವ ಬಗೆಯದು ಎಂಬುದನ್ನು ಈ ಮೂಲಕ ಅರಿಯಬಹುದು.

ಮಹಿಳೆಗೆ ರಾಜಕೀಯ ಹೊಸದೇನಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಗಾಂಧೀಜಿಯವರ ಕರೆಗೆ ಓಗೊಟ್ಟು ಎಷ್ಟೋ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ಮುನ್ನುಗ್ಗಿದ್ದರು. ಅದಕ್ಕೂ ಪೂರ್ವದಲ್ಲಿ ಝಾನ್ಸಿರಾಣಿ, ಕಿತ್ತೂರುರಾಣಿ ಚನ್ನಮ್ಮನಂಥವರು ರಾಜಕೀಯ ವ್ಯವಸ್ಥೆಯ ಮುಖ್ಯ ಸ್ಥಾನದಲ್ಲಿ ನಿಂತು ಆಡಳಿತ ನಡೆಸಿದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಸ್ವಾತಂತ್ರ್ಯ ನಂತರದ ಭಾರತದ ರಾಜಕೀಯ ಸ್ಥಿತಿ-ಗತಿಗಳೇ ಭಿನ್ನವಾದವುಗಳಾಗಿವೆ.

ಸ್ವಾತಂತ್ರ್ಯಾನಂತರ ನಡೆದ ರಾಜಕೀಯ ಸ್ಥಿತ್ಯಂತರಗಳು, ರಾಜಕೀಯ ಅನಿಶ್ಚಿತತೆ, ಸ್ವಾರ್ಥಗಳಿಂದಾಗಿ ಮಹಿಳೆ ಹಿಂದೂಡಲ್ಪಟ್ಟಳು. ಪುರುಷಶಾಹಿ ಸ್ವಾರ್ಥ ಇಲ್ಲಿ ತನ್ನ ಕಬಂಧ ಬಾಹುವನ್ನು ಚಾಚಿತು. ಹೆಣ್ಣು ರಾಜಕೀಯದಲ್ಲಿದ್ದೂ ಇಲ್ಲದಂತಹ ಸ್ಥಿತಿ ನಿರ್ಮಾಣಗೊಂಡಿತು. ಇಲ್ಲಿ ಮಹಿಳೆ ಅದರಲ್ಲೂ ತಳವರ್ಗದ ಮಹಿಳೆಯರು ಕೇವಲ ಮೀಸಲಾತಿ ಕಾರಣಕ್ಕಾಗಿ ರಾಜಕೀಯ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಬಲ್ಲವರಾದರೇ ಹೊರತು ಅದನ್ನು ಚಲಾಯಿಸುವ ಶಕ್ತಿಯನ್ನು ಅವರು ಪಡೆಯಲೇ ಇಲ್ಲ. ಇದಕ್ಕೆ ಉತ್ತಮ ನಿದರ್ಶನವೆಂದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಬುಡಕಟ್ಟು ಹಾಗೂ ಇತರ ತಳಸಮುದಾಯದ ಮಹಿಳೆಯರೇ ಉತ್ತಮ ಉದಾಹರಣೆ.

ಗ್ರಾಮ ಪಂಚಾಯಿತಿಯಲ್ಲಿ ಬುಡಕಟ್ಟು ಮಹಿಳೆಯರ ಪಾಲ್ಗೊಳ್ಳುವಿಕೆ

ಪಂಚಾಯತ್‌ರಾಜ್ ವ್ಯವಸ್ಥೆಯು ವಿಕೇಂದ್ರೀಕರಣದ ತಳಹದಿಯ ಮೇಲೆ ರಚನೆಗೊಂಡ ವ್ಯವಸ್ಥೆಯಾಗಿದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪುರುಷನಿಗಿರುವಷ್ಟೇ ಸಮಾನ ಹಕ್ಕು ಮಹಿಳೆಗೂ ಇದೆ. ಜಾತ್ಯಾತೀತ ರಾಷ್ಟ್ರವಾದ ಇದರಲ್ಲಿ ಮೇಲ್ಜಾತಿಗಿರುವಷ್ಟೇ ಹಕ್ಕು ತಳಜಾತಿಗಳಿಗೂ ಇದೆ. ಪ್ರಜಾಪ್ರಭುತ್ವದ ಆಧಾರಸ್ತಂಭವೇ ಸಮಾನತೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಯ ನಿರಾಕರಣೆ ಎಂದರೆ ಅದು ಕ್ರಾಂತಿಗೆ ಎಡೆಮಾಡಿಕೊಡುತ್ತದೆ ಎಂಬ ಅರಿಸ್ಟಾಟಲನ ಮಾತು ಇಲ್ಲಿ ತುಂಬಾ ಔಚಿತ್ಯಪೂರ್ಣವಾದುದಾಗಿದೆ. ಆದುದರಿಂದಲೇ ಇಂದಿನ ಎಲ್ಲಾ ಜನತಂತ್ರ ರಾಷ್ಟ್ರಗಳು ಪ್ರತಿಯೊಬ್ಬ ಪ್ರಜೆಗೂ ರಾಜಕೀಯ ಹಕ್ಕುಗಳನ್ನು ನೀಡಿರುವುದು. ಚುನಾವಣೆಗೆ ಸ್ಪರ್ಧಿಸುವುದು, ಮತ ಚಲಾಯಿಸುವುದು, ಸರ್ಕಾರದ ಪ್ರತಿಯೊಂದು ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಹಾಗೂ ಆಡಳಿತ ಮತ್ತು ನ್ಯಾಯಾಂಗದಂತಹ ಸ್ಥಾನಗಳಿಗೆ ನೇಮಕಗೊಳ್ಳಬಹುದಾದ ಹಕ್ಕುಗಳನ್ನು ರಾಜಕೀಯ ಹಕ್ಕುಗಳೆಂದು ಪರಿಭಾವಿಸಬಹುದಾಗಿದೆ. ಈ ಹಕ್ಕುಗಳನ್ನು ಪಡೆಯಲು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಸರಿಸಮಾನವಾದ ಹಕ್ಕಿದೆ ಎಂಬುದನ್ನು ಸಂವಿಧಾನ ತಿಳಿಸುತ್ತದೆ.

ಬುಡಕಟ್ಟು ಮಹಿಳೆ ಕೇವಲ ತಾನಾಯಿತು. ತನ್ನ ಕುಟುಂಬವಾಯಿತು, ತಾನು ನಂಬಿದ ಕಾಡಾಯಿತು ಎಂದೇ ಜೀವನ ಸಾಗಿಸಿದವಳು. ಅವಳಿಗೆ ರಾಜಕೀಯ ಮತ್ತು ರಾಜಕಾರಣ ಎಂಬ ಪರಿಭಾಷೆಗಳೇ ತುಂಬಾ ಹೊಸದಾದವುಗಳು. ಸ್ವಾತಂತ್ರ್ಯ ಸಂಗ್ರಾಮ ಎಂಬ ಪರಿಭಾಷೆಯೇ ಅವಳಿಗೆ ಅರ್ಥವಾಗಿಲ್ಲವೆನಿಸುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಹಿಳೆ

ಎಂದರೆ ಅದು ಕೇವಲ ಮೇಲ್ಜಾತಿ/ಮೇಲ್ವರ್ಗದ ಮಹಿಳೆ ಎಂದೇ ಅರ್ಥೈಸಿಕೊಳ್ಳ ಬೇಕಾಗಿದೆ. ಮಹಿಳೆ ಎನ್ನುವವಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಉದಾಹರಣೆಗಳಿದ್ದರೂ ಅದು ಬೆರಳೆಣಿಕೆಯಷ್ಟು ಮಾತ್ರ, ಏಕೆಂದರೆ ಮಹಿಳೆಯರು ನೇರವಾಗಿ ಭಾಗವಹಿಸುವಿಕೆಯನ್ನು ಪುರುಷಪ್ರಧಾನ ಸಮಾಜ ನಿರಾಕರಿಸುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಅಂದು ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರ ಬಿಂದು ಹಾಗೂ ನಾಯಕರಾಗಿದ್ದ ಮಹಾತ್ಮ ಗಾಂಧಿಯವರು ಸಹ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಕುರಿತಾಗಿ ಇತ್ಯಾತ್ಮಕವಾದ ಭಾವನೆಯನ್ನೇ ಹೊಂದಿದ್ದರು. ಸ್ವಾತಂತ್ರ್ಯ ಹೋರಾಟದ ತಾತ್ವಿಕತೆಯನ್ನು ಅವರು ರೂಪಿಸಿಕೊಳ್ಳಲು ಮಹಿಳೆಯ ಸ್ತ್ರೀಯಾತ್ಮಕ ಪಾತ್ರದ ಆದರ್ಶವನ್ನೇ ಯಶಸ್ವಿಯಾಗಿ ಬಳಸಿಕೊಂಡರು. ಅಹಿಂಸೆಯು ಸತ್ಯಾಗ್ರಹದ ಪ್ರಬಲ ಅಸ್ತ್ರವೆಂದು ತಿಳಿಸುತ್ತಿದ್ದ ಗಾಂಧಿಯವರು ಅಹಿಂಸೆ ಎಂದರೆ ಕೊನೆ ಇಲ್ಲದ ತ್ಯಾಗ, ಕಷ್ಟ ಸಹಿಷ್ಣುತೆ, ಪ್ರೇಮ ಎಂದೇ ಪರಿಭಾವಿಸಿಕೊಂಡಿದ್ದರು. ಈ ಬಗೆಯ ಇತ್ಯಾತ್ಮಕವಾದ ಹೆಣ್ಣಿನ ಕುರಿತಾದ ಧೋರಣೆಗಳನ್ನು ಹೊಂದಿದ ಗಾಂಧಿಯವರು ಪುರುಷಶಾಹಿ ಆಲೋಚನಾ ಕ್ರಮಕ್ಕೆ ಹೊರತಾದವ ರಾಗಿರಲಿಲ್ಲ. ಈ ರೀತಿಯ ಪುರುಷಶಾಹಿ ಧೋರಣೆಗಳಿಂದಾಗಿ ಮಹಿಳೆಯು ರಾಜಕೀಯವಾಗಿ ಗೌಣವಾಗಿಯೇ ಉಳಿಯಬೇಕಾದ ಸ್ಥಿತಿ ನಿರ್ಮಾಣವಾಯಿತು.

ಇಂಡಿಯಾದ ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳು ತಮ್ಮ ಪಕ್ಷ ಭೇದ ಮರೆತು ಮಹಿಳಾ ರಾಜಕಾರಣ, ರಾಜಕೀಯ ಸಮಾನತೆ, ಮೀಸಲಾತಿ ಕುರಿತಾಗಿ ತುಂಬಾ ಉದಾರವಾದಿ ಎಂಬಂಥೆ ವರ್ತಿಸುತ್ತವೆಯಾದರೂ, ತಳ ಸಮುದಾಯದ ಮಹಿಳೆಯರ ಕುರಿತಾಗಿ ಯಾವೊಂದು ಪಕ್ಷವೂ ಚಿಂತಿಸದಿರುವುದನ್ನು ನೋಡಿದರೆ ಪುರುಷ ರಾಜಕಾರಣಿಗಳ ಮತ್ತು ಬಂಡವಾಳಶಾಹಿಗಳ ಧೋರಣೆಯಲ್ಲಿ ಅಡಗಿರಬಹುದಾದ ಅಂತರಂಗದ ಮನಸ್ಸು ಏನಿದ್ದಿತು ಎಂಬುದನ್ನು ಸುಲಭವಾಗಿ ಅರಿಯಬಹುದಾಗಿದೆ. ಸಂವಿಧಾನವಾಗಿ ಸಮಾನತೆಯ ತತ್ವ ಸಾರುವ ರಾಷ್ಟ್ರದಲ್ಲಿ ಅಂಚಿನ ಸಮುದಾಯಗಳ ಮಹಿಳೆಗೆ ಒದಗಿರಬಹುದಾದ ದುಸ್ಥಿತಿ ಇದು. ತಳ ಸಮುದಾಯದ ಮಹಿಳೆಗೆ ಮೀಸಲಾತಿ ಅಡಿಯಲ್ಲಿ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವ ಅವಕಾಶ ವಿದೆಯಾದರು ಅಲ್ಲಿ ಅವಳನ್ನು ಕೇವಲ ಓಟ್‌ಬ್ಯಾಂಕ್ ಆಗಿ ನೋಡುವ ವ್ಯವಸ್ಥಿತವಾದ ರಾಜಕೀಯ ಸಂಚಿದೆ. ಕೆಲವು ಪಕ್ಷಗಳಲ್ಲಿ ರಾಜಕೀಯವಾಗಿ ಬುಡಕಟ್ಟು ಮಹಿಳೆ ಸಬಲಳು ಎಂಬಂತೆ ತೋರಿಬರುವುದಾದರೂ ಅದು ತುಂಬಾ ಹುಸಿಯಾದುದು ಎಂಬುದನ್ನು ಅರಿಯದಷ್ಟು ಮುಗ್ಧತೆ ಬುಡಕಟ್ಟು ಮಹಿಳೆಯರಲ್ಲಿರುವುದನ್ನು ಕಾಣಬಹುದಾಗಿದೆ.

ಪುರುಷಶಾಹಿಯ ಪ್ರಮುಖ ಆಶಯವೆಂದರೆ ತನ್ನ ಅಧೀನದಲ್ಲಿರುವ ಅಧಿಕಾರವನ್ನು ನಿರಂತರವಾಗಿ ಮುನ್ನಡೆಸುತ್ತಾ ಅಧಿಕಾರದಲ್ಲಿರುವವರನ್ನು ನಿರಂತರವಾಗಿ ನಿಯಂತ್ರಿಸುವುದೇ ಆಗಿರುತ್ತದೆ. ಈ ಪುರುಷಶಾಹಿ ಎಂಬುದು ಎಲ್ಲಾ ಕಡೆಯೂ ಏಕ ಸ್ವರೂಪದಲ್ಲಿರುವುದಿಲ್ಲ. ಇದು ಜಾತಿ, ಧರ್ಮ, ಪ್ರದೇಶ, ಮುಂತಾದವುಗಳ ಮೇಲೆ ಬೇರೆ ಬೇರೆ ರೀತಿಯಾಗಿ ತನ್ನ ಪ್ರಭಾವವನ್ನು ನೇರವಾಗಿ

ಇಲ್ಲವೆ ಪರೋಕ್ಷವಾಗಿ ವ್ಯಕ್ತಪಡಿಸುತ್ತಲೇ ಇರುತ್ತದೆ. ಪುರುಷಶಾಹಿ ವ್ಯವಸ್ಥೆಯಲ್ಲಿ ಪುರುಷರು ತುಳಿಯುವವರಾದರೆ ಮಹಿಳೆಯರು ತುಳಿಸಿಕೊಳ್ಳುವವರಾಗಿರುತ್ತಾರೆ. ಅಧಿಕಾರದಲ್ಲಿ ಯಾರೇ ಇರಲಿ ಅದನ್ನು ನಿಯಂತ್ರಿಸುವ ಶಕ್ತಿ ಮಾತ್ರ ಪುರುಷಶಾಹಿಯಾಗಿರುತ್ತದೆ.

ಭಾರತೀಯ ಸಮಾಜದಲ್ಲಿ ಜಾತಿ ಎಂಬುದು ಸಮಾಜದ ಅತ್ಯಂತ ಪ್ರಭಾವಶಾಲಿ ನಿಯಂತ್ರಕ ಶಕ್ತಿಯಾಗಿದೆ. ಜಾತಿ ವ್ಯವಸ್ಥೆಯ ಏಣಿ ಶ್ರೇಣಿಗಳೇ ಇಡೀ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಈ ಜಾತಿ ವ್ಯವಸ್ಥಿತಯೊಂದಿಗೆ ಊಳಿಗಮಾನ್ಯ ವ್ಯವಸ್ಥೆ, ಯಜಮಾನಶಾಹಿ ಮತ್ತು ಬಂಡವಾಳ ಶಾಹಿ ವ್ಯವಸ್ಥೆಗಳೂ ಕೈಜೋಡಿಸಿ ತಳ ಸಮುದಾಯದ ಜನಗಳನ್ನು ತಮ್ಮ ಇಷ್ಟಕ್ಕನುಸಾರವಾಗಿ ಬಳಸಿಕೊಳ್ಳುವುದನ್ನು ಕಾಣಬಹುದಾಗಿದೆ. ಮೀಸಲಾತಿಯ ಕಾರಣ ಅಧಿಕಾರವನ್ನು ತಳಸಮುದಾಯದ ಬುಡಕಟ್ಟು ಮಹಿಳೆಯರು ಪಡೆಯುವವರಾದರೂ ಅದನ್ನು ಸ್ವಾತಂತ್ರ್ಯವಾಗಿ ಚಲಾಯಿಸದ ಅಸಾಹಾಯಕ ಸ್ಥಿತಿಯಲ್ಲಿ ತಳ ಸಮುದಾಯದ ಮಹಿಳೆಯರು ಇರುವುದನ್ನು ಕಾಣಬಹುದಾಗಿದೆ. ಭಯ, ಮತ್ತು ಅವಮಾನಗಳ ಅಂಜಿಕೆಯಲ್ಲಿಯೇ ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸಿಕೊಳ್ಳಬೇಕಾದ ಅಸಾಹಾಯಕ ಸ್ಥಿತಿಯಲ್ಲಿ ತಳಸಮುದಾಯದ ಮಹಿಳೆ ಕಾಲ ಕಳೆಯಬೇಕಾಗುತ್ತದೆ.

೧೯೯೩ರ ಪಂಚಾಯತ್‌ರಾಜ್ ಕಾಯ್ದೆಯನ್ವಯ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾತ್ರವಲ್ಲದೆ ಗ್ರಾಮೀಣ ಮಟ್ಟದಲ್ಲೂ ಮಹಿಳೆ ರಾಜಕೀಯ ಪ್ರವೇಶಿಸುವಂತಾಯಿತು. ಇದಕ್ಕೆ ಜೊತೆಯಾಗಿ ಮಹಿಳಾ ಮೀಸಲಾತಿ ಕಾಯ್ದೆ ಸಹಕರಿಸಿತು. ಹೀಗಾಗಿ ಪ್ರತಿ ಗ್ರಾಮದಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಅನಿವಾರ್ಯವಾಗಿಯಂಬಂತೆ ರಾಜಕೀಯ ಪ್ರವೇಶಿಸುವಂತಾಯಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತಳ ಸಮುದಾಯಕ ಮಹಿಳೆಯರು ಭೌತಿಕವಾಗಿ ರಾಜಕೀಯ ಸ್ಥಾನಗಳನ್ನು ಪಡೆದವರಾದರೇ ಹೊರತು ರಾಜಕೀಯ ಅಧಿಕಾರ ಚಲಾಯಿಸುವಲ್ಲಿ ಪರಾಧೀನತೆಯನ್ನು ಹೊಂದಿದರು. ಯಾಕೆಂದರೆ ಪುರುಷಶಾಹಿ ವ್ಯವಸ್ಥೆ ಅದರಲ್ಲೂ ಮೇಲ್ಜಾತಿಗಳು ತಳ ಸಮುದಾಯದ ಮಹಿಳೆಯರನ್ನು, ಅವರ ಅಧಿಕಾರ ಚಲಾವಣೆಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ಪಂಚಾಯತ್‌ರಾಜ್ ವ್ಯವಸ್ಥೆಯ ಮುಖ್ಯ ಅಂಗವಾದ ಗ್ರಾಮ ಪಂಚಾಯಿತಿಗಳಲ್ಲಿ ಯಾವ ರೀತಿ ಪಾಲ್ಗೊಳ್ಳುತ್ತಾರೆ ಮತ್ತು ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಈ ಕೆಳಗಿನಂತೆ ಗುರುತಿಸಲು ಪ್ರಯತ್ನಿಸಲಾಗಿದೆ.

ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಮುನ್ನುಗ್ಗುವ ಮಹಿಳೆಯರಲ್ಲಿ ಅದರಲ್ಲೂ ತಳ ಸಮುದಾಯದ ಮಹಿಳೆಯರಲ್ಲಿ ಕಂಡುಬರುವ ಅಂಶವೆಂದರೆ ಮಧ್ಯವಯಸ್ಕ ಮಹಿಳೆಯರೇ ಹೆಚ್ಚಾಗಿ ರಾಜಕೀಯ ರಂಗಕ್ಕೆ ಪ್ರವೇಶ ಪಡೆಯುತ್ತಾರೆ. ಪ್ರಾಯಶಃ ಹರಯದ ಹೆಣ್ಣಿಗೆ ಕೌಟುಂಬಿಕ

ಹಾಗೂ ಸಾಮಾಜಿಕವಾದ ಕೆಲವು ನಿರ್ಬಂಧಗಳು ಇರುತ್ತವೆ. ಮುಖ್ಯವಾಗಿ ಲೈಂಗಿಕ ಅಪಪ್ರಿತ್ರತೆ ಎಲ್ಲಿ ಉಂಟಾಗುತ್ತದೋ ಎಂಬ ಭಯವೂ ಸಹ ಹರಯದ ಮಹಿಳೆಯರು ರಾಜಕೀಯ ರಂಗಕ್ಕೆ ಬಾರದಂತೆ ತಡೆಯುವಲ್ಲಿ ಕಾರಣವಾಗಿರಬಹುದಾದ ಅಂಶಗಳಲ್ಲಿ ಒಂದೆನಿಸುತ್ತದೆ. ಯಾಕೆಂದರೆ ಬಹುತೇಕವಾಗಿ ರಾಜಕೀಯ ರಂಗದಲ್ಲಿ ವಿಜೃಂಭಿಸುವ ಪುರುಷ ವರ್ಗದ ಕುರಿತು ಸಾಮಾಜಿಕವಾಗಿ ಸದಾಭಿಪ್ರಾಯ ಇರದೇ ಇರುವುದೇ ಇದಕ್ಕೆ ಕಾರಣವಿರ ಬಹುದು ಹಾಗೂ ತಮ್ಮ ಮನೆಯ ಹೆಣ್ಣು ಮತ್ತೊಬ್ಬನ ಸ್ವತ್ತಾದೀತೆಂಬ ಪುರುಷಶಾಹಿ ಸ್ವಾರ್ಥವೂ ಇದಕ್ಕೆ ಕಾರಣವಾಗಿರಬಹುದು. ಹೀಗಾಗಿ ಯೌವ್ವನ ಕಳೆದು ಮಧ್ಯ ವಯಸ್ಸಿಗೆ ಬಂದ ಹೆಣ್ಣನ್ನು ತಮ್ಮ ಕಣ್ಗಾವಲಿನ ನೆರಳಿನಲ್ಲಿಯೇ ರಾಜಕೀಯ ರಂಗಕ್ಕೆ ಪ್ರವೇಶಿಸುವಂತೆ ಕುಟುಂಬದ ಪುರುಷರು ಆಸಕ್ತಿ ತೋರಿಸುವುದನ್ನು ಕಾಣಬಹುದು. ಯಾಕೆಂದರೆ ಪರಿಶಿಷ್ಟ ಪಂಗಡದ ಯಾವೊಬ್ಬ ಮಹಿಳೆಯೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸ್ವ-ಹಿತಾಸಕ್ತಿಯಿಂದ ರಾಜಕೀಯಕ್ಕೆ ಪ್ರವೇಶ ಪಡೆದಿಲ್ಲ. ಬಹುತೇಕ ಮಹಿಳೆಯರಿಗೆ ರಾಜಕೀಯ ರಂಗವೇ ಹೊಸತು. ಅವರನ್ನು ರಾಜಕೀಯ ರಂಗಕ್ಕೆ ನೂಕಲ್ಪಟ್ಟ ಕೈಗಳೇ ಅವರ ಅಧಿಕಾರದ ಸೂತ್ರವನ್ನು ಚಲಾಯಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

ರಾಜಕೀಯದಲ್ಲಿ (ಪಂಚಾಯತ್ ರಾಜ್‌ವ್ಯವಸ್ಥೆಯಲ್ಲಿ) ಮಹಿಳೆಯರು, ಅದರಲ್ಲೂ ಪರಿಶಿಷ್ಟ ಪಂಗಡದ ಮಹಿಳೆಯರು ಪಾಲ್ಗೊಳ್ಳಲು ಜಾತಿ ಎಷ್ಟು ಮುಖ್ಯ ಕಾರಣವಾಗಿದೆಯೋ, ಅವರು ಸಕ್ರಿಯ ರಾಜಕೀಯದಿಂದ ದೂರವುಳಿಯಲು ಸಹ ಜಾತಿಯೇ ಕಾರಣವಾಗಿದೆ. ಭಾರತದ ರಾಜಕೀಯ ನಿಂತಿರುವುದೇ ಜಾತಿ ವ್ಯವಸ್ಥೆಯ ಮೇಲೆ. ಉದಾಹರಣೆಗೆ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಅನುಸೂಚಿತ ಪಟ್ಟಿಯಲ್ಲಿರುವ ಒಟ್ಟು ಸಮುದಾಯಗಳು ಐವತ್ತು, ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ಒಟ್ಟು ನಾಲ್ಕು ಅವು ಕ್ರಮವಾಗಿ ವಾಲ್ಮೀಕಿ, ಹಕ್ಕಿ ಪಿಕ್ಕಿ, ಡುಂಗ್ರಿ ಗರಾಸಿಯ, ಮೇಧಾ ಸಮುದಾಯಗಳಾಗಿವೆ. ವಾಲ್ಮೀಕಿ ಸಮುದಾಯದ ಹೊರತಾಗಿ ಮೂರು ಸಮುದಾಯಗಳು ಜನಸಂಖ್ಯಾ ದೃಷ್ಟಿಯಿಂದ ತುಂಬಾ ಅಲ್ಪ ಸಂಖ್ಯಾತವಾಗಿವೆ ಮತ್ತು ಅವುಗಳಿಗೆ ರಾಜಕೀಯ ಇಚ್ಛಾ ಶಕ್ತಿ ಇಲ್ಲವೆಂದೇ ಹೇಳಬಹುದು. ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ವಾಲ್ಮೀಕಿ ಸಮುದಾಯವಾಗಿದೆ. ಹೀಗಾಗಿ ಮೇಲ್ವರ್ಗದ ಜನ ತಮ್ಮೊಂದಿಗೆ ವಾಲ್ಮೀಕಿ ಸಮುದಾಯದವರೂ ಸಹ ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸುತ್ತಾರೆ. ಅದರಲ್ಲೂ ನಾಲ್ಕು ಗೋಡೆಗಳ ಮಧ್ಯ ಇರುವ ವಾಲ್ಮೀಕಿ ಸಮುದಾಯದ ಹೆಣ್ಣನ್ನು ಚುನಾವಣೆ ರಂಗಕ್ಕೆ ನೂಕುವುದಲ್ಲದೆ ಅವಳ ಗೆಲುವಿನ ಅಥವಾ ಸದಸ್ಯತ್ವದ ಕಾಲಾವಧಿಯ ಸಂಪೂರ್ಣ ಲಾಭವನ್ನು ಸಹ ಮೇಲ್ವರ್ಗದವರೇ ಮಾಡಿಕೊಳ್ಳುವ ಅಪಾಯವೇ ಹೆಚ್ಚು. ಉದಾಹರಣೆಗೆ ಕಳೆದ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಒಬ್ಬ ಮಹಿಳೆಯ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡವನು ಮೇಲ್ಜಾತಿಯ ವ್ಯಕ್ತಿಯೇ ಆಗಿದ್ದುದು ಕಂಡುಬಂದಿತು. ಕೇವಲ ಆತ ಅವಳ ಅಧ್ಯಕಗಿರಿಯ ಅಧಿಕಾರವನ್ನು ಮಾತ್ರ ದುರುಪ

ಯೋಗ ಪಡಿಸಿಕೊಳ್ಳಲಿಲ್ಲ, ಅವಳನ್ನು ಲೈಂಗಿಕವಾಗಿಯೂ ದುರುಪಯೋಗ ಪಡಿಸಿಕೊಂಡಿರುವುದು ತಿಳಿದುಬಂದಿತು. ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಮೂಲಕ ಅವಳ ಸಂಸಾರ ಒಡೆದುಹೋಗಲು ಈ ಮೇಲ್ಜಾತಿಯ ವ್ಯಕ್ತಿಯೇ ಕಾರಣವಾದುದು ಸತ್ಯ. ಬಹುತೇಕವಾಗಿ ಪರಿಶಿಷ್ಟ ಪಂಗಡದ ಜನ ತಮ್ಮವರಲ್ಲಿ ಒಬ್ಬ ಹೆಣ್ಣುಮಗಳು ಜಿಲ್ಲಾ ಪಂಚಾಯಿತಿ ಅಧ್ಯಕ್ಷಳಾದಳು ಎಂದು ಸಂಭ್ರಮಪಟ್ಟರೆ ಹೊರತು ಅವಳು ಬಿದ್ದ ಹಳ್ಳದಿಂದ ಮೇಲೆತ್ತುವ ಕನಿಷ್ಟ ಪ್ರಯತ್ನವನ್ನು ಮಾಡಲಿಲ್ಲ. ಇದು ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ ಬದುಕಿನ ಒಂದು ಉದಾಹರಣೆಯಷ್ಟೆ. ಇಂಥ ಎಷ್ಟೋ ಉದಾಹರಣೆಗಳು ಕರ್ನಾಟಕದಾದ್ಯಂತ ಮಾತ್ರವಲ್ಲ, ಭಾರತದಾದ್ಯಂತವೂ ಕಂಡುಬರುತ್ತವೆ.

ಅಕಸ್ಮಾತ್ ಅವಳು ರಾಜಕೀಯ ಬದುಕಿನಲ್ಲಿ ಮೇಲ್ಜಾತಿಯ ಪುರುಷಶಾಹಿಯನ್ನು ಧಿಕ್ಕರಿಸಿದ್ದರೆ ತನ್ನನ್ನು ಅಮುಕಿ ಹಾಕಿಬಿಡಬಹುದೆಂಬ ಹೆದರಿಕೆಯೂ ತನಗಿದ್ದುದಾಗಿ ಪರಿಶಿಷ್ಟ ಪಂಗಡದ ಮಹಿಳೆ ತಿಳಿಸಿದಳು.

ಪರಿಶಿಷ್ಟ ಪಂಗಡದ ಮಹಿಳೆ ಮುಖ್ಯವಾಗಿ ಎಲ್ಲಿ ತನಗೆ ಅಪಹಾಸ್ಯವಾಗುತ್ತದೋ ಇಲ್ಲವೇ ಮೇಲ್ಜಾತಿಗಳ ಬಹಿಷ್ಕಾರಕ್ಕೆ ತಾನು ಈಡಾಗಬೇಕಾಗುತ್ತದೋ ಎಂಬ ಭಯದಿಂದಾಗಿಯೇ ಮುಕ್ತವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವ ಕಾರಣಗಳಲ್ಲಿ ಒಂದು ಎಂದು ಭಾವಿಸಲಾಗಿದೆ.

ಭಾರತೀಯ ಸಮಾಜದಲ್ಲಿ ಪುರುಷಶಾಹಿ ಎಲ್ಲಾ ರಂಗದಲ್ಲಿಯೂ ತನ್ನ ಹಿಡಿತವನ್ನು ಸಾಧಿಸಿದೆ. ಅದರಲ್ಲೂ ರಾಜಕೀಯ ರಂಗದಂತಹ ಬಲಿಷ್ಟ ರಂಗದಲ್ಲಿ ಮೇಲ್ಜಾತಿಗಳ ಹಿಡಿತದಷ್ಟೇ ಮುಖ್ಯವಾಗಿ ಹಿಡಿತ ಸಾಧಿಸಿರುವುದು ಪುರುಷಶಾಹಿ ಎಂದರೆ ತಪ್ಪಾಗಲಾರದು. ಪರಿಶಿಷ್ಟ ಪಂಗಡದ ಮಹಿಳೆಯರು ರಾಜಕೀಯವಾಗಿ ಪಾಲ್ಗೊಳ್ಳಲು ಒಂದು ಕಡೆಯಿಂದ ಮೇಲ್ಜಾತಿಗಳು ಅಡಚಣೆ ಉಂಟು ಮಾಡಿದರೆ ಮತ್ತೊಂದು ಕಡೆಯಿಂದ ಪುರುಷಶಾಹಿಯ ಕಾಲ್ತೊಡಕು ಇದ್ದೇ ಇದೆ. ಪುರುಷಶಾಹಿ ಎಂಬುದು ಕೇವಲ ಇಂಥಾದ್ದೇ ಆಕಾರದಲ್ಲಿರಬೇಕೆಂದು ನಿಯಮವೇನೂ ಇಲ್ಲ. ಅದು ಗಂಡನ ರೂಪದಲ್ಲಿ, ಅಣ್ಣ, ಅಪ್ಪ, ತಮ್ಮ, ಕೊನೆಗೆ ಮಗನ ರೂಪದಲ್ಲಿಯೂ ಪ್ರಕಟವಾಗುವ ಸಾಧ್ಯತೆ ಇರುತ್ತದೆ. ಇದರಲ್ಲಿ ಯಾರೂ ಅಡ್ಡಿ ಬಾರದೆ ಇದ್ದರೂ ಅಧಿಕಾರವರ್ಗದಲ್ಲಿರುವ ಪುರುಷರು ಅವಳ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಅಡ್ಡಿ ಉಂಟು ಮಾಡುವ ಸಾಧ್ಯತೆ ಇದೆ. ಪಂಚಾಯತಿಯ ಚುನಾಯಿತ ಮಹಿಳೆಯರ ಗಂಡಂದಿರಿಗೆ ಪಂಚಾಯತ್‌ನ ಕಾರ್ಯಕಾರಿ ಸಭೆಗಳಲ್ಲಿ ಪಾಲ್ಗೊಳ್ಳುವ ಅವಕಾಶವಿಲ್ಲ ಎಂದು ಸ್ಥಳೀಯ ಕಾರ್ಯದರ್ಶಿಗಳು ಪ್ರಕಟಿಸಿದಾಗ ಸ್ವತಃ ಮಹಿಳೆಯರೆಲ್ಲರೂ ಸೇರಿ ಕಾರ್ಯದರ್ಶಿಯ ಮೇಲೆ ಹಕ್ಕುಚ್ಯುತಿಯನ್ನು ಮಂಡಿಸಿದ ಉದಾಹರಣೆ ಪಕ್ಕದ ಕೊಪ್ಪಳ ಜಿಲ್ಲೆಯ ಕಾರಟಗಿ ಎಂಬ ಗ್ರಾಮದಲ್ಲಿ ನಡೆದಿದೆ. ಅಂದರೆ ಇಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಮಹಿಳೆಯರು ತಮ್ಮಷ್ಟಕ್ಕೆ ತಾವೇ ಅಧಿಕಾರವನ್ನು ಚಲಾಯಿಸಲೂ ಸಹ ಪುರುಷಶಾಹಿಯ ನೆರವು ಅಗತ್ಯ ಎಂಬುದನ್ನು ಮಹಿಳೆಯರು ನೇರವಾಗಿಯೇ ಪ್ರಕಟಿಸಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಯರಿಗೆ ತಮ್ಮ ಅಧಿಕಾರದ ಮಿತಿಗಳು ಯಾವುವು, ತಮ್ಮ ಕರ್ತವ್ಯಗಳೇನು, ತಮ್ಮ ಕಾರ್ಯವ್ಯಾಪ್ತಿ ಎಷ್ಟು ಎಂಬುದರ ಕುರಿತು ಸರಿಯಾದ ತಿಳುವಳಿಕೆ ಇರದೇ ಇರುವುದು.

ಯಾರೇ ಒಬ್ಬ ಚುನಾಯಿತ ಸದಸ್ಯ ಮೊಟ್ಟ ಮೊದಲಿಗೆ ಅರಿಯಬೇಕಾದ ಮುಖ್ಯ ವಿಚಾರವೆಂದರೆ ಚುನಾಯಿತ ಸದಸ್ಯನಾಗಿ ತನ್ನ ಜವಾಬ್ದಾರಿಗಳೇನು ಎಂಬುದನ್ನು ಅರಿಯ ಬೇಕಾಗಿರುವುದು. ಅಕಸ್ಮಾತ್ ಚುನಾಯಿತ ಸದಸ್ಯನು ತನ್ನ ಜವಾಬ್ದಾರಿಯನ್ನು ಅರಿಯದೇ ಹೋದರೆ ಅವನ ಕಾಲಾವಧಿಯ ರಾಜಕೀಯ ಜೀವನದ ಪಾಲ್ಗೊಳ್ಳುವಿಕೆಯೇ ನಿರರ್ಥಕವಾಗಿ ಹೋಗಿಬಿಡುತ್ತದೆ. ಯಾರದೋ ಒತ್ತಾಯಕ್ಕೆ, ಒತ್ತಡಕ್ಕೆ ಒಳಗಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಸ್ಪರ್ಧಿಸಿ ಚುನಾಯಿತರಾದ ತರುವಾಯ ತಮ್ಮ ಜವಾಬ್ದಾರಿಗಳನ್ನು ಅರಿಯದೆ ಪರತಂತ್ರರಾಗಿ ಬಿಡುತ್ತಾರೆ. ಯಾಕೆಂದರೆ ಅವರಿಗೆ ತನ್ನ ಕರ್ತವ್ಯಗಳ ಅರಿವೇ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಸರ್ಕಾರವು ಪ್ರತಿ ಪಂಚಾಯತ್‌ರಾಜ್ ಸದಸ್ಯರಿಗೆ ಚುನಾಯಿತಗೊಂಡ ಪ್ರಾರಂಭದ ದಿಸೆಯಲ್ಲಿಯೇ ತಾಲೂಕುಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ತರಬೇತಿ ಕೊಡಿಸುತ್ತಿದೆ. ಆದರೆ ಸರ್ಕಾರದ ಇತರ ಯೋಜನೆಗಳಂತೆ ಈ ತರಬೇತಿಯೂ ಸಹ ಬಹುತೇಕ ನಿರರ್ಥಕ. ಯಾಕೆಂದರೆ ಕಾಟಚಾರಕ್ಕೆ ಎಂಬಂತೆ ತರಬೇತಿಗೆ ಹಾಜರಾಗುವ ಬಹುತೇಕ ಸದಸ್ಯರು ತರಬೇತಿ ಕೊಠಡಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಿಲ್ಲ. ನೆಪಕ್ಕೆಂಬಂತೆ ತರಬೇತಿಗೆ ಹೋಗುವ ಸದಸ್ಯರು ತರಬೇತಿಗೆ ಹಾಜರಾದಂತೆ ಮಾಡಿ ತರುವಾಯ ತಮ್ಮ ನಿತ್ಯದ ಜರೂರು ಕೆಲಸಗಳಿಗೆ ಹೊರಟು ಹೋಗುತ್ತಾರೆ. ಹೀಗಾಗಿ ತರಬೇತಿಯಲ್ಲಿ ಏನು ಕಲಿಯಬೇಕೋ ಅದನ್ನ ಕಲಿಯಲು ಸದಸ್ಯರಿಗೆ ಸಾಧ್ಯವಾಗುವುದಿಲ್ಲ. ಅಕಸ್ಮಾತ್ ಪರಿಶಿಷ್ಟ ಪಂಗಡದ ಮಹಿಳೆಯರು ತರಬೇತಿಯೊಳಗೆ ಸಂಪೂರ್ಣವಾಗಿ ತೊಡಗಿಸಿಕೊಂಡರೂ ಸಹ ಅವರ ಶಿಕ್ಷಣದ ಕೊರತೆಯಿಂದಾಗಿ ತರಬೇತಿಯ ತಳಬುಡವೇ ಅವರಿಗೆ ಅರ್ಥವಾಗುವುದಿಲ್ಲ. ಮುಖ್ಯವಾಗಿ ತರಬೇತಿಯಲ್ಲಿ ಕೊನೆಯ ದಿನ 'ನೀವು ತರಬೇತಿಯಲ್ಲಿ ಏನೇನು ಕಲಿತಿರಿ' ಎಂದು ಕೇಳಿದರೆ, 'ನಮಗೇನು ಗೊತ್ತು ಸ್ವಾಮಿ, ಅವರೆಲ್ಲ ಏನೋ ಹೇಳಿದರು, ನಾವು ಕೇಳಿದಿವಿ, ಅವ್ರೆಲ್ಲಾ ಹೇಳಿದಂಗೆ ನಾವು ನಡೆದುಕೊಳ್ಳಲು ಸಾಧ್ಯ ವಾಗುತ್ತದೆಯಾ?' ಎಂದು ಮರಳಿ ಪ್ರಶ್ನೆ ಮಾಡುತ್ತಾರೆ.

ಮೀಸಲಾತಿ ಸಿಗುತ್ತದೆ ಎಂಬುದೊಂದೇ ಕಾರಣಕ್ಕೆ ಅಧಿಕಾರ ಗ್ರಹಣ ಮಾಡಿಕೊಳ್ಳುತ್ತಿರುವ ತಳಸಮುದಾಯದ ಮಹಿಳೆ ಗ್ರಾಮೀಣ ಅಭಿವೃದ್ಧಿಯ ಕಾರ್ಯಗಳಲ್ಲಿ ಸಕ್ರಿಯವಾಗಿ ಮತ್ತು ಯಶಸ್ವಿಯಾಗಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ಅಧಿಕಾರ ಮತ್ತು ವ್ಯಾಪ್ತಿಗಳ ಕುರಿತಾಗಿ ಸಾಮಾನ್ಯ ಜ್ಞಾನವೇ ಆ ಮಹಿಳೆಗೆ ಇರದಿರುವುದರಿಂದ ಸಾಮಾನ್ಯವಾಗಿ ಅವಳು ಅಧಿಕಾರವನ್ನು ಸದುಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು

ಸಾಧ್ಯವಾಗುತ್ತಿಲ್ಲ. ನಾಮಮಾತ್ರಕ್ಕೆ ಪಂಚಾಯಿತಿ ಸದಸ್ಯೆ, ಅಧ್ಯಕ್ಷೆ, ಉಪಾಧ್ಯಕ್ಷೆಗಳಂತಹ ಸ್ಥಾನಗಳಲ್ಲಿ ಮುಂದುವರೆಯ ಬೇಕಾಗುತ್ತದೆ. ಪರಿಶಿಷ್ಟ ಬುಡಕಟ್ಟು ಮಹಿಳೆಯರ ಈ ರೀತಿಯ ಸಮಸ್ಯೆಯಿಂದ ಏನನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಇದರ ಹಿಂದೆ ಆಂತರಿಕವಾಗಿ ಹಲವಾರು ಕಾರಣಗಳೂ ಇವೆ. ಆದರೆ ಪರಿಶಿಷ್ಟ ಪಂಗಡದ ಮಹಿಳೆ ಅಭಿವೃದ್ಧಿಯ ಒಂದು ಘಟಕ ಎಂದು ಪರಿಭಾವಿಸಲು ಅವಳಿಗೆ ಇಂತಹ ಅಂಶಗಳ ಅರಿವಿರಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ನಡೆದಂತೆ ಮೇಲ್ನೋಟಕ್ಕೆ ಕಾಣುವುದಾದರೂ ಅವೆಲ್ಲವೂ ತೋರಿಕೆಯುವು ಎಂಬುದು ಮಾತ್ರ ಸತ್ಯ.

ಸ್ಥಳೀಯ ಸಂಸ್ಥೆಗಳಾಗಿರುವ ಪಂಚಾಯಿತಿಯಲ್ಲಿ ಇಂದಿಗೂ ಸಾಮಾಜಿಕ ಜೀವನದಲ್ಲಿ ಜೀವಂತವಾಗಿರುವ ಜಾತಿ ಪದ್ಧತಿಯಂತಹ ಅನಿಷ್ಠ ಪದ್ಧತಿಯಿಂದಾಗಿ ದಲಿತ ಹಾಗೂ ಬುಡಕಟ್ಟು ಮಹಿಳೆಯರು ತಮ್ಮ ಅಧಿಕಾರವಧಿಯಲ್ಲಿ ನೇರವಾಗಿ ಪಾಲ್ಗೊಳ್ಳಲು ತುಂಬಾ ಹಿಂಜರಿಯುತ್ತಾರೆ. ತಮ್ಮ ಅಧಿಕಾರ ಮೀರಿ ಅಹಂನಿಂದ ವರ್ತಿಸಲು ಮೇಲ್ವರ್ಗಗಳಿಗೆ ಸಾರ್ವಜನಿಕವಾಗಿಲ್ಲದಿದ್ದರೂ ಜಾತಿಯ ಕಾರಣದಿಂದ ಅವಕಾಶವಿದೆ. ಆದರೆ ಈ ಈತಿ ವರ್ತಿಸುವುದು ಮುಖ್ಯವಾಗಿ ಪರಿಶಿಷ್ಟ ಮಹಿಳೆಗೆ ಕಲ್ಪನೆಗಳೂ ನಿಲುಕದ ವಿಚಾರ. ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು ನಿರಂತರವಾಗಿ ಕುಟುಂಬದಿಂದ ಹಿಡಿದು ಇಡೀ ಸಮಾಜದಲ್ಲಿಯೇ ಹತ್ತು ಹಲವು ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳಿಂದ ಜರ್ಜಿತವಾಗಿದ್ದಾಳೆ. ಸಾಮಾಜಿಕ ಜೀವನದಲ್ಲಿ ಅತ್ಯಂತ ತಳಮಟ್ಟದಲ್ಲಿರುವ ದಲಿತ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರು ಜಾತಿಯ ಕೀಳರಿಮೆಯಿಂದಲೇ ಅಧಿಕಾರವನ್ನು ಧೈರ್ಯವಾಗಿ ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಂಶ ಮೇಲ್ನೋಟಕ್ಕೆ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ತಾಲೂಕಿನ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರತಿ ಪರಿಶಿಷ್ಟ ಪಂಗಡದ ಸದಸ್ಯೆಯರೂ ಇದೇ ಕೀಳರಿಮೆ ಭಾವನೆಯಿಂದ ಬಳಲುತ್ತಿರುವುದು ಕಂಡುಬರುತ್ತದೆ. ಮೇಲ್ನೋಟಕ್ಕೆ ತುಂಬಾ ಧೈರ್ಯಶಾಲಿಗಳು, ತಾವು ಅದೃಷ್ಟವಂತರಾದುದರಿಂದ ಸದಸ್ಯರಾಗಿದ್ದೇವೆ ಎಂಬ ಭಾವನೆ ಮುಖದ ಮೇಲೆ ಪ್ರಕಟಿಸಿದರೂ ಅವರ ಅಂತರಾಳಕ್ಕೆ ಹತ್ತಿರವಾದಂತೆಲ್ಲಾ ತಮ್ಮ ಆತಂಕ, ನೋವು, ಜಾತಿಯೆಂಬ ಅನಿಷ್ಟ ತಮ್ಮನ್ನು ನಿರಂತರವಾಗಿ ಕಾಡುತ್ತಿರುವುದಾಗಿ ತಿಳಿಸುತ್ತಾರೆ. ಈ ರೀತಿಯ ಭಾವನೆಯನ್ನು ಶೇಕಡ ೮೦ರಷ್ಟು ಪರಿಶಿಷ್ಟ ಪಂಗಡದ ಮಹಿಳೆಯರು ಪ್ರಕಟಿಸಿದುದನ್ನು ಕ್ಷೇತ್ರಕಾರ್ಯದಲ್ಲಿ ನೋಡಲಾಯಿತು.

ರಾಜಕೀಯ ಬದುಕಿನಲ್ಲಿ ಮೀಸಲಾತಿ ಅತೀ ಮುಖ್ಯವೆಂದು ಬಹುತೇಕ ತಳ ಸಮುದಾಯಗಳು ಅಪೇಕ್ಷೆ ಪಡುತ್ತದೆ. ಆದರೆ ಜಿಲ್ಲೆಯ ನಾಲ್ಕು ತಾಲೂಕುಗಳನ್ನೊಳಗೊಂಡಂತೆ ಬಹುತೇಕ ಪರಿಶಿಷ್ಟ ಪಂಗಡದ ಮಹಿಳೆಯರು ಮೀಸಲಾತಿ ಎಂಬುದು ಇರಲೇಬಾರದು, ಮೀಸಲಾತಿಯ ಕಾರಣಕ್ಕಾಗಿಯೇ ತಮಗೆ ಅಧಿಕಾರದ ಗದ್ದುಗೆ ದೊರೆತಿದೆಯಾದರೂ ತಾವು ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗದ

ಸ್ಥಿತಿಗೆ ಮೀಸಲಾತಿಯೇ ಕಾರಣವೆಂದು ತಿಳಿಸುತ್ತಾರೆ. ಮೇಲ್ಜಾತಿಯವರು ಮೀಸಲಾತಿಯ ಕಾರಣಕ್ಕಾಗಿಯೇ ತಮ್ಮನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದ್ದಾರಾಗಲಿ ಯಾವುದೇ ಪ್ರೀತಿ ವಿಶ್ವಾಸಗಳಿಂದ ತಮ್ಮನ್ನು ಒಪ್ಪಿ ಗೆಲ್ಲಿಸಿಲ್ಲ ಎಂಬ ನೋವು ಅವರಿಗಿದೆ.

ಈ ರೀತಿ ತುಂಬಾ ಸೂಕ್ಷ್ಮ ಮನಸ್ಥಿತಿಯ ಪರಿಶಿಷ್ಟ ಪಂಗಡದ ಮಹಿಳೆಯರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಳ್ಳಾರಿಯ ನಾಲ್ಕು ತಾಲೂಕುಗಳಲ್ಲಿ ಕಂಡು ಬಂದರು. ಇಂಥವರ ಪ್ರಮಾಣವು ಹೊಸಪೇಟೆ ತಾಲೂಕಿನಲ್ಲಿ ಶೇ.೪೧.೬೨, ಸಿರುಗುಪ್ಪದಲ್ಲಿ ಶೇ.೪೨.೩೪ರಷ್ಟಿದ್ದರೆ ಕೂಡ್ಲಿಗಿಯಲ್ಲಿ ಶೇ.೫೪.೩೨ ಹಾಗೂ ಹಗರಿಬೊಮ್ಮನಹಳ್ಳಿ ಶೇ.೫೩.೪೨ರಷ್ಟು ಪ್ರಮಾಣದಲ್ಲಿ ಕಂಡುಬಂದರು. ಆದರೆ ಇವರ ಹೊರತಾಗಿ ಮೀಸಲಾತಿಯಡಿ ಚುನಾಯಿತರಾದ ಇತರ ಪರಿಶಿಷ್ಟ ಪಂಗಡದ ಸದಸ್ಯೆಯರು ತಮಗೆ ಮೀಸಲಾತಿಯಿಂದ ತುಂಬಾ ಅನುಕೂಲವಾಗಿದೆ. ಮೀಸಲಾತಿ ಎಂಬುದು ಇರದೇ ಇದ್ದರೆ ತಾವು ಚುನಾವಣೆಗೆ ನಿಲ್ಲುವುದೇ ಕಷ್ಟವಾಗುತ್ತಿತ್ತು. ತಾವು ರಾಜಕೀಯವಾಗಿ ಮುಂದುವರೆಯಲು ಮತ್ತು ಅಧಿಕಾರದ ಗದ್ದುಗೆ ಹಿಡಿಯಲು ಮೀಸಲಾತಿ ಅತ್ಯಗತ್ಯವೆಂದೇ ಹೇಳಿದರು. ಮುಖ್ಯವಾಗಿ ಬಹುತೇಕ ಇವರ ಕುಟುಂಬದ ಪುರುಷರು ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಾಗಿದ್ದು ಪರೋಕ್ಷವಾಗಿ ಇವರು ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಆತುರರಾಗಿರುವುದು ಕಂಡುಬಂದಿತು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೊದಲಿನ ಸಲಕ್ಕೆ ಪ್ರವೇಶ ಪಡೆದ ತಳ ಸಮುದಾಯದ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ತಾವು ಈ ವ್ಯವಸ್ಥೆಯಲ್ಲಿ ಕಂಡುಂಡ ಎಲ್ಲಾ ಬಗೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶಗಳಿಂದ ರಾಜಕೀಯವೆಂಬ ಪೆಡಂಭೂತದ ಸಹವಾಸವೇ ತಮಗೆ ಬೇಡ ಎನ್ನುತ್ತಿದ್ದಾರೆ. ಏಕೆಂದರೆ ತಳಸಮುದಾಯದ ಇವರಿಗೆ ರಾಜಕೀಯ ಸ್ಥಾನ ದೊರೆತಿದೆಯಾದರೂ ಅವರ ಬದಲಿಗೆ ಗ್ರಾಮದ ಹಿರಿಯರು, ಮೇಲ್ಜಾತಿ ಮುಖಂಡರು, ತಮ್ಮ ಕುಟುಂಬದ ಪುರುಷ ವರ್ಗಗಳೇ ಅಧಿಕಾರದ ಮುಖ್ಯ ಸೂತ್ರದಾರಿಗಳಾಗಿ ತಮ್ಮನ್ನು ಕೇವಲ ಪಗಡೆಗಳಂತೆ ಚಲಾಯಿಸುತ್ತಿರುವುದನ್ನು ಕಂಡ ಪರಿಶಿಷ್ಟ ಪಂಗಡದ ಮಹಿಳೆಯರು ತುಂಬಾ ನೋವಿನಿಂದಲೇ ಮೇಲಿನ ಮಾತುಗಳನ್ನು ತಿಳಿಸುತ್ತಾರೆ.

ಒಟ್ಟಾರೆಯಾಗಿ ಗಮನಿಸಿದಾಗ ಪಂಚಾಯಿತಿಯಲ್ಲಿ ರಾಜಕೀಯವಾಗಿ ಅಧಿಕಾರ ಹಿಡಿದು ಕಾರ್ಯನಿರ್ವಹಿಸುವ ಪರಿಶಿಷ್ಟ ಪಂಗಡದ ಮಹಿಳೆಯರ ಅಧಿಕಾರದ ಸ್ವರೂಪವನ್ನು ಅರಿಯಬೇಕಾಗಿದೆ. ಜಾತಿಯ ಮೀಸಲಾತಿ ಕಾರಣದಿಂದಾಗಿ ಅಧಿಕಾರವನ್ನು ಪಡೆದಿರುವ ಈ ಮಹಿಳೆಯರು ಯಾವುದೋ ಪ್ರಭಾವಿ ಜಾತಿಯವರ ಇಲ್ಲವೆ ಬಂಡವಾಳಶಾಹಿ ಪುರುಷರ ಒತ್ತಡಕ್ಕೆ ಮಣಿದು ರಾಜಕೀಯ ಪ್ರವೇಶಿಸುತ್ತಾ ಬಂದಿರುವ ಪರಿಶಿಷ್ಟ ಪಂಗಡದ ಮಹಿಳೆ ಯಾವುದೇ ಕೆಲಸವನ್ನು ಸ್ವ-ಇಚ್ಛೆಯಿಂದ ಚಲಾಯಿಸಲಾರಳು. ಅವಳನ್ನು ರಾಜಕೀಯ ವ್ಯವಸ್ಥೆಗೆ ಕರೆತಂದ ಸಮೂಹವೇ

ಅಂದರೆ ಬಂಡವಾಳ ಶಾಹಿ ಮತ್ತು ಮೇಲ್ಜಾತಿಯವರೇ ಅವಳನ್ನು ನಿರಂತರವಾಗಿ ನಿಯಂತ್ರಿಸುತ್ತಾರೆ. ಇದು ಕೇವಲ ಗ್ರಾಮ ಪಂಚಾಯ್ತಿ ಮಟ್ಟದ ರಾಜಕೀಯಕ್ಕೆ ಮಾತ್ರ ಸೀಮಿತವಾಗಿಲ್ಲ. ತಾಲೂಕು, ಜಿಲ್ಲಾ ಅಷ್ಟೇಕೆ ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ವ್ಯವಸ್ಥೆಯಲ್ಲಿಯೂ ಪರಿಶಿಷ್ಟ ಪಂಗಡ ಮತ್ತು ತಳಸಮುದಾಯದ ಮಹಿಳೆಯರನ್ನು ನಿಯಂತ್ರಿಸುತ್ತಿರುವುದು ಅದೇ ಶಕ್ತಿಗಳು ಎಂಬುದನ್ನು ಅರಿಯಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಮಾನವಾಭಿವೃದ್ಧಿ ವರದಿ ೨೦೦೫:೨೬೦

೨. ಕೃಷಿ ಗಣತಿ ವರದಿ, ೨೦೦೧:೮೫

೩. ಮಾನವಾಭಿವೃದ್ಧಿ ವರದಿ, ೨೦೦೫:೨೬೧

೪. ಮಾನವಾಭಿವೃದ್ಧಿ ವರದಿ, ೨೦೦೫:೯೮

೫. ಜನಗಣತಿ ವರದಿ, ೨೦೦೧:೨೩೪

೬. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮಾದರಿ ಸಮೀಕ್ಷೆ, ೨೦೦೪:೨೭೮

೭. ಲೋಹಿಯಾ: ಜಾತಿವಿನಾಶ, ೧೯೮೯:೨೪

೮. ಚಂದ್ರಶೇಖರ ಟಿ.ಆರ್., ೨೦೦೩:೮೩

೯. ಚಂದ್ರಶೇಖರ, ಟಿ ಆರ್: ೨೦೦೬:೯೬

೧೦. ಬಾಬುರಾವ್ ಮುಡಬಿ, ೨೦೦೬:೨೦೦

೧೧. ರಾಮು, ಸುಂದರಪ್ಪ ಕಲಾಲ್; ೨೦೧೦:೧೦೨

ಅಧ್ಯಾಯ ಆರು

ಶೈಕ್ಷಣಿಕ ಸುಧಾರಣೆ

ಅಧ್ಯಾಯ ಆರು

ಶೈಕ್ಷಣಿಕ ಸುಧಾರಣೆ

ಮನುಕುಲದ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವುದರಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಆಗಾಧ ಪ್ರಗತಿ ಸಾಧಿಸಿರುವ ಯಾವುದೇ ರಾಷ್ಟ್ರವು ಸುಲಭವಾಗಿಯೇ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ಪೂರಕವಾಗಿ ಇಂದು ಜಗತ್ತಿನ ಅನೇಕ ಅಭಿವೃದ್ಧಿ, ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಹೆಸರಿಸಬಹುದು. ಸ್ವಾತಂತ್ರ್ಯದ ಸಾಧನ ಮತ್ತು ಸ್ವಾಭಿಮಾನದ ಸಂಕೇತವೂ ಆದ ಶಿಕ್ಷಣವು ಸಮಾಜದಲ್ಲಿ ಗೌರವ ಸ್ಥಾನಮಾನಗಳನ್ನು ತಂದುಕೊಡುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಮನುಷ್ಯ ತನ್ನ ಬದುಕು ಹಾಗೂ ಜೀವನ ನಿರ್ವಹಣೆ ಉತ್ತಮಪಡಿಸಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಅಗಾಧವಾದ ಶಕ್ತಿ ಸಾಮರ್ಥ್ಯಗಳನ್ನು ಶಿಕ್ಷಣ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಣವೆಂದರೆ ಸ್ವಾತಂತ್ರ್ಯ ಎಂದಿರುವ ಅಮರ್ತ್ಯಸೇನ್ ಅವರ ಮಾತು ಅರ್ಥಗರ್ಭಿತವಾಗಿದೆ.

ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ 'ಶಿಕ್ಷಣವೇ ಅಭಿವೃದ್ಧಿ' ಎಂಬ ಮಾತು ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಇತ್ತೀಚೆಗೆ ಪ್ರಚಲಿತವಾಗಿದೆ. ಅಮರ್ತ್ಯಸೇನ್ ಅವರ ಪ್ರಕಾರ ಅಭಿವೃದ್ಧಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲರಿಗೂ ದೊರೆಯಬೇಕಾದ ಒಂದು ಸಾಮಾಜಿಕ ಅಗತ್ಯವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣವು ೬-೧೪ರ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನದ ರಚನಾ ಪೂರ್ವದ ಆಶಯವಾಗಿರುತ್ತದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿವೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ. ಹಾಗಾಗಿ ಕನಿಷ್ಠ ಪ್ರಾಥಮಿಕ

ಶಿಕ್ಷಣವಾದರೂ ಕಡ್ಡಾಯವಾಗಿರಲಿ ಎಂಬ ದೃಷ್ಟಿಯಿಂದ ಸರ್ಕಾರವು ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಈ ಕಾರಣಕ್ಕಾಗಿಯೇ ಪ್ರಾಥಮಿಕ ಹಂತದ ಶಿಕ್ಷಣವನ್ನು ಉಚಿತವಾಗಿ ದೊರಕಿಸಿ ಕೊಡಲಾಗುತ್ತಿದೆ. ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀತಿ ಜಾರಿಗೊಂಡ ನಂತರ ಶಾಲಾ ದಾಖಲಾತಿಯ ಪ್ರಮಾಣ ಹೆಚ್ಚಾಗಿದೆ. ಮಕ್ಕಳನ್ನು ಶಾಲೆಯಿಂದ ಹೊರಗೆ ಕರೆದುಕೊಂಡುಹೋಗಿ ದುಡಿಮೆಗೆ ಹಚ್ಚುವುದನ್ನು ತಪ್ಪಿಸಲೆಂದೇ ಮದ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಈ ಯೋಜನೆ ಅನುಷ್ಠಾನಗೊಂಡ ನಂತರ ಶಾಲೆಗಳಲ್ಲಿ ಮಹಿಳಾ ದಾಖಲಾತಿಯ ಪ್ರಮಾಣ ಹೆಚ್ಚಾಗಿದೆ. ಪ್ರತಿಯೊಂದು ಮನೆಯಲ್ಲಿ ಮಕ್ಕಳು ದೇವರಿದ್ದಂತೆ. ಇದರಲ್ಲಿ ಗಂಡು-ಹೆಣ್ಣೆಂಬ ಭೇದವಿರಬಾರದು ಎಂದು ಹೇಳಲಾಗುವುದು. ಆದರೆ ಹೆಣ್ಣು ಎಂದಿದ್ದರೂ ಮನೆಯಿಂದ ಹೊರಗೋಗುವವಳು, ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂದೇ ಭಾವಿಸುವ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಬಂಡವಾಳ ಹೂಡುವುದು ಮೂರ್ಖತನವೆಂದೇ ಭಾವಿಸುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೋಡಲಾಯಿತು. ಹೆಚ್ಚು ಶಾಲೆ ಕಲಿತರೆ ತಮ್ಮ ಮಗಳಿಗೆ ಗಂಡು ಹುಡುಕುವುದು ಕಷ್ಟ, ಮದುವೆ ಮಾಡಿಕೊಡುವ ಹುಡುಗಿಗೆ ಹೆಚ್ಚು ಓದಿಸುವುದು ವ್ಯರ್ಥ ಎಂದೇ ಹಳ್ಳಿಗಾಡಿನ ಹಳೆಯ ತಲೆಮಾರಿನ ಜನರ ಅಭಿಪ್ರಾಯ. ಇದೆಲ್ಲವನ್ನು ಗಮನದಲ್ಲಿರಿಸಿಕೊಂಡೇ ಇಂದು ಮಹಿಳಾ ಶಿಕ್ಷಣಕ್ಕಾಗಿ ಹತ್ತು ಹಲವು ಯೋಜನೆಗಳು ರೂಪುಗೊಂಡಿವೆ. 'ಮರಳಿ ಬಾ ಶಾಲೆಗೆ', 'ಬಾ ಬಾಲೆ ಶಾಲೆ'ಗೆ ಇತ್ಯಾದಿ ಘೋಷವಾಕ್ಯಗಳನ್ನು ಹೊತ್ತ ಯೋಜನೆಗಳೂ ಇವೆ. ಹಾಗೆಯೇ ಶಾಲೆಯನ್ನು ಅರ್ಧದಲ್ಲಿಯೇ ತೊರೆದ ಹೆಣ್ಣುಮಕ್ಕಳನ್ನು ಮರಳಿ ಶಾಲೆಗೆ ದಾಖಲಿಸಿಕೊಳ್ಳಲೆಂದೇ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ಅಂತಹ ಮಹತ್ತರವಾದ ಯೋಜನೆ ಕಸ್ತೂರಿ ಬಾ ಶಾಲೆಯಾಗಿದೆ. ಯಾವುದೇ ಮಗು ಎಷ್ಟೇ ತರಗತಿಯಲ್ಲಿ ಓದನ್ನು ಅರ್ಧಕ್ಕೆ ನಿಲ್ಲಿಸಿದ್ದರೂ ಅಂತಹ ಮಗುವನ್ನು ಗುರುತಿಸಿ ಅವಳ ವಯಸ್ಸಿಗೆ ಎಷ್ಟನೇ ತರಗತಿ ಯಲ್ಲಿರಬೇಕೋ ಅಷ್ಟನೇ ತರಗತಿಗೆ ದಾಖಲಿಸುವುದು ಮತ್ತು ಆ ಮಗುವಿಗೆ ಕಲಿಕಾ ಸಾಮಾರ್ಥ್ಯ ರೂಪಿಸಲು ವಿಶೇಷ ತರಬೇತಿಗಳನ್ನು ನೀಡುವ ಕಾರ್ಯವನ್ನು ಶಿಕ್ಷಕರು ಮಾಡುವಂತೆ ಯೋಜನೆ ರೂಪಿಸಲಾಗಿದೆ.

ಸಾಮಾನ್ಯವಾಗಿ ಮಕ್ಕಳು ೮ನೇ ತರಗತಿಯ ಹಂತಕ್ಕೆ ಬಂದಾಗ ಕೂಲಿಗಾಗಿಯೋ ಇಲ್ಲವೆ ಮಗಳು ಮೈನೆರೆದಳೆಂದೋ ಶಾಲೆಯಿಂದ ವಂಚಿತಗೊಳಿಸುವ ಸಂದರ್ಭಗಳೂ ಉಂಟು. ಇದಾಗಬಾರದೆಂದೇ ಎಂಟನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ ಉಚಿತವಾಗಿ ಸೈಕಲ್ಲನ್ನು ವಿತರಿಸಲಾಗುತ್ತಿದೆ. ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ಶಿಕ್ಷಣವನ್ನು ಒದಗಿಸುವ ಪ್ರಯತ್ನವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವಾಗ ಶೈಕ್ಷಣಿಕವಾಗಿ ವಂಚಿತರಾಗಿರುವ ಗ್ರಾಮೀಣ ಹೆಣ್ಣುಮಕ್ಕಳು ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಗಮನಿಸಲಾಗಿದೆ.

ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದ ಸಮುದಾಯಗಳ ಹೆಣ್ಣುಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳ ಶಾಲಾ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ ಅಂಶಗಳು, ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ಸಂಶೋಧನಾ ಸಂಸ್ಥೆಗಳು (ಎನ್.ಸಿ.ಇ.ಆರ್.ಟಿ, ಎನ್.ಐ.ಇ.ಪಿ.ಪಿ. ಮತ್ತು ಡಿ.ಎಸ್.ಇ.ಆರ್.ಟಿ.) ವಿವಿಧ ರಾಜ್ಯಗಳ(ಕರ್ನಾಟಕವೂ ಸೇರಿದಂತೆ) ವಾರ್ಷಿಕ ವರದಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಸಮಾಜ ವಿಜ್ಞಾನಗಳ ಸಂಶೋಧನೆಗಳು ಪ್ರಕಟಿಸಿವೆ.

ಶಿಕ್ಷಣ ಪಡೆದುಕೊಳ್ಳುವಲ್ಲಿ ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉನ್ನತ ಆದಾಯದ ಕುಟುಂಬಕ್ಕೆ ಸೇರಿದ ಮಹಿಳೆಯರು ಬರುತ್ತಾರೆ. ನಾಲ್ಕನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಬಡತನದಲ್ಲಿರುವ ಕುಟುಂಬಗಳ ಪುರುಷರು ಬರುತ್ತಾರೆ. ಈ ನಾಲ್ಕು ಗುಂಪುಗಳ ನಂತರ ಶ್ರೀಮಂತವರ್ಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಬರುತ್ತಾರೆ. ಅನಂತರದಲ್ಲಿ ಬಡತನದ ಬೇಗೆಯಲ್ಲಿರುವ ಕುಟುಂಬದ ಮಹಿಳೆಯರು ಬರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು? ಇಲ್ಲಿ ಏನು ತಪ್ಪುಗಳಿವೆ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೋಷಕರ ಮನಸ್ಸಿನಲ್ಲಿ ಶಿಕ್ಷಣದ ಕುರಿತಾಗಿರುವ ಅಭಿಪ್ರಾಯಗಳೇನಿರಬಹುದೆಂದು ನೋಡಿದಾಗ ವಿಚಿತ್ರವಾದ ಸತ್ಯಗಳು ಹೊರಬೀಳುತ್ತವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳೇ ಶಾಲೆಯಿಂದ ದೂರ ಸರಿಯಲು ಆಪೇಕ್ಷಿಸುತ್ತವೆಯೋ ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಗ್ರಾಮೀಣ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಶೈಕ್ಷಣಿಕ ವ್ಯವಸ್ಥೆಯ ಕುರಿತಾಗಿ ಅವರ ಪೋಷಕರ ಮನೋಭಾವನೆಯನ್ನು ಮಾತ್ರ ಸೂಚಿಸದೆ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳೂ ಕಾರಣವಾಗಿವೆ ಎಂಬುದೂ ಅಷ್ಟೇ ನಿಜ. ಪ್ರಸ್ತುತ ಶಿಕ್ಷಣದಲ್ಲಿ ಲಿಂಗಸಂಬಂಧಿ ತಾರತಮ್ಯಗಳು ಹುಟ್ಟಲು ಬಂಡವಾಳಶಾಯಿಯಷ್ಟೇ ಆಡಳಿತಶಾಹಿ ವ್ಯವಸ್ಥೆಯೂ ಕಾರಣವಾಗಿದೆ. ಸಾಮಾನ್ಯವಾಗಿ ಪ್ರತಿಯೊಬ್ಬ ತಂದೆ ತಾಯಿಗೂ ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಬೇಕು ಎಂದೇ ತಿಳಿದಿರುತ್ತಾರೆ. ಆದರೆ ಅವರ ಅಭಿಲಾಷೆಗೆ ತದ್ವಿರುದ್ಧವಾದ ಸ್ಥಿತಿ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿರುತ್ತದೆ. ಹುಟ್ಟುಹಾಕಿರುವ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುವ ಬಂಡವಾಳಶಾಹಿಗಳ ಇಂಗ್ಲೀಷ್ ಮಾಧ್ಯಮ ಶಾಲೆಗಳು ಶಿಕ್ಷಣದ ಅಸಮತೋಲನೆಗೆ ಪ್ರಮುಖ ಕಾರಣವಾಗಿದೆ. ಇಂತಹ ಶಾಲೆಗಳಿಗೆ ಮುಗಿಬೀಳುವ ಮಧ್ಯಮ ವರ್ಗದ ಕುಟುಂಬಗಳು ಮಗು

ಬಾಯಿಪಾಠ ಮಾಡಿ ಒಪ್ಪಿಸುವ ಹಾಡು ಇಲ್ಲವೇ ಉತ್ತರಗಳನ್ನು ಕೇಳಿಯೇ ಖುಷಿಪಡುವಂತಾಗಿದೆ. ಆದರೆ ಆ ಶಾಲೆಗಳು ನೀಡುವ ಶಿಕ್ಷಣ ಎಷ್ಟು ಗುಣಮಟ್ಟದಿಂದ ಕೂಡಿದೆ ಎಂಬುದು ಮಾತ್ರ ನಿಗೂಢವಾಗಿಯೇ ಉಳಿಯುತ್ತದೆ. ಇನ್ನು ಸರ್ಕಾರಿ ಶಾಲೆಗಳು ನೀಡುವ ಶಿಕ್ಷಣವು ಗುಣಮಟ್ಟದಿಂದ ಕೂಡಿಲ್ಲವೆಂಬ ಆಪಾದನೆಯೂ ಮಧ್ಯಮ ವರ್ಗದವರಿಂದ ಕೇಳಿಬರುತ್ತಿದೆ. ಇದು ಅರ್ಧಸತ್ಯ. ಗುಣಮಟ್ಟದ ಶಿಕ್ಷಣ ನೀಡಲಾಗದವರು ಹುಟ್ಟುಹಾಕಿರುವ ವದಂತಿ ಇದಾಗಿದೆ. ಹಾಗೆಯೇ ಸರ್ಕಾರಿ ಶಾಲಾ ಶಿಕ್ಷಕರು ಕೇವಲ ಮಕ್ಕಳಿಗೆ ಪಾಠ ಬೋಧಿಸುವ ಕೆಲಸಕ್ಕೆ ಮಾತ್ರ ಸೀಮಿತವಾಗದೆ ಜನಗಣತಿ, ಮಕ್ಕಳ ಗಣತಿ, ಮೀಟಿಂಗ್, ತರಬೇತಿ ಕಾರ್ಯಕ್ರಮ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆಗಳೂ ಇವೆ. ಹಾಗೆಯೇ ಪ್ರತಿ ತರಗತಿಯಲ್ಲಿಯೂ ಸರ್ಕಾರ ನಿಗದಿಪಡಿಸಿದ ಮಕ್ಕಳ ದಾಖಲಾತಿ ಹಾಜರಾತಿ ಅನುಪಾತಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳಿರುತ್ತವೆ. ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಕಷ್ಟಸಾಧ್ಯದ ವಿಚಾರವಾಗಿದೆ.

ಕೆಲವು ಪೋಷಕರು ಹೀಗೆ ಅಭಿಪ್ರಾಯಪಡುತ್ತಾರೆ 'ನಾವು ದಡ್ಡರಾಗಿದ್ದೇವೆ, ನಮ್ಮ ಮಕ್ಕಳು ದಡ್ಡರಾಗುವುದು ಬೇಡ, ನಾವು ಅನುಭವಿಸಿದ ಕಷ್ಟ–ನಷ್ಟಗಳು ನಮ್ಮ ಹೆಣ್ಣು ಮಕ್ಕಳಿಗೆ ಬರಲೇಬಾರದು, ನಮ್ಮ ಮಕ್ಕಳು ಓದಿ ಬುದ್ಧಿವಂತರಾಗಬೇಕು, ಸಮಾಜದ ಸತ್ಪ್ರಜೆಗಳಾಗ ಬೇಕು. ಉತ್ತಮ ಜೀವನ ಮಾಡಬೇಕು' ಎಂಬಂತಹ ನೇರವಾದ ಮತ್ತು ಪ್ರಾಮಾಣಿಕ ವಾದ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ತೋರಿಸುತ್ತಾರೆ. ಈ ಭಾವನೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹೆಣ್ಣುಮಕ್ಕಳ ಪೋಷಕರು ಮತ್ತು ಸ್ವಲ್ಪಮಟ್ಟಿಗೆ ಸುಧಾರಿಸಿದ ಪೋಷಕರಲ್ಲಿಯೂ ಒಂದೇ ರೀತಿಯಾಗಿರುತ್ತದೆ.

ಆದರೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೋಲಿಸಿದಾಗ ಸ್ವಲ್ಪ ವ್ಯತ್ಯಾಸಗಳು ಕಾಣುತ್ತವೆ. ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅದೇ ರೀತಿಯ ಆದ್ಯತೆಯನ್ನು ತೋರಿಸುವುದಿಲ್ಲ. ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಇಲ್ಲವೆಂದು ಅರ್ಥವಲ್ಲ. ಬಹುತೇಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪೋಷಕರು ತಮ್ಮ ಮಕ್ಕಳಿಗೆ ಕೊಡಿಸುವ ಶಿಕ್ಷಣವನ್ನು ಕೇವಲ ಆದಾಯವನ್ನು ಹೆಚ್ಚಿಸುವ ಒಂದು ಆರ್ಥಿಕ ಸಾಧನವನ್ನಾಗಿ ಪರಿಗಣಿಸುತ್ತಾರೆ. ಕೆಲವು ಮಂದಿ ಸರ್ಕಾರಿ ಕೆಲಸಕ್ಕೆ ಸೀಮಿತವೆಂದರೆ ಇನ್ನೂ ಕೆಲವರು ವೃತ್ತಪತ್ರ ಓದಲು ಮತ್ತು ಗಂಡನ ಮನೆಯಲ್ಲಿ ಮಕ್ಕಳಿಗೆ ಕಲಿಸಲು ಎಂದು ಹೇಳುತ್ತಾರೆ.

ಈ ದೃಷ್ಟಿಕೋನದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಹಣದ ದುಂದುವೆಚ್ಚವಾಗುತ್ತದೆ ಎಂಬ ಭಾವನೆ ನಾವು ಅಧ್ಯಯನಕ್ಕೊಳಪಡಿಸಿದ ಬಹುತೇಕ ಪೋಷಕರಲ್ಲಿದೆ. ಇದಕ್ಕೆ ಪೂರಕವಾಗಿ ಪೋಷಕರು ಬಹುತೇಕವಾಗಿ ಸಾಮಾಜಿಕ ಕಾರಣಗಳನ್ನು ಹೇಳುತ್ತಾರೆ. ಅವುಗಳಲ್ಲಿ ಹೆಣ್ಣುಮಕ್ಕಳ

ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಿಂದ ಅಥವಾ ಅವಳ ರಕ್ಷಣೆಯ ದೃಷ್ಟಿಯಿಂದ ನೋಡುವುದು ಮುಖ್ಯವಾಗಿದೆ. ವೃತ್ತಪತ್ರದ ವಿಷಯ ಅಲ್ಲದೇ ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಕಡಿಮೆ ಎಂಬುದಾಗಿ ಬಹುತೇಕ ಪೋಷಕರು ಭಾವಿಸಿರುವುದರಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಮಾನ ಆದ್ಯತೆ ಲಭಿಸುತ್ತಿಲ್ಲ. ಈ ವಿಚಾರದಲ್ಲಿ ಸಾಮಾಜಿಕವಾಗಿ ಬದಲಾವಣೆಗಳಾಗುತ್ತಿದ್ದರೂ ಹೆಣ್ಣುಮಕ್ಕಳ ಶಿಕ್ಷಣವನ್ನು ಶೈಕ್ಷಣಿಕ ಅಂಶಗಳಿಂದಾಚೆ ನೋಡಬೇಕಾದ ಅಗತ್ಯವಿದೆ. ಅದರಂತೆ ಕೇವಲ ಬೆರಳೆಣಿಕೆಯಷ್ಟು ಪೋಷಕರು ಮಾತ್ರ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಹೆಣ್ಣುಮಕ್ಕಳ ಶಿಕ್ಷಣದ ನಕಾರಾತ್ಮಕ ಭಾವನೆಗಳು ಕೇವಲ ಪೋಷಕರಿಂದ ಮಾತ್ರ ಹುಟ್ಟಿಕೊಳ್ಳದೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನಡವಳಿಕೆಗಳಿಂದ ಪ್ರಭಾವಿತವಾಗಿರುತ್ತವೆ ಎಂಬುದು ಸ್ಪಷ್ಟ. ಹಾಗಾಗಿ ಹೆಣ್ಣಮಕ್ಕಳ ಶಿಕ್ಷಣ ಕುರಿತಾದ ಸಕಾರಾತ್ಮಕ ಭಾವನೆಗಳು ಕೇವಲ ವ್ಯಕ್ತಿಗತವಾಗಿ ಹೆಚ್ಚಳವಾಗದೆ ಸಾಮಾಜಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಬದಲಾವಣೆಯಾಗಬೇಕಾದ ಅಗತ್ಯವಿದೆ.

ಅಧ್ಯಯನಕ್ಕೊಳಪಡಿಸಿದ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಪರಿಶಿಷ್ಟ ಪಂಗಡದ ಮಕ್ಕಳಿಗೂ ಸಾಮಾನ್ಯ ಜಾತಿಯ ಮಕ್ಕಳಿಗೂ ಹೋಲಿಕೆ ಮಾಡಿನೋಡಿದರೆ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ತರಗತಿಯಲ್ಲಿ ಭಾಗವಹಿಸುವಿಕೆಯು ಅಸಮಾನತೆಯಿಂದ ಕೂಡಿರುವುದು ಕಂಡುಬಂದಿದೆ. ಗಂಡುಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರಿಸಿರುವುದು ವಿಶೇಷವಾಗಿದೆ. ವಿವಿಧ ಶೈಕ್ಷಣಿಕ ಕಾರ್ಯಯೋಜನೆಗಳ ಅನುಷ್ಠಾನ ಮತ್ತು ಇತರೆ ಅಂಶಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಾಗಿದೆ ಎಂಬುದೇನೋ ನಿಜ, ಆದರೆ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ತರಗತಿಯ ಭಾಗವಹಿಸುವಿಕೆಗಳ ನಡುವಿನ ಅಂತರದಲ್ಲಿ ಮಾತ್ರ ಯಾವುದೇ ಬದಲಾವಣೆಗಳು ಕಂಡು ಬರುವುದಿಲ್ಲ. ಐವತ್ತು ವರ್ಷಗಳ ಹಿಂದಿನ ಮನೋಭಾವನೆಯು ಇಂದಿಗೂ ಇದೆಯೇನೋ ಎನ್ನುವ ಭ್ರಮೆಯನ್ನು ಉಂಟುಮಾಡುತ್ತದೆ. ಸಮೀಕ್ಷೆಗೊಳಪಡಿಸಿದ ಬಹುತೇಕ ಪರಿಶಿಷ್ಟ ಪಂಗಡ ಪೋಷಕರು ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸುವುದು ಅವಶ್ಯಕವೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಯಿಂದ ಹೊರಗಿರುವುದು ಕಂಡುಬರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಪಂಗಡ ಕುಟುಂಬಗಳ ಆದಾಯದಲ್ಲಿ ವ್ಯತ್ಯಾಸಗಳಾಗಿ ಜೀವನ ನಿರ್ವಹಣೆ ಕಷ್ಟವಾದಾಗ ತಮ್ಮ ಮಕ್ಕಳ ಶಿಕ್ಷಣದ ವೆಚ್ಚವನ್ನು ಭರಿಸಲಾಗದ ಸ್ಥಿತಿಯಲ್ಲಿ ಪೋಷಕರು ದುಡಿಮೆಗಾಗಿ ವಲಸೆ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಪರಿಶಿಷ್ಟ ಪಂಗಡದ ಗಂಡುಮಕ್ಕಳು ಮನೆಯಲ್ಲಿರುವ ಅಜ್ಜ ಅಜ್ಜಿಯರೊಂದಿಗೆ ಉಳಿದು ಶಾಲೆಗೆ ಹೋದರೆ ಹೆಣ್ಣುಮಕ್ಕಳು ತಮ್ಮ ಪೋಷಕರೊಂದಿಗೆ ದುಡಿಮೆಗೆ ಕೈಜೋಡಿಸಲು ಪೋಷಕರೊಂದಿಗೆ ವಲಸೆಹೋಗುತ್ತಾರೆ.

ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಅಂತರಕ್ಕೆ ಸಾಮಾಜಿಕ ಅಂಶಗಳು ಕಾರಣವಾಗಳಾಗುತ್ತವೆ. ಅಧ್ಯಯನಕ್ಕೊಳಪಡಿಸಿದ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಪೋಷಕರು ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಲ್ಲಿ ಅಥವಾ ವಿವಾಹ ಹಂತದಲ್ಲಿ ಮಾತ್ರ ನೋಡುವುದು ಸರ್ವೇಸಾಮಾನ್ಯವಾಗಿದೆ. ಇದು ಮೇಲ್ಜಾತಿಯ ಪೋಷಕರು ತಮ್ಮ ಹೆಣ್ಣುಮಕ್ಕಳ ಭವಿಷ್ಯ ಮತ್ತು ಶಿಕ್ಷಣದ ಬಗ್ಗೆ ಹೊಂದಿರುವ ಭಾವನೆಯ ಪ್ರಭಾವದಿಂದಾದ ಸಾಮಾಜಿಕ ಅನುಕರಣೆಯೂ ಆಗಿರುತ್ತದೆ ಎಂಬುದು ಮನವರಿಕೆಯಾಗಿದೆ. ಈ ದೃಷ್ಟಿಕೋನವು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಮೇಲೆ ಖಂಡಿತವಾಗಿ ಪರಿಣಾಮ ಬೀರುತ್ತದೆ. ಹೀಗೆ ಹೆಣ್ಣುಮಕ್ಕಳ ಶಿಕ್ಷಣ ಮತ್ತು ವಿವಾಹಗಳನ್ನು ತಳುಕು ಹಾಕಿ ನೋಡುವ ಪೋಷಕರ ಭಾವನೆಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಮಧ್ಯಮವರ್ಗ, ಕೆಳವರ್ಗ ಮತ್ತು ಎಸ್.ಸಿ., ಎಸ್.ಟಿ. ವರ್ಗಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವುದು ತಿಳಿದುಬಂದಿದೆ. ಹೆಚ್ಚಿಗೆ ಓದಿದ ಮತ್ತು ಪರಿಶಿಷ್ಟ ಪಂಗಡ ಮತ್ತು ಇತರರಿಗೆ ಸ್ವಜಾತಿಯ ಹೆಣ್ಣುಮಕ್ಕಳಿಗೆ ತಕ್ಕನಾದ ಹೆಚ್ಚು ಓದಿದ ಅದೇ ಪಂಗಡದ ವರ ಸಿಗುವುದು ಕಷ್ಟಕರ ಎನ್ನುವ ಅಂಶ ಆ ಪೋಷಕರಲ್ಲಿದೆ. ಅಲ್ಲದೆ ಹೆಚ್ಚು ಓದಿದ ಹೆಣ್ಣುಮಕ್ಕಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಸ್ವೀಕರಿಸಿದರೆ ಅವರು ತಮ್ಮ ಕುಟುಂಬಕ್ಕೆ ಹೊಂದಿಕೊಂಡುಹೋಗಲಾರರೆಂಬ ಭಾವನೆಯನ್ನು ಪರಿಶಿಷ್ಟ ಪಂಗಡ ಪೋಷಕರು ಹೊಂದಿದ್ದಾರೆ. ಓದಿದ ಹೆಣ್ಣುಮಕ್ಕಳಿಗೆ ತಕ್ಕನಾದ ಅವರದೇ ಜಾತಿಯ ವರ ಸಿಗಬಲ್ಲುದು ಮತ್ತು ಓದಿದ ಪರಿಶಿಷ್ಟ ಪಂಗಡದ ಹೆಣ್ಣನ್ನು ಸೊಸೆಯನ್ನಾಗಿ ಸ್ವೀಕರಿಸುವುದರಿಂದ ಯಾವ ತೊಂದರೆಯೂ ಇಲ್ಲವೆಂಬ ವಾದವನ್ನು ನಾಯಕ ಸಮುದಾಯದ ಹಿರಿಯರು ಒಪ್ಪದೆ ನಿರಾಕರಿಸುತ್ತಾರೆ. ಹಾಗಾಗಿ ನಾಯಕ ಸಮುದಾಯದ ಪೋಷಕರ ಈ ಮನೋಭಾವನೆಯನ್ನು ಹೋಗಲಾಡಿಸಿಕೊಳ್ಳುವ ಅಗತ್ಯವಿದೆ.

ಅಧ್ಯಯನಕ್ಕೆ ಒಳಪಡಿಸಿದ ಗ್ರಾಮಪಂಚಾಯತಿಗಳ ವ್ಯಾಪ್ತಿಯ ಕೆಲ ಗ್ರಾಮಗಳಲ್ಲಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದವರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿದರು. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡುಸುವಿರಾ ಎಂದು ಕೆಲವು ಪೋಷಕರನ್ನು ಪ್ರಶ್ನಿಸಿದಾಗ, ಮಕ್ಕಳನ್ನು ಶಾಲೆಗೆ ಕಳಿಸಿದರೆ ಏನು ಉಪಯೋಗ? ಅವರನ್ನು ಕೂಲಿ ಕೆಲಸಕ್ಕೆ ಕಳಿಸಿದರೆ ಒಬ್ಬರಿಗೆ ಒಂದು ದಿನಕ್ಕೆ ೧೫೦ ರೂಪಾಯಿ ಪ್ರಕಾರ ಹಣ ಸಿಗುತ್ತದೆ. ಬಡವರಾದ ನಮಗೆ ಕೂಲಿಯು ಆಸರೆಯಾಗಿದೆ ಎಂಬ ಉತ್ತರವೂ ದೊರೆಯಿತು.

ಬಡತನದಲ್ಲಿರುವ ಮಕ್ಕಳ ಹಸಿವನ್ನು ನೀಗಿಸುವ ದೃಷ್ಟಿಯಿಂದಲೇ ಮದ್ಯಾಹ್ನದ ಬಿಸಿಯೂಟ ಯೋಜನೆಯನ್ನು ಪ್ರಾರಂಭಿಸಿರುವುದು. ಈ ಯೋಜನೆಯೇನೋ ಉಪಯುಕ್ತವಾಗಿದೆ. ಆದರೆ ಯಾವ ಯಾವುದೋ ಜಾತಿಯವರ ಕೈಯೊಳಗಿನ ಆಹಾರವನ್ನು ನಮ್ಮ ಮಕ್ಕಳು ತಿನ್ನಬೇಕಲ್ಲ, ನಮ್ಮ ಜಾತಿಯ ಕಟ್ಟುಪಾಡಿನಲ್ಲಿ ತಳಜಾತಿಯವರಿಂದ ನಾವು ಆಹಾರ ಸ್ವೀಕರಿಸಬಾರದು.

ಯೋಜನೆಯೇನೋ ಉಪಯುಕ್ತವೆ, ಆದರೆ ಇದರಲ್ಲಿ ನಮ್ಮ ಜಾತಿಗೆ ಒಗ್ಗದ ಕೆಲಸಗಳೂ ನಡೆಯುತ್ತವೆಯಲ್ಲ ಎನ್ನುವ ಅಭಿಪ್ರಾಯವೂ ಕೆಲವು ಪೋಷಕರಿಂದ ಪಡೆಯಲಾಯಿತು. ಮಧ್ಯಾಹ್ನದ ಬಿಸಿಯೂಟಕ್ಕೆ ಜಾತಿಯೊಂದೇ ಅಡ್ಡಗಂಟಕವಾಗಿ ಎಷ್ಟೋ ನಾಯಕ ಸಮುದಾಯದ ಮಕ್ಕಳು ಶಾಲೆಯಲ್ಲಿ ನೀಡುವ ಆಹಾರವನ್ನು ಸ್ವೀಕರಿಸದಂತೆ ಪೋಷಕರು ತಡೆಯೊಡ್ಡಿದ ಉದಾಹರಣೆಗಳೂ ಕ್ಷೇತ್ರಕಾರ್ಯದಲ್ಲಿ ದೊರೆಯಿತು. ಮಧ್ಯಾಹ್ನದ ಬಿಸಿಯೂಟ ಯೋಜನೆಯು ಆಹಾರದ ಹಕ್ಕಿನ ದೃಷ್ಟಿಯಿಂದ ಒಂದು ಸಾಮಾಜಿಕ ಚಳುವಳಿಯಾಗಿ ರೂಪಿಸುವುದು ಎಲ್ಲರ ಜವಾಬ್ದಾರಿಯಾಗಬೇಕು.

ಹೆಣ್ಣುಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರೂಪಿಸಿ ಅನುಷ್ಠಾನಗೊಳಿಸಿದ ಬಹುತೇಕ ಕಾರ್ಯಕ್ರಮಗಳು ಶಾಲಾಹಂತದ ಎಷ್ಟೋ ಮಕ್ಕಳಿಗೆ ದೊರಕದಿರುವುದು ಕಂಡು ಬಂದಿತು. ಅಂದರೆ ಶಾಲೆಯಲ್ಲಿ ಆ ಯೋಜನೆಗಳು ವಿಸ್ತಾರಗೊಂಡಿಲ್ಲವೆಂದು ಅರ್ಥವಲ್ಲ. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಯೋಜನೆಯ ಫಲ ಸಿಗುವುದಾರೂ ಹೇಗೆ ಸಾಧ್ಯ. ಸಮವಸ್ತ್ರಗಳನ್ನು ಹಂಚುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳಿಗೆ ಅವರ ದೈಹಿಕ ಅಳತೆಗೆ ಸರಿಹೊಂದದ ಹಾಗೂ ಸರಿಯಾಗಿ ಹೊಲಿಗೆಯಾಗದಿರುವ ಸಮವಸ್ತ್ರಗಳನ್ನು ಹಂಚದಿರುವುದು, ಆದರೆ ಇದೇ ಸಮವಸ್ತ್ರಗಳನ್ನು ಗ್ರಾಮದ ಮೇಲ್ಜಾತಿಯ ಮಕ್ಕಳಿಗೆ ನೀಡುವಾಗ ಅವರ ದೈಹಿಕ ಅಳತೆಗೆ ಸರಿಹೊಂದುವ ಸಮವಸ್ತ್ರಗಳನ್ನು ನೀಡುವುದನ್ನು ನಾವು ಕಂಡಿದ್ದೇವೆ. ಈ ಬಗೆಯ ಅಸಮಾನತೆ ಶಾಲೆಯಲ್ಲಿ ಕೆಲಸಗಳನ್ನು ನಿಯೋಜಿಸುವ ಸಂದರ್ಭದಲ್ಲಿ ದಲಿತ ಹೆಣ್ಣುಮಕ್ಕಳಿಗೆ ಶ್ರಮದಾಯಕವಾದ ಕೆಲಸಗಳನ್ನು ಶಿಕ್ಷಕರು ನಿಯೋಜಿಸು ತ್ತಿರುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳನ್ನು ಸಮಾನವಾಗಿ ಪರಿಗಣಿಸದೆ ಅವರನ್ನು ಎರಡನೇ ದರ್ಜೆಯ ನಾಗರಿಕರಂತೆ ಕಾಣುತ್ತಿರುವುದು ನಮ್ಮ ಕ್ಷೇತ್ರ ಅಧ್ಯಯನದಲ್ಲಿ ಸೂಕ್ಷ್ಮವಾಗಿ ನೋಡಿದಾಗ ಕಂಡುಬರುತ್ತದೆ. ಆದರೆ ಮೇಲ್ನೋಟಕ್ಕೆ ಅಸಮಾನತೆಗಳಿಲ್ಲ, ಸಮಾನತೆಗಳಿವೆ ಎಂದು ಒತ್ತಿ ಹೇಳುವ ಪ್ರಯತ್ನ ದಲಿತೇತರ ಜನವರ್ಗಗಳಲ್ಲಿ, ಶಿಕ್ಷಕರಲ್ಲಿ ಹಾಗೂ ಅಧಿಕಾರಿವರ್ಗದಲ್ಲಿ ಕಂಡುಬರುತ್ತಿದೆ.

ಮುಂದುವರಿದು ಹಲವು ಕಾರ್ಯಕ್ರಮಗಳಲ್ಲಿ ಬಿಸಿಯೂಟ ಯೋಜನೆ, ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ, ಕನಿಷ್ಠ ಕಲಿಕಾ ಮಟ್ಟದ ಕಾರ್ಯಕ್ರಮ, ಪ್ರತಿಭಾ ಕಾರಂಜಿ, ಚಿಣ್ಣರ ಜಿಲ್ಲಾ ದರ್ಶನ, ಪರಿಸರ ಗ್ರಂಥಾಲಯ ಸೌಲಭ್ಯ, ಸಮವಸ್ತ್ರ, ಶಾಲಾ ಬ್ಯಾಗ್‌ಗಳ ವಿತರಣೆ, ವಿದ್ಯಾರ್ಥಿವೇತನ ಸಂದಾಯ, ಸರ್ವಶಿಕ್ಷಣ ಅಭಿಯಾನ ಇನ್ನೂ ಮುಂತಾದ ಕಾರ್ಯ ಯೋಜನೆಗಳ ಮೂಲಕವಾಗಿ ಸರ್ಕಾರದ ಗಮನ ಮತ್ತು ಪ್ರಯತ್ನಗಳು ಶಿಕ್ಷಣದ ಕಡೆಗೆ ಇವೆ. ಆದರೂ ಪರಿಶಿಷ್ಟರ ಮಕ್ಕಳ ಶಿಕ್ಷಣದಲ್ಲಿ ಸಂಪೂರ್ಣವಾದ ಸುಧಾರಣೆಗಳಾಗಿಲ್ಲ ವೆಂದೆನಿಸುವುದು.

ಇನ್ನು ಮೇಲಿನ ಹಂತಕ್ಕೆ ಹೋದಂತೆಲ್ಲಾ ಹೆಣ್ಣುಮಕ್ಕಳು ಶಿಕ್ಷಣದಿಂದ ಹೊರಗುಳಿ ಯುತ್ತಿರುವುದು ಕಂಡುಬಂದಿದೆ. ಇದಕ್ಕೆ ಹತ್ತು ಹಲವು ಕಾರಣಗಳಿವೆ.

ಓದಿದ ಗಂಡನ್ನೇ ಹುಡುಕಬೇಕೆಂಬ ತಾಪತ್ರಯ

ಓದಿದ ಹುಡುಗಿಯರು ಮೈಬಗ್ಗಿಸಿ ದುಡಿಯಲಾರರು. ಇದರಿಂದ ಅವಳನ್ನು ಮದುವೆ ಮಾಡಿಕೊಟ್ಟ ಮನೆಯವರಿಂದ ಮಾತು ಕೇಳಬೇಕಾಗುತ್ತದೆ ಎನ್ನುವುದು.

ಮೈನೆರೆದ ಹೆಣ್ಣು ಎನ್ನುವ ಕಾಳಜಿ ಹೀಗೆ ನಾನಾ ಕಾರಣಗಳನ್ನೊಡ್ಡಿ ಮಹಿಳೆಯನ್ನು ಮೇಲಿನ ಹಂತದ ತರಗತಿಗಳಿಗೆ ಹೋಗದಂತೆ ನಿರ್ಬಂಧಿಸುವುದೂ ಉಂಟು. ಇವೆಲ್ಲಕ್ಕಿಂತಲೂ ಮುಖ್ಯವಾದ ಸಮಸ್ಯೆ ಅಪ್ರಾಪ್ತ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವುದು. ಹುಡುಗಿ ಇನ್ನೂ ಹದಿನೆಂಟು ವರ್ಷವೂ ತುಂಬಿರುವುದಿಲ್ಲ. ಆಗಲೇ ಮದುವೆ ಮಾಡಿ ಕೊಡಲಾಗುವುದು. ಮದುವೆಯಾದ ತರುವಾಯ ಹುಡುಗಿಯ ವಿದ್ಯಾಭ್ಯಾಸವೂ ಮೊಟಕು ಗೊಳ್ಳುವುದು.

ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಶಿಕ್ಷಣಕ್ಕೆ ವಿಶೇಷವಾದ ಒತ್ತನ್ನು ನೀಡಿ ಸರ್ಕಾರ ಎಷ್ಟೆಲ್ಲಾ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಆದರೆ ಅಷ್ಟೇ ಪ್ರಮಾಣದಲ್ಲಿ ಮಹಿಳೆಯರು ಮತ್ತು ಅವರ ಪೋಷಕರು ಶಿಕ್ಷಣ ಕೊಡಿಸುವುದಕ್ಕೆ ಸ್ಪಂದಿಸದೇ ಇರುವುದು ಕಂಡುಬರುತ್ತಿದೆ. ಆದರೆ ಆಶಾದಾಯಕ ವಿಚಾರವೆಂದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ದಾಖಲಾತಿ ಮತ್ತು ಹಾಜರಾತಿಯಲ್ಲಿ ಸುಧಾರಣೆಯಾಗಿರುವುದು.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ

ಹಿನ್ನೆಲೆ : ಪ್ರಜಾಪ್ರಭುತ್ವದ ಯಶಸ್ವಿಗೆ ಶಿಕ್ಷಣ ಅತ್ಯವಶ್ಯಕ. ಸಂವಿಧಾನದ ನಿರ್ದೇಶಕ ತತ್ವಗಳ ರೀತ್ಯಾ ೬–೧೪ ವಯೋಮಿತಿಯ ಎಲ್ಲಾ ಮಕ್ಕಳಿಗೆ ಸಾಕಷ್ಟು ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ ೧೯೯೨ರಲ್ಲಿ ಪುನರ್ ವಿಮರ್ಶಿಸಲ್ಪಟ್ಟಿತು. ಅಲ್ಲದೆ ಇದರ ಅನುಷ್ಠಾನಕ್ಕಾಗಿ ೧೯೯೨ರಲ್ಲಿ ಕ್ರಿಯಾಯೋಜನೆ ರೂಪಿಸಲಾಯಿತು. ಅದರಂತೆ ಕ್ರಿ.ಶ. ೨೦೦೦ದ ವೇಳೆಗೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣ ಗೊಳಿಸಿ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು ನಮ್ಮ ಮುಂದಿರುವ ಗುರಿ. ಈ ಗುರಿ ಸಾಧನೆಗಾಗಿ ಹಮ್ಮಿಕೊಳ್ಳಲಾದ ವಿಶಿಷ್ಟ ಯೋಜನೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ).

ಯೋಜನಾ ಪೂರ್ವದಲ್ಲಿ,

೧. ಪ್ರಾಥಮಿಕ ಶಾಲೆಗಳ ಆಂತರಿಕ ಮತ್ತು ಬಾಹ್ಯ ಗುಣಮಟ್ಟ

೨. ಹೆಣ್ಣುಮಕ್ಕಳ ಶಿಕ್ಷಣ

೩. ಗಿರಿಜನರ ಶಿಕ್ಷಣ

೪. ಶಿಕ್ಷಕ ತರಬೇತಿಯ ಗುಣಮಟ್ಟ

೫. ಪಠ್ಯ ಪುಸ್ತಕಗಳ ವಿನ್ಯಾಸ ಮತ್ತು ಗುಣಮಟ್ಟ

ಈ ವಿಷಯಗಳ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಯಿತು. ಈ ಅಧ್ಯಯನಗಳ ಆಧಾರದ ಮೇಲೆ ವಿಶ್ವ ಬ್ಯಾಂಕಿನ ಸಾಲದ ನೆರವಿನಿಂದ ೧೯೯೪-೯೫ನೇ ಸಾಲಿನಲ್ಲಿ ರಾಷ್ಟ್ರದ ೭ ಪ್ರಾಂತ್ಯಗಳ ೪೨ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.[೧]

ಕರ್ನಾಟಕ ರಾಜ್ಯ : ವಿಶ್ವಬ್ಯಾಂಕ್ ನೆರವಿನಿಂದ ಕೇಂದ್ರ ಪುರಸ್ಕೃತ ಯೋಜನೆಯಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಕರ್ನಾಟಕ ರಾಜ್ಯದ ಕೋಲಾರ, ಮಂಡ್ಯ, ರಾಯಚೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ೧ನೇ ಹಂತದಲ್ಲಿ ಹಾಗೂ ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಕಲಬುರ್ಗಿ(ಗುಲ್ಬರ್ಗಾ), ಬೆಂಗಳೂರು ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಗಳಲ್ಲಿ ೨ನೇ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಹಾಗೂ ಮಹಿಳಾ ಸಾಕ್ಷರತೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ ಆಧಾರದ ಮೇಲೆ ಈ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಸಂಪೂರ್ಣ ಸಾಕ್ಷರತಾ ಆಂದೋಲನವು ಮುಕ್ತಾಯದ ಹಂತಕ್ಕೆ ಬಂದಿದ್ದು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಿದ್ದು ಈ ಜಿಲ್ಲೆಗಳ ಆಯ್ಕೆಗೆ ಇರುವ ಇನ್ನೊಂದು ಕಾರಣ. ಮೊದಲ ಹಂತದ ನಾಲ್ಕು ಜಿಲ್ಲೆಗಳಲ್ಲಿ ೧೯೯೫ ಜನವರಿ ೨೬ರಿಂದ ಸಾಂಕೇತಿಕವಾಗಿ ಯೋಜನೆ ಪ್ರಾರಂಭಗೊಂಡಿರುತ್ತದೆ. ೨ನೇ ಹಂತದ ಏಳು ಜಿಲ್ಲೆಗಳಲ್ಲಿ ೧೯೯೭ರ ಅಕ್ಟೋಬರ್‌ನಿಂದ ಯೋಜನೆ ಜಾರಿಗೆ ಬಂದಿರುತ್ತದೆ.

೬.೧. ಯೋಜನೆಯ ಪ್ರಮುಖ ಧ್ಯೇಯೋದ್ದೇಶಗಳು

ಸಾಮಾಜಿಕ ವರ್ಗೀಕರಣ ಹಾಗೂ ಲಿಂಗಭೇದ ಕಾರಣಗಳಿಂದಾಗಿ ಶಾಲಾ ದಾಖಲಾತಿ ಮತ್ತು ಕಲಿಕಾ ಸಾಧನೆಯಲ್ಲಿ ವಿವಿಧ ಮಕ್ಕಳ ನಡುವೆ ಇರುವ ಅಂತರವನ್ನು ಹಾಗೂ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಶೇಕಡಾ ೫ಕ್ಕಿಂತ ಕಡಿಮೆಗೊಳಿಸುವುದು.

- ಭಾಷೆ ಹಾಗೂ ಗಣಿತ ವಿಷಯಗಳಲ್ಲಿ ಕಲಿಕಾ ಮಟ್ಟವನ್ನು ಮೌಲ್ಯಾಂಕಾಧಾರಿತ ಮಟ್ಟದಿಂದ ಶೇಕಡಾ ೨೫ರಷ್ಟು ಹೆಚ್ಚಿಸುವುದು. ಇತರೆ ವಿಷಯಗಳಲ್ಲಿ ಪ್ರಾಥಮಿಕ ಶಾಲೆಯ ಎಲ್ಲಾ ಮಕ್ಕಳ ಕನಿಷ್ಠ ಕಲಿಕಾ ಸಾಮರ್ಥ್ಯವನ್ನು ಶೇಕಡಾ ೪೦ಕ್ಕಿಂತ ಹೆಚ್ಚು ಮಾಡುವುದು.
- ಪ್ರಾಥಮಿಕ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಒಟ್ಟಾರೆ ಪ್ರಮಾಣವನ್ನು ಶೇಕಡಾ ೧೦ಕ್ಕಿಂತ ಕಡಿಮೆಗೊಳಿಸುವುದು.
- ರಾಷ್ಟ್ರೀಯ ನಿಗದಿತ ಪ್ರಮಾಣದಲ್ಲಿ ಎಲ್ಲಾ ಮಕ್ಕಳಿಗೂ ೧ರಿಂದ ೪ನೇ ತರಗತಿವರೆಗೆ ಉತ್ತಮ ಶಾಲಾ ಸೌಲಭ್ಯ ಅಥವಾ ತತ್ಸಮಾನವಾದ ಅನೌಪಚಾರಿಕ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು.

- ಪ್ರಾಥಮಿಕ ಶಿಕ್ಷಣವನ್ನು ಪುನರ್ ನಿರ್ಮಾಣ ಮಾಡುವ ಉದ್ದೇಶದಿಂದ ಬಿಡಿ ಬಿಡಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬದಲು ಆಯ್ದ ಜಿಲ್ಲೆಗಳಲ್ಲಿ ಸಮಗ್ರವಾದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ.

೬.೨. ಯೋಜನೆಯ ವೈಶಿಷ್ಟ್ಯಗಳು

- ಜಿಲ್ಲಾ ಪ್ರಾಥಮಿಕ ಯೋಜನೆಯು ಕೇವಲ ಹಣವನ್ನು ವೆಚ್ಚ ಮಾಡುವ ಯೋಜನೆಯಾಗಿರುವುದಿಲ್ಲ. ಬದಲಿಗೆ ಅದು ನಿಗದಿತ ಗುರಿ ಸಾಧನೆಯ ದಿಕ್ಕಿನಲ್ಲಿ ಧೃಡ ನಿರ್ಧಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿಶಿಷ್ಟ ಯೋಜನೆಯಾಗಿದೆ.
- ಇದು ನಿಗದಿತ ಹಣಕ್ಕೆ ರೂಪಿಸಿದ ಯೋಜನೆಯಲ್ಲ. ರೂಪಿಸಲಾದ ಯೋಜನೆಗೆ ಅನುಗುಣವಾಗಿ ಹಣವನ್ನು ನಿಗದಿಪಡಿಸುವ ಯೋಜನೆ.
- ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯು ರಾಜ್ಯಮಟ್ಟದ ಆಯ-ವ್ಯಯ ಪುಸ್ತಕದಿಂದ ಆಯ್ದ ಜಿಲ್ಲೆಗಳ ಮೇಲೆ ಹೇರಲಾದ ಅಥವಾ ಹೊರಗಿನಿಂದ ಆಮದು ಮಾಡಿಕೊಳ್ಳಲಾದ ಯೋಜನೆಯಲ್ಲ. ಇದು ಸ್ಥಳೀಯರು ಭಾಗವಹಿಸುವ ಮೂಲಕ ಜಿಲ್ಲಾ ಮಟ್ಟದಲ್ಲಿಯೇ ತಯಾರಿಸಲಾದ ಯೋಜನೆಯಾಗಿರುತ್ತದೆ.
- ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯು ನಾಲ್ಕು ಗೋಡೆಗಳಿಗೆ ಸೀಮಿತವಾದ ಯೋಜನೆಯಲ್ಲ. ರಾಜ್ಯದಲ್ಲಿ ಹಾಗೂ ಹೊರ ರಾಜ್ಯಗಳ ವಿವಿಧ ಜಿಲ್ಲೆಗಳಲ್ಲಿನ ಉತ್ತಮ ಅಂಶಗಳ ವಿನಿಮಯಕ್ಕೆ ಇಲ್ಲಿ ಅವಕಾಶವಿದೆ.
- ಯೋಜನೆಯ ತಯಾರಿ ಮತ್ತು ಪ್ರಸ್ತುತಪಡಿಸುವಿಕೆಯಲ್ಲಿ ವೃತ್ತಿ ಪ್ರಾವೀಣ್ಯತೆಗೆ ಒತ್ತು ಕೊಡಲಾಗಿದೆ.
- ಜಿಲ್ಲೆಗಳ ಆಯ್ಕೆಯಲ್ಲಿ ಸೂಕ್ತ ಮಾನದಂಡವನ್ನು(ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ, ಮಹಿಳಾ ಸಾಕ್ಷರತೆ, ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದು ಹಾಗೂ ಸಂಪೂರ್ಣ ಸಾಕ್ಷರತಾ ಆಂದೋಲನದ ಫಲವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಿರುವುದು) ಅನುಸರಿಸಲಾಗಿದೆ.
- ಪ್ರಾಥಮಿಕ ಶಿಕ್ಷಣದೊಡನೆ ಇತರೆ ಸೇವೆಗಳಾದ ಸಮಗ್ರ ಬಾಲ ವಿಕಾಸ ಯೋಜನೆ, ಆರೋಗ್ಯ ಸೇವೆಗಳನ್ನು ಹತ್ತಿರ ತರಲು ಒತ್ತು ಕೊಡಲಾಗಿದೆ.
- ಯೋಜನೆಯ ಅನುಷ್ಠಾನದಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ.
- ಅನೌಪಚಾರಿಕ ಶಿಕ್ಷಣಕ್ಕೆ ಒತ್ತು ಕೊಡಲಾಗಿದೆ.
- ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಯೋಜನೆಗಳ ತಯಾರಿ, ಅನುಷ್ಠಾನ, ಆಡಳಿತ

ನಿರ್ವಹಣೆ, ಮೌಲ್ಯಮಾಪನ ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಜಿಲ್ಲಾಮಟ್ಟದ, ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಸಂಸ್ಥೆಗಳ ಸಾಮರ್ಥ್ಯವನ್ನು ಉತ್ತಮ ಪಡಿಸುವುದಕ್ಕೆ ಆದ್ಯತೆ ಕೊಡಲಾಗಿದೆ.

- ಯೋಜನೆಯ ಒಟ್ಟು ವೆಚ್ಚದ ಶೇ. ೭೦ರಷ್ಟು ಅಂಶವನ್ನು ಶೈಕ್ಷಣಿಕವಾದ ಉದ್ದೇಶಗಳಿಗೆ ನಿಗದಿ ಮಾಡಲಾಗಿದೆ.

೬.೩. ಯೋಜಿತ ಕಾರ್ಯ ಚಟುವಟಿಕೆಗಳು

- ಶಾಲಾ ಸೌಲಭ್ಯಗಳಿಲ್ಲದ ಗ್ರಾಮ ಹಾಗೂ ವಸತಿ ಪ್ರದೇಶದಲ್ಲಿ ಹೊಸದಾಗಿ ಶಾಲೆಗಳನ್ನು ತೆರೆದು ಶಿಕ್ಷಕರನ್ನು ನೇಮಕ ಮಾಡುವುದು ಹಾಗೂ ಶಾಲಾ ಕಟ್ಟಡಗಳ ನಿರ್ಮಾಣ.
- ಹಾಲಿ ಇರುವ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ಕಟ್ಟಡಗಳಿಗೆ ದೊಡ್ಡ ಪ್ರಮಾಣದ ದುರಸ್ಥಿ ಕಾರ್ಯ.
- ಸಾಧ್ಯವಾದ ಎಲ್ಲಾ ಕಡೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ಒದಗಿಸುವುದು.
- ಹೊಸ ಶಾಲೆಗಳಿಗೆ ಹಾಗೂ ಹಾಲಿ ಇರುವ ಎಲ್ಲಾ ಶಾಲೆಗಳಿಗೆ ಬೋಧನಾ ಕಲಿಕಾ ಉಪಕರಣಗಳನ್ನು ಒದಗಿಸುವುದು.
- ಮಕ್ಕಳಿಗೆ ಪೂರಕ ವಾಚನ ಪುಸ್ತಕಗಳು, ಅಭ್ಯಾಸ ಪುಸ್ತಕಗಳು ಮತ್ತು ಶಿಕ್ಷಕರ ಕೈಪಿಡಿಗಳ ರಚನೆ, ಮುದ್ರಣ ಹಾಗೂ ಸರಬರಾಜು.
- ಗ್ರಾಮ ಶಿಕ್ಷಣ ಸಮಿತಿ, ಸ್ಥಳೀಯ ಶಿಕ್ಷಣ ಸಮಿತಿ ಹಾಗೂ ಮಾತೆ ಶಿಕ್ಷಕಿ ಸಂಘಗಳ ಸ್ಥಾಪನೆ ಹಾಗೂ ತರಬೇತಿ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯನ್ನು ಬಲಪಡಿಸುವುದು.
- ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಕರಿಗೆ ನಿರಂತರವಾಗಿ ಸೇವಾ ನಿರತ ತರಬೇತಿ ವ್ಯವಸ್ಥೆ ಮಾಡುವುದು.
- ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಮಾಹಿತಿ ಗಣಕೀಕರಣ ವ್ಯವಸ್ಥೆ ಮಾಡುವುದು.
- ಶೈಕ್ಷಣಿಕ ಆಡಳಿತಗಾರರು ಹಾಗೂ ಮೇಲ್ವಿಚಾರಕ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವುದು.

ಆಡಳಿತ ವ್ಯವಸ್ಥೆ : ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಕರ್ನಾಟಕ ಪ್ರಾಥಮಿಕ ಶಿಕ್ಷಣ ವಿಕಾಸ ಯೋಜನಾ ಸಮಿತಿ ಎಂಬ ಸಂಸ್ಥೆ(ಸೊಸೈಟಿ)ಯನ್ನು ಸ್ಥಾಪಿಸಿದೆ. ಈ ಸಂಸ್ಥೆಯನ್ನು ಸಂಘ ಸಂಸ್ಥೆಗಳ ನೋಂದಣಿ

ಕಾಯಿದೆ ಅನುಸಾರವಾಗಿ ನೊಂದಾಯಿಸಲಾಗಿದೆ. ನಿರ್ವಹಣಾ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಸಂಸ್ಥೆಯು ಎರಡು ಪ್ರಮುಖ ಅಂಗಗಳಾಗಿವೆ.

ನಿರ್ವಹಣಾ ಮಂಡಳಿ : ಯೋಜನೆಯ ಅನುಷ್ಠಾನದಲ್ಲಿ ಉನ್ನತಾಧಿಕಾರವುಳ್ಳ ಈ ಸಮಿತಿಗೆ ರಾಜ್ಯದ ಮುಖ್ಯಮಂತ್ರಿಯವರು, ಅಧ್ಯಕ್ಷರು, ಪ್ರಾಥಮಿಕ ಶಿಕ್ಷಣ ಸಚಿವರು, ಉಪಾಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಭಾರತ ಸರ್ಕಾರದ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಈ ಸಮಿತಿಯು ವರ್ಷಕ್ಕೊಮ್ಮೆ ಸಭೆ ಸೇರಿ ಪ್ರಮುಖವಾದ ನೀತಿ ನಿರ್ಣಯಗಳನ್ನು ಕೈಗೊಳ್ಳುವುದು.

ಕಾರ್ಯಕಾರಿ ಸಮಿತಿ : ಯೋಜನೆಯ ಅನುಷ್ಠಾನಕ್ಕೆ ಅಗತ್ಯವೆನಿಸಿದ ಆಡಳಿತಾತ್ಮಕ ವ್ಯವಹಾರ ವನ್ನು ನಿಯಂತ್ರಿಸುವ ಸಮಿತಿ ಇದಾಗಿರುತ್ತದೆ. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಯವರು/ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇದರ ಅಧ್ಯಕ್ಷರು. ಶಿಕ್ಷಣ ತಜ್ಞರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಭಾರತ ಸರ್ಕಾರದ ಪ್ರತಿನಿಧಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಹಾಗೂ ಶಿಕ್ಷಕರ ಸಂಘದ ಪ್ರತಿನಿಧಿಗಳು ಸದಸ್ಯರಾಗಿರುವ ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಅಥವಾ ಅಗತ್ಯವೆನಿಸಿದಾಗ ಸಭೆ ಸೇರುವುದು. ರಾಜ್ಯ ಯೋಜನಾ ನಿರ್ದೇಶಕರು ಮೇಲ್ಕಂಡ ಎರಡೂ ಸಮಿತಿಯ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

೬.೪. ರಾಜ್ಯ ಯೋಜನಾ ನಿರ್ದೇಶನಾಲಯ

ಭಾರತೀಯ ಆಡಳಿತ ಸೇವೆಯ ಪೂರ್ಣ ಕಾಲಿಕಾ ಯೋಜನಾ ನಿರ್ದೇಶಕರು ಮುಖ್ಯಸ್ಥ ರಾಗಿರುವ ಈ ನಿರ್ದೇಶನಾಲಯವು ಯೋಜನೆಗಳ ತಯಾರಿ, ಅನುಷ್ಠಾನ, ನಿಯತ ಕಾಲಿಕ ವರದಿಗಳ ಸಲ್ಲಿಕೆ, ಜಿಲ್ಲೆಗಳಿಗೆ ಮಾರ್ಗದರ್ಶನ ಮುಂತಾದ ದಿನನಿತ್ಯದ ಆಡಳಿತ ವ್ಯವಹಾರಗಳನ್ನು ನಿರ್ವಹಿಸುತ್ತದೆ.

ಜಿಲ್ಲಾ ಅನುಷ್ಠಾನ ಸಮಿತಿ : ಯೋಜನಾ ವ್ಯಾಪ್ತಿಯ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ. ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಸದಸ್ಯ ಕಾರ್ಯದರ್ಶಿ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿ ಯಾಗಿರುತ್ತಾರೆ. ಇತರೆ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಯ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು, ಶಿಕ್ಷಕರ ಸಂಘದ ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ವಾರ್ಷಿಕ ಕ್ರಿಯಾ ಯೋಜನೆಗಳ ತಯಾರಿ ಹಾಗೂ ಅನುಷ್ಠಾನ ಈ ಸಮಿತಿಯ ಜವಾಬ್ದಾರಿಯಾಗಿರುತ್ತದೆ.

ತಾಲೂಕು ಅನುಷ್ಠಾನ ಸಮಿತಿ : ತಾಲ್ಲೂಕು ಮಟ್ಟದಲ್ಲಿ ಯೋಜನೆಯ ಅನುಷ್ಠಾನವನ್ನು ಈ ಸಮಿತಿ ನೋಡಿಕೊಳ್ಳುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿ ಅಧ್ಯಕ್ಷರಾಗಿಯೂ, ಸಹಾಯಕ ಶಿಕ್ಷಣಾಧಿಕಾರಿ ಸಂಚಾಲಕರಾಗಿಯೂ ಇರುವ ಈ ಸಮಿತಿಯಲ್ಲಿ ಶಿಕ್ಷಕರ ಸಂಘದ ಪ್ರತಿನಿಧಿ, ಇನ್ನಿತರ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರಾಗಿರುತ್ತಾರೆ.

ಗ್ರಾಮ ಶಿಕ್ಷಣ ಸಮಿತಿ/ಸ್ಥಳೀಯ ಶಿಕ್ಷಣ ಸಮಿತಿ : ಗ್ರಾಮ ಮಟ್ಟದಲ್ಲಿ ಶಾಲೆಯ ಆಡಳಿತ ವ್ಯವಸ್ಥೆಯನ್ನು ನೋಡಿ ಕೊಳ್ಳಲು ಗ್ರಾಮ ಶಿಕ್ಷಣ ಸಮಿತಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸ್ಥಳೀಯ ಶಿಕ್ಷಣ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಆ ಗ್ರಾಮದಲ್ಲಿ ವಾಸವಾಗಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷ/ಸದಸ್ಯರು ಈ ಸಮಿತಿಯ ಅಧ್ಯಕ್ಷರು, ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ. ೭ರಿಂದ ೧೫ ಜನ ಸದಸ್ಯರಿರುವ ಈ ಸಮಿತಿಯಲ್ಲಿ ಕನಿಷ್ಠ ಮೂರನೇ ಒಂದು ಭಾಗ ಮಹಿಳೆಯರಿರುತ್ತಾರೆ. ಪರಿಶಿಷ್ಟ ಜಾತಿ/ವರ್ಗ, ಶಿಕ್ಷಣಾಸಕ್ತರು, ಅಲ್ಪಸಂಖ್ಯಾತರು ಮತ್ತಿತರ ವರ್ಗಗಳ ಸದಸ್ಯರಿರುತ್ತಾರೆ. ಶಾಲೆಗೆ ಸರ್ಕಾರದಿಂದ ಬರುವ ಅನುದಾನ ಹಾಗೂ ಸ್ಥಳೀಯವಾಗಿ ಸಂಗ್ರಹಿಸಲಾಗುವ ವಂತಿಗೆಯ ನಿರ್ವಹಣೆ, ದಾಖಲಾತಿಯನ್ನು ಉತ್ತಮ ಪಡಿಸುವುದು ಮತ್ತಿತರ ಶಾಲಾಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ ಈ ಸಮಿತಿಯ ಕರ್ತವ್ಯವಾಗಿರುತ್ತದೆ.

೬.೫. ಹಣಕಾಸು-ವೆಚ್ಚದ ಪರಿಮಿತಿಗಳು

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಗಾಗಿ ಭಾರತ ಸರ್ಕಾರವು ವಿಶ್ವಬ್ಯಾಂಕಿನಿಂದ ಪಡೆದ ಸಾಲದ ನೆರವಿನಿಂದ ರಾಜ್ಯದ ಸೊಸೈಟಿಗೆ ಒಟ್ಟು ವೆಚ್ಚದ ಶೇಕಡ ೮೫ರಷ್ಟನ್ನು ಅನುದಾನವನ್ನು ನೀಡುತ್ತದೆ. ಉಳಿದ ಶೇಕಡ ೧೫ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಬೇಕಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಳ್ಳದೇ ರಾಜ್ಯಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ೧೯೯೧-೯೨ನೇ ಸಾಲಿನಲ್ಲಿ ಮಾಡಿದ ವೆಚ್ಚವನ್ನು ಕನಿಷ್ಠವಾಗಿ ಮುಂದುವರೆಸಿಕೊಂಡು ಹೋಗ ಬೇಕೆಂಬ ಕಟ್ಟಳೆ ಇದೆ. ಯೋಜನಾ ಅವಧಿಯ ನಂತರ ಪುನರಾವರ್ತನೆಯಾಗುವ ವೆಚ್ಚಗಳ ಋಣಭಾರವನ್ನು ರಾಜ್ಯ ಸರ್ಕಾರವು ವಹಿಸಿಕೊಳ್ಳಬೇಕಾಗುತ್ತದೆ.

ಜಿಲ್ಲೆಗಳಿಗೆ ಮಂಜೂರಾಗುವ ಯೋಜನಾ ಮೊತ್ತವು ಏಕ ರೂಪವಾಗಿರಬೇಕೆಂಬ ನಿಬಂಧನೆಯಿಲ್ಲ. ಜಿಲ್ಲಾ ಯೋಜನೆಗಳ ಗಾತ್ರ ಹಾಗೂ ಅಗತ್ಯತೆಗಳಿಗನುಗುಣವಾಗಿ ಮತ್ತು ಅವಶ್ಯಕತೆಗಳ ಪ್ರತಿಪಾದನೆಯ ಆಧಾರದ ಮೇಲೆ ಜಿಲ್ಲೆಗಳಿಗೆ ಹಣವನ್ನು ಮಂಜೂರು ಮಾಡಲಾಗುತ್ತದೆ. ಈ ಮಂಜೂರಾತಿಯು ಒಂದು ಜಿಲ್ಲೆಗೆ ಗರಿಷ್ಠ ೩೦-೪೦ ಕೋಟಿ ರೂಪಾಯಿಗಳವರೆಗೂ ಇರಬಹುದಾಗಿದೆ. ಒಟ್ಟು ಯೋಜನಾ ವೆಚ್ಚದಲ್ಲಿ ಕಟ್ಟಡ ನಿರ್ಮಾಣಕ್ಕೆ ಶೇ. ೨೪, ಆಡಳಿತ ವೆಚ್ಚ ಶೇ. ೬ ಎಂಬುದಾಗಿ ಮಿತಿಗೊಳಿಸಿ ಉಳಿದ ಸುಮಾರು ಶೇ. ೭೦ರಷ್ಟು ಹಣವನ್ನು ಶೈಕ್ಷಣಿಕ ಉದ್ದೇಶಗಳಿಗೆ ಖರ್ಚು ಮಾಡಬೇಕೆಂಬ ನಿಬಂಧನೆ ಇದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮೂಲಕ ರಾಜ್ಯಕ್ಕೆ ಸಂದಾಯವಾಗಬೇಕಾದ ಅನುದಾನದ ಮೊತ್ತವು ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ಪ್ರಾಥಮಿಕ ಶಿಕ್ಷಣ ವಿಕಾಸ ಯೋಜನಾ ಸಮಿತಿ ಎಂಬ ನೊಂದಾಯಿತ ಸಂಸ್ಥೆಗೆ ಬಿಡುಗಡೆಯಾಗುತ್ತದೆ. ರಾಜ್ಯ ಸಮಿತಿಯಿಂದ ಜಿಲ್ಲೆಗಳ ಅಗತ್ಯಕ್ಕನುಗುಣವಾಗಿ ಜಿಲ್ಲಾ ಅನುಷ್ಠಾನ ಸಮಿತಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

೬.೬. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ವಿವಿಧ ಕಾರ್ಯಕ್ರಮಗಳು

೧. ಶಾಲಾ ಸೌಲಭ್ಯ ಒದಗಿಸುವುದು

೧. ಹೊಸ ಶಾಲೆಗಳನ್ನು ಪ್ರಾರಂಭಿಸುವುದು, ಶಾಲಾ ಕಟ್ಟಡ ನಿರ್ಮಾಣ, ಶೌಚಾಲಯ ನಿರ್ಮಾಣ ಮತ್ತು ನೀರಿನ ಸೌಲಭ್ಯ ಒದಗಿಸುವುದು.

❖ ಕನಿಷ್ಠ ೨೦೦ ಜನಸಂಖ್ಯೆ ಹೊಂದಿದ್ದು ಸುಮಾರು ೨೦ ವಿದ್ಯಾರ್ಥಿಗಳು ದೊರೆಯುವ ಶಾಲೆಗಳು ಇಲ್ಲದ ಹಳ್ಳಿಗಳು ಮತ್ತು ಜನವಸತಿ ಸ್ಥಳಗಳಲ್ಲಿ ಯೋಜನೆಯ ವತಿಯಿಂದ ಹೊಸದಾಗಿ ಶಾಲೆಗಳನ್ನು ತೆರೆದು ಶಿಕ್ಷಕರ ನೇಮಕಾತಿ ಮಾಡಿ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲಾಗುವುದು.

❖ ಇಂತಹ ಸ್ಥಳಗಳನ್ನು ಗುರುತಿಸುವ ಜವಾಬ್ದಾರಿಯು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಅವರದ್ದಾಗಿರುತ್ತದೆ.

❖ ಸ್ಥಳವನ್ನು ಗುರುತಿಸುವಾಗ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ಪಂಗಡದ ವಿದ್ಯಾರ್ಥಿಗಳು ಜಾಸ್ತಿ ಇರುವ ಹಾಗೂ ಶಾಲೆಗೆ ಬರಬೇಕಾದ ಹೆಣ್ಣು ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಪ್ರಾತಿನಿಧ್ಯ ನೀಡಲಾಗುವುದು.

❖ ಈ ಸ್ಥಳಗಳನ್ನು ಜಿಲ್ಲಾ ಅನುಷ್ಠಾನ ಸಮಿತಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು.

❖ ಪ್ರತಿಯೊಂದು ಶಾಲೆಗೆ ಪ್ರಥಮ ವರ್ಷದಲ್ಲಿ ಒಬ್ಬರು ಶಿಕ್ಷಕರನ್ನು, ಎರಡನೇ ವರ್ಷದಲ್ಲಿ ಇನ್ನೊಬ್ಬರು ಶಿಕ್ಷಕರನ್ನು ನೇಮಕ ಮಾಡಲಾಗುವುದು. ಶಿಕ್ಷಕರನ್ನು ನೇಮಕಾತಿ ನಿಯಮಗಳ ಪ್ರಕಾರ ಜಿಲ್ಲಾ ಮಟ್ಟದ ಸಂಪನ್ಮೂಲ ಮೂಲಕ ನೇಮಕ ಮಾಡಲಾಗುವುದು. ಕೇಂದ್ರಕ್ಕೆ ಸ್ಥಳೀಯರಾದ, ಗ್ರಾಮಸ್ಥರಿಂದಲೇ ಆಯ್ಕೆಯಾದ ೧೦ನೇ ತರಗತಿ ಪಾಸಾದ ಬೋಧಕರನ್ನು ನೇಮಕ ಮಾಡಲಾಗುವುದು. ಈ ನೇಮಕಾತಿ ಪತ್ರವನ್ನು ಗ್ರಾಮ ಶಿಕ್ಷಣ ಸಮಿತಿಯೇ ನೀಡುವುದು. ಈ ಬೋಧಕರಿಗೆ ಮಾಸಿಕ ಒಂದು ಸಾವಿರ ರೂಪಾಯಿಗಳ ಸಂಭಾವನೆಯನ್ನು ಗ್ರಾಮ ಶಿಕ್ಷಣ ಸಮಿತಿಯ ಮೂಲಕ ಪಾವತಿ ಮಾಡಲಾಗುವುದು. ಅಲ್ಲದೇ, ಕಲಿಕಾ ಕೇಂದ್ರಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಯೋಜನೆಯಿಂದ ಪೂರೈಸಲಾಗುವುದು.

ಅಂಗನವಾಡಿ ಕೇಂದ್ರಗಳನ್ನು ಬಲಪಡಿಸುವುದು : ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆಗೆ ಗೈರುಹಾಜರಿ ಆಗುವುದನ್ನು ತಪ್ಪಿಸುವುದು ಈ ಶಾಲೆಗೆ ಗೈರುಹಾಜರಾಗುವುದರಿಂದ ಅರ್ಧದಿನ ಮಾತ್ರ ಕಾರ್ಯನಿರ್ವಹಿಸುವ ಅಂಗನವಾಡಿ ಕೇಂದ್ರಗಳ ಕೆಲಸದ ವೇಳೆಯನ್ನು ಪೂರ್ತಿ ದಿನಕ್ಕೆ ಅಂದರೆ ಶಾಲಾ ಸಮಯದ ಜೊತೆಗೆ ಸರಿಹೊಂದುವಂತೆ ವಿಸ್ತರಿಸುವುದು. ಇದರಿಂದ ಚಿಕ್ಕಮಕ್ಕಳನ್ನು ಅಂಗನವಾಡಿ ಕೇಂದ್ರದಲ್ಲಿ ಬಿಟ್ಟು ಹೆಣ್ಣುಮಕ್ಕಳು ಶಾಲೆಗೆ ಹಾಜರಾಗಲು ಅನುಕೂಲವಾಗುತ್ತದೆ. ಈ ಹೆಚ್ಚುವರಿ ಕೆಲಸಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ವತಿಯಿಂದ ನಿಯಮಾನುಸಾರ ಸಂಭಾವನೆಯನ್ನು ನೀಡಲಾಗುವುದು. ಈ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಪ್ರತಿ ಜಿಲ್ಲೆಯಲ್ಲಿ ಆಯ್ದ ಒಂದು ಕ್ಷೇತ್ರದಲ್ಲಿ ಕಾರ್ಯಗತಗೊಳಿಸಲಾಗುತ್ತದೆ. ಇದರ ಯಶಸ್ಸಿನ ಬಗ್ಗೆ ಒಂದು ಅಧ್ಯಯನ ನಡೆಸಿ ನಂತರ ಉಳಿದ ಕ್ಷೇತ್ರಗಳಿಗೆ ವಿಸ್ತರಿಸಲು ಪರಿಶೀಲಿಸಲಾಗುವುದು.

ಗ್ರಾಮ ಶಿಕ್ಷಣ ಪ್ರೇರಕರ ನೇಮಕ : ವಾಹನ ಸಂಪರ್ಕವಿಲ್ಲದ, ಮುಖ್ಯ ರಸ್ತೆಗಳಿಂದ ದೂರವಿರುವ ಗ್ರಾಮಗಳಲ್ಲಿ ಶಿಕ್ಷಕರು ಆಗಾಗ ಶಾಲಾ ಕೆಲಸಕ್ಕೆ ಗೈರುಹಾಜರಾಗುವ ಸಂಭವವಿರುತ್ತದೆ. ಕೆಲವು ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರ ಮಕ್ಕಳ ಅನುಪಾತ ಹೆಚ್ಚಾಗಿದ್ದು, ಎಲ್ಲಾ ಮಕ್ಕಳಿಗೆ ಸೂಕ್ತ ಗಮನ ಕೊಡಲು ಶಿಕ್ಷಕರಿಗೆ ಸಾಧ್ಯವಾಗದೇ ಇರುವ ಸಂಭವವಿರುತ್ತದೆ. ಇಂತಹ ಸಂದರ್ಭಗಳಲ್ಲಿ ಗ್ರಾಮದ ಸ್ಥಳೀಯ ವಿದ್ಯಾವಂತರ ಪೈಕಿ ಒಬ್ಬರನ್ನು ಗ್ರಾಮ ಶಿಕ್ಷಣ ಸಮಿತಿಯ ಶಿಫಾರಸ್ಸಿನ ಪ್ರಕಾರ ಆಯ್ಕೆ ಮಾಡಿ ಗ್ರಾಮ ಶಿಕ್ಷಣ ಪ್ರೇರಕರು ಎಂಬುದಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ ಒಂದು ತಿಂಗಳಿಗೆ ರೂ. ೧೦೦೦/- ಸಂಭಾವನೆ ನೀಡಲು ಅವಕಾಶವಿದೆ. ಗ್ರಾಮದಲ್ಲಿ ಶಾಲೆಗೆ ಹಾಜರಾಗದೇ ಇರುವ ಅದರಲ್ಲೂ ಹೆಣ್ಣುಮಕ್ಕಳನ್ನು ಶಾಲೆಗೆ ಹಾಜರಾಗುವಂತೆ ಮಾಡುವುದೇ ಈ ಗ್ರಾಮ ಶಿಕ್ಷಣ ಪ್ರೇರಕರ ಕರ್ತವ್ಯವಾಗಿದೆ.

ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು : ೬ರಿಂದ ೧೪ರ ವಯೋಮಿತಿಯ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಂಡು ಅವರು ಮಧ್ಯದಲ್ಲಿ ಶಾಲೆ ಬಿಡದಂತೆ ಉಳಿಸಿಕೊಳ್ಳುವುದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯ ಧ್ಯೇಯವಾಗಿದೆ. ಅದಕ್ಕಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜನಜಾಗೃತಿ ಕಾರ್ಯಕ್ರಮ

ಜನರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸುವ ಸಲುವಾಗಿ ಮಕ್ಕಳನ್ನು ಶಾಲೆಯಲ್ಲಿ ಉಳಿಸಿ ಶೈಕ್ಷಣಿಕ ಪ್ರಗತಿಯನ್ನುಂಟು ಮಾಡುವ ಸಲುವಾಗಿ ಕೆಳಕಂಡಂತೆ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ. ಕಲಾಜಾಥ : ಕಲಾಜಾಥವು ತಾಲೂಕು ಮಟ್ಟದಲ್ಲಿ ನಡೆಸುವ ಒಂದು ಕಾರ್ಯಕ್ರಮ. ಈ ಉದ್ದೇಶಕ್ಕಾಗಿ ಸ್ಥಳೀಯ ಕಲಾವಿದರನ್ನೊಳಗೊಂಡ ಒಂದು ತಂಡವನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗುತ್ತದೆ. ಈ ತಂಡವು ಸಮಸ್ಯಾತ್ಮಕ ಗ್ರಾಮಗಳಿಗೆ ಭೇಟಿಕೊಟ್ಟು ಶಿಕ್ಷಣದ ಪ್ರಾಮುಖ್ಯತೆಯನ್ನು ಬಿಂಬಿಸುವ, ಅಗತ್ಯ ಸಂದೇಶಗಳನ್ನು ಒಳಗೊಂಡ ಬೀದಿ ನಾಟಕ, ಹಾಡು, ನೃತ್ಯ, ಪ್ರಹಸನ ಮುಂತಾದ ಕಲಾ ಪ್ರಕಾರಗಳ ಮೂಲಕ ಪ್ರದರ್ಶಿಸಿ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿಯನ್ನುಂಟು ಮಾಡುತ್ತದೆ. ಈ ತಂಡವು ಪ್ರದರ್ಶಿಸುವ ಕಾರ್ಯಕ್ರಮಗಳಲ್ಲಿ ಹಾಜರಾತಿ ಉತ್ತಮ ಪಡಿಸಲು ಸಹಕಾರಿಯಾಗುವ ಅಂಶವಿರುತ್ತದೆ. ಇದಲ್ಲದೆ ಜೀತ ಪದ್ಧತಿ, ಬಾಲ್ಯ ವಿವಾಹ, ವರದಕ್ಷಿಣೆ, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಮುಂತಾದ ಅಂಶಗಳನ್ನು ಒಳಗೊಂಡಿರುತ್ತದೆ.

ಆ. ಚಿಣ್ಣರ ಮೇಳ : ಈ ಮೇಳದ ಉದ್ದೇಶವೇನೆಂದರೆ, ಪ್ರಾಥಮಿಕ ಶಿಕ್ಷಣ ಕಲಿಕೆಯ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ನಂಬಿಕೆಯನ್ನು ಮೂಡಿಸುವುದು ಹಾಗೂ ಮಕ್ಕಳಿಗೆ ಕಲಿಕೆಯ ಆಕರ್ಷಕ ಮತ್ತು ಹರ್ಷದಾಯಕವಾಗಿರುವಂತೆ ಮಾಡುವುದು. ಮೇಳದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಒಂದು ಸಮೂಹ ಸಂಪನ್ಮೂಲ ಸಮಿತಿ ವ್ಯಾಪ್ತಿಯಲ್ಲಿ ಬರುವ ೫–೬ ಶಾಲೆಗಳಿಂದ ಆಯ್ದ ವಿದ್ಯಾರ್ಥಿಗಳ ತಂಡವು ಸಮೂಹದ ಆಯ್ದ ಒಂದು ಊರಿನಲ್ಲಿ(ಹಳ್ಳಿಯಲ್ಲಿ) ೩ ದಿನಗಳ ಕಾಲ ಉಳಿದುಕೊಂಡು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವರು. ಚಿತ್ರ ಬರೆಯುವುದು, ಕಾಗದದ ಕಲೆ, ಕತೆ ಹೇಳುವುದು, ಹಾಡು, ನೃತ್ಯ, ಊರು ಸುತ್ತಿ ಅನುಭವ ಪಡೆಯವುದು, ನಿಸರ್ಗದ ಅಧ್ಯಯನ ಮತ್ತು ರಂಗೋಲಿ ಬಿಡಿಸುವುದು, ಜೇಡಿಮಣ್ಣಿನಿಂದ ಆಕೃತಿಗಳ ತಯಾರಿಕೆ ಮುಂತಾದ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿರುವ ಪ್ರತಿಭೆ ಹಾಗೂ ಕೌಶಲ್ಯವನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗುವುದು.

ಸ್ಥಳೀಯ ಪೋಷಕರ (ಮೇಳ ನಡೆಯುವ ಹಳ್ಳಿಯ) ಕೆಲವು ಮನೆಗಳಲ್ಲಿ ಈ ತಂಡದ ಒಂದೊಂದು ಮಗುವು (ವಿದ್ಯಾರ್ಥಿಯು) ಮೂರು ದಿನಗಳು ಇರುವ ಅವಕಾಶ ಕಲ್ಪಿಸಿ ಕೊಡುವುದು. ಈ ಅವಧಿಯಲ್ಲಿ ಸದರಿ ಮಗುವು ಆಯಾ ಕುಟುಂಬದ ರೀತಿ–ನೀತಿ, ಆಚಾರ–ವಿಚಾರ, ಜೀವನ ವಿಧಾನಗಳ ಬಗ್ಗೆ ತಿಳಿದುಕೊಳ್ಳಲು ಸಹಾಯವಾಗುವುದು. ಈ ಮೇಳವು ೯ ವಿಷಯಗಳನ್ನು ಹೊಂದಿರುತ್ತದೆ.

೧. ಸುತ್ತಾಡೋಣ(ವಿಹಾರ)
೨. ಸೃಜನ ಶೀಲತೆ
೩. ಆಡಿ ನಲಿ
೪. ಮಾಡಿ ನೋಡು
೫. ಕಥೆ ಕಟ್ಟೋಣ
೬. ಸವಾಲು ಜವಾಬು
೭. ಓರಿಗಾಮಿ
೮. ಹಾಡುಗಳು
೯. ಆಟಗಳು

ಇ. ಗ್ರಾಮೀಣ ಶಿಕ್ಷಣ ಸಮಿತಿಯ ಮೇಳ : ಈ ಮೇಳವು ೧ ದಿನದ ಕಾರ್ಯಕ್ರಮವಾಗಿರುತ್ತದೆ. ಇದು ಕ್ಷೇತ್ರ ಮಟ್ಟದಲ್ಲಿ ನಡೆಯುತ್ತದೆ. ಈ ಮೇಳದಲ್ಲಿ ಹೆಣ್ಣುಮಕ್ಕಳ ಶಿಕ್ಷಣ, ಗಂಡು-ಹೆಣ್ಣು ಮಕ್ಕಳ ಸಮಾನತೆಗೆ ಒತ್ತುಕೊಡುವ ಬಗ್ಗೆ ಚರ್ಚಿಸಲಾಗುತ್ತದೆ.

❖ ಗ್ರಾಮೀಣ ಶಿಕ್ಷಣ ಸಮಿತಿಯ ಮೇಳದಲ್ಲಿ ಶಿಕ್ಷಕರು/ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಭಾಗವಹಿಸಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಲು ಅನುಕೂಲವಾಗುತ್ತದೆ.

❖ ಯಾವುದಾದರೂ ಒಂದು ಗ್ರಾಮದಲ್ಲಿ ಕೈಗೊಂಡ ಶಾಲಾಭಿವೃದ್ಧಿ ಕಾರ್ಯಕ್ರಮಗಳನ್ನು ತಿಳಿದುಕೊಂಡು, ಈ ಮೇಳದಲ್ಲಿ ಚರ್ಚಿಸಿ ತಮ್ಮ ಗ್ರಾಮದಲ್ಲೂ ಅಳಡಿಸಿಕೊಳ್ಳಲು ಅನುಕೂಲ ವಾಗುವಂತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ.

ಈ. ಮನೆ ಭೇಟಿ ಮೇಳ : ಮಕ್ಕಳ ದಾಖಲಾತಿಗಾಗಿ ಅದರಲ್ಲಿಯೂ ಹೆಣ್ಣುಮಕ್ಕಳನ್ನು ಶಾಲೆಯೆಡೆಗೆ ತರಲು ಈ ಪ್ರಯತ್ನವಾಗಿದೆ.

❖ ಇದು ಒಂದು ದಿನದ ಕಾರ್ಯಕ್ರಮ ಮತ್ತು ಅಗತ್ಯಕ್ಕೆ ತಕ್ಕಂತೆ ಸಮಯವನ್ನು ನಿಗದಿಗೊಳಿಸಬಹುದು.

❖ ಈ ಕಾರ್ಯಕ್ರಮದಲ್ಲಿ ಸಮೂಹದ ಸುತ್ತಮುತ್ತಲಿನ ಶಾಲೆಯ ಹೆಣ್ಣುಮಕ್ಕಳ ತಾಯಂದಿರನ್ನು ಕರೆಯಿಸಿ ಒಂದೇ ಕಡೆ ಸೇರಿಸಿ ಈ ಕಾರ್ಯಕ್ರಮವನ್ನು ನಡೆಸುತ್ತಾರೆ.

❖ ಈ ಕಾರ್ಯಕ್ರಮದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಅವಶ್ಯಕತೆ, ಗಂಡು-ಹೆಣ್ಣು ಮಕ್ಕಳ ನಡುವಿನ ಸಮಾನತೆ, ಪೌಷ್ಠಿಕ ಆಹಾರ ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಾರೆ, ಸ್ಥಳೀಯ ವೈದ್ಯರನ್ನು ಕರೆಯಿಸಿ ಮಕ್ಕಳ ಆರೋಗ್ಯ ಶಿಕ್ಷಣದ ಬಗ್ಗೆ ತಪಾಸಣೆ ಸಹ ನಡೆಸುತ್ತಾರೆ.

❖ ವಿವಿಧ ಹುದ್ದೆಯಲ್ಲಿ ಪ್ರಮುಖ ಸ್ತ್ರೀಯರನ್ನು ಕರೆಯಿಸಿ ಮಕ್ಕಳ ಮತ್ತು ಇತರ ವಿಷಯಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ.

ಉ. ಪ್ರಚಾರ ಮಾಧ್ಯಮದ ಸಾಮಗ್ರಿ: ಜನಜಾಗೃತಿ ಕಾರ್ಯಕ್ರಮಗಳಲ್ಲಿ ಬಳಸಬಹುದಾದ ವಿವಿಧ ಮಾಧ್ಯಮ ಸಾಮಗ್ರಿಗಳನ್ನು ಪ್ರಚಾರ ಮಾಧ್ಯಮ ಸಾಮಗ್ರಿ ಎಂದು ಕರೆಯಬಹುದು. ಭಿತ್ತಿ ಚಿತ್ರಗಳು, ಧ್ವನಿ ಸುರಳಿ, ಶ್ರವ್ಯ ದೃಶ್ಯ ಸುರುಳಿಗಳು, ಚಲನಚಿತ್ರಗಳು, ಸ್ಥಿರಚಿತ್ರಗಳು, ಬ್ಯಾನರ್‌ಗಳು ಇತ್ಯಾದಿ ಸಾಮಗ್ರಿಗಳ ಮೂಲಕ ಸಮುದಾಯದಲ್ಲಿ ಶಿಕ್ಷಣದ ಬಗ್ಗೆ ಅರಿವನ್ನು ಉಂಟುಮಾಡಬಹುದು. ಇದೇ ಸಾಧನೆಗಳ ಮೂಲಕ ಗ್ರಾಮ ಶಿಕ್ಷಣ ಸಮಿತಿ ಮೇಳ, ಕಲಾಜಾಥ ಇತ್ಯಾದಿಗಳ ಬಗ್ಗೆ ಪ್ರಚಾರ ನೀಡಿ ಜನಗಳಿಗೆ ತಿಳುವಳಿಕೆ ನೀಡಬಹುದು.

ಸೂಕ್ಷ್ಮ ಯೋಜನೆ : ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಸಮುದಾಯದ ಭಾಗವಹಿಸುವಿಕೆ ಅತ್ಯಂತ ಪ್ರಾಮುಖ್ಯವಾದ ಅಂಶ. ಶೈಕ್ಷಣಿಕ ಸಮಸ್ಯೆಗಳು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಭಿನ್ನವಾಗಿದ್ದು, ನಾವು ಶೈಕ್ಷಣಿಕ ಕಾರ್ಯ ಯೋಜನೆಯನ್ನು ರೂಪಿಸಬೇಕೆಂದರೆ ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸಬೇಕಾದ ಅವಶ್ಯಕತೆ ಇದೆ.

* ಸೂಕ್ಷ್ಮ ಯೋಜನೆ ಒಂದು ನಿರಂತರ ಚಟುವಟಿಕೆ ಇದರ ಮೂಲಕ ಸಮುದಾಯದ ಭಾಗವಹಿಸುವಿಕೆ ಸಾಧ್ಯವಾಗುತ್ತದೆ.
* ಭಾಗವಹಿಸುವ ಮೂಲಕ ಸಮುದಾಯಕ್ಕೆ ಪ್ರಾಥಮಿಕ ಶಿಕ್ಷಣದ ಅಗತ್ಯತೆಯ ಬಗ್ಗೆ ಅರಿವು ಮೂಡುತ್ತದೆ.
* ಹಳ್ಳಿಯ ನಿರ್ದಿಷ್ಟ ಕಾರ್ಯ ಯೋಜನೆ ರೂಪಿಸಲು ಸಾಧ್ಯವಾಗುತ್ತದೆ.
* ಜನರಿಗೂ ಸಹ ತಮ್ಮ ಹಳ್ಳಿಗಳಲ್ಲಿ ಮಕ್ಕಳು ಯಾವ ಕಾರಣಗಳಿಂದ ಶಾಲೆಗೆ ಹೋಗಲು ತೊಂದರೆಯಾಗಿದೆ ಎಂಬ ಅರಿವು ಮೂಡುತ್ತದೆ.
* ಇದರಲ್ಲಿ ಸಾಮಾಜಿಕ ಋತುಮಾನದ ನಕ್ಷೆಗಳನ್ನು ಗ್ರಾಮಸ್ಥರೇ ಬರೆದು ಬಿಡಿಸಿ ಆ ಊರಿನಲ್ಲಿರುವ ಶಿಕ್ಷಣಕ್ಕೆ ಸಂಬಂಧಪಟ್ಟ ಅಡಚಣೆಗಳನ್ನು ಗುರುತಿಸುತ್ತಾರೆ.
* ಮಕ್ಕಳ ಜವಾಬ್ದಾರಿ ನಕ್ಷೆಯ ಮುಖಾಂತರ ಅವರು ಮಾಡುವ ದಿನಚರಿ ಮತ್ತು ಅವರಿಗಿರುವ ಕೆಲಸದ ಒತ್ತಡ ಜನರಿಗೆ ಅರ್ಥವಾಗುತ್ತದೆ.

ಸೂಕ್ಷ್ಮ ಯೋಜನೆಯಲ್ಲಿ ಭಾಗಿಯಾಗಿ ಮನೆಯಿಂದ ಮನೆಗೆ ಹೋಗಿ ಸಮೀಕ್ಷೆ ನಡೆಸಿ ಪ್ರತಿಯೊಂದು ಮಗುವಿಗಿರುವ ತೊಂದರೆಯನ್ನು ಅಂದರೆ ಯಾವ ಕಾರಣಕ್ಕಾಗಿ ಶಾಲೆಗೆ ಹೋಗುತ್ತಿಲ್ಲ ಎಂಬ ಬಗ್ಗೆ ಅರ್ಥೈಸಿಕೊಂಡು ಹಳ್ಳಿಯಲ್ಲಿರುವ ಪ್ರತಿಯೊಂದು ಮಗುವಿಗೆ ತಕ್ಕಂತಹ ಶೈಕ್ಷಣಿಕ ವಿನ್ಯಾಸವನ್ನು ರೂಪಿಸಲು ಅನುವು ಮಾಡಿಕೊಡುತ್ತಾರೆ. ಪ್ರತಿಯೊಂದು ಮಗುವು ಶಾಲೆಗೆ ಹೋಗಲು ಅಡಚಣೆಗಳನ್ನು ಗುರುತಿಸಿ ಗ್ರಾಮ ಶಿಕ್ಷಣ ಸಮಿತಿಯ ವತಿಯಿಂದ ಸೂಕ್ಷ್ಮ ಯೋಜನೆಯ ಭಾಗವಾಗಿ ರೂಪಿಸಲಾಗುತ್ತದೆ.

ಗ್ರಾಮ ಶಿಕ್ಷಣ ವತಿಯಲ್ಲಿ ಶಾಲೆಗೆ ಬಾರದಿರುವ ಮತ್ತು ದಾಖಲಾಗದೇ ಇರುವ ಮಕ್ಕಳ ಹೆಸರು/ವಯಸ್ಸು, ತಂದೆ, ತಾಯಿ ಹೆಸರು, ವೃತ್ತಿ, ವಿದ್ಯಾರ್ಹತೆಗಳನ್ನು ಗುರುತಿಸಲಾಗುತ್ತಿದೆ. ಸೂಕ್ಷ್ಮ ಯೋಜನೆಯ ಮುಖಾಂತರ ಗ್ರಾಮ ಶಿಕ್ಷಣ ಸಮಿತಿಗಳಿಗೆ ಜವಾಬ್ದಾರಿ ಹೆಚ್ಚಿಸಿ ಅವುಗಳನ್ನು ಬಲಗೊಳಿಸಲಾಗುತ್ತದೆ. ಎಲ್ಲಾ ಮೂಲಗಳಿಂದ ಸಂಗ್ರಹಿಸಿದಂತಹ ಶೈಕ್ಷಣಿಕ ಮಾಹಿತಿಗಳನ್ನು ಕ್ರೋಢೀಕರಿಸಿ ಗ್ರಾಮಸ್ಥರೇ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಒಂದು ಕಾರ್ಯ ಯೋಜನೆಯನ್ನು ರೂಪಿಸಿ ಪ್ರತಿಯೊಂದು ವಿಷಯಕ್ಕೆ ನಿಯಮಿತವಾದ ಕಾಲಾವಧಿಯನ್ನು ಗೊತ್ತುಪಡಿಸುತ್ತಾರೆ.

ಸೂಕ್ಷ್ಮ ಯೋಜನೆಯ ತರಬೇತಿ ಕೈಪಿಡಿಯನ್ನು ರಚಿಸಲಾಗಿದೆ. ಅಲ್ಲದೆ ಒಟ್ಟು ೧೧ ಜಿಲ್ಲೆಗಳಲ್ಲಿ ಜಿಲ್ಲೆಗೆ ೪೦ರಂತೆ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಈಗಾಗಲೇ ಸೂಕ್ಷ್ಮ ಯೋಜನೆ ಬಗ್ಗೆ ಐದು ದಿನಗಳ ಚಟುವಟಿಕೆ ಆಧಾರಿತ ತರಬೇತಿ ನೀಡಲಾಗಿದೆ. ಗ್ರಾಮ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ನಾಲ್ಕು ದಿನಗಳು ನಡೆಯುತ್ತವೆ. ಈಗಾಗಲೇ ಸೂಕ್ಷ್ಮ ಯೋಜನೆ ಹಮ್ಮಿಕೊಂಡಿರುವ ಗ್ರಾಮಗಳಲ್ಲಿ ಸುಮಾರು ಐದು ಜಿಲ್ಲೆಗಳಲ್ಲಿ ೧೨೦ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಗುರುತಿಸಲಾಗಿದೆ.

ಡ. ಗ್ರಾಮ ಶಿಕ್ಷಣ ಸಮಿತಿ ತರಬೇತಿ

ರಚನೆ : ಗ್ರಾಮ ಶಿಕ್ಷಣ ಸಮಿತಿಗೆ ಸದರಿ ಗ್ರಾಮದ ಪಂಚಾಯತ್ ಅಧ್ಯಕ್ಷರು/ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಊರಿನ ಶಾಲೆಯ ಮುಖ್ಯ ಶಿಕ್ಷಕರು ಕಾರ್ಯದರ್ಶಿಗಳಾಗಿರುತ್ತಾರೆ. ಗ್ರಾಮ ಶಿಕ್ಷಣ ಸಮಿತಿಯಲ್ಲಿ ೧/೩ರಷ್ಟು ಮಹಿಳಾ ಪ್ರತಿನಿಧಿಗಳಿರಬೇಕು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಪ್ರತಿನಿಧಿಗಳು ಹಾಗೂ ಅಂಗವಿಕಲ ವಿದ್ಯಾರ್ಥಿ ಪೋಷಕರು ಇರುತ್ತಾರೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಪ್ರತಿವರ್ಷ ಗ್ರಾಮ ಸಮನ್ವಯ ಸಮಿತಿಗೆ ಅನುದಾನ ಮಂಜೂರು ಮಾಡುತ್ತದೆ. ಇದನ್ನು ಗ್ರಾಮದ ಶಾಲೆಗಳಿಗೆ ಅಗತ್ಯವಾದ ಕುಡಿಯುವ ನೀರಿನ ಸೌಲಭ್ಯ, ಶಾಲೆಗೆ ಸುಣ್ಣ, ಬಣ್ಣ, ಜಮಖಾನ ಖರೀದಿಸಲು ಇತ್ಯಾದಿ ಅಗತ್ಯಗಳಿಗಾಗಿ ಒದಗಿಸಬಹುದು.

ತರಬೇತಿ : ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರಿಗೆ ನಾಲ್ಕು ದಿನಗಳ ತರಬೇತಿ ಶಿಬಿರವನ್ನು ಕ್ಷೇತ್ರ ಸಂಪನ್ಮೂಲ ಸಮಿತಿಯು ಏರ್ಪಡಿಸುತ್ತದೆ. ಇದರಲ್ಲಿ ಗ್ರಾಮ ಶಿಕ್ಷಣ ಸಮಿತಿ ತರಬೇತಿದಾರರ ಕೈಪಿಡಿಯಲ್ಲಿ ಸೂಚಿತ ವಿಷಯಗಳ ಮೂಲಕ ತರಬೇತಿ ನೀಡಲಾಗುತ್ತದೆ.

ಶೇಕಡ ೧೦೦ರಷ್ಟು ಶಿಕ್ಷಣದಲ್ಲಿ ಅಭಿವೃದ್ಧಿ ಸಾಧಿಸಬೇಕೆಂಬ ಗುರಿ ಇದೆ. ಆದರೆ ಅದು ಪರಿಪೂರ್ಣವಾಗಿ ಈಡೇರುತ್ತಿಲ್ಲ. ಕುಟುಂಬದ ಎರಡು ಕಂಬಗಳಂತೆ ಗಂಡು ಹೆಣ್ಣು. ಆದರೆ ಅದರಲ್ಲಿ ಪುರುಷನಿಗೆ ದೊರೆತ ಸ್ಥಾನ ಮಹಿಳೆಗೆ ಸಿಗದೇ ಹೋಗಿದೆ. ಈ ಅಸಮಾನತೆ ಶಿಕ್ಷಣದ ವಿಚಾರದಲ್ಲಿಯೂ ಕಂಡುಬರುತ್ತಿದೆ. ಹೀಗಾಗಿ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ಕನಿಷ್ಠ ವರ್ಷಗಳ ಶಾಲಾ ಭಾಗವಹಿಸುವಿಕೆಯಲ್ಲಿ ಹೆಣ್ಣುಮಕ್ಕಳು ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ ಅಂಶಗಳು, ಸರ್ಕಾರ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ಸಂಶೋಧನಾ ಸಂಸ್ಥೆಗಳು (ಎನ್.ಸಿ.ಇ.ಆರ್.ಟಿ, ಎನ್.ಐ.ಇ.ಪಿ.ಪಿ ಮತ್ತು ಡಿ.ಎಸ್.ಇ.ಆರ್.ಟಿ) ವಿವಿಧ ರಾಜ್ಯಗಳ (ಕರ್ನಾಟಕವೂ ಸೇರಿದಂತೆ) ವಾರ್ಷಿಕ ವರದಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಸಮಾಜ ವಿಜ್ಞಾನಗಳ ಸಂಶೋಧನೆಗಳು ಪ್ರಕಟಿಸಿರುವ ಪುಸ್ತಕಗಳು ಮತ್ತು ಲೇಖನಗಳು ಸೂಚಿಸುವ ಅಂಶವೆಂದರೆ, ಶಿಕ್ಷಣ ಪಡೆದುಕೊಳ್ಳುವಲ್ಲಿ ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದ ಉನ್ನತ ಆದಾಯದ ಕುಟುಂಬಕ್ಕೆ ಸೇರಿದ ಮಹಿಳೆಯರು ಬರುತ್ತಾರೆ. ನಾಲ್ಕನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಬಡತನದಲ್ಲಿರುವ ಕುಟುಂಬಗಳ ಪುರುಷರು ಬರುತ್ತಾರೆ. ಈ ನಾಲ್ಕು ಗುಂಪುಗಳ ನಂತರ ಶ್ರೀಮಂತ ವರ್ಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಬರುತ್ತಾರೆ. ಅನಂತರದಲ್ಲಿ ಬಡತನದ ಬೇಗೆಯಲ್ಲಿರುವ ಕುಟುಂಬದ ಮಹಿಳೆಯರು ಬರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು? ಇಲ್ಲಿ ಯಾವ ತಪ್ಪುಗಳು ಉಂಟಾಗಿವೆ? ಈ ಸಮುದಾಯಗಳಿಗೆ ಸೇರಿದ ಹೆಣ್ಣುಮಕ್ಕಳ ಪೋಷಕರ ಮನಸ್ಸಿನಲ್ಲಿ ಏನಿದೆ? ಅನುಷ್ಠಾನದಲ್ಲಿರುವ ಶಿಕ್ಷಣದ ಸೌಲಭ್ಯಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮಕ್ಕಳಿಗೆ ತಲುಪುತ್ತಿವೆಯೇ ಎಂಬ ಪ್ರಶ್ನೆಗಳು ಎದುರಾಗುತ್ತವೆ. ಮಹಿಳೆಯರ ಸಾಕ್ಷರತೆಯ ಸ್ಥಿತಿ, ಗ್ರಾಮೀಣ ಹೆಣ್ಣುಮಕ್ಕಳ ಶೈಕ್ಷಣಿಕ ಮನೋಭಾವನೆ ಮತ್ತು ಅವರ ಶಿಕ್ಷಣದ ಸಂಬಂಧ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿ ಹಾಗೂ ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಈ ಮಹಾಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಇದಕ್ಕೆ ಪೂರಕವಾಗಿ ಪೋಷಕರು ಬಹುತೇಕವಾಗಿ ಸಾಮಾಜಿಕ ಕಾರಣಗಳನ್ನು ಹೇಳುತ್ತಾರೆ. ಅವುಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಿಂದ ಅಥವಾ ಅವಳ ರಕ್ಷಣೆಯ ದೃಷ್ಟಿಯಿಂದ ನೋಡುವುದು ಮುಖ್ಯವಾಗಿದೆ.

ಈ ವಿಚಾರದಲ್ಲಿ ಸಾಮಾಜಿಕವಾಗಿ ಬದಲಾವಣೆಗಳಾಗುತ್ತಿದ್ದರೂ ಹೆಣ್ಣುಮಕ್ಕಳ ಶಿಕ್ಷಣವನ್ನು ಶೈಕ್ಷಣಿಕ ಅಂಶಗಳಿಂದಾಚೆ ನೋಡಬೇಕಾದ ಅಗತ್ಯವಿದೆ. ಅದರಂತೆ ಕೇವಲ ಬೆರಳೆಣಿಕೆಯಷ್ಟು ಪೋಷಕರು ಮಾತ್ರ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಹೆಣ್ಣುಮಕ್ಕಳ ಶಿಕ್ಷಣದ ನಕಾರಾತ್ಮಕ ಭಾವನೆಗಳು ಕೇವಲ ಪೋಷಕರಿಂದ ಮಾತ್ರ ಹುಟ್ಟಿಕೊಳ್ಳದೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನಡವಳಿಕೆಗಳಿಂದ ಪ್ರಭಾವಿತವಾಗಿರುತ್ತವೆ ಎಂಬುದು ಸ್ಪಷ್ಟ. ಹಾಗಾಗಿ ಹೆಣ್ಣುಮಕ್ಕಳ ಶಿಕ್ಷಣ ಕುರಿತಾದ ಸಕಾರಾತ್ಮಕ ಭಾವನೆಗಳು ಕೇವಲ ವ್ಯಕ್ತಿಗತವಾಗಿ ಹೆಚ್ಚಳವಾಗದೆ ಸಾಮಾಜಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಬದಲಾವಣೆಯಾಗಬೇಕಾದ ಅಗತ್ಯವಿದೆ.

ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಅಂತರಕ್ಕೆ ಶೈಕ್ಷಣಿಕವಲ್ಲದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸ್ಥಳೀಯ ಅಂಶಗಳು ಕಾರಣವಾಗಳಾಗುತ್ತವೆ. ನಾವು ಅಧ್ಯಯನಕ್ಕೊಳಪಡಿಸಿದ ಬುಡಕಟ್ಟು ಮಹಿಳೆಯರ ಪೋಷಕರು ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಲ್ಲಿ ಅಥವಾ ವಿವಾಹ ಹಂತದಲ್ಲಿ ಮಾತ್ರ ನೋಡುವುದು ಸರ್ವೇಸಾಮಾನ್ಯವಾಗಿದೆ. ಇದು ಮೇಲ್ಜಾತಿಯ

ಪೋಷಕರು ತಮ್ಮ ಹೆಣ್ಣುಮಕ್ಕಳ ಭವಿಷ್ಯ ಮತ್ತು ಶಿಕ್ಷಣದ ಬಗ್ಗೆ ಹೊಂದಿರುವ ಭಾವನೆಯ ಪ್ರಭಾವದಿಂದಾದ ಸಾಮಾಜಿಕ ಅನುಕರಣೆಯೂ ಆಗಿರುತ್ತದೆ ಎಂಬುದು ಮನವರಿಕೆಯಾಗಿದೆ. ಈ ದೃಷ್ಟಿಕೋನವು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಮೇಲೆ ಖಂಡಿತವಾಗಿ ಪರಿಣಾಮ ಬೀರುತ್ತದೆ.

ಕೊನೆಟಿಪ್ಪಣಿ

೧. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ: ೨೦೦೨:೪೫

ಸಮಾರೋಪ

೧. ಅಧ್ಯಯನದ ಫಲಿತಗಳು

೨. ಪರಿಹಾರೋಪಾಯಗಳು

ಸಮಾರೋಪ

ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಶಿಕ್ಷಣವು ಒಂದು ಪ್ರಮುಖ ಅಂಶವಾಗಿದೆ. ದೇಶದ ಜನಸಂಖ್ಯೆಯ ಅರ್ಧದಷ್ಟು ಜನರು ಮಹಿಳೆಯರಿದ್ದಾರೆ. ಆದರೆ ಭಾರತೀಯ ಸಂದರ್ಭದಲ್ಲಿ ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ ಪರಿಗಣಿಸುವುದೇ ಹೆಚ್ಚು. ಮಹಿಳೆಯನ್ನು ಕೇವಲ ತನ್ನ ಅಡಿಯಾಳಾಗಿ ನೋಡುವ ಪರಿಪಾಠವನ್ನು ಪುರುಷ ವರ್ಗ ಅನುಸರಿಸುತ್ತ ಬಂದಿರುವುದನ್ನು ಚರಿತ್ರೆಯ ಕಾಲದಿಂದ ಪ್ರಸ್ತುತ ಕಾಲದವರೆಗಿನ ಸಮಾಜದ ಮೂಲಕ ತಿಳಿದುಬರುತ್ತದೆ. ಹೆಣ್ಣು ಕೇವಲ ಪುರುಷನ ಉಪಭೋಗಕ್ಕೆ ಸೀಮಿತವಾದವಳು, ಆಕೆಗೆ ಯಾವುದೇ ಪವಿತ್ರ ಕಾರ್ಯಗಳಲ್ಲಿ ಸ್ಥಾನವಿಲ್ಲ ಎಂದು ತಿಳಿಸಿರುವುದು ಮನು ಸ್ಮೃತಿ ಮೂಲಕ ತಿಳಿದುಬರುತ್ತದೆ. ತತ್ವಜ್ಞಾನಿ ಪ್ಲೇಟೋನು ತನ್ನ ಕೃತಿಗಳಲ್ಲಿ(ರೂಲ್ ಆಫ್ ಫಿಲಾಸಫರ್ ಕಿಂಗ್) ಪುರುಷನಿಗಿರುವಷ್ಟೇ ಸ್ವಾತಂತ್ರ್ಯ ಹಾಗೂ ಶಿಕ್ಷಣದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿವೆ ಎಂದು ತಿಳಿಸುತ್ತಾನೆ[೧] ಅರಿಸ್ಟಾಟಲನು ಪೊಲಿಟಿಕ್ಸ್ ಕೃತಿಯಲ್ಲಿ ನಾಗರೀಕತ್ವದ ಸಿದ್ಧಾಂತಗಳನ್ನು ತಿಳಿಸುತ್ತ ಮಹಿಳೆಯರಿಗೆ ಆಲೋಚಿಸುವ ಶಕ್ತಿ ಇರದೇ ಇರುವುದರಿಂದ ಅವರಿಗೆ ನಾಗರೀಕತ್ವದ ಅವಕಾಶ ನೀಡಬಾರದು ಎಂದು ತಿಳಿಸುತ್ತಾನೆ[೨] ಹೆಣ್ಣು ಕೇವಲ ರಾಜಕೀಯ ದಾಳವಾಗಿ ಉಪಯೋಗಕ್ಕೆ ಬರುತ್ತಾಳೆ ಎಂದು ಕೌಟಿಲ್ಯ ತಿಳಿಸುತ್ತಾನೆ. ಗಾಂಧಿಯವರು ಹೆಣ್ಣು ತನ್ನ ಕೌಟಂಬಿಕ ವ್ಯವಸ್ಥೆಗೆ ದಕ್ಕೆ ಬಾರದಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುತ್ತಾರೆ[೩] ಚರಿತ್ರೆ ಕಾಲದಿಂದ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದರೂ ಸಹ ಲಿಂಗ ತಾರತಮ್ಯವೆಂಬುದು ಸಮಾಜದಲ್ಲಿ ಅಗಾಧವಾದ ಬಿರುಕನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಕೇವಲ ಹಣವೇ ಮುಖ್ಯ ಪಾತ್ರವಹಿಸುತ್ತದೆಂಬ ವಾದವಿದ್ದರೂ ಸಹ ಅದರಾಚೆಗೆ ಪುರುಷಶಾಹಿ ವ್ಯವಸ್ಥೆ ತನ್ನ ಕಬಂಧಬಾಹುವಿನಲ್ಲಿ ಇಡೀ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿ ಹಿಡಿದಿಟ್ಟುಕೊಂಡಿದೆ ಎಂಬುದನ್ನು ಗಮನಿಸಬೇಕಾಗಿದೆ. ಅದರಲ್ಲೂ ಮೇಲ್ವರ್ಗದ ಪುರುಷರು,

ಬಂಡವಾಳಶಾಹಿಗಳು ಇಡೀ ವ್ಯವಸ್ಥೆಯ ಹಕ್ಕುದಾರರಂತೆ ಮೆರೆದಾಡುತ್ತಿರುವುದನ್ನು ಗಮನಿಸ ಬಹುದು. ಶೈಕ್ಷಣಿಕ ಕ್ಷೇತ್ರದಿಂದ ಹಿಡಿದು ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷನ ಕೈ ಮೇಲಾಗಿರುವುದನ್ನು ಗಮನಿಸಬಹುದು.

ಸಂವಿಧಾನದ ಬಹುಮುಖ್ಯ ಆಶಯವು ಮೂಲಭೂತ ಹಕ್ಕುಗಳು ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಪ್ರತಿಯೊಬ್ಬ ಭಾರತೀಯನಿಗೆ ತಲುಪಬೇಕೇಂಬುದೇ ಆಗಿದೆ. ಆದರೆ ಈ ಆಶಯವು ಈಡೇರುವಲ್ಲಿ ಸೋತಿದೆಯಂದೇ ಹೇಳಬಹುದು. ಆದರೆ ಸಮಾಧಾನಕರ ವಿಚಾರವೆಂದರೆ ಸಂವಿಧಾನದ ಶಾಸನಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಾದ ಅನಿವಾರ್ಯತೆ ಯಿರುವುದರಿಂದ ಭಾರತೀಯ ವ್ಯವಸ್ಥೆಯು ಅಲ್ಪಮಟ್ಟಿಗಾದರೂ ಬದಲಾವಣೆಗೊಂಡಿರುವುದಂತೂ ಸತ್ಯ. ಅದರಲ್ಲೂ ತಳ ಸಮುದಾಯಗಳು, ಮಹಿಳೆಯರಿಗೆ ಈ ಸಂವಿಧಾನವು ವರದಾನವಾಗಿ ಪರಿಣಮಿಸಿದೆ ಎಂದೇ ಹೇಳಬಹುದು. ಅವರಿಗಾಗಿಯೇ ಹಲವಾರು ವಿಧಿ, ಅನುಚ್ಛೇಧಗಳು ಸಂವಿಧಾನದಲ್ಲಿ ಬರೆಯಲ್ಪಟ್ಟಿವೆ.

ಸಂವಿಧಾನದಲ್ಲಿ ೩-೬, ೧೦, ೨೦-೨೫, ೨೯ (೧)(೨), ೩೮(೨) ೩೯(ಎ), ೪೨, ೪೪, ೪೫, ೫೧ ಮುಂತಾದ ಅನುಚ್ಛೇಧಗಳು ಬಹುಮುಖ್ಯವಾಗಿ ಸಂವಿಧಾನದಲ್ಲಿ ಮೊದಲ ಹಂತದಲ್ಲಿ ಲಭ್ಯವಿರದಿದ್ದ ಮಹಿಳೆಯರ ಅನೇಕ ನಾಗರೀಕ ಹಕ್ಕುಗಳನ್ನು ಅವರಿಗೆ ದಕ್ಕಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಪುರುಷ ಹಾಗೂ ಮಹಿಳೆಯರ ಮಧ್ಯದ ಸಾಮಾಜಿಕ ಸಮಾನತೆಯ ನೆಲೆಗಳನ್ನು ಅಂತರ್ಗತಗೊಳಿಸುವ ಮೂಲಕ ಮಹಿಳೆಯರಿಗೆ ಒಂದು ಹೊಸ ದಿಗಂತವನ್ನು ತೆರೆದಿಡಲಾಯಿತು. ಜೊತೆಗೆ ಸಂವಿಧಾನವು ಮೂರು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿತು. ಮೊದಲನೇದಾಗಿ ಲಿಂಗಾಧಾರಿತವಾದ ತಾರತಮ್ಯಗಳ ನಿಷೇಧ, ಎರಡನೇದಾಗಿ ಮಹಿಳೆಯರ ಜೈವಿಕ, ಮಾನಸಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿ ವಹಿಸುವಂತಹ ಉಪಬಂಧಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುದು. ಹೀಗೆ ಮಹಿಳೆ ಮತ್ತು ಪುರುಷರನ್ನು ಸಮಾನವಾಗಿ ಪರಿಗಣಿಸುವುದು ಸಂವಿಧಾನದ ಮುಖ್ಯ ಉದ್ದೇಶಗಳಲ್ಲೊಂದು.

ಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ೧೪ ರಿಂದ ೧೮ರವರೆಗಿನ ವಿಧಿಗಳ ಪ್ರಕಾರ ನೀಡಿದ ಸಮಾನತೆಯ ಹಕ್ಕು, ೨೩, ೨೪ರ ವಿಧಿಗಳ ಪ್ರಕಾರ ನೀಡಿದ ಶೋಷಣೆಯ ವಿರುದ್ಧದ ಹಕ್ಕು, ಅನುಚ್ಛೇಧ ೩೯ (ಎ) (ಡಿ) (ಇ), ೪೨ರ ವಿಧಿಯ ಪ್ರಕಾರ ನಿರ್ದೇಶನ ತತ್ವಗಳು, ಅನುಚ್ಛೇಧ ೫೧ (ಎ) (ಇ) ಯ ಪ್ರಕಾರ ಮೂಲಭೂತ ಕರ್ತವ್ಯಗಳು, ಅನುಚ್ಛೇಧ ೩೨೫, ೩೨೬ರ ವಿಧಿಯನ್ವಯ ನೀಡಿದ ಮತದಾನದ ಹಕ್ಕು ಮುಂತಾದವುಗಳನ್ನು ಗಮನಿಸಿದರೆ ಮಹಿಳಾ ಪ್ರಗತಿಗೆ ಸಂಬಂಧಿಸಿದಂತೆ ಬಹುಮುಖ್ಯ ನಿಲುವುಗಳನ್ನು ಸಂವಿಧಾನವು ತಳೆದಿರುವುದು ಸೂಚಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಹಿಳಾ ಹಕ್ಕುಗಳೊಂದಿಗೆ ಅವುಗಳು ದುರುಪಯೋಗವಾಗದಂತೆ

ರಕ್ಷಣೆಗಳನ್ನೂ ನೀಡಲಾಗಿದೆ. ಮಹಿಳೆಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವುದು, ದುರುಪಯೋಗ ಪಡಿಸಿಕೊಳ್ಳುವುದು, ಕೀಳಾಗಿ ಕಾಣುವುದು ಮಾಡಿದಲ್ಲಿ ಆ ರೀತಿ ಮಾಡಿದವರಿಗೆ ಶಿಕ್ಷೆ ವಿಧಿಸುವ ಕುರಿತು ಸಂವಿಧಾನದಲ್ಲಿ ತಿಳಿಸಲಾಗಿದೆ. ಅದೇ ರೀತಿ ಜಾತಿ, ವಂಶ, ಲಿಂಗ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ನಡೆಯುವ ಅಸಮಾನತೆಯನ್ನು ನಿಷೇಧಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಕುರಿತು ನಿರ್ಧಿಷ್ಟವಾದ ಉಪಬಂಧಗಳನ್ನು ಜಾರಿ ಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಇದರಲ್ಲಿ ಮಹಿಳೆ ಮತ್ತು ಪುರುಷರಿಗೆ ಸಮಾನ ಜೀವನಾವಶ್ಯಕ ಅನುಕೂಲಗಳು, ಸಮಾನ ವೇತನ, ಶೇ ೩೦ ರಷ್ಟು ಉದ್ಯೋಗವಕಾಶದ ಮೀಸಲಾತಿ, ರಾಜಕೀಯ ಸ್ಥಾನಗಳಲ್ಲಿಯೂ ಮೀಸಲಾತಿಯನ್ವಯ ಸ್ಥಾನಗಳನ್ನು ಕಲ್ಪಿಸುವುದು, ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡುವುದು ಮುಂತಾದವುಗಳು ಸೇರಿವೆ.

ಮಹಿಳಾ ಪರವಾಗಿ ಸಂವಿಧಾನದಲ್ಲಿ ೧೫ (೩)ರ ಅನುಚ್ಛೇಧದ ಪ್ರಕಾರ ಅನೇಕ ಉಪಯುಕ್ತ ಶಾಸನಬದ್ಧ ಅಧಿಕಾರಗಳನ್ನು ಕಲ್ಪಿಸಲಾಗಿದೆ. ಸರ್ಕಾರಿ ನೇಮಕಾತಿ, ಶಾಸನ ಸಭೆ ಮತ್ತು ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿ ಈ ಅನುಚ್ಛೇಧದ ಅಡಿಯಲ್ಲಿ ನೀಡಲಾದ ವಿಶೇಷ ಸವಲತ್ತಾಗಿದೆ. ಯಾವ ಸಂದರ್ಭದಲ್ಲಿ ಪುರುಷನನ್ನು ಜಾಮೀನಿನ ಮೇಲೆ ಕಾರಗೃಹದಿಂದ ಬಿಡುಗಡೆಗೊಳಿಸುದಿಲ್ಲವೋ ಅದೇ ಸಂದರ್ಭದಲ್ಲಿ ಮಹಿಳೆಯರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವುದನ್ನು ಕಾನೂನಿನಲ್ಲಿ ಕಲ್ಪಿಸಲಾಗಿದೆ.

ಸಮಾನತೆಯ ನಿಟ್ಟಿನಲ್ಲಿ ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿರುವ ಪರಿಕಲ್ಪನೆಯೆಂದರೆ ಅಭಿವೃದ್ಧಿ. ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಅಭಿವೃದ್ಧಿ ಎಂಬ ಪರಿಕಲ್ಪನೆ ಇಂದು ಬದಲಾಗಿದೆ. ಮಾನವನ ಅಭಿವೃದ್ಧಿಗೆ ಪೂರಕವಾಗಿರುವ ಶಿಕ್ಷಣವೂ ಅಭಿವೃದ್ಧಿಯ ಇನ್ನೊಂದು ಮುಖವೇ ಆಗಿದೆ ಎಂಬ ವಾದವೂ ಕೇಳಿಬರುತ್ತಿದೆ. ಶಿಕ್ಷಣವು ಮಾನವನ ಶಕ್ತಿಯ ಪರ್ಯಾಯ ಪದವಾಗಿ ಮಾರ್ಪಟ್ಟಿದೆ. ಶಕ್ತಿ ಹೀನರಿಗೆ ಮಾನಸಿಕ ಸ್ಥೈರ್ಯವನ್ನು ನೀಡುವ ಶಕ್ತಿಯು ಶಿಕ್ಷಣಕ್ಕಿದೆ ಎಂದು ಹೇಳಬಹುದು. ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ದೊರಕಬೇಕೆಂಬುದು ರಾಷ್ಟ್ರದ ಗುರಿಯಾಗಿದೆ. ಯಾವ ದೇಶ ಶಿಕ್ಷಣದಲ್ಲಿ ಪರಿಪೂರ್ಣತೆಯನ್ನು ಹೊಂದಿರುತ್ತದೆಯೋ ಅಂತಹ ದೇಶವೂ ಸರ್ವಾಂಗೀಣವಾಗಿಯೂ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು. ಈ ನಿಟ್ಟಿನಲ್ಲಿ ಸರ್ಕಾರವು ಹತ್ತು ಹಲವು ಯೋಜನೆಗಳನ್ನೂ ರೂಪಿಸಿ ಚಾಲನೆಗೆ ತಂದಿದೆ. ಇಷ್ಟಾಗಿಯೂ ಭಾರತವು ಶೇಕಡ ೧೦೦ರಷ್ಟು ಸಾಕ್ಷರತೆಯ ಪ್ರಮಾಣವು ತಲುಪಲಾಗುತ್ತಿಲ್ಲ. ಆದರೆ ಸಂತೋಷದ ವಿಚಾರವೆಂದರೆ ಸರ್ಕಾರದ ಯೋಜನೆಗಳಿಗೆ ಪೂರಕವಾಗಿ ವರ್ಷದಿಂದ ವರ್ಷಕ್ಕೆ ಸಾಕ್ಷರತೆಯ ಪ್ರಮಾಣ ಅಧಿಕವಾಗುತ್ತಿದೆ ಎಂಬುದೊಂದು ಸಂತೋಷದ ವಿಚಾರವೇ ಸರಿ. ಆದರೆ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷಣ ವ್ಯವಸ್ಥೆ ಹಿಂದೆ ಬೀಳುತ್ತಿದೆ

ಎನ್ನುವ ಧ್ವನಿಯೂ ಕೇಳಿಬರುತ್ತಿದೆ. ಪ್ರಾಯಶಃ ಇದಕ್ಕೆ ಭಾರತದ ಸಾಮಾಜಿಕ ಹಿನ್ನೆಲೆಯೂ ಕಾರಣವಿರಬೇಕು. ಭಾರತವು ಶ್ರೇಣೀಕೃತ ವರ್ಗ ವ್ಯವಸ್ಥೆಯಿಂದ ಕೂಡಿದೆ. ಇಲ್ಲಿ ಮೇಲು ಕೀಳೆಂಬ ಶ್ರೇಣೀಕೃತ ಜಾತಿ ಸ್ಥರಗಳಿವೆ. ಸ್ತ್ರೀ ಪುರುಷ ರೆಂಬ ತಾರತಮ್ಯಗಳಿವೆ. ಶ್ರೀಮಂತರು, ಮಧ್ಯಮ ವರ್ಗದವರು, ಬಡವರು ಮತ್ತು ಕಡುಬಡವರೆಂಬ ವರ್ಗಗಳಿವೆ. ಶಿಕ್ಷಣ ಕ್ಷೇತ್ರವು ಇಂದಿಗೂ ಪೂರ್ಣವಾಗಿ ರಾಷ್ಟ್ರೀಕರಣಗೊಳ್ಳಲು ಸಾಧ್ಯವಾಗಿಲ್ಲ. ಅಭಿವೃದ್ಧಿಗೆ ಪೂರಕವಾಗಿರುವ ಶಿಕ್ಷಣದಂತಹ ಮಹತ್ವದ ಕ್ಷೇತ್ರವು ಖಾಸಗಿ ವ್ಯವಸ್ಥೆಯಲ್ಲಿ ನಲಗುವಂತಾಗಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಖಾಸಗಿಯಾದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಕೊಡಿಸಿದರೆ ಮಾತ್ರ ತಮ್ಮ ಮಕ್ಕಳು ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತದೆ ಎನ್ನುವ ಭ್ರಮೆಯನ್ನು ಖಾಸಗಿ ಶಿಕ್ಷಣ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿರಿಸಿಕೊಂಡ ಬಂಡವಾಳಶಾಹಿಗಳು ಹುಟ್ಟುಹಾಕಿದ್ದಾರೆ. ಈ ತಾರತಮ್ಯದ ಅರಿವಿರದ ಮಧ್ಯಮ ವರ್ಗದವರು ಖಾಸಗಿ ಶಿಕ್ಷಣ ಸಂಸ್ಥೆಗಳ ಹಿಕಮತ್ತಿಗೆ ಬಲಿಯಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಪ್ರಸ್ತುತ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ಕೇವಲ ಬಡಕುಟುಂಬಗಳ ಮಕ್ಕಳು ಎನ್ನುವಂತಹ ಸ್ಥಿತಿಯು ನಿರ್ಮಾಣಗೊಂಡಿದೆ. ಜಾತಿಯ ಏಣಿಶ್ರೇಣಿ, ಲಿಂಗ ತಾರತಮ್ಯಗಳನ್ನೂ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಮೇಲೆ ಪರಿಣಾಮ ಉಂಟುಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವು ಏಕಪ್ರಕಾರವಾಗಿಲ್ಲ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮಹಿಳೆಯರು ಆಯಾ ಜಾತಿಯ ಸ್ಥರಗಳಿಗನುಸಾರವಾಗಿ ಸ್ಥಾನಮಾನ ಹೊಂದಿದ್ದಾರೆ. ಮೇಲ್ಜಾತಿ/ಮೇಲ್ವರ್ಗದ ಮಹಿಳೆಯರಿಗೆ ಕೆಳಜಾತಿ ಮಹಿಳೆಯರಿಂದ ಶೋಷಣೆ ಇಲ್ಲ. ಆದರೆ ಕೆಳಜಾತಿ ಮಹಿಳೆಯರಿಗೆ ಮೇಲ್ಜಾತಿ ಮಹಿಳೆಯರಿಂದ ಹಾಗೂ ಸ್ವಜಾತಿ, ವಿಜಾತಿ ಪುರುಷರಿಂದ ಶೋಷಣೆ ಉಂಟು. ಅಭಿವೃದ್ಧಿಯ ಫಲವನ್ನು ಮೇಲ್ಜಾತಿ ಮೇಲ್ವರ್ಗದ ಮಹಿಳೆಯರು ಮೊದಲು ಕಬಳಿಸಿಬಿಡುತ್ತಾರೆ. ಏನಾದರೂ ಉಳಿದರೆ ಬಡವರಲ್ಲಿ ಕೆಲವರಿಗೆ ಮಾತ್ರ ತಲುಪ ಬಹುದೇನೊ. ಬಹುಪಾಲು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ, ಅದರಲ್ಲೂ ಮಹಿಳೆಯರು ಅಭಿವೃದ್ಧಿ ಫಲವನ್ನು ಪಡೆಯುವಲ್ಲಿ ವಂಚಿತರಾಗುತ್ತಾರೆ. ಈ ಮಾತು ಶಿಕ್ಷಣಕ್ಕೂ ಅನ್ವಯಿಸುತ್ತದೆ.

ಬಹುತೇಕ ಈ ಪರಿಶಿಷ್ಟ ವರ್ಗದ ಮಹಿಳೆಯರು ಶಿಕ್ಷಣದಲ್ಲಿ ಹಿಂದೆ ಬಿದ್ದಿರುವುದು ಮಾತ್ರವಲ್ಲದೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನವಿಲ್ಲದೆ ಪುರುಷ ಅವಲಂಬಿ ಯಾಗಿರುವರು. ಇಂತಹ ಅತಂತ್ರ ಸ್ಥಿತಿಯ ಮಹಿಳೆಯರನ್ನು ಸಶಕ್ತೀಕರಿಸಿ ಅವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದಾಗಿ ಮಹಿಳಾ ಮೀಸಲಾತಿ, ಜಾತಿಯಾಧಾರಿತ ಮೀಸಲಾತಿ, ಶಿಕ್ಷಣ ಸೌಲಭ್ಯವನ್ನು ಸಂವಿಧಾನಬದ್ಧವಾಗಿ ಜಾರಿಗೆ ತರಲಾಗಿದೆ.

ಮಹಿಳೆಯರನ್ನು ಸಶಕ್ತೀಕರಣಗೊಳಿಸುವುದರ ನಿಜವಾದ ಅರ್ಥ ಶಿಕ್ಷಣವನ್ನು ದೊರಕಿಸಿ ಕೊಡುವುದು ಮಹಿಳೆಯರನ್ನು ಸಬಲೀಕರಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ.

ಸಂವಿಧಾನದ ನಿರ್ದೇಶಕತತ್ವದಲ್ಲಿ ರಾಜ್ಯವು ಮಹಿಳೆ ಮತ್ತು ಪುರುಷರ ನಡುವೆ ಲಿಂಗ, ಜಾತಿ, ಧರ್ಮ. ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯ ತೋರಬಾರದೆಂದು ಅನುಚ್ಛೇದ ೧೫ರಲ್ಲಿ ನಿರೂಪಿಸಲಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯದ ನೀತಿ ನಿರ್ದೇಶನಗಳ ತತ್ವಗಳು ಎಂಬ ವಿಭಾಗದಲ್ಲಿ ಸಮಾನತೆಗಾಗಿ ಅನುಸರಿಸಬೇಕಾದ ತತ್ವಗಳನ್ನು ಅಳವಡಿಸಲಾಗಿದೆ. ಸಂವಿಧಾನ ಶಿಲ್ಪಿಗಳು ರಾಜಕೀಯ ಕ್ಷೇತ್ರ ಒಳಗೊಂಡಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀ–ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ.

ಗ್ರಾಮೀಣ ಪರಿಸರದಲ್ಲಿ ಮಹಿಳೆಯ ಸ್ಥಿತಿ ತುಂಬಾ ಚಿಂತಾಜನಿಕವಾಗಿದೆ. ಭಾರತದ ಬಹುತೇಕ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಲ್ಲು ಬಹುಪಾಲು ಮಹಿಳೆಯರು ಕೃಷಿ ಕೂಲಿ, ಅಸಂಘಟಿತ ವಲಯದ ಕೂಲಿಯನ್ನೇ ಅವಲಂಬಿಸಿದ್ದಾರೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಗೃಹಕೃತ್ಯಗಳಲ್ಲಿಯೇ ತೊಡಗುವ ಮತ್ತು ಅವರ ಕಾರ್ಯವನ್ನು ಯಾವುದೇ ವೃತ್ತಿಯೆಂದು ಪರಿಗಣಿಸದ ಸ್ಥಿತಿಯಲ್ಲಿದ್ದಾರೆ ಹಾಗೂ ಇಂತಹ ಮಹಿಳೆಯರು ಪ್ರಾಥಮಿಕ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಕೃಷಿ ಮತ್ತು ಇತರ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಪಾಲು ಶೇ ೫೦ಕ್ಕಿಂತ ಹೆಚ್ಚಿದ್ದರೂ ಸಹಿತ ಆರ್ಥಿಕ ಸ್ವಾವಲಂಬನೆಯಿಂದ ಅವಳು ವಂಚಿತಳಾಗಿದ್ದಾಳೆ. ಅಷ್ಟೇ ಅಲ್ಲ ಮಹಿಳೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳಿಂದಲೂ ದೂರವುಳಿಯಬೇಕಾದ ಅನಿವಾರ್ಯ ಸ್ಥಿತಿಗೆ ನೂಕಲ್ಪಟ್ಟಿದ್ದಾಳೆ.

ಭಾರತದ ಅನಿಷ್ಟವೆಂದೇ ಪರಿಗಣಿಸಿರುವ ಜಾತಿ ವ್ಯವಸ್ಥೆಯಲ್ಲಿ ಹಂಚಿ ಹೋಗಿರುವ ಮಹಿಳೆ ವರ್ಗ, ಜಾತಿ ಸಮೂಹಗಳ ಹಿನ್ನೆಲೆಯಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳು ಭಿನ್ನವಾಗಿರು ವಂಥವುಗಳಾಗಿವೆ. ಇಡೀ ಪುರುಷ ವರ್ಗದ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆ ಒಂದು ರೀತಿಯಾಗಿದ್ದರೆ ಅವರವರ ಜಾತಿ ಪಂಗಡದ ಹಂತದಲ್ಲಿ ಶೋಷಣೆ ಹೊಸ ರೂಪವನ್ನೇ ತಾಳುತ್ತದೆ. ಹೀಗಾಗಿ ನಿರ್ಧಿಷ್ಟ ಮಾನದಂಡಗಳಿಂದ ರೂಪಿಸಿದ ಸುಧಾರಣಾ ಕ್ರಮಗಳು, ಕಾನೂನು, ನೀತಿ ನಯಮಗಳು ಸಹ ಮಹಿಳಾ ವರ್ಗದ ಸಮಸ್ಯೆಗಳಿಗೆ ಪರಿಹಾರ ವಾಗಲಾರದೆನಿಸುತ್ತದೆ.

ದೇವರು, ಧರ್ಮ, ಜಾತಿಗಳ ಹೆಸರಿನಲ್ಲಿ ಇಂದಿಗೂ ತಳಸಮುದಾಯದ ಮಹಿಳೆಯರು ಪುರುಷ ವ್ಯವಸ್ಥೆಯಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ಶೈಕ್ಷಣಿಕವಾಗಿ ಪುರುಷ ಹಾಗೂ ಸ್ತ್ರೀಯರು ಸಮಾನತೆ ಗಳಿಸಬೇಕೆಂಬ ಆಶಯವಿದ್ದರೂ ಅದು ಇಂದಿಗೂ ಸಾಧ್ಯವಾಗುತ್ತಿಲ್ಲ.

ಒಂದು ರಾಷ್ಟ್ರವು ಸುಖೀರಾಜ್ಯವಾಗಬೇಕಾದರೆ ಪ್ರತಿಯೊಬ್ಬ ನಾಗರಿಕರ ಹೊಣೆಗಾರಿಕೆ ಹಕ್ಕು ಮತ್ತು ಕರ್ತವ್ಯಗಳನ್ನು ಹಾಗೂ ಸಮಾಜದಲ್ಲಿ ವ್ಯಕ್ತಿಯು ವೈಯಕ್ತಿಕ ಪ್ರಜ್ಞೆಯುಳ್ಳವ ನಾಗಿರುವುದರ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನು ಹೊಂದಿರಬೇಕು. ಸಮುದಾಯದ ಸಮಾಜದಲ್ಲಿ ಇರುವ

ಸ್ಥಿತಿಗತಿಗಳು, ಬದಲಾಗುತ್ತಿರುವ ರೀತಿ ನೀತಿಗಳು, ಸಾಗಬೇಕಾಗಿರುವ ಮಾರ್ಗ, ತಲುಪಬೇಕಾಗಿರುವ ಗುರಿ ಮೊದಲಾದವುಗಳ ಬಗ್ಗೆ ಅರಿವಿರಬೇಕು. ಸಾಕ್ಷರತೆಯಿಂದ, ಶಿಕ್ಷಣ ಪಡೆಯುವುದರಿಂದ ಸಾಧ್ಯವಾಗುತ್ತದೆ.

ಶಿಕ್ಷಣವು ಮಾನವರಿಗೆ ಅತ್ಯಗತ್ಯವಾದದ್ದು. ಆಧುನಿಕ ಜಗತ್ತಿನಲ್ಲಿ ಶಿಕ್ಷಣ ಇರದ ವ್ಯಕ್ತಿಗೆ ಯಾವುದೇ ರೀತಿಯ ಗೌರವವೂ ದೊರೆಯಲಾರದೆಂಬ ಸ್ಥಿತಿ ನಿರ್ಮಾಣವಾಗಿದೆ. ಶಿಕ್ಷಣ ಮಾತ್ರವೇ ಮಾನವನ ಬದುಕಿಗೆ ಹೊಸ ಹೊಳಪನ್ನು ನೀಡುತ್ತದೆ. ಅವರನ್ನು ಪ್ರಾಣಿಗಳಗಿಂತ ಶ್ರೇಷ್ಠ ಎನಿಸಿಕೊಳ್ಳಲು ಅರ್ಹರನ್ನಾಗಿ ಮಾಡುವುದೇ ಶಿಕ್ಷಣ.

ಇಂದು ನಮ್ಮ "ರಾಜ್ಯದಲ್ಲಿ ಸುಮಾರು ೧೨೩೭೭ ಪ್ರಾಥಮಿಕ ಸರ್ಕಾರಿ ಶಾಲೆಗಳಿವೆ. ೨೯೯೦ ಅನುದಾನ ಶಾಲೆಗಳಿವೆ. ೯೬೮೭ಕ್ಕೂ ಅಧಿಕ ಅನುದಾನರಹಿತ ಪ್ರಾಥಮಿಕ ಶಾಲೆಗಳಿವೆ."[೪] ಈ ಶಾಲೆಗಳಲ್ಲಿ ಗ್ರಾಮೀಣ ಭಾಗದ ಶಾಲೆಗಳು ಹೆಚ್ಚಾಗಿ ಕಂಡುಬರುವುದು ವಿಶೇಷ. ೨೦೧೧ರ ಜನಗಣತಿಯ ಪ್ರಕಾರ ಒಟ್ಟಾರೆ ಮಹಿಳೆಯರ ಶಿಕ್ಷಣವು ಇಲ್ಲಿ ಶೇ. ೬೮.೧೩ರಷ್ಟು ಕಂಡುಬರುವುದು. ಪುರುಷರ ಶಿಕ್ಷಣವು ಶೇ. ೮೨.೮೫ರಷ್ಟು ಕಂಡುಬರುತ್ತದೆ. ಉದಾರಿಕರಣ, ಖಾಸಗೀಕರಣ, ಜಾಗತೀಕರಣದಿಂದಾಗಿ ಶಿಕ್ಷಣವು ದೇಶದೆಲ್ಲೆಡೆ ವ್ಯಾಪಿಸಿತ್ತು.

ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಶಿಕ್ಷಣವು ಅತ್ಯಗತ್ಯವಾದುದು. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.

ಹೆಚ್ಚು ಶಿಕ್ಷಣ ಪಡೆದ ತಾಯಂದಿರು ಉತ್ತಮ ಶುಚಿತ್ವ, ಉತ್ತಮಗೊಂಡ ಪೌಷ್ಟಿಕಾಂಶಗಳು, ಕುಟುಂಬದ ಆಚರಣೆಗಳು, ಕುಟುಂಬದ ಆರೋಗ್ಯ ಕುರಿತು ಹೆಚ್ಚು ಪರಿಣಾಮಕಾರಿ ಪಾತ್ರ ವಹಿಸುವಿಕೆ ಸಾಧಿಸುವರು. ಶಿಕ್ಷಣವು ಆರೋಗ್ಯ ಪರಿಕರಗಳನ್ನು ಹೆಚ್ಚಾಗಿ ಬಳಸಲು ಉತ್ತೇಜಿಸುತ್ತ ತಾಯಿ ಮತ್ತು ಮಗುವಿನ ಪರಿಸರವನ್ನು ಚೆನ್ನಾಗಿ ನಿರ್ವಹಿಸುವ ಸಾಮರ್ಥ್ಯ ನೀಡುವುದೇ ಇದಕ್ಕೆ ಉತ್ತರ. ನೈಜಿರಿಯಾದ ತಾಯಂದಿರಿಗೆ ಶಿಕ್ಷಣವು ಸ್ಥಳೀಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಚೆನ್ನಾಗಿ ಬಳಸುವುದನ್ನು ಕಲಿಸಿತು. ಕೊಳವೆ ನೀರು ಪೂರೈಕೆ ಮತ್ತು ನೀರು ಬಳಸುವ ವಿಧಾನವನ್ನು ಫಿಲಿಫೈನ್ಸ್‌ನ ತಾಯಂದಿರಿಗೆ ಹೆಚ್ಚು ಶಿಕ್ಷಣದಿಂದ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಕಲಿಸಿದೆ. ಸಾಮಾನ್ಯವಾಗಿ ಶಿಕ್ಷಣ ಮನೆಯಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ನಿರ್ವಹಿಸುವಂತೆ ಅವಶ್ಯಕವಿರುವ ಜ್ಞಾನ ನೀಡುವುದು. ವಿವಿಧ ದೇಶಗಳಲ್ಲಿ ಮೂಡಿ ಬಂದಿರುವ ಶಿಕ್ಷಣದ ಅರಿವಿನ ಮಹತ್ವವನ್ನು ತಿಳಿಯುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

ಕರ್ನಾಟಕದಲ್ಲಿ ಕಡ್ಡಾಯ ಶಿಕ್ಷಣ ನೀತಿ ಜಾರಿಗೆ ಬಂದಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳಾ ಶಿಕ್ಷಣದ ವಿಷಯದಲ್ಲಿ ಹೆಚ್ಚು ಕಾಳಜಿ ವಹಿಸಲಾಗಿದೆ. ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದೆ ಎಂಬುದನ್ನು ಮನಗಾಣಿಸಬೇಕಾಗಿದೆ. ಮೂಲಭೂತ ಸೌಕರ್ಯಗಳಲ್ಲಿ ಒಂದೆಂದು ಭಾವಿಸಲಾಗುವ ಶಿಕ್ಷಣವನ್ನು ಭಾರತೀಯರಿಗೆಲ್ಲಾ ಒದಗಿಸುವುದು ಇಂದು ಸಾಂವಿಧಾನಕ ಹೊಣೆಯಾಗಿದೆ. ಸಂವಿಧಾನದ ೪೫ನೇ ವಿಧಿಯನ್ವಯ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಸೂಚಿಸಲಾಗಿದೆ. ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಅನುಷ್ಠಾನಗೊಳಿಸುವುದರೊಂದಿಗೆ ಹೆಣ್ಣುಮಕ್ಕಳಿಗೆ ಸಮರ್ಥ ಅಕ್ಷರ ಕಲಿಕೆಯನ್ನು ಮೂಡಿಸುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

೧೯೯೧ರಲ್ಲಿ ಎಚ್. ನರಸಿಂಹಯ್ಯನವರ ನಾಯಕತ್ವದಲ್ಲಿ ಶಿಕ್ಷಣದ ಸ್ವರೂಪ ಹೇಗಿರ ಬೇಕೆಂಬುದನ್ನು ಅರಿಯಲೆಂದು ಅಧ್ಯಯನ ಸಮಿತಿಯೊಂದನ್ನು ರಚಿಸಲಾಯಿತು. ಈ "ಸಮಿತಿಯು ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷವಾಗಿ ಒಂದರಿಂದ ನಾಲ್ಕನೇ ತರಗತಿವರೆಗೆ ಸರ್ಕಾರಿ ಹಾಗೂ ಖಾಸಗಿ ಎನ್ನುವ ಭೇದವಿಲ್ಲದೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಮಾತೃಭಾಷೆಯೇ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿತು."[೫] ಸರ್ಕಾರವೂ ಈ ನಿಟ್ಟಿನಲ್ಲಿ ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತಾದರೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಅಧಿಕಾರಿ ವರ್ಗ, ರಾಜಕಾರಣಿಗಳು ಈ ನೀತಿಯನ್ನು ನಿರ್ಲಕ್ಷಿಸಿ ಮುನ್ನಡೆದರು. ಸರ್ಕಾರದ ವಿವಿಧ ಯೋಜನೆ, ಕಾರ್ಯಕ್ರಮದ ಅನುಷ್ಠಾನದ ಮಧ್ಯದಲ್ಲಿಯೂ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ. ಸಮಾನ ಶಿಕ್ಷಣನೀತಿ ಇದ್ದರೂ ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ಹೆಣ್ಣು ಹಾಗೂ ಗಂಡುಮಕ್ಕಳ ಶಿಕ್ಷಣದಲ್ಲಿ ಅಂತರಗಳಿವೆ. ಪರಿಶಿಷ್ಟ ಪಂಗಡದ ಶಿಕ್ಷಣ ಪ್ರಮಾಣ ಸಾಮಾನ್ಯ ಮಹಿಳೆಯರ ಶಿಕ್ಷಣದ ನಡುವೆ ಅಗಾಧವಾದ ಅಂತರವೇಕೆ ಉಂಟಾಗುತ್ತಿದೆ? ಏಕ ರೀತಿಯ ಶಿಕ್ಷಣ ಮಾಧ್ಯಮವಿದ್ದರೂ ಆಂಗ್ಲ ಮತ್ತು ಕನ್ನಡ ಮಾಧ್ಯಮವೆಂಬ ಭಿನ್ನ ರೀತಿಯ ಶಿಕ್ಷಣ ಮಾಧ್ಯಮಗಳೇಕೆ? ವಿಶೇಷವಾಗಿ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಶಿಕ್ಷಣದ ಕುರಿತಾಗಿ ಅರಿಯುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಮುಖ್ಯವಾಗಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣದ ಪ್ರಗತಿಯನ್ನು ಅರಿಯುವುದು. ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳ ಶಿಕ್ಷಣ ಹಿಂದುಳಿದಿರುವಿಕೆಗೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ತಿಳಿಯುವುದು. ಪರಿಶಿಷ್ಟ ಪಂಗಡದ ಗಂಡು ಹಾಗೂ ಹೆಣ್ಣು ಮಕ್ಕಳ ಶಿಕ್ಷಣದ ಅಂತರಗಳನ್ನು ಅರಿಯುವುದು. ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯವರ್ಗದ ಹೆಣ್ಣುಮಕ್ಕಳ ಶಿಕ್ಷಣದ ಅಂತರಕ್ಕೆ ಕಾರಣವನ್ನು ನೋಡುವುದು.

ಹೆಣ್ಣುಮಕ್ಕಳ ಶಿಕ್ಷಣ ಪ್ರೋತ್ಸಾಹಕ್ಕಾಗಿ ವಿವಿಧ ಯೋಜನೆಗಳ ಅನುಷ್ಠಾನ ಹಾಗೂ ಅದರ ಪ್ರಭಾವ ಗಳನ್ನು ತಿಳಿಯುವುದು. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡ ದಲ್ಲೊಂದಾದ ನಾಯಕ ಸಮುದಾಯದ ಮಹಿಳೆಯರ ಶೈಕ್ಷಣಿಕ ಹಿನ್ನೆಲೆ ತಿಳಿಯುವುದು. ಪರಿಶಿಷ್ಟ ವರ್ಗದ ನಾಯಕ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿಯನ್ನು ಅರಿಯುವುದ ರೊಂದಿಗೆ ಶಿಕ್ಷಣದ ಯಾವ ಹಂತದಲ್ಲಿ ನಾಯಕ ಸಮುದಾಯದ ಮಹಿಳೆ ಹಿಂದುಳಿದಿದ್ದಾಳೆ ಎಂಬುದನ್ನು ಅರಿಯುವುದು. ಅಕಸ್ಮಾತ್ ಶೈಕ್ಷಣಿಕವಾಗಿ ಹಿಂದುಳಿದಿದ್ದರೆ ಅದಕ್ಕಿರುವ ಕಾರಣಗಳನ್ನು ಅರಿಯುವುದು. ಮಹಿಳಾ ಶಿಕ್ಷಣದ ಮೇಲೆ ಅವಳ ಪರಿಸರ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಮುಖ್ಯವಾಗಿ ಪ್ರಾಥಮಿಕ,ಮಾಧ್ಯಮಿಕ, ಪ್ರೌಢ, ಉನ್ನತ ಹೀಗೆ ನಾಲ್ಕು ಹಂತಗಳಲ್ಲಿ ಹರಡಿಕೊಂಡಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖವಾದುದು ಪ್ರಾರಂಬಿಕ ಹಂತದ ಪ್ರಾಥಮಿಕ ಶಿಕ್ಷಣ. ಪ್ರಾಥಮಿಕ ಶಿಕ್ಷಣವು ಓದುವ ವಿದ್ಯಾರ್ಥಿಗೆ ಬುನಾದಿ ಇದ್ದಂತೆ. ಪ್ರಾಥಮಿಕ ಶಿಕ್ಷಣ ಸರಿಯಾಗಿ ದೊರೆತರೆ ವಿದ್ಯಾರ್ಥಿಯ ಮುಂದಿನ ಶೈಕ್ಷಣಕ ಭವಿಷ್ಯ ಪ್ರಗತಿಪರವಾಗಿ ಸಾಗಬಲ್ಲದು. ಆದರೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಈ ಮಾತು ಅನ್ವಯಿಸುವುದಿಲ್ಲ. ಹರಯ, ಮದುವೆ, ಹೆಣ್ಣುಮಗು ಎನ್ನುವ ನಿರ್ಲಕ್ಷ್ಯ ಇತ್ಯಾದಿ ಕಾರಣಗಳಿಗಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸವು ಪ್ರಾಥಮಿಕ ಹಂತವನ್ನು ದಾಟುವುದು ಕಷ್ಟಸಾಧ್ಯದ ವಿಚಾರ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಏಳು ತಾಲೂಕುಗಳಿವೆ. ಈ ಏಳು ತಾಲೂಕುಗಳಲ್ಲಿ ಪ್ರತಿ ತಾಲೂಕಿಗೆ ಐದು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಲವತ್ತು ಕುಟುಂಬಗಳನ್ನು ಅಂದರೆ ಪ್ರತಿ ತಾಲೂಕಿಗೆ ೨೦೦ ನಾಯಕ ಸಮುದಾಯದ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಸಮೀಕ್ಷಿಸಿ ಅದರಿಂದ ಬಂದ ವಿವರಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಫಲಿತಗಳು

ಬಳ್ಳಾರಿ ಜಿಲ್ಲೆಯ ಏಳು ತಾಲೂಕಿನಲ್ಲಿರುವ ಗ್ರಾಮಪಂಚಾಯತಿಗಳನ್ನು ಕೇಂದ್ರವಾಗಿರಿಸಿ ಕೊಂಡು ಅಧ್ಯಯನ ಕೈಗೊಳ್ಳಲಾಯಿತು. ಪ್ರತಿ ತಾಲೂಕಿಗೆ ಐದು ಗ್ರಾಮಪಂಚಾಯತಿಯಂತೆ ಏಳು ತಾಲೂಕಿನಿಂದ ಮೂವತ್ತೈದು ಗ್ರಾಮಪಂಚಾಯತಿಗಳನ್ನೂ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ

ನಲವತ್ತು ನಾಯಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಪಡೆಯಗಿದೆ. ಈ ಅಧ್ಯಯನದ ಫಲಿತಗಳು ಈ ಕೆಳಗಿನಂತಿವೆ.

- ಸಾಕ್ಷರತೆಯ ಪ್ರಮಾಣವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತ ಮೇಲ್ಮುಖವಾಗಿ ಸಾಗುತ್ತಿದೆ.
- ವಿಶೇಷವಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳ ಪ್ರಮಾಣವು ಗಂಡುಮಕ್ಕಳ ಪ್ರಮಾಣಕ್ಕಿಂತಲೂ ಅಧಿಕವಾಗಿದೆ.
- ಮೇಲಿತ ತರಗತಿಗಳಿಗೆ ಹೋದಂತೆಲ್ಲಾ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಹೆಣ್ಣುಮಕ್ಕಳ ದಾಖಲಾತಿಯ ಪ್ರಮಾಣ ಇಳಿಮುಖವಾಗಿದೆ.
- ಶಿಕ್ಷಣ ಪಡೆದ ಮಹಿಳೆಯರು ತಮ್ಮ ಸಮುದಾಯದಲ್ಲಿ ರೂಢಿಯಲ್ಲಿರುವ ಸಾಮಾಜಿಕ ಅನಿಷ್ಟಗಳನ್ನು ನಿರಾಕರಿಸುತ್ತಿದ್ದಾರೆ.
- ಶಿಕ್ಷಣ ಪಡೆದಿರುವ ಮಹಿಳೆಯರು ತಮ್ಮ ಕುಟುಂಬದ ಹೆಣ್ಣುಮಕ್ಕಳು ವಿದ್ಯಾಭ್ಯಾಸದಲ್ಲಿ ಮುಂದುವರೆಯಬೇಕೆಂದು ಆಪೇಕ್ಷಿಸಿ ಮಕ್ಕಳಿಗೆ ಶಿಕ್ಷಣದಲ್ಲಿ ಮುಂದುವರೆಯಲು ಪ್ರಚೋದಿಸುತ್ತಾರೆ.
- ಆರ್ಥಿಕ ಕಾರಣಕ್ಕಿಂತ ಹೆಚ್ಚಾಗಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯ ವಿದ್ಯಾಭ್ಯಾಸ ಹಿಂದುಳಿದಿದೆ.
- ಮಹಿಳೆಯರಿಗೆ ಸಾಮಾಜಿಕ ನಿರ್ಬಂಧಗಳಿವೆ. ಮತ್ತು ಪುರುಷರ ಹಿಡಿತದಲ್ಲಿಯೇ ಕುಟುಂಬ ವ್ಯವಸ್ಥೆ ಇರುವುದರಿಂದ ಮಹಿಳೆಯರು ಶಿಕ್ಷಣದಿಂದ ಹಿಂದುಳಿಯುವಂತಾಗಿದೆ.

ಅಧ್ಯಯನದ ಮುಂದಿನ ಸಾಧ್ಯತೆಗಳು

* ಅಧ್ಯಯನದ ಮಿತಿ ಹಾಗೂ ಕಾಲಾವಧಿಯು ಮಿತಿಯಿಂದಾಗಿ ಶಿಕ್ಷಣ ವ್ಯವಸ್ಥೆಯ ಕುರಿತು ಅಮೂಲಾಗ್ರವಾಗಿ ನೋಡಲು ಸಾಧ್ಯವಾಗಿಲ್ಲ. ಕೇವಲ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಮಹಿಳೆಯರನ್ನೇ ದೃಷ್ಟಿಯಲ್ಲಿರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ. ಹೀಗಾಗಿ ಈ ಅಧ್ಯಯನವು ಅಷ್ಟಕ್ಕೆ ಮಾತ್ರ ಸೀಮಿತವಾಗಿಸಿಕೊಳ್ಳಲಾಗಿದೆ. ಇದರ ಹೊರತಾಗಿಯೂ ಶಿಕ್ಷಣ ವ್ಯವಸ್ಥೆಯ ಕುರಿತು ಅಮೂಲಾಗ್ರವಾಗಿ ಅಧ್ಯಯನ ಮಾಡವಂತಾಗಬೇಕು.
* ಪರಿಶಿಷ್ಟ ಪಂಗಡದ ಮಹಿಳೆಯರ ಕುರಿತು ಶಿಕ್ಷಣದ ನೆಲೆಗಟ್ಟಿನ ಆಯಾಮದಲ್ಲಿ ಮಾತ್ರ ಅಧ್ಯಯನ ಮಾಡಲು ಸಾಧ್ಯವಾಗಿದೆ. ಪರಿಶಿಷ್ಟ ಪಂಗಡದ ಮಹಿಳೆಯರನ್ನು ಆರ್ಥಿಕ, ಸಾಮಾಜಿಕ, ಮನಶಾಸ್ತ್ರೀಯ, ಶೈಕ್ಷಣಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.
* ಶಿಕ್ಷಣದ ಸಹಭಾಗಿತ್ವದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯ ಸ್ಥಿತಿ ಮೇಲ್ನೋಟಕ್ಕೆ ಪ್ರಗತಿಯಲ್ಲಿದೆಯೆನಿಸಿದರೂ ಅದು ಉನ್ನತ ಹಂತಕ್ಕೆ ಹೋದಂತೆಲ್ಲಾ ಮಹಿಳಾ ಶಿಕ್ಷಣದಲ್ಲಿ

ಇಳಿಮುಖವಾಗುತ್ತಾ ಬಂದಿರುವುದು ಅಧ್ಯಯನದಲ್ಲಿ ಕಂಡುಬಂದಿತು. ಶೈಕ್ಷಣಿಕವಾಗಿ ಮಹಿಳೆ ಹಿಂದುಳಿಯಲು ಇರುವ ಕಾರಣಗಳನ್ನು ಅರಿಯಲು ಸಾಮಾಜಿಕ, ಆರ್ಥಿಕ, ರಾಜಕೀಯ ಸಹಭಾಗಿತ್ವದ ಅಂತರ್ ಸಂಬಂಧಗಳು ಕುರಿತು ಅಧ್ಯಯನ ಮಾಡಬಹುದಾಗಿದೆ.

* ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಬಳ್ಳಾರಿ ಜಿಲ್ಲೆಗೆ ಸೀಮಿತಗೊಂಡಿದೆ. ಇಲ್ಲಿಯ ಪರಿಶಿಷ್ಟ ಪಂಗಡದ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗೂ ಇನ್ನುಳಿದ ಪ್ರದೇಶಗಳ ಪರಿಶಿಷ್ಟ ಪಂಗಡದ ಮಹಿಳೆಯರ ಸ್ಥಿತಿಗತಿಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಮಹಿಳೆಯರ ಕುರಿತು ಅಧ್ಯಯನ ಮಾಡಲಾಗಿ ಕಂಡು ಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು ಮತ್ತು ಆ ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿಗೆ ಐದು ಗ್ರಾಮ ಪಂಚಾಯಿತಿಗಳನ್ನು ಮಾತ್ರ ಗಮನಿಸಲು ಸಾಧ್ಯವಾಯಿತು. ಈ ಅಧ್ಯಯನವು ಶಿಕ್ಷಣ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ನಾಯಕ ಸಮುದಾಯದ ಮಹಿಳೆಯರ ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಶಿಕ್ಷಣ ವ್ಯವಸ್ಥೆಯ ಕುರಿತು ಅಧ್ಯಯನ ಮಾಡುವವರಿಗೆ ಒಂದು ಕೈದೀವಿಗೆಯಾದೀತೆಂದು ಭಾವಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಮೀನಾಕ್ಷಿ ಬಿ; ೨೦೦೯:೨

೨. ಅದೇ, ೨೦೦೯:೨-೩

೩. ವೀರಭದ್ರಪ್ಪ, ೧೯೯೮:೧೫೬

೪. ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆ ವರದಿ, ೨೦೦೮:೧೩೨

೫. ನರಸಿಂಹಯ್ಯ ಎಚ್. ವರದಿ, ೧೯೯೧:೧೨೬

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ತಿಳುವಳಿಕೆದಾರರ ಮಾಹಿತಿ

೩. ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ

೪. ಅಂಕಿ ಅಂಶಗಳು

೫. ನಕ್ಷೆಗಳು

೬. ಛಾಯಾಚಿತ್ರಗಳು

ಪರಾಮಾರ್ಶನ ಗ್ರಂಥಗಳು

೧. ಅಬ್ದುಲ್ ಅಜೀಜ್ (ಸಂ), ಮಾನವಾಭಿವೃದ್ಧಿ ವರದಿ ೨೦೦೫

೨. ಆಚಾರ ವನಮಾಲ, ಸ್ತ್ರೀ ಮತ್ತು ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೩. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಯ, ಕರ್ನಾಟಕ ಅಂಕಿ-ಅಂಶಗಳ ನೋಟ (೨೦೧೦-೧೧), ಬೆಂಗಳೂರು,

೪. ಇಂದಿರಾ ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಓಂಕಾರ ಕಾಕಡೆ, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು, ಎಂ.ಬಿ.ಎಚ್. ಬುಕ್‌ಹೌಸ್, ಮೈಸೂರು.

೬. ಓಬಳೇಶ್ ಕೆ.ಎಚ್., ೨೦೧೧, ಅಕ್ಷರ ದೀಪ ಅರಸುತ್ತ: ಸೋಲಿಗ ಮಕ್ಕಳ ಕಲಿಕೆ ವ್ಯಥೆ-ಕಥೆ, ಡ್ರೀಜ್ ಇಂಡಿಯಾ, ಮೈಸೂರು

೭. ಕರ್ನಾಟಕ ಅಂಕಿ ಅಂಶಗಳ ನೋಟ (೨೦೧೦-೧೧), ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

೮. ಕರ್ನಾಟಕ ಜನಸಂಖ್ಯೆಯ ಜನಗಣತಿ ವರದಿ ೨೦೧೧, ಜನಸಂಖ್ಯಾ ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

೯. ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೦-೧೧ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

೧೦. ಕರೂರ ಎನ್.ಜಿ., ೨೦೦೨, ಶಿಕ್ಷಣ ಮಾರ್ಗ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೧. ಕೃಷ್ಣ ಎನ್.ಎಂ., ೨೦೦೦, ಮಹಿಳೆಯರು ಮೊದಲು ಅಕ್ಷರಸ್ಥರಾಗಬೇಕು, ಐಬಿಎಚ್ ಪ್ರಕಾಶನ, ಮೈಸೂರು

೧೨. ಕೃಷ್ಣಪ್ಪ ಎಸ್., ೨೦೦೨, ಆಧುನಿಕ ಶಾಲಾ ವ್ಯವಸ್ಥೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೩. ಕಿರಣ್ ಬೇಡಿ, ೨೦೦೮, ನಾ ಕಂಡಂತೆ ಮಹಿಳಾ ಸಶಕ್ತೀಕರಣ, ಪದ್ಮಾಲಯ ಪ್ರಕಾಶನ, ಮೈಸೂರು

೧೪. ಕುಮಾರ, ೨೦೦೪, ಪ್ರಾಥಮಿಕ ಶಿಕ್ಷಣ, ಎನ್.ಎಸ್.ಇ.ಆರ್.ಟಿ., ಬೆಂಗಳೂರು

೧೫. ಗಾಯತ್ರಿ ಎನ್., (೨೦೦೫) ಮಹಿಳೆ ಶೋಷಣೆ, ಸವಾಲುಗಳು, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೧೬. ಗೀತಾ, ೨೦೦೭, ಸ್ತ್ರೀ ವಿಮುಕ್ತ ಚಿಂತನೆ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಮಂಡ್ಯ

೧೭. ಗುರುಲಿಂಗಯ್ಯ ಎಂ., ೨೦೦೬, ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ: ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಮಂಗಳ ಗಂಗೋತ್ರಿ, ಮಂಗಳೂರು

೧೮. ಚಂದ್ರಶೇಖರ್ ಸಿ.ಪಿ., ೨೦೦೨, ವಿಫಲಗೊಂಡ ಮಾರುಕಟ್ಟೆ ಭಾರತದಲ್ಲಿ ನವ ಉದಾರೀಕರಣದ ಆರ್ಥಿಕ ಸುಧಾರಣೆಗಳು, ಸುಧನ್ವ ಪ್ರಕಾಶನ, ಮೈಸೂರು

೧೯. ಚಂದ್ರಶೇಖರ್ ಟಿ.ಆರ್., ೨೦೦೫, ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ......, ೨೦೦೭, ಕರ್ನಾಟಕದ ಪ್ರಾದೇಶಿಕ ಅಸಮಾನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ......, ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಜಯಂತಿ ವೈ.ಕೆ., ಅಭಿವೃದ್ಧಿ ಮತ್ತು ಬದಲಾವಣೆ, ರಾಧಕೃಷ್ಣ ಪ್ರಕಾಶನ, ಬೆಂಗಳೂರು.

೨೩. ಜಿನ್ ಡ್ರೇಜ್ ಮತ್ತು ಅಮರ್ತ್ಯಸೇನ್ (೧೯೯೯), "ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅವಕಾಶ, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು

೨೪. ಜ್ಯೋತ್ಸ್ನ ಕಾಮತ್, ೨೦೦೦, ಮಹಿಳೆಯರು: ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೫. ಥೇಕೆಡತ್ ಕೆ.ಕೆ, ೧೯೯೮, (ಅನು), ಕೆ.ಎಲ್. ಗೋಪಾಲಕೃಷ್ಣಯ್ಯ, ಶಿಕ್ಷಣದ ಸವಾಲುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೬. ದೇವರಕೊಂಡಾರೆಡ್ಡಿ (ಸಂ), ೨೦೦೧, ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ನಂದಹಾರ್ ಇಕಟರ, ೨೦೦೭, ಒಂದನೇ ತರಗತಿಯಿಂದ ಐದನೇ ತರಗತಿ ಕನ್ನಡ ಪುಸ್ತಕಗಳ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೮. ನಟರಾಜ್ ಹುಳಿಯಾರ್, ೨೦೦೭, ಸುವರ್ಣ ಕರ್ನಾಟಕ ಗ್ರಾಮೀಣಾಭಿವೃದ್ಧಿ ವರ್ಷಾಚಾರಣೆ ಕಾರ್ಯಕ್ರಮ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೯. ನರಸಿಂಹಯ್ಯ ಎಚ್, ೧೯೯೧ರ ಎಚ್. ನರಸಿಂಹಯ್ಯ ಸಮಿತಿ ವರದಿ, ಶಾಸಕರ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು.

೩೦. ನರಸಿಂಹಾಚಾರ್ ಎ.ಎಲ್., ೨೦೦೬, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಸಿವಿಜಿ ಪಬ್ಲಿಕೇಷನ್, ಮೈಸೂರು

೩೧. ನಾರಾಯಣ ಡಿ.ಎಸ್, ೨೦೧೧, ಇಂಗ್ಲಿಷ್ ಮತ್ತು ಕನ್ನಡ ಸಂಬಂಧ ಕುರಿತು ಚಿಂತನೆಗಳು, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ನಿರಂಜನಾರಾಧ್ಯ.ವಿ.ಪಿ.(೨೦೦೭), ಶಾಲಾಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ, ಎನ್ ಎಸ್ ಇ ಆರ್ ಟಿ, ಬೆಂಗಳೂರು

೩೩. ಪ್ರಶಾಂತ್ ಎಚ್.ಡಿ., ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. .... ೨೦೦೬, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. .... ೨೦೦೭, ಶಾಲಾಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕ ಅನುಭವಗಳು: ಸಾಧನೆ-ಸವಾಲು-ಸಾಧ್ಯತೆ, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಪಾರ್ವತಮ್ಮ ಸಿ, ೨೦೦೭, ಬುಡಕಟ್ಟು ಶಿಕ್ಷಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೩೭. ...., ೨೦೦೮ ಆದಿವಾಸಿಗಳ ಅಭಿವೃದ್ಧಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೩೮. ಬಳ್ಳಾರಿ ಜಿಲ್ಲೆ ಅಂಕಿಅಂಶ ನೋಟ(೨೦೦೯-೧೦ರ ವರದಿ) ೨೦೧೨, ಬಳ್ಳಾರಿ ಜಿಲ್ಲಾಪಂಚಾಯಿತಿ, ಬಳ್ಳಾರಿ

೩೯. ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೧೨, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

೪೦. ಬಾಲಸುಬ್ರಮಣ್ಯಂ, ೨೦೧೧, ಬುಡಕಟ್ಟು ಸಮುದಾಯಗಳು,, ಸುಪ್ರಿಯ ಪ್ರಕಾಶನ, ತುಮಕೂರು

೪೧. ಭೈರಪ್ಪ ಕೆ., ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಐಬಿಹೆಚ್ ಪ್ರಕಾಶನ, ಮೈಸೂರು.

೪೨. ಮಂಜಪ್ಪ, ದಲಿತರ ಶೈಕ್ಷಣಿಕ ಸ್ಥಿತಿಗತಿಗಳು ೨೦೧೪, (ಅಪ್ರಕಟಿತ ಪಿಎಚ್, ಡಿ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ಮಧು ಎಸ್., ೨೦೦೭, ಶತಮಾನದ ಅಂಚಿನ ಶಿಕ್ಷಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೪. ಮೀನಾಕ್ಷಿ ಬಿ., ೨೦೦೯, ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಸ್ಥಿತಿಗತಿ, (ಅಪ್ರಕಟಿತ ಪಿಎಚ್ ಡಿ ಪ್ರಬಂಧ), ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

೪೫. ಯರ್ರಿಸ್ವಾಮಿ ಎಂ., ಗ್ರಾಮಪಂಚಾಯಿತಿ ಮತ್ತು ಸಬಲೀಕರಣ (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

೪೬. ಲಕ್ಷ್ಮಣ್ ತೆಲಗಾವಿ (೨೦೦೭), ಕರ್ನಾಟಕದ ದಲಿತ ಚಳುವಳಿ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ–೧, (ಸಂ), ಹಿ.ಚಿ. ಬೋರಲಿಂಗಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ಲೋಹಿಯಾ, ೧೯೮೯, ಜಾತಿವಿನಾಶ, ಪತ್ರಿಕೆ ಪ್ರಕಾಶನ, ಬೆಂಗಳೂರು

೪೮. ವರ್ಮ ಕೆ.ಕೆ., ೨೦೦೭, ಮಕ್ಕಳ ಹಕ್ಕುಗಳು, ಕರ್ನಾಟಕ ಸರ್ಕಾರ, ಬೆಂಗಳೂರು

೪೯. ವೆಂಕಟೇಶ ಎನ್.ಆರ್., ೨೦೧೭, ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ(ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೦. ಶಾರದ ಕೆ.ಎಸ್., ೨೦೦೭, ವಯಸ್ಕರ ಶಿಕ್ಷಣ–ಸಾಕ್ಷರತಾ ಅಂದೋಲನ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂ), ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೧. ಶಿವಕುಮಾರ್ ಎ.ಕೆ., ೨೦೦೮, ಬಡತನ ನಿವಾರಣೆ: ಭಾರತದಿಂದ ಕಲಿಯಬೇಕಾದ ಪಾಠಗಳು, ಸುಚಿತ್ರ ಪ್ರಕಾಶನ, ಬೆಳಗಾವಿ

೫೨. ಶಿವಶಂಕರ್ ಹೆಚ್.ವಿ., ೧೯೭೦, ಭಾರತೀಯ ಶಿಕ್ಷಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫೩. ಸವಿತಾ ಕೆ, ೨೦೦೮, ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು: ಸಮಾಜೋ–ಆರ್ಥಿಕ ಅಂಶಗಳು, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೪. ಸಾವಿತ್ರಿ ಕೆ.ಎಂ., ೨೦೦೨, ಕುಮಟಾ ದುರ್ಗ, ಕಂಪ್ಲಿ ಪರಿಸರದ ಕುಮಾರರಾಮನ ಹಬ್ಬಗಳು, ಕನ್ನಡ ಹಿತರಕ್ಷಕ ಸಂಘ, ಕಂಪ್ಲಿ.

೫೫. ವಿರಭದ್ರನಾಯ್ಕ ಪಿ, ೨೦೧೦, ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ವಿರಭದ್ರಪ್ಪ ತಂಬ್ರಳ್ಳಿ, ೨೦೧೧, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಬೇಡವಾಲ್ಮೀಕಿ ಬುಡಕಟ್ಟಿನ ಪಾಲ್ಗೊಳ್ಳುವಿಕೆ (ಬಳ್ಳಾರಿ ಜಿಲ್ಲೆಯ ಊರನಾಯಕ ಮತ್ತು ಮ್ಯಾಸನಾಯಕರನ್ನು ಅನುಲಕ್ಷಿಸಿ) (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಹರ್ಟಿಗೊ(Hartog Committe Report) ಸಮಿತಿ ವರದಿ, ೧೯೨೯, ಶಿಕ್ಷಣ ಇಲಾಖೆ, ಬೆಂಗಳೂರು.

58. Agarwala, 2001, An assessment of Trend in Access and Retention, Rawat Publication , New Delhi.

59. Agarwala, 2010, Re-thinking agriculture production concavities, EPW, Vol 14, Mumbai.

60. Alokkumar, 1986, Tribal Culture and Economy, Rawat Publications, New Delhi

61. Amiyakumar Beechi, 2005, The Presidency Bank and Indian Economy, Oxford University Press, Kolcatta.

62. Amman,Madhusudhan, 2005, Perfective on Education, EPW (July-30), Mumbai

63. ...., 2006, Behoor, Construction of Tribal Education in Orissa, Sage Publication, New Delhi.

64. Bevur, 2003, Construction of Tribal Education, Mysore University, Mysore.

65 . Bhandari Narayan Tiwari, 2007, Re-activating the past: Dalits and Memories of 1857, Sage Publication, New Delhi.

66. Bhuddadev Chaturvedhi, 1990, The Tribal Transformation in India, Gheetha Book House, New Delhi.

67. Charugupta, 2007, Dalit Viranganas and Re-indecen of 1875, Asha Publications, Pune.

68. Deez Jean, Amarthyasen, 1995, Basic Education as a Political Issues: Planning and Administration, Oxford University Press. New Delhi.

69. Dhananjeyakumar, 1994, Rural Credit: Indian Economic (1947-1992) Vol 1, Sage Publication, New Delhi.

70. Dhanushkumar, 2005, National Sampling Survey, Ministry of Statically, Govt. Of India, New Delhi.

71. Gheetha Menon, 1987, Tribal Women, Victims of Development Process, Rawat Publications, New Delhi.

72. Gopal Bhardwaj, 1977, The Social Moments among the Tribes of India, Suneetha Publications, Mumbai.

73. Kamarkar K G, 2002, The Silence Drum, Sage Publications, New Delhi.

74. Krishnakumar, Manisha Priyam, Sadhana Sexena, 2001, Looking beyond the Slam Screen, Oxford University Press, Chanai.

75. Litan G K, 2000, The Children Workers and Education, Sushma Publications, Pune.

76. Muktesh Joshi, Tarakesh Joshi, 2010, New Aspect of Economic Sustainability among the Tribes, Nisha Publication, Mumbai.

77. Neer, Burra, Cultural Stereo Types and Household Behaviour, EPW (Feb 3 10) Mumbai.

78. Nirankar, Srivastava, 2007, Elementary Education: Poverty & Gender, Sigma Publication, New Delhi.

79. Padma M Sarangapani, 2003, Constructing School Knowledge on Ethnography of Learning in on Indian Villege, Sage Publication, New Delhi.

80. Pradeepkumar Bosh, 1981, Stratification among Indian Tribes, Sage Publication, New Delhi.

81. Rekha Koul, 2001, Assisting Primary Education going to beyond the Class room, Vikas Publishers, New Delhi.

82. Routs, 1998, Dymancen of Tribal Education, Madras University. Chanai

83. Rukmini Banrgy, 2000, Poverty and Primary Schooling feaild Studies from Mumbai and Delhi, Pragathi Publications, New Delhi

84. Sharada Jain, Alok Mathoor, Shobhitharaj, Gopal Juhishah, 1999, Children work and Education: Re-thinking on Out of School Children, Indian Education Report, Dept.of Education, New Delhi.

85. Vasavi A R, Vijaya Sherichand, Shilesh R Sukhla, 1997, Blue Print for Rural Primary Education, Rawat publication, New Delhi.

ತಿಳುವಳಿಕೆದಾರರ ವಿವರ

(ತಿಳುವಳಿಕೆದಾರರ ಹೆಸರು, ವಯಸ್ಸು, ವೃತ್ತಿ, ಊರು)

ಹೆಸರು	ವಯಸ್ಸು	ವೃತ್ತಿ	ಊರು
ಮಂಜುನಾಥ	(೬೦)	ರೈತರು	ಎತ್ತಿನಬೂದಿಹಾಳ್. ಬಳ್ಳಾರಿ ಜಿಲ್ಲೆ.
ಬೀಮಪ್ಪ	(೬೯)	ವ್ಯವಸಾಯ	ಎತ್ತಿನಬೂದಿಹಾಳ್. ಬಳ್ಳಾರಿ ಜಿಲ್ಲೆ.
ಹಳ್ಳೆಪ್ಪ	(೩೭)	ವ್ಯವಸಾಯ	ಎತ್ತಿನಬೂದಿಹಾಳ್. ಬಳ್ಳಾರಿ ಜಿಲ್ಲೆ.
ಬೊಮ್ಮಪ್ಪ	(೩೯)	ಕೂಲಿ	ಎತ್ತಿನಬೂದಿಹಾಳ್. ಬಳ್ಳಾರಿ ಜಿಲ್ಲೆ.
ಬೀಮಪ್ಪ ಮಲಸಿದ್ದಪ್ಪ	(೩೫)	ಕೂಲಿ	ಎತ್ತಿನಬೂದಿಹಾಳ್. ಬಳ್ಳಾರಿ ಜಿಲ್ಲೆ.
ರಂಗಮ್ಮ	(೪೯)	ಕೂಲಿ	ಏಳುಬೆಂಚಿ. ಬಳ್ಳಾರಿ ಜಿಲ್ಲೆ.
ಜಯಪ್ಪ ಪೂಜಾರ	(೪೩)	ಕೂಲಿ	ಏಳುಬೆಂಚಿ. ಬಳ್ಳಾರಿ ಜಿಲ್ಲೆ.
ಕರಿಬಸಪ್ಪ	(೫೭)	ಕೂಲಿ	ಏಳುಬೆಂಚಿ. ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೪೦)	ಪಶುಪಾಲನೆ	ಏಳುಬೆಂಚಿ. ಬಳ್ಳಾರಿ ಜಿಲ್ಲೆ.
ಶೇಖರಪ	(೩೭)	ವ್ಯವಸಾಯ	ಏಳುಬೆಂಚಿ. ಬಳ್ಳಾರಿ ಜಿಲ್ಲೆ.
ಕೆಂಚಪ್ಪ	(೪೫)	ಕೃಷಿಕೂಲಿ	ಓರ್ವಾಯಿ. ಬಳ್ಳಾರಿ ಜಿಲ್ಲೆ.
ಚೌಡಪ್ಪ	(೪೫)	ಪಶುಪಾಲನೆ	ಓರ್ವಾಯಿ. ಬಳ್ಳಾರಿ ಜಿಲ್ಲೆ.
ಓಬಪ್ಪ	(೪೮)	ವ್ಯವಸಾಯ	ಓರ್ವಾಯಿ. ಬಳ್ಳಾರಿ ಜಿಲ್ಲೆ.
ಪಾಲಪ್ಪ	(೪೩)	ವ್ಯವಸಾಯ	ಶಂಕರಬಂಡೆ. ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೫೧)	ಕೂಲಿ	ಶಂಕರಬಂಡೆ. ಬಳ್ಳಾರಿ ಜಿಲ್ಲೆ.
ಹಾಲಪ್ಪ	(೪೪)	ಕೂಲಿ	ಶಂಕರಬಂಡೆ. ಬಳ್ಳಾರಿ ಜಿಲ್ಲೆ.
ನಾಗರಾಜ	(೩೭)	ಪಶುಪಾಲನೆ	ಶಂಕರಬಂಡೆ. ಬಳ್ಳಾರಿ ಜಿಲ್ಲೆ.
ಅಶೋಕ	(೩೭)	ವ್ಯಾಪಾರ	ಬೆಳಗಾಲ್. ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೫೭)	ವ್ಯವಸಾಯ	ಬೆಳಗಾಲ್. ಬಳ್ಳಾರಿ ಜಿಲ್ಲೆ.
ಮೂಕಪ್ಪ	(೬೩)	ಕೂಲಿ	ಬೆಳಗಾಲ್. ಬಳ್ಳಾರಿ ಜಿಲ್ಲೆ.
ಕೆಂಗಪ್ಪ ಹನುಮಂತಪ್ಪ	(೪೫)	ಕೂಲಿ	ದಾಸನಹಳ್ಳಿ, ಹಡಗಲಿ ತಾ. ಬಳ್ಳಾರಿ ಜಿ.
ಬೀಮಣ್ಣ	(೫೪)	ಕೂಲಿ	ದಾಸನಹಳ್ಳಿ, ಹಡಗಲಿ ತಾ. ಬಳ್ಳಾರಿ ಜಿ.

ಹೆಸರು	ವಯಸ್ಸು	ವೃತ್ತಿ	ಊರು
ಬಸಪ್ಪ	(೪೮)	ವ್ಯವಸಾಯ	ದಾಸನಹಳ್ಳಿ, ಹಡಗಲಿ ತಾ. ಬಳ್ಳಾರಿ
ಈರಪ್ಪ ಟಿ	(೩೬)	ಕೂಲಿ	ದಾಸನಹಳ್ಳಿ, ಹಡಗಲಿ ತಾ. ಬಳ್ಳಾರಿ ಜಿ.
ರಂಗಪ್ಪ	(೩೯)	ಕೂಲಿ	ತುಂಬಿನಕೇರೆ, ಹಡಗಲಿ ತಾ. ಬಳ್ಳಾರಿ ಜಿ.
ನಾಗರಾಜ	(೪೪)	ಬೇಲ್ದಾರಿಕೆ	ತುಂಬಿನಕೇರೆ, ಹಡಗಲಿ ತಾ. ಬಳ್ಳಾರಿ ಜಿ.
ಪರುಸಪ್ಪ	(೪೧)	ಡ್ರೈವರ್	ತುಂಬಿನಕೇರೆ, ಹಡಗಲಿ ತಾ. ಬಳ್ಳಾರಿ ಜಿ.
ಮಂಜುನಾಥ	(೪೨)	ಗುಮಾಸ್ತ	ಮಹಾಜನದಹಳ್ಳಿ, ಹಡಗಲಿ ತಾ. ಬಳ್ಳಾರಿ
ನಾಗಮ್ಮ	(೨೯)	ಶಿಕ್ಷಕಿ	ಮಹಾಜನದಹಳ್ಳಿ, ಹಡಗಲಿ ತಾ. ಬಳ್ಳಾರಿ
ಚಂದ್ರಪ್ಪ	(೩೭)	ವ್ಯವಸಾಯ	ಮಹಾಜನದಹಳ್ಳಿ, ಹಡಗಲಿ ತಾ. ಬಳ್ಳಾರಿ
ಬಸರಾಜಪ್ಪ	(೪೧)	ವ್ಯವಸಾಯ	ನೌವುಲಿ, ಹಡಗಲಿ ತಾ. ಬಳ್ಳಾರಿ ಜಿ.
ರಂಗಪ್ಪ	(೪೭)	ವ್ಯವಸಾಯ	ನೌವುಲಿ, ಹಡಗಲಿ ತಾ. ಬಳ್ಳಾರಿ ಜಿ.
ಶೇಖರಪ್ಪ	(೫೨)	ವ್ಯವಸಾಯ	ನೌವುಲಿ, ಹಡಗಲಿ ತಾ. ಬಳ್ಳಾರಿ ಜಿ.
ಓಂಕಾರಪ್ಪ	(೪೨)	ವ್ಯವಸಾಯ	ಮುದೇನೂರು, ಹಡಗಲಿ ತಾ. ಬಳ್ಳಾರಿ ಜಿ.
ರಾಜಪ್ಪ	(೫೮)	ವ್ಯವಸಾಯ	ಮುದೇನೂರು, ಹಡಗಲಿ ತಾ. ಬಳ್ಳಾರಿ ಜಿ.
ಬಸವರಾಜಪ್ಪ ಎಚ್.	(೪೭)	ಗ್ರಾ.ಸದಸ್ಯರು	ಮುದೇನೂರು, ಹಡಗಲಿ ತಾ. ಬಳ್ಳಾರಿ ಜಿ.
ತಿಪ್ಪೇಶಪ್ಪ	(೪೧)	ವ್ಯವಸಾಯ	ಹಚ್ಚೊಳ್ಳಿ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೪೪)	ಗಾರೆಕೆಲಸ	ಹಚ್ಚೊಳ್ಳಿ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಚಂದ್ರಪ್ಪ	(೫೮)	ಪೂಜಾರಿ	ಹಚ್ಚೊಳ್ಳಿ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಬಸಪ್ಪ	(೫೦)	ಟೈಲರ್	ಶ್ಯಾನವಾಸಪುರ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೫೭)	ಕೂಲಿ	ಶ್ಯಾನವಾಸಪುರ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಹನುಮಂತಪ್ಪ	(೪೬)	ವ್ಯವಸಾಯ	ಶ್ಯಾನವಾಸಪುರ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಬೊಮ್ಮಣ್ಣ	(೭೨)	ವ್ಯಾಪಾರ	ಶ್ಯಾನವಾಸಪುರ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ರಂಗಸ್ವಾಮಿ	(೬೦)	ವ್ಯವಸಾಯ	ಉತ್ತನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಮಲ್ಲಪ್ಪ	(೫೩)	ಕೃಷಿಕೂಲಿ	ಉತ್ತನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ರಾಮಪ್ಪ	(೮೦)	ವಿಶ್ರಾಂತಗೃಹಸ್ಥ	ಉತ್ತನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಲಕ್ಷ್ಮಮ್ಮ	(೩೮)	ಗೃಹಿಣಿ	ಉತ್ತನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.

ಹೆಸರು	ವಯಸ್ಸು	ವೃತ್ತಿ	ಊರು
ತಿಪ್ಪಣ್ಣ ಹನುಮಪ್ಪ	(೫೪)	ಕೂಲಿ	ಮುದ್ದಟನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಕೆ. ರಾಜಪ್ಪ	(೪೫)	ವ್ಯಾಪಾರಿ	ಮುದ್ದಟನೂರು, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.
ಬಿ. ನಾಗಪ್ಪ	(೪೫)	ವ್ಯಾಪಾರಿ	ಚಿಲಕನಹಟ್ಟಿ, ಹೊಸಪೇಟೆ ತಾ. ಬಳ್ಳಾರಿ ಜಿ.
ಚಂದ್ರಪ್ಪ	(೩೮)	ವ್ಯಾಪಾರ,	ಚಿಲಕನಹಟ್ಟಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ.
ಮಂಜಣ್ಣ	(೩೧)	ಪಶುಪಾಲನೆ	ಚಿಲಕನಹಟ್ಟಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ.
ಸಂಗಪ್ಪ	(೬೫)	ವ್ಯವಸಾಯ	ಚಿಲಕನಹಟ್ಟಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ.
ಮಂಜುನಾಥ	(೩೩)	ವಿದ್ಯಾರ್ಥಿ	ಡಣಾಯಕನಕೆರೆ, ಹೊಸಪೇಟೆ ತಾ. ಬಳ್ಳಾರಿ ಜಿ.
ತಿಂದಪ್ಪ	(೭೮)	ವಿಶ್ರಾಂತ ಗೃಹಸ್ಥ	ಡಣಾಯಕನಕೆರೆ, ಹೊಸಪೇಟೆ ತಾ. ಬಳ್ಳಾರಿ ಜಿ.
ಮಂಜುಳಾ ಎನ್.	(೧೬)	ವಿದ್ಯಾರ್ಥಿ	ಡಣಾಯಕನಕೆರೆ, ಹೊಸಪೇಟೆ ತಾ. ಬಳ್ಳಾರಿ ಜಿ.
ಬಸವರಾಜಪ್ಪ	(೬೨)	ಕೂಲಿ	ಗಾದಿಗನೂರು, ಹೊಸಪೇಟೆ ತಾ. ಬಳ್ಳಾರಿ ಜಿ.
ಮಂಜಪ್ಪ	(೩೯)	ಕೂಲಿ	ಗಾದಿಗನೂರು, ಹೊಸಪೇಟೆ ತಾ. ಬಳ್ಳಾರಿ ಜಿ.
ಲಕ್ಷ್ಮಪ್ಪ ಎನ್.	(೬೩)	ಕೂಲಿ	ಗಾದಿಗನೂರು, ಹೊಸಪೇಟೆ ತಾ. ಬಳ್ಳಾರಿ ಜಿ.
ಆಶೋಕ ಆರ್.	(೨೯)	ಕೂಲಿ	ಗಾದಿಗನೂರು, ಹೊಸಪೇಟೆ ತಾ. ಬಳ್ಳಾರಿ ಜಿ.
ರೇವಣ್ಣ	(೩೫)	ಕೂಲಿ	ಗಾದಿಗನೂರು, ಹೊಸಪೇಟೆ ತಾ. ಬಳ್ಳಾರಿ ಜಿ.
ಉಮಾ	(೩೨)	ಗೃಹಿಣಿ	ಮುದ್ದಾಪುರ ನಂ.10, ಹೊಸಪೇಟೆ ತಾ. ಬಳ್ಳಾರಿ ಜಿ.
ಪರಮೇಶಪ್ಪ	(೪೧)	ಕೂಲಿ	ಮುದ್ದಾಪುರ ನಂ.10, ಹೊಸಪೇಟೆ ತಾ. ಬಳ್ಳಾರಿ ಜಿ.
ಕರಿಯಮ್ಮ	(೩೫)	ಕೂಲಿ	ಮುದ್ದಾಪುರ ನಂ.10, ಹೊಸಪೇಟೆ ತಾ. ಬಳ್ಳಾರಿ ಜಿ.
ರೇವಣ್ಣ ಆರ್.	(೬೧)	ಕೂಲಿ	ಮುದ್ದಾಪುರ ನಂ.10, ಹೊಸಪೇಟೆ ತಾ. ಬಳ್ಳಾರಿ ಜಿ.
ಇಂದ್ರಮ್ಮ	(೪೭)	ಕೂಲಿ	ನಾಗಲಪುರ, ಹೊಸಪೇಟೆ ತಾ. ಬಳ್ಳಾರಿ ಜಿ.
ಅಂಜಿನಪ್ಪ	(೫೪)	ಕೂಲಿ	ನಾಗಲಪುರ, ಹೊಸಪೇಟೆ ತಾ. ಬಳ್ಳಾರಿ ಜಿ.
ಮೀನಾಕ್ಷಮ್ಮ	(೩೫)	ಕೂಲಿ	ನಾಗಲಪುರ, ಹೊಸಪೇಟೆ ತಾ. ಬಳ್ಳಾರಿ ಜಿ.
ಹನುಮಂತಮ್ಮ	(೪೨)	ಕೂಲಿ	ನಾಗಲಪುರ, ಹೊಸಪೇಟೆ ತಾ. ಬಳ್ಳಾರಿ ಜಿ.
ಪ್ರಕಾಶ್	(೨೯)	ವಿದ್ಯಾರ್ಥಿ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಕರಿಯಪ್ಪ,	(೪೭)	ಕೂಲಿ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ರಾಮಯ್ಯ	(೩೦)	ಪಶುಪಾಲನೆ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.

ಹೆಸರು	ವಯಸ್ಸು	ವೃತ್ತಿ	ಊರು
ಬೀಮಪ್ಪ	(೫೯)	ವ್ಯವಸಾಯ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ರಂಗನಾಥ	(೨೭)	ವ್ಯವಸಾಯ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಅಶೋಕ	(೨೭)	ವ್ಯಾಪಾರ	ಕಂದಗಲ್ಲ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಕೆಂಚಪ್ಪ	(೩೭)	ವ್ಯವಸಾಯ	ಜುಮ್ಮೊಬನಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿ.
ದ್ಯಾಮವ್ವ ಕೆ.	(೬೩),	ವ್ಯಾಪಾರ	ಜುಮ್ಮೊಬನಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿ.
ಪರಶುರಾಮ	(೩೧),	ವ್ಯವಸಾಯ	ಜುಮ್ಮೊಬನಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿ.
ಹನುಮಂತಪ್ಪ	(೮೬)	ವಿಶ್ರಾಂತ ಗೃಹಸ್ಥ	ಜುಮ್ಮೊಬನಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿ.
ಕಮಲಮ್ಮ	(೪೨)	ಗೃಹಿಣಿ	ಜುಮ್ಮೊಬನಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿ.
ಕರಿಸಿದ್ದಪ್ಪ	(೧೯)	ವಿದ್ಯಾರ್ಥಿ	ಪೂಜಾರಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ರೇವಣಸಿದ್ದಪ್ಪ	(೫೫)	ವ್ಯವಸಾಯ	ಪೂಜಾರಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಮಂಜುನಾಥ	(೪೧)	ವ್ಯವಸಾಯ	ಪೂಜಾರಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಶಾಂತಮ್ಮ	(೩೫)	ಕೂಲಿ	ಪೂಜಾರಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಪ್ರಕಾಶ್	(೩೫)	ಗ್ರಾಪಂ. ಅಧ್ಯಕ್ಷರು	ಪೂಜಾರಹಳ್ಳಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಉಮೇಶ್	(೭೭)	ಭೂ ಒಡೆಯ	ಮೊರಬ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ರತ್ನಮ್ಮ	(೪೦)	ಕೂಲಿ	ಮೊರಬ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಕೊಟ್ರೇಶಪ್ಪ ಎಂ.	(೫೧)	ವ್ಯವಸಾಯ	ಮೊರಬ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಪೂರ್ಣಿಮಾ	(೩೭)	ವ್ಯವಸಾಯ	ಮೊರಬ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ದುರಗಪ್ಪ	(೬೧)	ಕೂಲಿ	ಜರಮಲಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಹಾಲಸ್ವಾಮಿ	(೪೮)	ಕೂಲಿ	ಜರಮಲಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ಹನುಮವ್ವ	(೫೬)	ಕೂಲಿ	ಜರಮಲಿ, ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.
ನಾಗರಾಜ್	(೨೯)	ಆಟೋ ಡ್ರೈವರ್	ಯಶವಂತನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಸಣ್ಣ ಹನುಮಂತ	(೫೫)	ಕೂಲಿ	ಯಶವಂತನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಅನುಸೂಯಮ್ಮ	(೩೯)	ಕೂಲಿ	ಯಶವಂತನಗರ, ಸಂಡೂರು ತಾಲೂಕು. ಬಳ್ಳಾರಿ ಜಿ.
ಮಾರಣ್ಣ	(೪೭)	ಕೂಲಿ	ಮೆಟ್ರಿಕಿ, ಸಂಡೂರು ತಾಲೂಕು, ಬಳ್ಳಾರಿ ಜಿ.
ಸತ್ಯಮ್ಮ	(೧೩)	ವಿದ್ಯಾರ್ಥಿನಿ	ಮೆಟ್ರಿಕಿ, ಸಂಡೂರು ತಾಲೂಕು, ಬಳ್ಳಾರಿ ಜಿ.

ಹೆಸರು	ವಯಸ್ಸು	ವೃತ್ತಿ	ಊರು
ರಂಗಪ್ಪ ಟಿ.	(೬೫)	ಕೂಲಿ	ಮೆಟ್ರಿಕಿ, ಸಂಡೂರು ತಾಲೂಕು, ಬಳ್ಳಾರಿ ಜಿ.
ಹನುಂತಪ್ಪ ಆರ್.	(೭೭)	ವ್ಯವಸಾಯ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಹನುಮಕ್ಕ	(೬೧)	ಕೂಲಿ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ರಮೇಶ್ ಎಸ್.	(೨೭)	ವ್ಯವಸಾಯ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಈರಪ್ಪ ಟಿ.ಬಿ.	(೩೨)	ಕೂಲಿ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಮಾರಮ್ಮ	(೨೫)	ಕೂಲಿ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ನಾಗರಾಜ	(೩೪)	ಬೇಲ್ದಾರಿಕೆ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಕರಿಯಪ್ಪ	(೪೭)	ಕೂಲಿ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ಬೀಮಪ್ಪ	(೫೯)	ವ್ಯವಸಾಯ	ತಾರನಗರ, ಸಂಡೂರು ತಾಲೂಕು, ಬಳ್ಳಾರಿ ಜಿ.
ರಂಗನಾಥ	(೨೭)	ವ್ಯವಸಾಯ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಅಶೋಕ	(೨೭)	ವ್ಯಾಪಾರ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಹನುಮಂತರಾಯ	(೪೭)	ಬೇಲ್ದಾರಿಕೆ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಮುತ್ತಜ್ಜಯ್ಯ	(೪೩)	ಕೂಲಿ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಲಕ್ಷ್ಮಪ್ಪ ಎನ್.	(೩೩)	ಕೂಲಿ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಆಶೋಕ ಜೆ.ಎಂ.	(೧೯)	ಕೂಲಿ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ರಾಜಪ್ಪ	(೨೨)	ವಿದ್ಯಾರ್ಥಿ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
ಉಮಾದೇವಿ	(೧೬)	ವಿದ್ಯಾರ್ಥಿನಿ	ದರೋಜಿ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ಬುಡಕಟ್ಟು ಮಹಿಳೆ ಮತ್ತು ಶಿಕ್ಷಣ

(ಬಳ್ಳಾರಿ ಜಿಲ್ಲೆಯ ಬೇಡ ಮಹಿಳೆಯರನ್ನು ಪರಿಗಣಿಸಿ)

ಪ್ರಶ್ನಾವಳಿ

ಭಾಗ 1. ಸಾಮಾನ್ಯ ವಿವರಗಳು

1. ಮಾಹಿತಿದಾರರ ಹೆಸರು ವಿಳಾಸ :

2. ಕುಟುಂಬದ ವಿವರ :

ಚಿ) ಆವಿಭಕ್ತ ಕುಟುಂಬ : b) ವಿಭಕ್ತ ಕುಟುಂಬ :

3. ನೀವು ವಾಸಿಸುವ ಮನೆಯ/ಕಟ್ಟಡದ ಸ್ವರೂಪ

ಸ್ವಂತ ಸರ್ಕಾರಿ/ಅರೆಸರ್ಕಾರಿ/ಯೋಜನೆ

ಬಾಡಿಗೆಯ ಪ್ರಮಾಣ

ಶೌಚಾಲಯ ಇದೆ ಇಲ್ಲ

4. ಕುಡಿಯುವ ನೀರಿನ ಸೌಲಭ್ಯ ಇದೆ/ಇಲ್ಲ

ಬೋರ್‌ವೆಲ್‌ಬಾವಿ ನಲ್ಲಿ ಇತರೆ

a) ಕುಡಿಯುವ ನೀರು ಯೋಗ್ಯವಿದೆಯೇ, ಹೌದು / ಇಲ್ಲ

b) ಕುಡಿಯುವ ನೀರಿನ ಮೂಲದ ದೂರ

ಸಮೀಪ 1/2 ಕಿಮೀ 1.ಕಿಮೀ ಅದಕ್ಕಿಂತದೂರ

5. ನಿಮ್ಮ ಕುಟುಂಬಧ ಕೃಷಿ ಭೂಮಿ ವಿವರ (ಎಕರೆಗಳಲ್ಲಿ)

ಭೂ ಸ್ವರೂಪ ಇಲ್ಲ 0–1 2–45–10 11–15 16–20 21–25 25....

ತರಿ ಭೂಮಿ

ಖುಷ್ಕಿ ಭೂಮಿ

a) ನೀರಾವರಿಯ ಮೂಲಗಳು

ನದಿ ಕಾಲುವೆ ಕೆರೆಯ ಕೊಳವೆ/ಬಾವಿ ಇತರ ಮೂಲಗಳು

b) ಗುತ್ತಿಗೆ ಭೂ ಸಾಗುವಳಿ ಮಾಡುವುರಾ? ಹೌದು / ಇಲ್ಲ

6. ನಿಮ್ಮ ಕುಟುಂಬದ ಇತರೆ ಆದಾಯದ ಮೂಲಗಳು

ಕ್ರ.ಸಂ.	ವಿವರಗಳು	ಆದಾಯ
1	ಕೃಷಿ	
2	ಹೈನುಗಾರಿಕೆ	
3	ವೇತನ	
4	ಮನೆ ಬಾಡಿಗೆ	
5	ಬಡ್ಡಿ	
6	ವಾಣಿಜ್ಯ ವ್ಯವಹಾರಗಳು	
7	ಇತರೆ	

7. ನಿಮ್ಮ ಕುಟುಂಬದ ಒಟ್ಟು ಮಾಸಿಕ ಆದಾಯವೆಷ್ಟು? (✓)

1000 ರಿಂದ 10 ಸಾವಿರ	10000 ರಿಂದ 20 ಸಾವಿರ
20000 ರಿಂದ 30 ಸಾವಿರ	30 ರಿಂದ 40 ಸಾವಿರ
40 ರಿಂದ 50 ಸಾವಿರ	50 ರಿಂದ 1 ಲಕ್ಷ

ಭಾಗ–2 : ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣದ ವಿವರದ ಯೋಜನೆಗಳ ಕುರಿತು

- ವಿದ್ಯಾರ್ಥಿನಿಯ ಊರು.........
- ವಿದ್ಯಾರ್ಥಿನಿಯ ಹೆಸರು............
- ವಿದ್ಯಾರ್ಥಿನಿಯ ಶಾಲೆಯ ಹೆಸರು.........
- ತರಗತಿ/ವಿಭಾಗ...........

a) ಶಾಲೆಯಲ್ಲಿ ಉಚಿತ ಪಠ್ಯಪುಸ್ತಕ ನೀಡುತಾರ? ಹೌದು/ಇಲ್ಲ

b) ಉಚಿತ ಸಮವಸ್ತ್ರಗಳು ದೂರೆಯುತ್ತವೆಯೇ? ಹೌದು/ಇಲ್ಲ

c) ಶಾಲೆಯು ಆರಂಭವಾದಾಗ ಪಾಠಿ ಚೀಲಗಳು ದೂರೆಯುತಿದ್ದವೆ? ಹೌದು/ಇಲ್ಲ

d) ಮಧ್ಯಾನದ ಬಿಸಿ ಊಟ ತೃಪ್ತಿಕರವಾಗಿದೆಯೇ? ಹೌದು/ಇಲ್ಲ

e) ಮಧ್ಯಾನದ ಬಿಸಿ ಊಟ ರುಚಿಕರವಾಗಿದೆಯೇ? ಹೌದು/ಇಲ್ಲ

f) ಉಚಿತವಾಗಿ ನೀಡುವ ಸೈಕಲ್‌ನ ಗುಣಮಟ್ಟದಿಂದ ಕೂಡಿದೆಯೇ? ಹೌದು/ಇಲ್ಲ

g) ಇಂಗ್ಲೀಷ್ ಪಠ್ಯಕ್ರಮ ಕಲಿಕೆಗೆ ಅನುಕೂಲಕರವಾಗಿದೆಯೇ? ಹೌದು/ಇಲ್ಲ

h) ಪ್ರತಿವರ್ಷ ನಡೆಸುವ ಚಿಣ್ಣರ ಜಿಲ್ಲಾ ದರ್ಶನ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳುವಿರಾ? ಹೌದು/ಇಲ್ಲ

i) ಪ್ರತಿವರ್ಷ ನಡೆಸುವ ಪ್ರತಿಭಾ ಕಾರಂಜಿಯ ಚಟುವಟಿಕೆಗಳಲ್ಲಿ ಭಾಗವಹಿಸುವಿರಾ? ಹೌದು/ಇಲ್ಲ

j) ವಿದ್ಯಾರ್ಥಿವೇತನ ಕಾಲಕ್ಕನುಗುಣವಾಗಿ ನೀಡುತ್ತಾರಾ? ಹೌದು/ಇಲ್ಲ

k) ಪೌಷ್ಟಕಾಂಶ ಉಳ್ಳ ಆಹಾರವನ್ನು ಶಾಲೆಯಲ್ಲಿ ನೀಡುತ್ತಾರ? ಹೌಆದು/ಇಲ್ಲ

l) ಗ್ರಂಥಾಲಯದ ಸೌಲಭ್ಯವು ಇದೆಯಾ? ಹೌದು/ಇಲ್ಲ

m) ಅವಶ್ಯಕತೆ ಇರುವ ಪುಸ್ತಕಗಳ ಹೆಸರು ತಿಳಿದಿರುವಿರಾ?

ಭಾಗ-3 : ಯೋಜನೆಯ ಸೌಲಭ್ಯಗಳನ್ನು ಬಳಸುವಲ್ಲಿನ ಮಾಹಿತಿ

1. ಮನೆಯಿಂದ ನಿಮ್ಮ ಶಾಲೆಗಿರು ಅಂತರವೆಷ್ಟು ?

   1/2 ಕಿಮೀ 1. ಕಿಮೀ 2. ಕಿಮೀ ಅದಕ್ಕಿಂತ ಹೆಚ್ಚು

2. ಶಾಲೆಗೆ ತೆರಳಲು ವಾಹನ ಸೌಲಭ್ಯವಿದೆಯಾ? ಹೌದು/ಇಲ್ಲ ಅಥವಾ ಅದು ಯಾವ ಬಗೆ?

   a) ಬಸ್ಸು b) ಬೈಸಿಕಲ್ಲ್

   c) ಕಾಲುನಡೆಗೆ d) ಪೋಷಕರೋಡನೆ ತೆರಳುವುದು

3. ನಿಮಗೆ ಇಂಗ್ಲೀಷ್ ಕಲಿಕೆ ತೋಡಕಾಗುವುದೇ? ಹೌದು/ಇಲ್ಲ

4. ಗಣಿತ ಮತ್ತು ವಿಜ್ಞಾನದ ಪಠ್ಯದಿಂದ ನಿಮಗೆ ಹೊರೆಯೆನಿಸುತ್ತದೆಯೇ? ಹೌದು/ಇಲ್ಲ

5. ನಿಮ್ಮ ಶಾಲೆಯಲ್ಲಿ ಪಠ್ಯೇತರ ಚಟುವಟಿಕೆಗಳಿಂದ ಹೊರೆಯೆನಿಸುತ್ತದೆಯೇ ?ಹೌದು/ಇಲ್ಲ

6. ಶಿಕ್ಷಕರು ಪಠ್ಯಕ್ಕೆ ಸಂಬಂದಿಸಿದ ನಿಮ್ಮ ಅಭಿಪ್ರಾಯಗಳನ್ನು ಪುರಸ್ಕರಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ? ಹೌದು/ಇಲ್ಲ

7. ತರಗತಿಯಲ್ಲಿ ನಿವೇನಾದರೂ ಕುಚೇಷ್ಟೇ(ತಮಾಷೆ) ಮಾಡಿದರೆ ಶಿಕ್ಷಕರು ಗೇಲಿಮಾಡುತ್ತಾರೆಯೇ ಹೌದು/ಇಲ್ಲ

8. ಶಿಕ್ಷಕರು ತರಗತಿಯಲ್ಲಿ ಇತರೆ ವಿದ್ಯಾರ್ಥಿಗಳಿಗಿಂತ ಕೀಳಾಗಿ ಕಾಣುತ್ತಾರೆಯೇ? ಹೌದು/ಇಲ್ಲ

9. ತರಗತಿಯಲ್ಲಿ ಶಿಕ್ಷಕರು ಪ್ರಶ್ನೆ ಕೇಳುತ್ತಾರೆಂಬ ಭಯವಿದೆಯೇ? ಹೌದು/ಇಲ್ಲ

10. ನಿಮ್ಮ ಅಶಕ್ತಿಗೆ ಪೂರಕವಾಗಿ ಪಠ್ಯವಿಷಯವನ್ನು ಶಿಕ್ಷಕರು ಬೋಧಿಸುತ್ತಾರೆಯೇ? ಹೌದು/ಇಲ್ಲ

11. ತರಗತಿಯಲ್ಲಿ ಸಹಪಾಠಿಗಳು ನಿಮ್ಮ ಬಗ್ಗೆ ಶಿಕ್ಷಕರಲ್ಲಿ ದೂರುತ್ತಾರೆಯೇ? ಹೌದು/ಇಲ್ಲ

12. ನೀವು ತರಗತಿಯಲ್ಲಿ ಅಭ್ಯಾಸ ಮಾಡಿದ ವಿಷಯಗಳಿಗೆ ಅನುಗುಣವಾಗಿ ಪ್ರಶ್ನೆ ಕೇಳುತ್ತಾರಾ? ಹೌದು/ಇಲ್ಲ

13. ಶಿಕ್ಷರು ಭೊದನೆಗೆ ಬಳಸುವ ಪಠ್ಯ ಕ್ರಮಗಳು ಮುಂದಿನ ನಿಮ್ಮ ಅಭ್ಯಾಸಕ್ಕೆ ಅನೂಕಲ ವಾಗುತ್ತವೆಯೇ? ಹೌದು/ಇಲ್ಲ

14. ಪ್ರಾಯೋಗಿಕ ಅನುಭವಗಳ ಮೂಲಕ ಜ್ಞಾನವನ್ನು ಪಡೆಯುವ ಸಂಧರ್ಭದಲ್ಲಿ ಶಾಲೆಯ ವಾತಾವರಣ ಯಾವ ರೀತಿಯಾಗಿ ನಿಮಗೆ ಸ್ಪಂದಿಸುತ್ತದೆ?

15. ನಿಮಗೆ ಈ ಪಾಠ ಪ್ರವಚನಗಳಿಂದ ಯಾವುದೇ ವಿಶಿಷ್ಟ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತದೆಯೇ? ಹೌದು/ಇಲ್ಲ

16. ಈ ಶಿಕ್ಷಣ ಕ್ರಮದಿಂದ ಹೆಣ್ಣು ಮಕ್ಕಳಲ್ಲಿನ ಪ್ರಗತಿ ಪರ ಆಲೋಚನಾ ಶಕ್ತಿ ಬೆಳೆಯುತ್ತದೆಯೇ? ಹೌದು/ಇಲ್ಲ

17. ಲಿಂಗ ಅಸಮಾನತೆಗಳು ಕಂಡು ಬರುತ್ತವೆಯೇ? ಹೌದು/ಇಲ್ಲ

18. ಬಾಲ್ಯ ವಿವಾಹದಿಂದ ಶಾಲೆಗೆ ತೆರಳಲು ಕಷ್ಟವೆನಿಸುತ್ತದೆಯೇ? ಹೌದು/ಇಲ್ಲ

19. ನೆರೆಯ ಶಾಲೆಗಳ ಸೌಲಭ್ಯಗಳನ್ನು ಬಳಸಿಕೊಳ್ಳಲು ಸಮಸ್ಯೆಯಾಗುತ್ತಿದಿಯಾ?

20. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪೂರಕವಾತಾವಣ ಇಲ್ಲ ಎಂಬುದು ನಿಮ್ಮ ಅನಿಸಿಕೆಯೇ? ಹೌದು/ಇಲ್ಲ

21. ಗೃಹ ಕೃತ್ಯದಲ್ಲಿ ತೋಡಗಿಸಿ ಕೊಳ್ಳುವುದರಿಂದ ನಿಮಗೆ ಅಭ್ಯಾಸಕ್ಕೆ ಸಮಸ್ಯೆಯಾಗುತ್ತಿದೆಯಾ? ಹೌದು/ಇಲ್ಲ

22. ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವು ಅನವಶ್ಯಕತೆ ಎಂಬ ನಿಲುವು ನಿಮ್ಮ ಪೋಷಕರಲ್ಲಿ ಕಂಡಿದ್ದೀರಾ? ಹೌದು/ಇಲ್ಲ

ಭಾಗ–4 : ಭೌತಿಕ ಸವಲತ್ತುಗಳು

1. ಶಾಲಾ ಕಟ್ಟಡದ ಪರಿಸ್ಥಿತಿ ಉತ್ತಮವಾಗಿದೆಯೆ? ಹೌದು/ಇಲ್ಲ

2. ಶಾಲಾ ಕಟ್ಟಡ ಸರ್ಕಾರದ್ದೋ ಅಥವಾ ಬಾಡಿಗೆಯದ್ದೋ? ಸರ್ಕಾರಿ/ಬಾಡಿಗೆ

3. ತರಗತಿಗಳು ಸ್ವಚ್ಚವಾಗಿರುತ್ತವೆಯೇ? a) ಉತ್ತಮ b) ಸಾಧಾರಣ

4. ಪೀಠೋಪಕರಣಗಳು ಅನುಕೂಲಕರವಾಗಿವೆಯೇ? ಹೌದು/ಇಲ್ಲ

5. ನಿಮ್ಮ ಶಾಲೆಗೆ ಸುತ್ತುಗೋಡೆ(ಕಾಂಪೌಡು)ಯನ್ನು ನಿರ್ಮಿಸಿದ್ದಾರೆಯೇ? ಹೌದು/ಇಲ್ಲ

6. ಆಟದ ಮೈದಾನ ವೈಸ್ಥೆಯೆ ಇದೆಯಾ? ಹೌದು/ಇಲ್ಲ

7. ಶಾಲೆಯಲ್ಲಿ ಹೆಣ್ಣು ಮಕ್ಕಳ ವಿಶ್ರಾಂತಿ ಕೊಠಡಿಗಲಿವೆಯಾ? ಹೌದು/ಇಲ್ಲ

8. ತರಗತಿಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

   a) ವಿದ್ಯಾರ್ಥಿಗಳ ಸಂಖ್ಯೆ :

   b) ವಿದ್ಯಾರ್ಥಿನಿಯರ ಸಂಖ್ಯೆ :

9. ಕುಡಿಯುವ ನೀರಿನ ಸೌಲಭ್ಯವಿದೆಯೇ? ಹೌದು/ಇಲ್ಲ

10. ಶೌಚಾಲಯ ಬಳಕೆಯಾಗುತ್ತಿದೆಯಾ? ಹೌದು/ಇಲ್ಲ

    a) ಬಳಕೆಯಾಗದಿರಲು ಕಾರಣವೇನು?

11. ಶಾಲೆಯಲ್ಲಿನ ಒಟ್ಟು ಶಿಕ್ಷರ ಸಂಖ್ಯೆ ಎಷ್ಟು?

12. ಶಿಕ್ಷರು, ವಿದ್ಯಾರ್ಥಿಗಳ ಅನುಪಾತವೆಷ್ಟು?

    a) ಶಿಕ್ಷಕರ ಸಂಖ್ಯೆ:

    b) ಶಿಕ್ಷಕಿಯರ ಸಂಖ್ಯೆ:

13. ಶಿಕ್ಷಕರ ವಾಸ ಸ್ಥಳ ಶಾಲೆಯಿಂದ ಇರುವ ಅಂತರ?

    a) ಶಾಲೆಯ ಹತ್ತಿರ b) ನೆರೆಯ ಪಟ್ಟಣದಲ್ಲಿ

14. ಬಿಸಿಯೂಟ ತಯಾರಿಕೆಗೆ ಪ್ರತ್ಯೇಕ ಕೊಠಡಿ ಇದೆಯಾ? ಹೌದು/ಇಲ್ಲ

15. ಅಡುಗೆ ಕೆಲಸದ ಸಹಾಯಕರ ಸಂಖ್ಯೆ ಎಷ್ಟು?

    a) ಹೆಸರು b) ವಯಸ್ಸು c) ವಿವಾಹಿತ

    d) ಅವಿವಾಹಿತೆ e) ಜಾತಿ f) ಶಿಕ್ಷಣ

16. ಶಿಕ್ಷಕರಿಂದ ಎಂದಾದರೂ ಪೆಟ್ಟನ್ನು ತಿಂದಿದ್ದಾರಾ? ಹೌದು/ಇಲ್ಲ

17. ಒಂದನೇ ತರಗತಿಯಿಂದ ಇಲ್ಲಿಯವರೆಗೆ ಶಾಲೆಯನ್ನು ಬಿಟ್ಟು ಪುನಃ ಶಾಲೆಗೆ ಸೇರಿದ್ದೀರಾ? ಹೌದು/ಇಲ್ಲ

18. ಹೌದಾರೆ ಏಕೆ?

a) ಅನುತ್ತೀರ್ಣದ ಭಯ b) ಅನಾರೋಗ್ಯದ ಸಮಸ್ಯೆ

19. ನಿಮ್ಮ ಮಾತೃ ಭಾಷೆಯಾವುದು ?

a) ಕನ್ನಡ b) ಇಂಗ್ಲೀಷ್

c) ತೆಲುಗು d) ತಮಿಳು

ಭಾಗ–5: ಆರ್ಥಿಕ ಕಾರಣಗಳು

1. ನಿಮ್ಮ ತಂದೆತಾಯಿ ಕೂಲಿ ಕೆಲಸ ಮಾಡಿ ಓದಿಸುವುದರಿಂದ ನಿಮಗೆ ಓದುವುದು ಕಷ್ಟವೆನಿಸುತ್ತದೆಯೇ? ಹೌದು/ಇಲ್ಲ

2. ನಿಮ್ಮ ಕುಟುಂಬ ಅವಿಭಕ್ತ ಕುಟುಂಬವಾಗಿರುವುದರಿಂದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೇ? ಹೌದು/ಇಲ್ಲ

3. ರಜಾದಿನಗಳಲ್ಲಿ ಕೆಲಸಕ್ಕೆ ಹೊಗುವಿರಾ? ಅದಾಗ್ಯೂ ಓದಲು ಸಮಯ ಸಿಗುವುದೇ? ಹೌದು/ಇಲ್ಲ

4. ಪಠ್ಯಪುಸ್ತಕ, ಲೇಖನಿಗಳನ್ನು ಕೊಳ್ಳಲು ಹಣಕಾಸಿನ ಸೌಲಭ್ಯವಿದೆಯೇ? ಹೌದು/ ಇಲ್ಲ

5. ಎಲ್ಲರಂತೆ ನಿಮಗೂ ಉತ್ತಮ ಉಡುಪು(ಸಮವಸ್ತ್ರ)ಗಳನ್ನು ಕೊಳ್ಳುವ ಸಾಮರ್ಥ್ಯ ನಿಮ್ಮ ಪಾಲಕರಿಗೆ ಇದೆಯಾ? ಹೌದು/ಇಲ್ಲ

6. ಪಠ್ಯ ಮತ್ತು ಲೇಖನಿಗಳನ್ನು ಮತ್ತೊಬ್ಬರ ಬಳಿ ಕೇಳು ನಿಮಗೆ ಮುಜುಗರವೆನಿಸುತ್ತದೆಯೇ? ಹೌದು/ಇಲ್ಲ

7. ಸಮವಸ್ತ್ರವಿಲ್ಲದಾಗ ನಿಮ್ಮನ್ನು ಶಾಲಾ ಕೊಠಡಿಯಿಂದ ಹೊರಗೆ ನಿಲ್ಲಿಸಿದಾಗ ನಿಮ್ಮ ಆನಿಸಿಕೆ ಏನು? a) ಆರ್ಥಿಕ ಸಮಸ್ಯೆ b) ಇತರೆ ಸಮಸ್ಯೆ

8. ನೆರೆಯ ಊರಲ್ಲಿರುವ ಶಾಲೆಗೆ ತೆರಳಲು ಪ್ರಯಾಣದ ವೆಚ್ಚ ಭರಿಸಲು ಸಾಧ್ಯವಾಗುತ್ತಲ್ಲವೇ? ಹೌದು/ಇಲ್ಲ

9. ನಿಮ್ಮ ಶ್ರೀಮಂತ ಸಹಪಾಠಿಗಳು ನಿಮ್ಮನ್ನು ಕೀಳಾಗಿ ಕಾಣುತ್ತಾರೆಯೇ? ಹೌದು/ಇಲ್ಲ

10. ನಿಮ್ಮ ತಂದೆತಾಯಿಗಳ ದುರಭ್ಯಾಸದಿಂದ ನಿಮ್ಮ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆಯೇ? ಹೌದು/ಇಲ್ಲ

11. ನಿಮ್ಮ ಪರಿಕ್ಷಾಶುಲ್ಕ ಪಾವತಿಸಲು ನಿಮಗೆ ಆರ್ಥಿಕ ಸಮಸ್ಯೆ ಕಂಡು ಬರುತ್ತಿದೆಯಾ? ಹೌದು/ಇಲ್ಲ

12. ನಿಮ್ಮ ಪೋಷಕರು ಶ್ರೀಮಂತರಾಗಿದ್ದಲ್ಲಿ ಇತರೆ ಸ್ನೇಹಿತರೊಂದಿಗ ಬೆರೆಯುವಿರಾ? ಹೌದು/ಇಲ್ಲ

13. ನಿಮ್ಮ ಪೋಷಕರು ಶ್ರೀಮಂತರಾಗಿದ್ದಲ್ಲಿ ಇತರೆ ಸ್ನೇಹಿತರೊಂದಿಗ ಬೆರೆಯಲು ಬಿಡುತ್ತಿದ್ದಾರಾ? ಹೌದು/ಇಲ್ಲ

14. ಅಲ್ಪ ಭೂಮಿ ಹೊಂದಿರುವ ಕಾರಣದಿಂದ ನಿಮ್ಮ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತದೆಯಾ? ಹೌದು/ಇಲ್ಲ

15. ನಿಮ್ಮ ಪೋಷಕರು ವಾರ್ಷಿಕವಾಗಿ ಅಲ್ಪ ಆದಾಯಗಳಿಸುತ್ತಿದ್ದಾರಾ? ಹೌದು/ಇಲ್ಲ

16. ಉದ್ಯೋಗದ ಸಮಸ್ಯೆ ಕಂಡು ಬರುತ್ತಿದೆಯಾ? ಹೌದು/ಇಲ್ಲ

17. ನಿಮ್ಮ ಕುಟುಂಬದಲ್ಲಿ ಬಡತನದ ಸಮಸ್ಯೆಯಿಮದ ನರಳುತ್ತಿದ್ದೀರಾ? ಹೌದು/ಇಲ್ಲ

18. ನಿಮ್ಮನ್ನು ಶಾಲೆಗೆ ಕಳುಹಿಸಿದರೆ ಭವಿಷ್ಯದಲ್ಲಿ ಗಂಡು ಹುಡುಕಲು ಆರ್ಥಿಕ ಸಮಸ್ಯೆ ಎನ್ನುವ ಭಾವನೆ ನಿಮ್ಮ ಪಾಲಕರಲ್ಲಿದೆಯೇ? ಹೌದು/ಇಲ್ಲ

19. ವಲಸೆಯಿಂದ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಮಸ್ಯೆಯಿಂದ ಪಾರಾಗುವುರಾ? ಹೌದು/ಇಲ್ಲ

ಭಾಗ–6: ಸಾಮಾಜಿಕ ಕಾರಣಗಳು

1. ನಿಮ್ಮ ತಂದೆ–ತಾಯಿಗಳು ನಿಮ್ಮ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಾರಾ? ಹೌದು/ಇಲ್ಲ

2. ಮನೆಯಲ್ಲಿ ಹಿರಿಯರು (ಅಜ್ಜಿ, ತಾತ) ಶಾಲೆಗೆ ಕಳುಹಿಸಲು ನಿರ್ಬಂಧ ಹಾಕುತ್ತಾರಾ? ಹೌದು/ಇಲ್ಲ

3. ವಿದ್ಯಾಭ್ಯಾಸದಲ್ಲಿ ಗಂಡುಮಕ್ಕಳಿಗೆ ನೀಡುವಷ್ಟು ಪ್ರೋತ್ಸಾಹ ನಿಮಗೆ ದೊರೆಯುತ್ತಿದೆಯಾ? ಹೌದು/ಇಲ್ಲ

4. "ಹೆಣ್ಣು ಎಷ್ಟು ಓದಿದರೇನು ಅಡುಗೆ ಮನೆಗೆ ಸೀಮಿತ" ಎಂಬ ಸಾಂಪ್ರದಾಯಿಕ ಮಾತುಗಳಿಂದ ಮನೆಯಲ್ಲಿ ಹಿರಿಯರು ಹಿಯಾಳಿಸುತ್ತಾರಾ? ಹೌದು/ಇಲ್ಲ

5. ನೆರೆ ಹೊರೆಯವರು ಶಾಲೆಗೆ ಹೋಗುವುದನ್ನು ಕಂಡು ಟೀಕಿಸುತ್ತಾರಾ? ಹೌದು/ಇಲ್ಲ

6. ಮನೆಯಲ್ಲಿ ಪಾಲಕರು ಗೃಹಕೃತ್ಯದಲ್ಲಿ ತೋಡಗಿಸುವುದರಿಂದ ಅಭ್ಯಾಸಮಾಡಲು ಅವಕಾಶ ಸಿಗುವುದಾ? ಹೌದು/ಇಲ್ಲ

7. ಸಹ ಶಿಕ್ಷಣವಿರುವ ಶಾಲೆಗಳಲ್ಲಿ ಓದಲು ಹಿರಿಯರು ಸಮ್ಮತಿಸುತ್ತಾರಾ? ಹೌದು/ಇಲ್ಲ

8. ಸಹ ಶಿಕ್ಷಣವಿರುವ ಶಾಲೆಗಳಲ್ಲಿ ನಿಮಗೆ ಮುಜಗರವಾಗುತ್ತದೆಯೇ? ಹೌದು/ಇಲ್ಲ

9. ನಿಮ್ಮ ತಂದೆ–ತಾಯಿ ನರೆಯ ಊರಿನ ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರಾ? ಹೌದು/ಇಲ್ಲ

10. ಅವಿಭಕ್ತ ಕುಟುಂಬವಿದ್ದರೆ ಎಲ್ಲರೊಂದಿಗೆ ಬೆರೆತು ಹೊಂದಿಕೊಳ್ಳಲು ಸಾಧ್ಯವಿದೆಯಾ? ಹೌದು/ಇಲ್ಲ

11. ಹಿರಿಯ ಮಕ್ಕಳಾಗಿದ್ದರೆ ಉಳಿದ ಮಕ್ಕಳ ಪಾಲನೆಗೆ ತಾಯಿ ಒತ್ತಾಯಿಸುತ್ತಾಳಾ? ಹೌದು/ಇಲ್ಲ

12. ತಂದೆಯ ದುಶ್ಚಟವಿದ್ದರೆ ಮನೆಯಲ್ಲಿ ಅಶಾಂತಿವಾತಾವರಣ ಉಂಟಾಗುವುದೇ? ಹೌದು/ಇಲ್ಲ

13. ಸಾಮಾಜಿಕವಾಗಿ ಕೆಳವರ್ಗದಲ್ಲಿ ಇತರ ಸ್ನೇಹಿತರು ಕೀಳಾಗಿ ಕಾಣುತ್ತಾರಾ?

ಹೌದು/ಇಲ್ಲ

14. ಅಪ್ಪ-ಅಮ್ಮ ಜಗಳವಾಡುವುದರಿಂದ ನಿಮ್ಮ ಓದಿಗೆ ದಕ್ಕೆಯಾಗುವುದೇ?

ಹೌದು/ಇಲ್ಲ

15. ನಿಮ್ಮ ತಂದೆ ಅನಕ್ಷರಾಗಿರುವುದರಿಂದ ಅವರಿಗೆ ನಿಮ್ಮ ವಿದ್ಯಾಭ್ಯಾಸದ ಬಗ್ಗೆ ನಿರಾಸಕ್ತಿ ಇದೆಯಾ? ಹೌದು/ಇಲ್ಲ

16. ನಿಮ್ಮ ಪೋಷಕರು ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯತ್ವವನ್ನು ಪಡೆದಿದ್ದಾರಾ? ಹೌದು/ಇಲ್ಲ

17. ಈ ಸಮಿತಿಯ ನಿಗಧಿತ ಸಭೆಗಳಲ್ಲಿ ಪೋಷಕರು ಭಾಗವಹಿಸಲು ಅಸಕ್ತಿ ಹೊಂದಿದ್ದಾರಾ? ಹೌದು/ಇಲ್ಲ

18. ಶಾಲಾ ಮುಖ್ಯಸ್ಥರು ಮತ್ತು ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರೊಂದಿಗೆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಚರ್ಚಿಸುತ್ತಾರೆಯೇ? ಹೌದು/ಇಲ್ಲ

19. ಈ ಸಮಿತಿಯಲ್ಲಿ ಬಗೆಹರಿದ ಸಮಸ್ಯೆಗಳನ್ನು ಇಲಾಖಾ ಮೇಲ್ವಿಚಾರಕರ ಗಮನಕ್ಕೆ ಪಾಲಕರು ತರುತ್ತಾರಾ? ಹೌದು /ಇಲ್ಲ

20. ದಾನಿಗಳ ಸಹಾಯದಿಂದ ನಿಮ್ಮ ಶಾಲೆ ಮತ್ತು ವಿದ್ಯಾಭ್ಯಾಸಕ್ಕೇನಾದರೂ ಪೂರಕವಾಗಿದೆಯೇ? ಹೌದು/ಇಲ್ಲ

ಅಂಕಿ ಅಂಶಗಳ ಪಟ್ಟಿ ೧. ಬಳ್ಳಾರಿ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಎತ್ತಿನಬೂದಿಹಾಳ್	೧೫೮೬	೭೬೬೮	೩೮೯೧	೩೭೭೭	೯೪೫	೪೬೨	೪೮೩	೩೪೨೭	೧೭೪೨	೧೬೮೫
ಏಳುಬೆಂಚಿ	೧೨೬೯	೬೨೪೧	೩೦೯೪	೩೧೪೭	೧೪೦೪	೬೭೫	೭೨೯	೮೪೯	೪೨೩	೪೨೬
ಓರ್ವಾಯಿ	೧೩೯೨	೭೫೧೫	೩೭೭೮	೩೭೩೭	೧೭೧೦	೮೫೮	೮೫೨	೧೨೫೨	೬೪೪	೬೦೮
ಶಂಕರಬಂಡೆ	೧೬೬೧	೮೦೨೨	೪೦೦೮	೪೦೧೪	೧೩೯೦	೬೭೩	೭೧೭	೨೦೪೫	೧೦೧೯	೧೦೨೬
ಬೆಳಗಲ್ಲು	೧೩೯೯	೭೬೮೦	೩೯೧೯	೩೭೬೧	೫೩೦೭	೨೭೨೮	೨೫೭೯	೮೨೮	೪೨೨	೪೦೬
ಒಟ್ಟು	**೭೩೦೭**	**೩೭೧೨೬**	**೧೮೬೯೦**	**೧೮೪೩೬**	**೧೦೭೫೬**	**೫೩೯೬**	**೫೩೬೦**	**೮೪೦೧**	**೪೨೫೦**	**೪೧೫೧**

ಅಂಕಿ ಅಂಶಗಳ ಪಟ್ಟಿ ೨. ಸಿರಗುಪ್ಪ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಹಚ್ಚೊಳ್ಳಿ	೧೭೮೧	೮೬೮೧	೪೫೮೦	೪೧೦೧	೨೩೦೬	೧೧೮೦	೧೧೨೬	೧೦೧೦	೫೦೩	೫೦೭
ಶಾನವಾಸಪುರ	೧೪೮೧	೮೭೯೮	೪೧೦೮	೪೬೯೦	೯೫೫	೪೬೧	೪೯೪	೩೦೪೦	೧೪೮೧	೧೫೫೯
ಉತ್ತನೂರು	೧೧೦೩	೬೧೦೯	೩೦೫೬	೩೦೫೩	೭೮೧	೩೮೭	೩೯೪	೧೮೯೪	೯೩೩	೯೬೧
ಮುದ್ದಟನೂರೆ	೧೬೧೮	೮೧೪೪	೪೦೦೩	೪೧೪೧	೨೫೬೮	೧೨೨೦	೧೩೪೮	೮೭೭	೪೫೫	೪೨೨
ಎಂ ಸೂಗೂರು	೧೪೮೭	೭೦೯೦	೩೫೫೧	೩೫೩೯	೧೬೩೭	೮೨೮	೮೦೯	೧೨೪೮	೬೨೩	೬೨೫
ಒಟ್ಟು	೭೪೭೦	೩೮೩೨೨	೧೯೨೯೮	೧೯೦೨೪	೮೨೪೭	೪೦೭೬	೪೧೭೧	೮೦೬೯	೩೯೯೫	೪೦೭೪

ಅಂಕಿ ಅಂಶಗಳ ಪಟ್ಟಿ ೩. ಹಡಗಲಿ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ದಾಸನಹಳ್ಳಿ	೧೦೪೯	೫೦೦೧	೨೫೩೯	೨೪೬೨	೪೩೪	೨೧೫	೨೧೯	೧೨೪೬	೬೧೫	೬೩೧
ಹಿರೇಹಡಗಲಿ	೧೯೫೩	೯೭೭೫	೪೯೧೬	೪೮೫೯	೨೫೫೬	೧೨೮೯	೧೨೬೭	೮೭೪	೪೪೩	೪೩೧
ಮಹಾಜನದಹಳ್ಳಿ	೧೭೮೮	೯೧೩೮	೪೬೪೬	೪೪೯೨	೨೫೦೭	೧೨೭೭	೧೨೩೦	೮೪೩	೪೧೮	೪೨೫
ನವಲಿ	೮೫೯	೪೨೦೮	೨೧೫೩	೨೦೫೫	೧೧೮೭	೫೮೫	೬೦೨	೭೩೦	೩೭೬	೩೫೪
ಮುದೇನೂರು	೧೦೭೬	೫೫೯೬	೨೯೦೦	೨೬೯೬	೧೦೦೮	೫೩೪	೪೭೪	೩೨೪	೧೬೪	೧೬೦
ಒಟ್ಟು	೬೭೨೫	೩೩೭೧೮	೧೭೧೫೪	೧೬೫೬೪	೭೬೯೨	೩೯೦೦	೩೭೯೨	೪೦೧೭	೨೦೧೬	೨೦೦೧

ಅಂಕಿ ಅಂಶಗಳ ಪಟ್ಟಿ ೪. ಹಗರಿಬೊಮ್ಮನಹಳ್ಳಿ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಅಲಬೂರು	೧೫೦೭	೭೩೮೪	೩೭೬೭	೩೬೧೭	೧೨೩೦	೬೦೫	೬೨೫	೩೮೭	೨೧೦	೧೭೭
ಕೋಗಳಿ	೧೨೮೩	೬೨೨೪	೩೧೪೩	೩೦೮೧	೩೩೮೦	೧೭೧೧	೧೬೬೯	೬೬೦	೩೩೭	೩೨೩
ದಶಮಾಪುರ	೧೨೧೦	೬೪೭೦	೩೨೯೫	೩೧೭೫	೧೪೮೦	೭೪೬	೭೩೪	೨೪೩೧	೧೨೨೮	೧೨೦೩
ಬನ್ನಿಗೋಳ	೧೧೭೮	೬೩೦೪	೩೧೬೬	೩೧೩೮	೨೬೯೩	೧೩೨೯	೧೩೬೪	೧೦೨೧	೫೨೮	೪೯೩
ಸೊನ್ನ	೧೩೬೧	೬೯೩೮	೩೪೧೨	೩೫೨೬	೧೨೨೦	೫೯೯	೬೨೧	೨೮೪	೧೩೦	೧೫೪
ಒಟ್ಟು	೬೫೩೯	೩೩೩೨೦	೧೬೭೮೩	೧೬೫೩೭	೧೦೦೦೩	೪೯೯೦	೫೦೧೩	೪೭೮೩	೨೪೩೩	೨೩೫೦

ಅಂಕಿ ಅಂಶಗಳ ಪಟ್ಟಿ ೫. ಕೂಡ್ಲಿಗಿ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಕಂದಗಲ್ಲು	೧೦೦೯	೫೫೬೯	೨೮೦೩	೨೭೬೬	೨೫೦೩	೧೨೪೧	೧೨೬೨	೮೮೩	೪೪೮	೪೩೫
ಜುಮ್ಮೋಬನಹಳ್ಳಿ	೧೩೩೨	೭೩೧೩	೩೭೦೪	೩೬೦೯	೧೩೭೩	೭೧೧	೬೬೨	೪೦೪೨	೨೦೨೩	೨೦೧೯
ಪೂಜಾರಹಳ್ಳಿ	೧೪೯೭	೮೦೨೫	೪೧೦೨	೩೯೨೩	೧೮೮೭	೯೮೯	೮೯೮	೩೫೭೮	೧೭೯೯	೧೭೭೯
ಮೊರಬ	೧೬೧೦	೮೯೧೭	೪೬೦೧	೪೩೧೬	೮೧೧	೪೨೨	೩೮೯	೪೦೫೮	೨೦೪೧	೨೦೧೭
ಜರ್ಮಲಿ	೯೮೯	೫೦೪೧	೨೫೬೨	೨೪೭೯	೮೪೦	೪೨೪	೪೧೬	೨೪೩೯	೧೨೩೧	೧೨೦೮
ಒಟ್ಟು	೬೪೩೭	೩೪೮೬೫	೧೭೭೭೨	೧೭೦೯೩	೭೪೧೪	೩೭೮೭	೩೬೨೭	೧೫೦೦೦	೭೫೪೨	೭೪೫೮

ಅಂಕಿ ಅಂಶಗಳ ಪಟ್ಟಿ ೬. ಹೊಸಪೇಟೆ ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ


ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಚಿಲಕನಹಟ್ಟಿ	೧೮೧೨	೧೦೯೭೯	೫೫೬೫	೫೪೧೪	೪೯೪೪	೨೫೩೬	೨೪೦೮	೩೦೮೪	೧೫೫೪	೧೫೩೦
ಡಣಾಯಕನಕೆರೆ	೧೧೫೯	೬೩೬೭	೩೨೨೫	೩೧೪೨	೧೮೫೫	೮೯೩	೯೬೨	೧೭೨೧	೮೬೫	೮೫೬
ಗಾದಿಗನೂರು	೧೬೬೧	೮೧೪೬	೪೦೧೮	೪೧೨೮	೧೩೩೯	೬೭೪	೬೬೫	೧೪೩೯	೬೯೪	೭೪೫
ಮುದ್ದಾಪುರ	೧೮೩೪	೯೩೧೪	೪೫೫೮	೪೭೫೬	೨೨೮೯	೧೧೧೨	೧೧೭೭	೧೩೧೨	೬೪೭	೬೬೫
ನಾಗಲಾಪುರ	೧೫೪೬	೮೯೦೦	೪೫೮೨	೪೩೧೮	೩೦೮೬	೧೫೭೭	೧೫೦೯	೩೨೦೧	೧೬೩೧	೧೫೭೦
ಒಟ್ಟು	೮೦೧೨	೪೩೭೦೬	೨೧೯೪೮	೨೧೭೫೮	೧೩೫೧೩	೬೭೯೨	೬೭೨೧	೧೦೭೫೭	೫೩೯೧	೫೩೬೬

ಅಂಕಿ ಅಂಶಗಳ ಪಟ್ಟಿ ೭. ಸಂಡೂರು ತಾಲೂಕು ಗ್ರಾಮಪಂಚಾಯತಿವಾರು ಜನಸಂಖ್ಯೆ

ಗ್ರಾಮಪಂಚಾಯತಿ	ಕುಟುಂಬ	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಯಶವಂತನಗರ	೧೪೨೩	೭೭೧೦	೪೦೬೮	೩೬೪೨	೭೨೫	೩೭೩	೩೫೨	೧೮೨೩	೯೬೦	೮೬೩
ಮೆಟ್ರಿಕೆ	೭೦೭	೩೯೩೪	೧೯೮೦	೧೯೫೪	೨೧೭	೧೦೫	೧೧೨	೧೫೯೭	೭೮೬	೮೧೧
ತಾರಾನಗರ	೨೩೦೧	೧೧೪೦೬	೫೮೦೧	೫೬೦೫	೧೮೬೧	೯೪೫	೯೧೬	೨೧೬೦	೧೦೯೪	೧೦೬೬
ದರೋಜಿ	೨೩೦೧	೧೦೯೯೩	೫೪೨೯	೫೫೬೪	೩೯೧೦	೧೯೪೮	೧೯೬೨	೪೯೬	೨೪೧	೨೫೫
ವಿಠ್ಠಲಾಪುರ	೫೬೯	೨೮೭೫	೧೪೨೬	೧೪೪೯	೪೪೭	೨೩೫	೨೧೨	೧೯೬	೯೪	೧೦೨
ಒಟ್ಟು	೭೩೦೧	೩೬೯೧೮	೧೮೭೦೪	೧೮೨೧೪	೭೧೬೦	೩೬೦೬	೩೫೫೪	೬೨೭೨	೩೧೭೫	೩೦೯೭

ಕರ್ನಾಟಕ ರಾಜ್ಯ

ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆ



ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ
ತಾಲೂಕುವಾರು ನಕ್ಷೆ





ಸರ್ಕಾರಿ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು, ಮೆಟ್ರಿಕಿ



ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಸಮೂಹ, ಮೆಟ್ರಿಕಿ



ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಒಳಾಂಗಣ ನೋಟ, ತಾರಾನಗರ



ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಒಳಾಂಗಣ ನೋಟ,



ವಿಠಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಳಾಂಗಣ ನೋಟ



ವಿಠಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾರ್ಯಾಲಯ



ಪ್ರತಿಭಾ ಕಿರಿಯ ಪ್ರಾಥಮಿಕ ಶಾಲೆಯ ಪ್ರವೇಶ ದ್ವಾರ



ಪ್ರತಿಭಾ ಕಿರಿಯ ಪ್ರಾಥಮಿಕ ಶಾಲೆಯ ಒಳಾವರಣ ಮತ್ತು ಶಾಲಾ ಕೊಠಡಿಗಳು



ಶಾಲಾ ಒಳಾಂಗಣ ಮೈದಾನದಲ್ಲಿ ಆಟವಾಡುತ್ತಿರುವ ಮಕ್ಕಳು



ಶಾಲಾ ಒಳಾಂಗಣ ಮೈದಾನದ ನೋಟ



ಶಾಲೆಯಲ್ಲಿ ಶಿಕ್ಷಕಿಯ ಪಾಠ ಕೇಳುತ್ತಿರುವ ಮಕ್ಕಳು



ಆಟದಿಂದ ಪಾಠ ಚಟುವಟಿಕೆಯಲ್ಲಿ ಶಿಕ್ಷಕರೊಂದಿಗೆ ಮಕ್ಕಳು



ಶಾಲೆಯ ಪ್ರಾರ್ಥನೆಗೆ ಸಿದ್ಧರಾದ ಮಕ್ಕಳ ಸಾಲು



ಶಾಲೆಯ ಪ್ರಾರ್ಥನೆ ಮುಗಿದ ನಂತರ ಶಾಲಾ ತರಗತಿಗಳಿಗೆ ಮರಳುತ್ತಿರುವ ಮಕ್ಕಳ ಸಾಲು



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರ ಕಚೇರಿ, ಹಳೇದರೋಜಿ



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ರಂಗಮಂದಿರ, ಹಳೇದರೋಜಿ



ಸಾಲಿನಲ್ಲಿ ಶಾಲಾ ಬಿಸಿಯೂಟ ಪಡೆಯುತ್ತಿರುವ ಮಕ್ಕಳು



ಮಕ್ಕಳಿಗೆ ಶಾಲಾ ಬಿಸಿಯೂಟ ನೀಡುತ್ತಿರುವ ಶಾಲಾ ಸಿಬ್ಬಂದಿಗಳು



ಶಾಲಾ ಬಿಸಿಯೂಟಕ್ಕೆ ಕುಳಿತ ಮಕ್ಕಳ ಸಾಲು



ಶಾಲೆಯ ಪ್ರಾಂಗಣದಲ್ಲಿರುವ ಆಟದ ಮೈದಾನದ ನೋಟ



ಶಾಲೆಯ ಪ್ರಾಂಗಣದಲ್ಲಿರುವ ಆಟದ ಮೈದಾನದ ನೋಟ



ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ವಾಲಿಬಾಲ್ ಆಟ ಆಡುತ್ತಿರುವ ಬಾಲಕಿಯರು



ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ವಾಲಿಬಾಲ್ ಆಟ ಆಡುತ್ತಿರುವ ಬಾಲಕರು



ಕಬ್ಬಡಿ ಆಟವನ್ನು ಆಡುತ್ತಿರುವ ಬಾಲಕರು



ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಕಬ್ಬಡಿ ಆಟವನ್ನು ಆಡುತ್ತಿರುವ ಬಾಲಕರು



ಓಟದ ಆಟದಲ್ಲಿ ನಿರತವಾಗಿರುವ ಮಕ್ಕಳು



ವಾಲಿಬಾಲ್ ಆಟದಲ್ಲಿ ನಿರತರಾಗಿರುವ ಬಾಲಕಿಯರು



ಬುಡಕಟ್ಟು ಅಧ್ಯಯನ ವಿಭಾಗ